ಬುಧವಾರ, ಏಪ್ರಿಲ್ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 102 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಈ ತಂತ್ರಜ್ಞಾನ ಯುಗದಲ್ಲಿ ನಮಗೆ ಪ್ರತಿಕ್ಷಣವೂ ನೆರವಾಗಬಲ್ಲ ಆ್ಯಪ್‌ಗಳಲ್ಲಿ ಪ್ರಮುಖವಾದದ್ದು ಗೂಗಲ್ ಲೆನ್ಸ್. ಇದರ ಕಾರ್ಯವೈಖರಿ ಹೀಗಿದೆ...



ಸೆನ್ಸೆಕ್ಸ್ 58,576 | ನಿಫ್ಟಿ 17,530 | ಚಿನ್ನ (Std. 10g) ₹54,450 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹70,100 (ಬೆಂಗಳೂರು) | ₹/$ 76.15

ಆಳ-ಅಗಲ — ಇಂಗ್ಲಿಷ್‌ಗೆ ಹಿಂದಿ ಪರ್ಯಾಯವಲ್ಲ

17 ತಿಂಗಳ ಗರಿಷ್ಠ ಮಟ್ಟಕ್ಕೆ ಚಿಲ್ಲರೆ ಹಣದುಬ್ಬರ 13

ಲಂಚದ ಆರೋಪ ಮಾಡಿದ್ದ ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ

ವಿಪಕ್ಷ ಪಟ್ಟು: ಈಶ್ವರಪ್ಪಗೆ ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು/ಉಡುಪಿ: ಕಾಮಗಾರಿಗಳ ಬಾಕಿ ಬಿಲ್ ಮೊತ್ತ ಬಿಡುಗಡೆಗೆ ಶೇಕಡ 40ರಷ್ಟು ಲಂಚಕ್ಕೆ ಬೇಡಿಕೆ ಇಟ್ಟಿರುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಆರೋಪ ಮಾಡಿದ್ದ ಬೆಳಗಾವಿಯ ಹಿಂಡಲಗಾ ಗ್ರಾಮದ ಗುತ್ತಿಗೆದಾರ ಸಂತೋಷ್ ಪಾಟೀಲ ಉಡುಪಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸೋಮವಾರ ಉಡುಪಿಗೆ ಬಂದು ಲಾಡ್ಜ್ ಒಂದರಲ್ಲಿ ತಂಗಿದ್ದ ಸಂತೋಷ್, 'ನನ್ನ ಸಾವಿಗೆ ಸಚಿವ ಈಶ್ವರಪ್ಪ ಅವರೇ ಕಾರಣ...' ಎಂದು ಪರಿಚಿತರಿಗೆ ವಾಟ್ಸ್ ಆ್ಯಪ್‌ನಲ್ಲಿ ಸಂದೇಶ ಕಳುಹಿಸಿ ವಿಷ ಸೇವಿಸಿ, ಸಾವನ್ನಪ್ಪಿದ್ದಾರೆ. ಮಂಗಳವಾರ ಬೆಳಿಗ್ಗೆ ಪ್ರಕರಣ ಬಹಿರಂಗವಾಗಿದ್ದು, ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಈಶ್ವರಪ್ಪ ರಾಜೀನಾಮೆಗೆ ಪಟ್ಟು ಹಿಡಿದಿವೆ. ಬಿಜೆಪಿ ನಾಯಕರು ಈಶ್ವರಪ್ಪ ಅವರನ್ನು ಸಮರ್ಥಿಸಿಕೊಂಡಿದ್ದಾರೆ.

ಆತ್ಮಹತ್ಯೆಯ ಸುದ್ದಿ ಬಿತ್ತರವಾಗುತ್ತಿದ್ದಂತೆ ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಿದರು.

5ನೇ | ಪುಟ ನೋಡಿ

ಇನ್ನಷ್ಟು ಸುದ್ದಿಗಳು | 5

'ಸಚಿವರಿಗೆ ಶಿಕ್ಷೆಯಾಗಬೇಕು'

ಬೆಳಗಾವಿ: 'ಅನ್ಯಾಯ ಆಗಿದ್ದರಿಂದಲೇ ಪತಿ ಸಂತೋಷ್ ಪಾಟೀಲ ತೀರಿಕೊಂಡಿದ್ದಾರೆ. ಇದು ಕೊಲೆಯಲ್ಲದೆ ಮತ್ತೇನೂ ಅಲ್ಲ' ಎಂದು ಮೃತರ ಪತ್ನಿ ಜಯಶ್ರೀ ಪಾಟೀಲ ಹೇಳಿದರು.

ಪತ್ರಕರ್ತರಿಗೆ ಪ್ರತಿಕ್ರಿಯಿಸಿದ ಅವರು, 'ಕಾಮಗಾರಿ ಮಾಡಿಸಲು ಈಶ್ವರಪ್ಪ ಅವರೇ ಹೇಳಿದ್ದಾರೆ ಎಂದು ಪತಿ ತಿಳಿಸಿದ್ದರು. ಅವರು ಶೇ 40ರಷ್ಟು ಕಮಿಷನ್ ಕೇಳುತ್ತಿದ್ದಾರೆ ಎಂದೂ ಹೇಳಿದ್ದರು. ಹೀಗಾದರೆ ಸಾಲ ತೀರಿಸುವುದು ಹೇಗೆ ಎಂದು ಕೊರಗುತ್ತಿದ್ದರು. ನನ್ನ ಬಂಗಾರವನ್ನೂ ಒತ್ತೆ ಇಟ್ಟು ಕಾಮಗಾರಿ ಮಾಡಿಸಿದ್ದರು. ಹಣ ಬಾರದಿದ್ದರೆ ಏನು ಮಾಡುವುದೆಂದು ಬಹಳ ನೊಂದಿದ್ದರು' ಎಂದು ತಿಳಿಸಿದರು.

'ಈಶ್ವರಪ್ಪ ಅವರು ಹಣ ಬಿಡುಗಡೆ ಮಾಡದೆ ಮೋಸ ಎಸಗಿದ್ದಾರೆ. ನಾನ್ಯಾರು ಎನ್ನುವುದು ಗೊತ್ತೇ ಇಲ್ಲ ಎಂದು ಹೇಳುತ್ತಿದ್ದಾರೆ ಎಂದು ಪತಿ ತಿಳಿಸಿದ್ದರು. ಪ್ರಕರಣದ ತನಿಖೆಯಷ್ಟೆ ಅಲ್ಲ, ಸಚಿವರಿಗೆ ಶಿಕ್ಷೆಯೂ ಆಗಬೇಕು' ಎಂದು ಒತ್ತಾಯಿಸುತ್ತಾ ಕಣ್ಣೀರಿಟ್ಟರು.


ಜಯಶ್ರೀ ಪಾಟೀಲ

'ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ'
ಪ್ರಜಾವಾಣಿ ನೋಡಿಯೊ

108 ಕಾಮಗಾರಿಗಳ ಬಿಲ್‌ಗೆ ತಡೆ?

ಬಿಜೆಪಿ ಕಾರ್ಯಕರ್ತರಾಗಿದ್ದ ಸಂತೋಷ್ ಪಾಟೀಲ ಅವರು ಹಿಂದೂ ವಾಹಿನಿ ಸಂಘಟನೆಯ ರಾಷ್ಟ್ರೀಯ ಕಾರ್ಯದರ್ಶಿಯಾಗಿಯೂ ಗುರುತಿಸಿಕೊಂಡಿದ್ದರು. ಬೆಳಗಾವಿಯ ಹಿಂಡಲಗಾ ಗ್ರಾಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಒಟ್ಟು ₹ 4 ಕೋಟಿ ವೆಚ್ಚದ 108 ಕಾಮಗಾರಿಗಳನ್ನು ನಡೆಸಿದ್ದರು.

ಸಂತೋಷ್ ಪಾಟೀಲ

5ನೇ | ಪುಟ ನೋಡಿ

ಬಿಜೆಪಿಯ '40 ಪರ್ಸೆಂಟ್' ಸರ್ಕಾರ ತನ್ನದೇ ಕಾರ್ಯಕರ್ತನನ್ನು ಬಲಿ ಪಡೆದಿದೆ. ಸಂತ್ರಸ್ತ ಗುತ್ತಿಗೆದಾರ ಪ್ರಧಾನಿಗೆ ದೂರು ನೀಡಿದ್ದರೂ ಯಾವುದೇ ಉತ್ತರ ಸಿಗಲಿಲ್ಲ. ಈ ಕೃತ್ಯದಲ್ಲಿ ಮುಖ್ಯಮಂತ್ರಿ ಮತ್ತು ಪ್ರಧಾನಿ ಭಾಗಿದಾರರು
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಸಂತೋಷ್ ಪಾಟೀಲ ಮಾಡಿದ್ದ ಆರೋಪವನ್ನು ಈಶ್ವರಪ್ಪ ನಿರಾಕರಿಸಿದ್ದಾರೆ. ಈಗ ಆತ್ಮಹತ್ಯೆ ಪ್ರಕರಣ ಕುರಿತು ಪೊಲೀಸರು ಸ್ವತಂತ್ರವಾಗಿ ತನಿಖೆ ನಡೆಸುತ್ತಾರೆ. ತನಿಖೆಯಿಂದ ಸತ್ಯ ಹೊರಬರಲಿದೆ.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಂತೋಷ್ ಬರೆದಿದ್ದಾರೆ ಎನ್ನಲಾಗಿರುವುದು ಸಹಿ ಇಲ್ಲದ ಪತ್ರ. ನಾನೂ ಒಂದು ಪತ್ರ ಸೃಷ್ಟಿಸಿ ಸಿದ್ದರಾಮಯ್ಯ ಕಾರಣ ಎಂದರೆ ಅವರು ರಾಜೀನಾಮೆ ಕೊಡುತ್ತಾರಾ? ರಾಜೀನಾಮೆಯ ಪ್ರಶ್ನೆಯೇ ಇಲ್ಲ
ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆಯ ನೈತಿಕ ಹೊಣೆ ಹೊತ್ತು ಈಶ್ವರಪ್ಪ ರಾಜೀನಾಮೆ ನೀಡಬೇಕು. ಪಾರದರ್ಶಕ ತನಿಖೆಗೆ ಅವಕಾಶ ಕಲ್ಪಿಸಿ ತಾವು ನಿರಪರಾಧಿ ಎಂಬುದನ್ನು ಸಾಬೀತುಪಡಿಸಬೇಕು
ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಭಾರತದ ಕಳವಳಕಾರಿ ಬೆಳವಣಿಗೆ ಮೇಲೆ ನಿಗಾ: ಆ್ಯಂಟನಿ ಬ್ಲಿಂಕನ್

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ಇತ್ತೀಚೆಗೆ ಆಗಿರುವ ಕೆಲವು 'ಕಳವಳಕಾರಿ ಬೆಳವಣಿಗೆ'ಗಳ ಮೇಲೆ ನಿಗಾ ಇರಿಸಲಾಗಿದೆ. ಇದರಲ್ಲಿ ಸರ್ಕಾರಿ ಅಧಿಕಾರಿಗಳು ನಡೆಸಿದ ಮಾನವ ಹಕ್ಕುಗಳ ಉಲ್ಲಂಘನೆಯೂ ಸೇರಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹೇಳಿದ್ದಾರೆ. ಸಮಾನವಾದ ಪ್ರಜಾಸತ್ತಾತ್ಮಕ ಮೌಲ್ಯಗಳ ಕುರಿತಂತೆ ಭಾರತದ ಜತೆಗೆ ನಿಯಮಿತವಾಗಿ ಸಂವಾದ ನಡೆಸಲಾಗುತ್ತಿದೆ ಎಂದಿದ್ದಾರೆ.

ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಜತೆಗೆ ನಡೆಸಿದ ಮಾಧ್ಯಮಗೋಷ್ಠಿಯಲ್ಲಿ ಬ್ಲಿಂಕನ್ ಹೀಗೆ ಹೇಳಿದ್ದಾರೆ. ಭಾರತ ಮತ್ತು ಅಮೆರಿಕದ ವಿದೇಶಾಂಗ ಮತ್ತು ರಕ್ಷಣಾ ಸಚಿವರ 2+2 ಮಾತುಕತೆಗಾಗಿ ರಾಜನಾಥ್ ಮತ್ತು ಜೈಶಂಕರ್ ಅವರು ಅಮೆರಿಕದಲ್ಲಿದ್ದಾರೆ. ಮಾತುಕತೆಯು ಸೋಮವಾರ ನಡೆದಿದೆ.

ಸರ್ಕಾರದ ಅಧಿಕಾರಿಗಳು, ಪೊಲೀಸರು ಮತ್ತು ಜೈಲು ಅಧಿಕಾರಿಗಳು ನಡೆಸಿರುವ ಮಾನವ ಹಕ್ಕುಗಳ ಉಲ್ಲಂಘನೆಯೂ ಕಳವಳಕಾರಿ ವಿದ್ಯಮಾನಗಳಲ್ಲಿ ಸೇರಿವೆ ಎಂದು ಮಾಧ್ಯಮಗೋಷ್ಠಿಯ ಆರಂಭದಲ್ಲಿಯೇ ಬ್ಲಿಂಕನ್ ಹೇಳಿದರು. ಈ ಬಗ್ಗೆ ಹೆಚ್ಚಿನ ವಿವರಣೆಯನ್ನು ಅವರು ನೀಡಿಲ್ಲ.

ಮಾನವ ಹಕ್ಕುಗಳ ರಕ್ಷಣೆಯಂತಹ ಪ್ರಜಾಸತ್ತಾತ್ಮಕ ಮೌಲ್ಯಗಳ ಬದ್ಧತೆಯನ್ನು ನಾವು ಹಂಚಿಕೊಂಡಿದ್ದೇವೆ ಎಂದು ಅವರು ಹೇಳಿದ್ದಾರೆ.

ದೇಶದಲ್ಲಿ ನಾಗರಿಕ ಸ್ವಾತಂತ್ರ್ಯವು ಕರಗಿ ಹೋಗಿದೆ ಎಂದು ವಿದೇಶಿ ಸರ್ಕಾರಗಳು ಮತ್ತು ಮಾನವ ಹಕ್ಕುಗಳ ಸಂಘಟನೆಗಳು ಈ ಹಿಂದೆ ಮಾಡಿದ್ದ ಆರೋಪಗಳನ್ನು ಭಾರತವು ತಿರಸ್ಕರಿಸಿತ್ತು.

'ಒಂದೇ ಬಾರಿ ಎರಡು ಪದವಿ ಕೋರ್ಸ್ ಕಲಿಕೆಗೆ ಅವಕಾಶ'

ನವದೆಹಲಿ (ಪಿಟಿಐ): 'ವಿದ್ಯಾರ್ಥಿಗಳು ಇನ್ನು ಮುಂದೆ ಭೌತಿಕವಾಗಿ ಏಕಕಾಲದಲ್ಲಿಯೇ ಪೂರ್ಣಾವಧಿಯ ಎರಡು ಪದವಿ ಕೋರ್ಸ್‌ಗಳನ್ನು ಕಲಿಯಬಹುದು. ಈ ಪದವಿ ಕೋರ್ಸ್‌ಗಳನ್ನು ವಿದ್ಯಾರ್ಥಿಗಳು ಒಂದೇ ವಿಶ್ವವಿದ್ಯಾಲಯ ಅಥವಾ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕಲಿಯಲು ಅವಕಾಶ ನೀಡಲಾಗುತ್ತದೆ' ಎಂದು ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ಈ ಕುರಿತು ಯುಜಿಸಿ ಶೀಘ್ರದಲ್ಲೇ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಿದೆ.

'ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಕಟಿಸಿರುವಂತೆ ಮತ್ತು ವಿದ್ಯಾರ್ಥಿಗಳು ಬಹುಮುಖಿ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳಬೇಕು ಎನ್ನುವ ಆಶಯದೊಂದಿಗೆ ಈ ಅವಕಾಶವನ್ನ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ' ಎಂದು ಜಗದೀಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



16 x 47 cm - Kannada

ಜೀವನ ಶಿಕ್ಷಣ ಶಿಬಿರ ಉದ್ಘಾಟನೆ

ಬೆಂಗಳೂರು: ಸ್ವರ್ಣವಲ್ಲಿ ಸೀಮಾ ಪರಿಷತ್ ವತಿಯಿಂದ ಜೀವನ ಶಿಕ್ಷಣ ಅಧ್ಯಯನ ಶಿಬಿರವನ್ನು 18ರವರೆಗೆ ಚಿಕ್ಕಬೆಟ್ಟಹಳ್ಳಿಯಲ್ಲಿರುವ ಅಭ್ಯುದಯದಲ್ಲಿ ಏರ್ಪಡಿಸಲಾಗಿದೆ. ಪರಿಷತ್‌ನ ಅಧ್ಯಕ್ಷ ಶಿವರಾಮ ಹೆಗಡೆ ಕಾಗೇರಿ ಅವರು ಭಾನುವಾರ ಶಿಬಿರ ಉದ್ಘಾಟಿಸಿದರು.

ಶಿಬಿರದ ಸಂಚಾಲಕ ಜಗನ್ನಾಥ ಹೇಮಾದ್ರಿ, ವಿದ್ವಾಂಸ ಶ್ರೀಪತಿ ಭಟ್, ಸ್ವರ್ಣವಲ್ಲೀ ಸೇವಾ ಪ್ರತಿಷ್ಠಾನದ ಬೆಂಗಳೂರಿನ ಕಾರ್ಯಾಧ್ಯಕ್ಷ ಜಿ.ವಿ. ಹೆಗಡೆ ಹುಳಗೋಳ ಹಾಗೂ ಇತರರು ಭಾಗವಹಿಸಿದ್ದರು.

ವಿದ್ವಾಂಸರ ಮಾರ್ಗದರ್ಶನದಲ್ಲಿ ವೇದ ಅಧ್ಯಯನ, ದೇವ ಪೂಜೆ, ಯೋಗಾಸನ, ಪ್ರಾಣಾಯಾಮ, ಕ್ರೀಡೆಗಳ ತರಬೇತಿಯನ್ನು ಶಿಬಿರದಲ್ಲಿ ನೀಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/19/2022
ದಿನಾಂಕ: 07.04.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಸ್ ಎಂವಿಬಿ (ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು) ನಿಲ್ದಾಣದ ಕಟ್ಟಡ ಮತ್ತು ಎರಡು ಸುರಂಗಮಾರ್ಗಗಳಿಗಾಗಿ ಇಂಟಲಿಜೆಂಟ್ ಅಡ್ರೆಸೇಬಲ್ ಫೈರ್ ಡಿಟೆಕ್ಷನ್ ಮತ್ತು ಅಲಾರ್ಮ್ ಸಿಸ್ಟಮ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ.	ರೂ. 50,05,357/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29-04-2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಜಿ ನಿರ್ಮಾಣ, ಬೆಂಗಳೂರು

PUB/27/AAV/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. C.518/AMC.Ph.VII
ದಿನಾಂಕ: 08.04.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಎಲ್ಲಾ ಟಿಟಿಇ ಲಾಬಿ/ಯುಟಿಎಸ್ /ಪಿಆರ್ ಎಸ್/ಎಫ್ ಐಓ ಎಸ್ /ಎಚ್ ಎಚ್ ಟಿ /ರೆಟೈರಿಂಗ್ ರೂಮ್ ಸ್ಥಳಗಳಲ್ಲಿ ಪಿಆರ್ ಎಸ್, ಯು ಟಿ ಎಸ್ , ಎಫ್ ಓ ಐ ಎಸ್ , ಪಿ ಎಂ ಎಸ್ , ಎಚ್ ಎಚ್ ಟಿ , ರೆಟೈರಿಂಗ್ ರೂಮ್ ಮತ್ತು ಟಿಟಿಇ ಲಾಬಿ ಪೆರಿಫೆರಲ್ಸ್ ಮತ್ತು ಡೇಟಾಕಾಮ್ ಉಪಕರಣಗಳಿಗೆ ಸಮಗ್ರ ವಾರ್ಷಿಕ ನಿರ್ವಹಣೆ ಒಪ್ಪಂದ.	ರೂ. 1,79,08,973/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19-05-2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಪ್ರಧಾನ ಮುಖ್ಯ ವಾಣಿಜ್ಯ ವ್ಯವಸ್ಥಾಪಕರು ಹುಬ್ಬಳ್ಳಿ

PUB/28/AAV/PRB/SWR/2022-23

S.W.Railways SWRRLY SWRRLY

IN THE HIGH COURT OF KARNATAKA AT BENGALURU
Notice to the Respondent No.3
Vide order dated:04.04.2022
R.F.A. No. 802/2013

S.M. Krishnappa (By Sri. M. Erappa Reddy, Adv., for appellant)... **Appellant**

-V/s-

Muniyamma, dead by her LR., Sri. Naveen Kumar & Ors., ... Respondents

(By Sriyuths: Y.K Narayana Sharma, Adv., for R-1(a) & R-2(a), V. Shivareddy and Umesh B.N, learned counsel accept notice for R-4 (V/o dated:19/9/18 (VK not filed))

To, **Respondent No.3: SMT. VENKATAMMA** W/O VENKATAPPA D/O LATE MUNIYAPPA, R/AT JADIGENAHALLI VILLAGE & POST, HOSKOTE TALUK, BANGALORE RURAL DISTRICT.

Appeal from the Judgment 86 Decree dated:31.01.2013 passed in OS. No. 67/2008 on the file of the Presiding Officer, Fast Track Court-V, C/c of Fast Track Court - 1, Bangalore Rural District, Bangalore.

Notice is hereby given to you to appear in this court either in person or through Counsel duly instructed or through some one authorized by law, to act for you in the above appeal on **25.05.2022** in case you intend to contest the appeal. If you fail to appear, the same will be dealt with, heard and decided in your absence.

Issued under my hand and the seal of this court, this the 11th Day of April 2022.

By order of the Court, Assistant Registrar, High Court of Karnataka, Bangalore.

PUBLIC NOTICE

NOTICE is hereby given to the public at large that we are investigating the clear & marketable title of (1) Sri. Raji Jamwal, S/o Sri. Kuldeep Singh Jamwal, (2) Smt. Anjana Kanwal, W/o Sri. Rajiv Jamwal, (3) Sri. Ashok Badyal, S/o Late Sri. Badrinath and (4) Smt. Santosh Kumar, W/o Sri. Ashok Badyal ("Owners") in respect of the to all that piece and parcel of immovable property (Converted land) bearing Katha Nos. 382/383/31/1G measuring 0-17.34 Guntas situated at Attur Village, Yelahanka Hobli, Bengaluru North Taluk ("Land") within the jurisdiction of Bruhath Bangalore Mahanagara Palike and bounded as under:-

East by : Portion of land in Sy. No. 31/1F belong to Sri. Muthurayappa.
West by : Land of Laxmi Sa Mill.
North by : Remaining portion of Sy.No. 31/1G
South by: Road.

ALL PERSONS including individuals, Hindu undivided family, companies, banks, financial institution(s), non-banking financial institution(s), firms, association of persons or a body of individuals, whether incorporated or not, lenders and/or creditors having any benefits, objection, demand, claim, right, title and/or interest in respect of Land or any part or portion thereof, by way of sale, exchange, mortgage, pledge, charge, gift, trust, inheritance, succession, family arrangement/ settlement, bequest, possession, lease, tenancy, maintenance, easement, memorandum of understanding, license, share, assignment, lien, attachment, development rights, partnership, right of way, lis pendens, decree or order of any judicial/quasi-judicial authority, reservation, contracts/ agreement, power of attorney, option, FSI consumption, right of first refusal, pre-emption or any liability or commitment or otherwise of any nature whatsoever are hereby requested to inform the same in writing, supported with the original documents, to the undersigned at the address mentioned below within a period of 10 (ten) days from the date of the publication of this notice, failing which, the claim or right, if any, of such person or persons shall be considered to have been waived and/or abandoned.

Dated this 12th day of April, 2022

B.N. Prakash
Partner
Lawyers Inc
Advocates & Solicitors,
No. 15/2, V.S. Raju Road,
12th Block, Kumarapark West,
Bengaluru - 560020.

ಸ್ವಚ್ಛತಾ ವಾಹನ ಖರೀದಿ ಟೆಂಡರ್: ಸ್ಪಷ್ಟೀಕರಣ ಕೇಳಿದ ನಗರಾಭಿವೃದ್ಧಿ ಇಲಾಖೆ

ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಲೋಪ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೇಂದ್ರ ವಾಣಿಜ್ಯ ಪ್ರದೇಶದ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸಲು 'ಶುಭ್ರ ಬೆಂಗಳೂರು ಯೋಜನೆ' ಅಡಿ ₹12.40 ಕೋಟಿ ವೆಚ್ಚದಲ್ಲಿ ಐದು ಸ್ವಚ್ಛತಾ ವಾಹನಗಳನ್ನು ಖರೀದಿಸುವ ಟೆಂಡರ್‌ನ ಮೌಲ್ಯಮಾಪನ ಪ್ರಕ್ರಿಯೆ ನ್ಯೂನತೆಗಳಿಂದ ಕೂಡಿರುವ ಬಗ್ಗೆ ನಗರಾಭಿವೃದ್ಧಿ ಇಲಾಖೆ ಆಕ್ಷೇಪ ವ್ಯಕ್ತಪಡಿಸಿದೆ.

ಈ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಸೂಚಿಸಿ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸೋಮವಾರ (ಏ.11ರಂದು) ಪತ್ರ ಬರೆದಿದ್ದಾರೆ.

ನಗರದ ಕೇಂದ್ರ ವಾಣಿಜ್ಯ ಪ್ರದೇಶದ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಸ್ವಚ್ಛತೆ ಕಾಪಾಡಲು ಐದು ಪ್ರೆಷರ್ ಜೆಟ್ ಕ್ಲೀನರ್/ ವಾಷರ್ ಯಂತ್ರಗಳನ್ನು ಖರೀದಿಸಲು ಬಿಬಿಎಂಪಿ 2021ರ ಜೂನ್ 10ರಂದು ಟೆಂಡರ್ ಆಹ್ವಾನಿಸಿತ್ತು. ಮೂರು ವರ್ಷಗಳ ನಿರ್ವಹಣೆಯೂ ₹ 12.40 ಕೋಟಿ ವೆಚ್ಚದ ಟೆಂಡರ್ ಪ್ಯಾಕೇಜ್‌ನಲ್ಲಿ ಸೇರಿತ್ತು. 2021ರ ಸೆ.22ರಂದು ಆರ್ಥಿಕ ಬಿಡ್ ತೆರೆಯಲಾಗಿದ್ದು, ಗುತ್ತಿಗೆದಾರ ಎ.ಎಲ್.ಸತೀಶ್ ಕುಮಾರ್ ಅತಿ ಕಡಿಮೆ ದರ (₹ 9.29 ಕೋಟಿ) ನಮೂದಿಸಿದ್ದರು. ಟೆಂಡರ್ ಮೊತ್ತಕ್ಕಿಂತ ಶೇ 24.67ರಷ್ಟು ಕಡಿಮೆ ದರ ನಮೂದಿಸಿದ್ದ ಅವರಿಗೆ ಗುತ್ತಿಗೆ ನೀಡುವುದಕ್ಕೆ ಅನುಮೋದನೆ ಕೋರಿ ಬಿಬಿಎಂಪಿಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

ಈ ಪ್ರಸ್ತಾವನೆಯನ್ನು ಪರಿಶೀಲಿಸಿರುವ ನಗರಾಭಿವೃದ್ಧಿ ಇಲಾಖೆಯ ಎಸಿಎಸ್ ಅವರು, 'ಟೆಂಡರ್ ಮೌಲ್ಯಮಾಪನದ ನ್ಯೂನತೆಗಳಿಂದ ಕೂಡಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ನಿಯಮಗಳಿಗೆ ಅನುಗುಣವಾಗಿಲ್ಲದ, ಈ ಪ್ರಸ್ತಾವನೆಯೇ ನಿಯಮಬಾಹಿರವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ. ಜಂಟಿ ಹೂಡಿಕೆಗೆ (ಜಾಯಿಂಟ್ ವೆಂಚರ್) ಅವಕಾಶವಿಲ್ಲದ ಟೆಂಡರ್‌ನಲ್ಲಿ ಯಂತ್ರ ಪೂರೈಕೆಯ ಪೂರ್ವಾನುಭವ, ಹಿಂದಿನ ವಾರ್ಷಿಕ ವಹಿವಾಟು ಮತ್ತು ನಿರ್ವಹಣೆಯ ಪೂರ್ವಾನುಭವ ಇಲ್ಲದ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದೆ. ಟೆಂಡರ್ ದಸ್ತಾವೇಜು ತಯಾರಿಸಿದ, ಅನುಮೋದಿಸಿರುವ ಹಾಗೂ ತಾಂತ್ರಿಕ ಮೌಲ್ಯಮಾಪನ ಕೈಗೊಂಡ ಅಧಿಕಾರಿಗಳ ವಿವರಗಳೊಂದಿಗೆ ವಿವರಣೆ ಸಲ್ಲಿಸುವಂತೆ ಎಸಿಎಸ್ ಸೂಚಿಸಿದ್ದಾರೆ.

'ಪ್ರಜಾವಾಣಿ'ಯು 'ಜೆಟ್ ಕ್ಲೀನರ್ ಯಂತ್ರ ಖರೀದಿ ಟೆಂಡರ್‌ನಲ್ಲಿ ಅಕ್ರಮ?' ಎಂಬ ಶೀರ್ಷಿಕೆಯಡಿ 2022ರ ಜ.2ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು. ಅರ್ಹರಲ್ಲದ ಗುತ್ತಿಗೆದಾರರಿಗೆ ಟೆಂಡರ್ ನೀಡಿರುವ ಬಗ್ಗೆ ಹಾಗೂ ಮಾರುಕಟ್ಟೆ ದರಕ್ಕಿಂತ ಹೆಚ್ಚು ಮೊತ್ತಕ್ಕೆ ಯಂತ್ರವನ್ನು ಖರೀದಿಸುತ್ತಿರುವ ಬಗ್ಗೆ ಗಮನ ಸೆಳೆದಿತ್ತು.

ವರದಿ ಪರಿಣಾಮ

ನಗರಾಭಿವೃದ್ಧಿ ಇಲಾಖೆ ಎತ್ತಿದ ಆಕ್ಷೇಪಗಳು

- ಟೆಂಡರ್‌ನಲ್ಲಿ ಭಾಗವಹಿಸಿದ ಮೂವರಲ್ಲಿ ಇಬ್ಬರು ಗುತ್ತಿಗೆದಾರರು ವಾಹನ ಸರಬರಾಜಿಗೆ ನಿಗದಿತ ದರಕ್ಕಿಂತ ಕಡಿಮೆ ದರ ನಿಗದಿಪಡಿಸಿದ್ದಾರೆ. ಅದರಲ್ಲೂ ಒಬ್ಬರು ಶೇ 15.4 ರಷ್ಟು ಕಡಿಮೆ ದರ ನಿಗದಿಪಡಿಸಿದ್ದಾರೆ. ಅಧಿಕಾರಿಗಳು ವಾಹನ ಸರಬರಾಜಿನ ದರವನ್ನು ಸರಿಯಾಗಿ ಅಂದಾಜು ಮಾಡಿಲ್ಲವೇಕೆ?
- ವಾಹನ ಸರಬರಾಜು ಮತ್ತು ನಿರ್ವಹಣೆಗೆ ಪ್ರತ್ಯೇಕ ಟೆಂಡರ್ ಆಹ್ವಾನಿಸಿದ್ದಲ್ಲಿ ಆಗುವ ಉಳಿತಾಯ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿಲ್ಲವೇಕೆ?
- ಯಂತ್ರ ಪೂರೈಕೆಗೆ ಸಂಬಂಧಿಸಿದ ಅಂದಾಜಿನಲ್ಲಿರುವ ನ್ಯೂನತೆಗಳೂ ನಿರ್ವಹಣೆ ವಿಚಾರದಲ್ಲೂ ಇರುವ ಸಾಧ್ಯತೆ ಇದೆ.
- ಟೆಂಡರ್‌ನ ಸಾಮಾನ್ಯ ಕರಾರುಗಳ ಪ್ರಕಾರ (6ನೇ ಅಂಶ) ಜಾಯಿಂಟ್ ವೆಂಚರ್ ಮತ್ತು ಒಕ್ಕೂಟ (ಕನ್ಸೋರ್ಟಿಯಂ) ಮಾದರಿಯ ಸಂಸ್ಥೆಗಳು ಭಾಗವಹಿಸುವುದನ್ನು ನಿರ್ಬಂಧಿಸಲಾಗಿದೆ. ಟೆಂಡರ್ ಷರತ್ತಿನಂತೆ ಗುತ್ತಿಗೆದಾರರು ಯಂತ್ರ ಪೂರೈಸುವ ಅಧಿಕೃತ ಉತ್ಪಾದಕ ಅಥವಾ ಅಧಿಕೃತ ಪೂರೈಕೆದಾರ ಅಥವಾ ಅಧಿಕೃತ ಮಾರಾಟಗಾರ ಆಗಿರಬೇಕು. ಆದರೆ, ಬಿಬಿಎಂಪಿ ಆಯ್ಕೆ ಮಾಡಿದ ಗುತ್ತಿಗೆದಾರ ಈ ಕುರಿತ ಯಾವುದೇ ದಾಖಲೆ ಲಗತ್ತಿಸಿಲ್ಲ.
- ಗುತ್ತಿಗೆದಾರನ ಪೂರ್ವಾನುಭವದ ಬದಲು ಪೂರೈಕೆದಾರರ ಪೂರ್ವಾನುಭವವನ್ನು ಪರಿಗಣಿಸಲಾಗಿದೆ. ಜಾಯಿಂಟ್ ವೆಂಚರ್ ಅಲ್ಲದ ಟೆಂಡರ್‌ನಲ್ಲಿ ಗುತ್ತಿಗೆದಾರರ ಸ್ವಂತ ಅರ್ಹತೆ ಮೇಲೆ ಗುತ್ತಿಗೆ ನೀಡಬೇಕೇ ಹೊರತು ಉತ್ಪಾದಕ ಸಂಸ್ಥೆಯ ಅರ್ಹತೆ ಆಧಾರದಲ್ಲಿ ಅಲ್ಲ.
- ಕಡಿಮೆ ಮೊತ್ತ ನಮೂದಿಸಿದ ಗುತ್ತಿಗೆದಾರರ ಬದಲು ಯಂತ್ರದ ಉತ್ಪಾದಕ ಸಂಸ್ಥೆಯ ವಾರ್ಷಿಕ ವಹಿವಾಟು ಪರಿಗಣಿಸಲಾಗಿದೆ. ಜಾಯಿಂಟ್ ವೆಂಚರ್‌ಗೆ ಅವಕಾಶ ಇಲ್ಲದ ಟೆಂಡರ್‌ನಲ್ಲಿ ಇದು ನಿಯಮಬಾಹಿರ.
- ಷರತ್ತಿನ ಪ್ರಕಾರ ಗುತ್ತಿಗೆದಾರರು ನಾಲ್ಕು ಯಂತ್ರಗಳನ್ನು ನಿರ್ವಹಿಸಿರುವ ಅನುಭವ ಹೊಂದಿರಬೇಕು. ಆದರೆ, ಸತೀಶ್‌ಕುಮಾರ್ ಯಾವುದೇ ಯಂತ್ರವನ್ನು ನಿರ್ವಹಿಸಿಲ್ಲ. ಯಂತ್ರ ಉತ್ಪಾದಿಸುವ ಸಂಸ್ಥೆಯ ಪೂರ್ವಾನುಭವ ಪರಿಗಣಿಸಿದ್ದು ತಪ್ಪು. ಆ ಸಂಸ್ಥೆಯೂ 2 ವರ್ಷ 6 ತಿಂಗಳ ಅನುಭವವನ್ನಷ್ಟೇ ಹೊಂದಿದೆ.

ಎಲ್ಲ ಬಸ್‌ಗಳ ಕಾರ್ಯಾಚರಣೆ: ಸಂಭ್ರಮಾಚರಣೆಗೆ ಸಿದ್ಧತೆ

ಬೆಂಗಳೂರು: ಮೂರು ವರ್ಷಗಳ ನಂತರ ಇದೇ ಮೊದಲ ಬಾರಿಗೆ ಎಲ್ಲಾ ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸಲು ಕೆಎಸ್‌ಆರ್‌ಟಿಸಿ ಮುಂದಾಗಿದ್ದು, ಆ ಸಂದರ್ಭವನ್ನು ಹಬ್ಬದಂತೆ ಸಂಭ್ರಮಾಚರಣೆ ಮಾಡಲು ನಿಗಮ ಸಿದ್ಧತೆ ಮಾಡಿಕೊಂಡಿದೆ.

ಏ.14ರಿಂದ 17ರವರೆಗೆ ಸಾಲು ರಜೆಗಳಿದ್ದು, ಆ ಸಂದರ್ಭದಲ್ಲಿ ಹೊರ ಊರುಗಳಿಗೆ ಹೋಗುವ ಪ್ರಯಾಣಿಕರಿಗೆ ಅನುಕೂಲ ಆಗುವಂತೆ ಏ.13ರಿಂದ 17ರವರೆಗೆ 200 ವಿಶೇಷ ಬಸ್‌ಗಳ ಕಾರ್ಯಾಚರಣೆಗೆ ವ್ಯವಸ್ಥೆ ಮಾಡಿಕೊಂಡಿದೆ.

ರಾಜಹಂಸ, ಹವಾನಿಯಂತ್ರಿತ ರಹಿತ ಸ್ಲೀಪರ್ ಬಸ್‌ಗಳು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಆರಂಭಿಸಲಿವೆ. ವೋಲ್ವೊ ಮತ್ತು ಹವಾನಿಯಂತ್ರಿತ ಸ್ಲೀಪರ್ ಬಸ್‌ಗಳು ಶಾಂತಿನಗರದ ಘಟಕ-4ರ ಮುಂಭಾಗದ ಸರ್ವೀಸ್ ರಸ್ತೆಯಿಂದ ಕಾರ್ಯಾಚರಣೆ ಮಾಡಲಿವೆ.

ಅಲ್ಲಿ ಪ್ರಯಾಣಿಕರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಕುಡಿಯುವ ನೀರು, ಬೆಳಕು ಮತ್ತು ಶೌಚಾಲಯಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಬಸ್ ಹತ್ತುವ ಪ್ರಯಾಣಿಕರಿಗೆ ಗುಲಾಬಿ ಹೂವು, ಲೇಖನಿ, ಪುಟಾಣಿಗಳಿಗೆ ಸಿಹಿ ವಿತರಿಸುವ ಮೂಲಕ ವಿಶೇಷ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಭಾರತೀಯ ವಿದ್ಯಾಭವನದ ಪತ್ರಿಕೋದ್ಯಮ ಕಾಲೇಜು ವತಿಯಿಂದ ಒಂದು ವರ್ಷದ ಪತ್ರಿಕೋದ್ಯಮ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನಿಸಲಾಗಿದೆ.

ಪತ್ರಿಕೋದ್ಯಮದಲ್ಲಿ ಅನುಭವ ಹೊಂದಿರುವ ಎನ್.ಎಸ್. ಶ್ರೀಧರಮೂರ್ತಿ ಈ ಕೋರ್ಸ್‌ನ ನಿರ್ವಾಹಕರು. ದೃಶ್ಯ ಮತ್ತು ಮುದ್ರಣ ಮಾಧ್ಯಮ, ಕಾರ್ಪೊರೇಟ್ ಪತ್ರಿಕೋದ್ಯಮ ಬಗ್ಗೆ ವಿವಿಧ ಸಾಧಕರು ಕೋರ್ಸ್‌ನಲ್ಲಿ ತರಬೇತಿ ನೀಡಲಿದ್ದಾರೆ. ಯಾವುದೇ ವಿಷಯದಲ್ಲಿ ಪದವಿ ಮುಗಿಸಿದವರು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 9538181140

ಸುದ್ದಿ 2 ನಿಮಿಷ

ರಾಜಪ್ಪ ದಳವಾಯಿಗೆ 'ಭೀಮರತ್ನ' ಪ್ರಶಸ್ತಿ

ಬೆಂಗಳೂರು: 'ಸಾಹಿತಿ ರಾಜಪ್ಪ ದಳವಾಯಿ ಅವರನ್ನು 2022ನೇ ಸಾಲಿನ 'ಭೀಮರತ್ನ' ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಇದೇ 14ರಂದು ನಡೆಯುವ ಅಂಬೇಡ್ಕರ್ ಜಯಂತಿಯಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ವೈ.ಎಸ್. ದೇವೂರ ತಿಳಿಸಿದರು.

ವಿಶ್ವ ಬುದ್ಧ ಧಮ್ಮ ಸಂಘ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ರಾಜಪ್ಪ ಅವರ 'ವಿ ದಿ ಪೀಪಲ್ ಆಫ್ ಇಂಡಿಯಾ' ಕೃತಿ ಆಧರಿಸಿ ರಚಿಸಲ್ಪಟ್ಟಿದ್ದ ನಾಟಕವನ್ನು ಶಿವಮೊಗ್ಗದ ರಂಗಾಯಣ ತಂಡ ಪ್ರಸ್ತುತ ಪಡಿಸಿದೆ. ಅದು ಉತ್ತಮ ಪ್ರದರ್ಶನಗಳನ್ನೂ ಕಾಣುತ್ತಿದೆ. ಅಂಬೇಡ್ಕರ್ ಜೀವನ ಕುರಿತ ಮಾಹಿತಿ ಹಾಗೂ ಸಂದೇಶವನ್ನು ಈ ನಾಟಕದ ಮೂಲಕ ನಾಡಿನಾದ್ಯಂತ ಪಸರಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಪ್ರಶಸ್ತಿಯು ₹25 ಸಾವಿರ ನಗದು, ಅಭಿನಂದನಾ ಫಲಕ ಹಾಗೂ ಸ್ಮರಣಿಕೆ ಹೊಂದಿರಲಿದೆ' ಎಂದರು.



ನಾಗಸೇನಾ ಬುದ್ಧ ವಿಹಾರದ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ, 'ಅಂಬೇಡ್ಕರ್ ಅವರ 131ನೇ ಜಯಂತಿ ಅಂಗವಾಗಿ ವಿಧಾನಸೌಧದ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆ ಎದುರಿನಿಂದ 'ಭೀಮ ರಥ ಯಾತ್ರೆ' ಹಮ್ಮಿಕೊಳ್ಳಲಾಗಿದೆ. ಸದಾಶಿವನಗರದ ನಾಗಸೇನಾ ಬುದ್ಧ ವಿಹಾರದವರೆಗೂ ಯಾತ್ರೆ ಸಾಗಲಿದೆ. ನಗರದ ವಿವಿಧ ಭಾಗಗಳಿಂದ ಬರುವ ಒಟ್ಟು 131 ಅಂಬೇಡ್ಕರ್ ರಥಗಳು ಇದರಲ್ಲಿ ಪಾಲ್ಗೊಳ್ಳಲಿವೆ' ಎಂದು ತಿಳಿಸಿದರು.

'ನಗರದ ಸುಸ್ಥಿರ ಅಭಿವೃದ್ಧಿಗೆ ಮೇಕೆದಾಟು ಅಗತ್ಯ'

ಬೆಂಗಳೂರು: 'ನಗರದ ಸುಸ್ಥಿರ ಅಭಿವೃದ್ಧಿಗೆ ಮೇಕೆದಾಟು ಜಲಾಶಯ ಅತ್ಯಗತ್ಯ. ಇದರಿಂದ ರಾಜ್ಯದ 10 ಜಿಲ್ಲೆಗಳಿಗೆ ಅನುಕೂಲವಾಗಲಿದೆ. ಕೆಆರ್‌ಎಸ್, ಕಬಿನಿ, ಹೇಮಾವತಿ ಹಾಗೂ ಹಾರಂಗಿ ಜಲಾಶಯಗಳ ಮೇಲಿನ ಒತ್ತಡ ಸಂಪೂರ್ಣವಾಗಿ ತಗ್ಗಲಿದೆ' ಎಂದು ಎಂಜಿನಿಯರ್‌ಗಳ ಸಂಸ್ಥೆಯ ರಾಜ್ಯ ಘಟಕದ ಅಧ್ಯಕ್ಷ ಎಂ.ಲಕ್ಷ್ಮಣ ಅಭಿಪ್ರಾಯಪಟ್ಟರು.

ಎಂಜಿನಿಯರ್‌ಗಳ ಸಂಸ್ಥೆಯು ಮಂಗಳವಾರ ಆಯೋಜಿಸಿದ್ದ 'ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ–ಇಂದಿನ ಸ್ಥಿತಿಗತಿ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಅತಿವೇಗವಾಗಿ ಬೆಳೆಯುತ್ತಿರುವ ವಿಶ್ವದ ಪ್ರಮುಖ ನಗರಗಳ ಸಾಲಿನಲ್ಲಿ ಬೆಂಗಳೂರು ಕೂಡ ಇದೆ. ಇಲ್ಲಿ ವಾಸಿಸುತ್ತಿರುವ ಶೇ 65 ಮಂದಿಗೆ ಮಾತ್ರ ಕಾವೇರಿ ನೀರು ಸಿಗುತ್ತಿದೆ. ಶೇ 70ರಷ್ಟು ವಸತಿ ಸಮುಚ್ಚಯಗಳು ಕಾವೇರಿ ನೀರಿನ ಸಂಪರ್ಕದಿಂದ ವಂಚಿತವಾಗಿವೆ. ಮೇಕೆದಾಟು ಜಲಾಶಯ ನಿರ್ಮಾಣವಾದರೆ ಕುಡಿಯುವ ಉದ್ದೇಶಕ್ಕೆ 23.75 ಟಿಎಂಸಿ ಅಡಿ ಹೆಚ್ಚುವರಿ ನೀರು ಲಭ್ಯವಾಗಲಿದೆ. 400 ಮೆಗಾವಾಟ್ ವಿದ್ಯುತ್ ಉತ್ಪಾದಿಸಿ ಬಳಸಿಕೊಳ್ಳಬಹುದು' ಎಂದು ತಿಳಿಸಿದರು.

'ಹೊರಟ್ಟಿ ಹೇಳಿಕೆ ಸಂವಿಧಾನ ಉಲ್ಲಂಘನೆ'

ಬೆಂಗಳೂರು: 'ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಂದಿನ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸುವುದಾಗಿ ಹೇಳಿರುವುದು ಕಾನೂನು ಹಾಗೂ ಸಂವಿಧಾನದ ಉಲ್ಲಂಘನೆ' ಎಂದು ವಿಧಾನಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ ರಾಥೋಡ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '40 ವರ್ಷಗಳಿಂದ ವಿಧಾನ ಪರಿಷತ್ ಸದಸ್ಯರಾಗಿರುವವರು, ಸಚಿವರಾಗಿದ್ದವರು ಈ ರೀತಿ ಹೇಳಿರುವುದು ಸರಿಯಲ್ಲ' ಎಂದರು.

'ಸಭಾಪತಿಯಾಗಿರುವವರು ಮತ್ತೊಂದು ಪಕ್ಷದಿಂದ ಸ್ಪರ್ಧಿಸುವುದಾಗಿ ಹೇಳಿರುವುದು ಅನರ್ಹತೆ ಆಗುವುದಿಲ್ಲವೇ? ತಮ್ಮ ಹೇಳಿಕೆಯ ಬಗ್ಗೆ ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಪಕ್ಷಾಂತರ ಚಟುವಟಿಕೆಯಲ್ಲಿ ಭಾಗಿಯಾದ ಸದಸ್ಯರನ್ನು ಸಭಾಪತಿಯವರು ಅನರ್ಹಗೊಳಿಸಬೇಕು. ಆದರೆ, ಅವರೇ ಈ ರೀತಿ ಹೇಳಿದರೆ ಹೇಗೆ' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿ ಸರ್ಕಾರ ಮತ್ತು ಪೊಲೀಸರ ನಡುವೆ ಸಂಘರ್ಷ ಆರಂಭವಾಗಿದೆ. ಈ ಪರಿಸ್ಥಿತಿ ಮುಂದುವರಿದರೆ ಅರಾಜಕತೆ ಸೃಷ್ಟಿಯಾಗಲಿದೆ' ಎಂದೂ ರಾಥೋಡ್ ಹೇಳಿದರು.



ಬ್ರಹ್ಮರಥೋತ್ಸವ

ಯಲಹಂಕ ಸಮೀಪದ ಬ್ಯಾಟರಾಯನಪುರದಲ್ಲಿ ಕೋದಂಡರಾಮಸ್ವಾಮಿಯವರ 73ನೇ ವರ್ಷದ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಪ್ರಜಾವಾಣಿ ಚಿತ್ರ

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಗುಬ್ಬಿ
ಮೂಲ ದಾವಾ ನಂ. 77/2020

ವಾದಿ: ಲಲಿತಮ್ಮ ವಿರುದ್ಧ
ಪ್ರತಿವಾದಿಗಳು: ರಾಜಶೇಖರಯ್ಯ ಮತ್ತು ಇತರರು.

1ನೇ ಪ್ರತಿವಾದಿಯ ಜಿ.ಪಿ.ಎ. ಹೋಲ್ಡರ್ ನಂ.1 ಆರ್.ಬಿಂದು ಬಿನ್ ರಾಜಶೇಖರಯ್ಯ ಕೋಂ ಬಸವರಾಜು ಸುಮಾರು 40 ವರ್ಷ, ಆಧಾರ ನಂ. 208576974588 ವಾಸ: ನಾಗಸಂದ್ರ, ನೆಲಗದರನಹಳ್ಳಿ, ಗೃಹಲಕ್ಷ್ಮೀ ಬಡಾವಣೆ, ಮಂಜುಳ ಪಬ್ಲಿಕ್ ಸ್ಕೂಲ್ ಹತ್ತಿರ, 60 ಅಡಿ ರಸ್ತೆ, ಸೊಂಡೆಕೊಪ್ಪ ಮುಖ್ಯರಸ್ತೆ, ಬೆಂಗಳೂರು.

1ನೇ ಪ್ರತಿವಾದಿಯ ಜಿ.ಪಿ.ಎ. ಹೋಲ್ಡರ್ ನಂ.2 ಆರ್.ಕೀರ್ತಿಲತ ಬಿನ್ ರಾಜಶೇಖರಯ್ಯ ಕೋಂ ಷಡಾಕ್ಷರಿ ಬಿ.ಸಿ. ಸುಮಾರು 33 ವರ್ಷ, ಆಧಾರ ನಂ. 629303473326 ವಾಸ: ಎಲೆಕ್ಟ್ರಾನಿಕ್ಸ್ ಸಿಟಿ, ದೊಡ್ಡ ತೋಗೂರು, ವಿಪ್ರೋ ಗೇಟ್ ಎದುರು, ಮನೆ ನಂ. 27, ಬೆಂಗಳೂರು–560100.

1ನೇ ಪ್ರತಿವಾದಿಯ ಜಿ.ಪಿ.ಎ. ಹೋಲ್ಡರ್ ನಂ.3 ಪ್ರಿಯ ಆರ್. ಬಿನ್ ರಾಜಶೇಖರಯ್ಯ ಕೋಂ ಕೆ.ಟಿ.ಮಂಜುನಾಥ, ಸುಮಾರು 37 ವರ್ಷ, ಆಧಾರ ನಂ. 941661685719 ವಾಸ: ಮಾಸ್ತಿಗೊಂಡನಹಳ್ಳಿ, ದಂಡಿನಶಿವರ ಹೋಬಳಿ, ತುರುವೇಕೆರೆ ತಾಲ್ಲೂಕು, ಹಾಲಿ ವಾಸ: ದೋಹಾ, ಕತಾರ್, ಪಿ.ಓ.ಬಾಕ್ಸ್ ನಂ. 18108.

ಸಾರ್ವಜನಿಕ ಪ್ರಕಟಣೆ

ಮೇಲೆ ಹೆಸರಿಸಲಾದ ವಾದಿಯು ಈ ಮೇಲ್ಕಂಡ ನ್ಯಾಯಾಲಯದಲ್ಲಿ ನಿಮ್ಮ ಮತ್ತು ಇತರರ ವಿರುದ್ಧ ಭಾಗಾಂಶಕ್ಕಾಗಿ ಈ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, 1ನೇ ಪ್ರತಿವಾದಿಯ ಸಾಮಾನ್ಯ ಅಧಿಕಾರ ಪತ್ರ ಪಡೆದ 1 ರಿಂದ 3 ರವರಿಗೆ ಸಮನ್ಸ್/ನೋಟೀಸ್ ಜಾರಿಯಾಗಿರುವುದಿಲ್ಲ. ಆದುದರಿಂದ 1ನೇ ಪ್ರತಿವಾದಿಯ ಸಾಮಾನ್ಯ ಅಧಿಕಾರ ಪತ್ರ ಪಡೆದ 1 ರಿಂದ 3 ಆದ ನೀವು ನ್ಯಾಯಾಲಯದಿಂದ ಸದರಿ ಅರ್ಜಿಯ ಸಂಬಂಧವಾಗಿ ನಿಮಗೆ ನೋಟೀಸ್ ಮತ್ತು ಸಮನ್ಸ್‌ಗಳು ಜಾರಿಯಾಗಬೇಕಾಗಿರುವುದಿಂದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿರೋಧಿಸುವುದಾದಲ್ಲಿ ನೀವು ಸ್ವತಃ ಅಥವಾ ನಿಮ್ಮಿಂದ ಅಧಿಕೃತವಾಗಿ ಅಧಿಕಾರ ಹೊಂದಿರುವ ವಕೀಲರು ಅಥವಾ ನಿಮ್ಮ ಕಾರ್ಯ ನಿರ್ವಹಿಸಲು ಕಾಯ್ದೆ ಹೊಂದಿದ ಯಾವುದೇ ವ್ಯಕ್ತಿಯ ಮೂಲಕ ತಾರೀಖು 01.06.2022ರಂದು ಈ ನ್ಯಾಯಾಲಯದಲ್ಲಿ ಹಾಜರಾಗಲು ನಿಮಗೆ ಈ ನೋಟೀಸ್ ಕೊಡಲ್ಪಟ್ಟಿದೆ. ಒಂದು ವೇಳೆ ನೀವು ಹಾಜರಾಗಲು ತಪ್ಪಿದ್ದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಈ ದಾವೆಯನ್ನು ಏಕಪಕ್ಷವಾಗಿ ವಿಚಾರಣೆ ಮಾಡಿ ತೀರ್ಮಾನಿಸಲಾಗುವುದು. ಈ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ 2022ನೇ ಇಸವಿ ಏಪ್ರಿಲ್ ತಿಂಗಳು 11ನೇ ದಿನಾಂಕದಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದಂತೆ
ಸಹಿ/– ಶಿರಸ್ತೇದಾರರು,
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ, ಗುಬ್ಬಿ.

ಅರ್ಜಿದಾರರ ಪರ ವಕೀಲರು:
ಎಸ್. ರಂಗನಾಥ್ ಬಿ.ಎ.ಎಲ್.ಎಲ್.ಬಿ
ವಕೀಲರು, ಗುಬ್ಬಿ, ತುಮಕೂರು ಜಿಲ್ಲೆ.

ಲಂಚ ಪ್ರಕರಣ: ಬಿಬಿಎಂಪಿ ತೆರಿಗೆ ನಿರೀಕ್ಷಕನಿಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2017ರಲ್ಲಿ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ದಾಖಲಿಸಿದ್ದ ಪ್ರಕರಣದಲ್ಲಿ ಬಿಬಿಎಂಪಿಯ ಚಿಕ್ಕಪೇಟೆ ವಾರ್ಡ್‌ನ ತೆರಿಗೆ ನಿರೀಕ್ಷಕ ನಾಗೇಂದ್ರ ಅಪರಾಧಿ ಎಂದು ಸಾರಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ, ಐದು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ₹ 40,000 ದಂಡ ವಿಧಿಸಿದೆ.

ನಾಗೇಂದ್ರ 2017ರಲ್ಲಿ ಬಿಬಿಎಂಪಿಯ ಬೇಗೂರು ಸಹಾಯಕ ಕಂದಾಯ ಅಧಿಕಾರಿ ಕಚೇರಿಯಲ್ಲಿ ತೆರಿಗೆ ನಿರೀಕ್ಷಕರಾಗಿದ್ದರು. ಆಗ, ಅಲ್ಲಿನ ನಿವಾಸಿಯೊಬ್ಬರು ತಮ್ಮ ಸ್ಥಿರಾಸ್ತಿಯ ಬಿ– ಖಾತಾ ಮಾಡಿಸಲು ಅರ್ಜಿ ಸಲ್ಲಿಸಿದ್ದರು. ಆಗ, ಅಪರಾಧಿಯು ₹ 25,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಎಸಿಬಿಗೆ ದೂರು ನೀಡಿದ್ದರು.

₹ 20,000 ಲಂಚ ಪಡೆಯುತ್ತಿದ್ದಾಗ ದಾಳಿ ನಡೆಸಿದ್ದ ಎಸಿಬಿ ಅಧಿಕಾರಿಗಳು ನಾಗೇಂದ್ರ ಅವರನ್ನು ಬಂಧಿಸಿದ್ದರು. ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ 2018ರ ನವೆಂಬರ್‌ನಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆಯನ್ನು ಮಂಗಳವಾರ ಪೂರ್ಣಗೊಳಿಸಿದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, 'ಲಂಚ ಪ್ರಕರಣದಲ್ಲಿ ನಾಗೇಂದ್ರ ದೋಷಿ' ಎಂಬ ತೀರ್ಮಾನ ಪ್ರಕಟಿಸಿದರು.

ಲಂಚ: ಬೆಸ್ಕಾಂ ಜೆಇ ಬಂಧನ

ಬೆಂಗಳೂರು: ಕಟ್ಟಡವೊಂದಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಕಲ್ಪಿಸಲು ₹ 20,000 ಲಂಚ ಪಡೆಯುತ್ತಿದ್ದ ಬೆಸ್ಕಾಂ ಸೋಲದೇವನಹಳ್ಳಿ ಉಪ ವಿಭಾಗದ ಕಿರಿಯ ಎಂಜಿನಿಯರ್ (ಜೆ.ಇ) ಮಹೇಶ್ವರಪ್ಪ ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಮಂಗಳವಾರ ಬಂಧಿಸಿದೆ.

ಕಟ್ಟಡವೊಂದಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಕೋರಿ ಸುಂಕದಕಟ್ಟೆ ನಿವಾಸಿಯಾಗಿರುವ ವಿದ್ಯುತ್ ಗುತ್ತಿಗೆದಾರರೊಬ್ಬರು ಅರ್ಜಿ ಸಲ್ಲಿಸಿದ್ದರು. ಸರ್ಕಾರಿ ಶುಲ್ಕ ಮತ್ತು ಲಂಚ ಸೇರಿದಂತೆ ₹ 25,000 ನೀಡುವಂತೆ ಆರೋಪಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಗುತ್ತಿಗೆದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ಸಲ್ಲಿಸಿದ್ದರು.

ಮಂಗಳವಾರ ದೂರುದಾರರಿಂದ ₹ 20,000 ಲಂಚ ಪಡೆಯುತ್ತಿದ್ದಾಗ ದಾಳಿ ಮಾಡಿದ ಎಸಿಬಿ ಅಧಿಕಾರಿಗಳು, ಮಹೇಶ್ವರಪ್ಪ ಅವರನ್ನು ಬಂಧಿಸಿದ್ದಾರೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

'ಬೆಂಗಳೂರು ಕರಗ ಮಹೋತ್ಸವ'ದ ಪ್ರಯುಕ್ತ ಈ ಬಾರಿ ಕರಗ ಹೊರಲಿರುವ ಜ್ಞಾನೇಂದ್ರ ಹಾಗೂ ಕರಗ ತಂಡದವರು ಕೆ.ಆರ್.ಮಾರುಕಟ್ಟೆ ಬಳಿ ಮಂಗಳವಾರ ಮೆರವಣಿಗೆ ನಡೆಸಿದರು –ಪ್ರಜಾವಾಣಿ ಚಿತ್ರ

'ವಸತಿರಹಿತರ ಬದುಕಿನ ಜೊತೆ ಸೋಮಣ್ಣ ಚೆಲ್ಲಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಒಂದು ಲಕ್ಷ ಮನೆ ನಿರ್ಮಿಸುವ ಯೋಜನೆಯನ್ನು ವಸತಿ ಸಚಿವ ವಿ.ಸೋಮಣ್ಣ ಹಳ್ಳ ಹಿಡಿಸಿದ್ದಾರೆ. ಆ ಮೂಲಕ ಸ್ವಂತ ಸೂರಿಲ್ಲದ ಬಡ ಹಾಗೂ ಮಧ್ಯಮ ವರ್ಗದವರ ಬದುಕಿನ ಜೊತೆ ಚೆಲ್ಲಾಟವಾಡುತ್ತಿದ್ದಾರೆ' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ₹87 ಸಾವಿರಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಒಟ್ಟು 48,614 ಕುಟುಂಬಗಳಿಗೆ ಸೂರು ಕಲ್ಪಿಸಲು ನಿರ್ಧರಿಸಲಾಗಿತ್ತು. ಫಲಾನುಭವಿಗಳಿಂದ ತಲಾ ₹100 ಪಡೆಯಲಾಗಿತ್ತು. ಆದರೆ, ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಆದಾಯದ ಮಿತಿಯನ್ನು ₹3 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಹೊಸದಾಗಿ ಅರ್ಜಿ ಆಹ್ವಾನಿಸಿ ₹1 ಲಕ್ಷ ಹಣ ಪಾವತಿಸುವಂತೆ ಸೂಚಿಸಲಾಗಿದೆ. ಹಣ ಹೊಂದಿಸಲಾಗದ ಅನೇಕರು ಈ ಯೋಜನೆಯಿಂದ ಹೊರಬಿದ್ದಿದ್ದಾರೆ' ಎಂದು ಆರೋಪಿಸಿದರು.

'ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡಲಾಗಿದ್ದು, ತಾಂತ್ರಿಕ ದೋಷದಿಂದಾಗಿ ಜನ ಪರದಾಡುವಂತಾಗಿದೆ. ಇದನ್ನು ಪ್ರಶ್ನಿಸಿದವರಿಗೆ ಮುಂಗಡ ಹಣ ಮರುಪಾವತಿ ಮಾಡಿ ಯೋಜನೆಯಿಂದಲೇ ಕೈಬಿಡಲಾಗುತ್ತಿದೆ. ಸಚಿವ ವಿ.ಸೋಮಣ್ಣ ಹಾಗೂ ಬಿಜೆಪಿ ಶಾಸಕರ ಬೆಂಬಲಿಗರಿಗೆ ಮನೆಗಳನ್ನು ಹಂಚಿಕೆ ಮಾಡುವ ಹುನ್ನಾರ ನಡೆಯುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಎಪಿ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ, 'ಬಿಜೆಪಿ ಅವಧಿಯಲ್ಲಿ ಅರ್ಜಿ ಸಲ್ಲಿಸಿರುವವರ ಜೊತೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅರ್ಜಿ ಸಲ್ಲಿಸಿದವರಿಗೂ ಸರ್ಕಾರ ಮನೆಗಳನ್ನು ಹಂಚಿಕೆ ಮಾಡಬೇಕು. ಸೂರು ಕಲ್ಪಿಸಿದ ಬಳಿಕವೇ ₹1 ಲಕ್ಷ ಮೊತ್ತ ಪಡೆಯಬೇಕು. ಪ್ರವಾಹದಿಂದಾಗಿ ರಾಜ್ಯದಲ್ಲಿ 27 ಲಕ್ಷ ಮಂದಿ ಮನೆ ಕಳೆದುಕೊಂಡಿದ್ದಾರೆ. ಈ ಪೈಕಿ 47 ಕುಟುಂಬಗಳಿಗೆ ಮಾತ್ರ ಮನೆ ನಿರ್ಮಿಸಲು ₹5 ಲಕ್ಷ ಪರಿಹಾರ ನೀಡಲಾಗಿದೆ. ಸೋಮಣ್ಣನವರ ನಿರ್ಲಕ್ಷ್ಯದಿಂದಾಗಿ ಸಂತ್ರಸ್ತರು ಟೆಂಟ್ ಹಾಕಿಕೊಂಡು ಬದುಕುವಂತಾಗಿದೆ' ಎಂದು ಟೀಕಿಸಿದರು.

ಸರ್ಕಾರಿ ಶಾಲೆ ನವೀಕರಣಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ.ನಾಗೇನಹಳ್ಳಿಯ ಮನೋರಾಯಪಾಳ್ಯದ ಸರ್ಕಾರಿ ಶಾಲೆಯ ನವೀಕರಣ ಕಾಮಗಾರಿಗೆ ಹೆಬ್ಬಾಳದ ಶಾಸಕ ಬೈರತಿ ಸುರೇಶ್ ಮಂಗಳವಾರ ಚಾಲನೆ ನೀಡಿದರು.

ಶಾಸಕರ ಅನುದಾನದಲ್ಲಿ ಶಾಲೆಯನ್ನು ನವೀಕರಣ ಮಾಡಲಾಗುತ್ತಿದೆ. ಶಿಥಿಲಾವಸ್ಥೆಗೆ ತಲುಪಿದ್ದ ಈ ಶಾಲೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದು ಸಮಸ್ಯೆಯಾಗಿತ್ತು.

'ನನ್ನ ಕ್ಷೇತ್ರದ ಸರ್ಕಾರಿ ಶಾಲೆಗಳಿಗೆ ಯಾವುದೇ ರೀತಿಯ ಸೌಲಭ್ಯಗಳನ್ನು ನೀಡಲು ಸಿದ್ಧನಿದ್ದೇನೆ' ಎಂದು ತಿಳಿಸಿದರು.

ಶಾಲೆಯ ನವೀಕರಣ ಕಾಮಗಾರಿಗೆ ಬೈರತಿ ಸುರೇಶ್ ಚಾಲನೆ ನೀಡಿದರು. ವಿದ್ಯಾರ್ಥಿಗಳು ಹಾಗೂ ಪೋಷಕರು ಇದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಶಸ್ತಿ ಪ್ರದಾನ

ಹೊಸ ಆವಿಷ್ಕಾರಗಳಲ್ಲಿ ಕನ್ನಡ ಭಾಷೆ ಬಳಸಿ: ಲಕ್ಷ್ಮಣ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಹೃದಯದ ಭಾಷೆಯಾದರೆ ಮಾತ್ರವೇ ಜಗತ್ತಿನೆಲ್ಲೆಡೆ ಕನ್ನಡ ಪಸರಿಸಲು ಸಾಧ್ಯ. ಮುಂದಿನ ಪೀಳಿಗೆಯ ಯುವಕರು ಹೊಸ ಆವಿಷ್ಕಾರಗಳಲ್ಲೂ ಕನ್ನಡ ಬಳಸುವ ಬಗ್ಗೆ ಯೋಚಿಸಿ, ಕಾರ್ಯಗತ ಮಾಡಬೇಕು' ಎಂದು ಕವಿ ಬಿ.ಆರ್. ಲಕ್ಷ್ಮಣ ರಾವ್ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶ ಮತ್ತು ತೆಲಂಗಾಣದ ವಿದ್ಯಾರ್ಥಿಗಳಿಗೆ 2019–20ನೇ ಸಾಲಿನ 'ಕನ್ನಡ ಮಾಧ್ಯಮ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

ಬಿ.ಆರ್. ಲಕ್ಷ್ಮಣ ರಾವ್

'ಭಾಷೆ ಎಂಬುದು ನಮ್ಮ ಅಸ್ಮಿತೆ ಮತ್ತು ಸಾಂಸ್ಕೃತಿಕ ಧಾತು. ನಾವು ಯಾವುದೇ ರಾಜ್ಯ, ದೇಶದಲ್ಲಿ ನೆಲೆಸಿದ್ದರೂ ಕನ್ನಡ ಭಾಷೆ ನಮ್ಮೆಲ್ಲರನ್ನೂ ಒಗ್ಗೂಡಿಸಲಿದೆ' ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, 'ಜಾಗತಿಕ ಮಟ್ಟದಲ್ಲಿ ಕನ್ನಡ ಕಟ್ಟಲು ಹಾಗೂ ಕನ್ನಡವನ್ನು ಉದ್ಯೋಗದ ಭಾಷೆಯನ್ನಾಗಿಸಲು ಪ್ರಾಧಿಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿದೆ' ಎಂದು ತಿಳಿಸಿದರು.

ಕನ್ನಡ ಮಾಧ್ಯಮದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ವ್ಯಾಸಂಗ ಮಾಡಿದ ತೆಲಂಗಾಣದ 15 ವಿದ್ಯಾರ್ಥಿಗಳು, ಆಂಧ್ರ ಪ್ರದೇಶದ 71 ವಿದ್ಯಾರ್ಥಿಗಳು ಹಾಗೂ ಪಿಯುಸಿಯಲ್ಲಿ ವ್ಯಾಸಂಗ ಮಾಡಿದ 4 ವಿದ್ಯಾರ್ಥಿಗಳಿಗೆ 'ಕನ್ನಡ ಮಾಧ್ಯಮ ಪ್ರಶಸ್ತಿ' ನೀಡಲಾಯಿತು. ಒಟ್ಟು 90 ವಿದ್ಯಾರ್ಥಿಗಳಿಗೆ ₹ 9.91 ಲಕ್ಷ ನಗದು ಬಹುಮಾನ ವಿತರಿಸಲಾಯಿತು.

ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಇದ್ದರು.

ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕೇಂದ್ರದಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 13ರಿಂದ 15ರವರೆಗೂ ನಗರದ ವಿವಿಧೆಡೆ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು (ಏ.13): ಬೇಗೂರು ಮುಖ್ಯರಸ್ತೆಯ ಸೇಂಟ್ ಫ್ರಾನ್ಸಿಸ್ ಶಾಲೆಯಿಂದ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್, ನ್ಯೂ ಮೈಕೋ ಲೇಔಟ್ ಹಾಗೂ ಸುತ್ತಲಿನ ಪ್ರದೇಶ. ಬೇಗೂರು ಮುಖ್ಯರಸ್ತೆಯ ಹೊಂಗಸಂದ್ರ ಬಸ್ ನಿಲ್ದಾಣದಿಂದ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಮತ್ತು ಸುತ್ತಲಿನ ಪ್ರದೇಶ.

ಏ.14 ಮತ್ತು 15: ಬೇಗೂರು ಮುಖ್ಯರಸ್ತೆಯ ಹೊಂಗಸಂದ್ರ ಬಸ್ ನಿಲ್ದಾಣದಿಂದ ಶಾಸಕರ ನಿವಾಸ ಹಾಗೂ ಸುತ್ತಲಿನ ಪ್ರದೇಶ. ಹೊಂಗಸಂದ್ರ ಬಸ್ ನಿಲ್ದಾಣದಿಂದ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಮತ್ತು ಸುತ್ತಲಿನ ಪ್ರದೇಶ. ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ ಸಿಗ್ನಲ್‌ನಿಂದ ಗ್ರೀನೇಜ್ ವಸತಿ ಸಮುಚ್ಚಯ ಹಾಗೂ ಸುತ್ತಲಿನ ಪ್ರದೇಶ.

ಶಿವರಾಮ ಕಾರಂತ ಬಡಾವಣೆ: 2014–18ರ ಅವಧಿಯಲ್ಲಿ ಹೊರಡಿಸಿದ್ದ ಅಧಿಸೂಚನೆ

1,475 ಕಟ್ಟಡಗಳ ಸಕ್ರಮಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ.ಶಿವರಾಮ ಕಾರಂತ ಬಡಾವಣೆಗೆ 2014–18ರ ಅವಧಿಯಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದ 17 ಗ್ರಾಮಗಳ 1,475 ಕಟ್ಟಡಗಳ ಸಕ್ರಮಕ್ಕೆ ಸುಪ್ರೀಂಕೋರ್ಟ್ ಅನುಮೋದನೆ ನೀಡಿದೆ' ಎಂದು ನ್ಯಾ.ಚಂದ್ರಶೇಖರ್ ಸಮಿತಿ (ಜೆಸಿಸಿ) ಅಧ್ಯಕ್ಷ ಎ.ವಿ. ಚಂದ್ರಶೇಖರ್ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮಿತಿಯು 15 ತಿಂಗಳುಗಳಲ್ಲಿ ಸುಪ್ರೀಂಕೋರ್ಟ್‌ಗೆ 12 ವರದಿಗಳನ್ನು ಸಲ್ಲಿಸಿತ್ತು. ಇವುಗಳನ್ನು ಸುಪ್ರೀಂಕೋರ್ಟ್ ಪರಿಗಣಿಸಿದೆ. ಕೋರ್ಟ್ ಆದೇಶವನ್ನು ಎಲ್ಲ ಅರ್ಜಿದಾರರಿಗೆ ಎಸ್‌ಎಂಎಸ್ ಸಂದೇಶದ ಮೂಲಕ ತಿಳಿಸಲಾಗಿದೆ' ಎಂದರು.

'ಈ ಎಲ್ಲ ಕಟ್ಟಡ ಮಾಲೀಕರಿಗೆ ವಿತರಿಸಲು 'ಸಕ್ರಮ ಪ್ರಮಾಣಪತ್ರ'ಗಳನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಸಕ್ರಮ ಪ್ರಮಾಣಪತ್ರಗಳನ್ನು ವಿತರಿಸುವ ಪ್ರಕ್ರಿಯೆ ಶೀಘ್ರದಲ್ಲೇ ಶುರುವಾಗಲಿದೆ' ಎಂದು ಮಾಹಿತಿ ನೀಡಿದರು.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿ ಪಡಿಸುತ್ತಿರುವ ಉದ್ದೇಶಿತ ಬಡಾವಣೆಯ ವ್ಯಾಪ್ತಿಯಲ್ಲಿ ಈಗಾಗಲೇ ನಿರ್ಮಿಸಿರುವ ಕಟ್ಟಡಗಳನ್ನು ಸಕ್ರಮಗೊಳಿಸಲು 7,161 ಅರ್ಜಿಗಳು ಹಾಗೂ ಬದಲಿ ನಿವೇಶನ ನೀಡುವುದಕ್ಕೆ 2,248 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಇದಕ್ಕಾಗಿ ಒಂದು ವರ್ಷ ಕಾಲಾವಕಾಶ ನೀಡಲಾಗಿತ್ತು' ಎಂದರು.

'ಶಿವರಾಮ ಕಾರಂತ ಬಡಾವಣೆ ವ್ಯಾಪ್ತಿಯಲ್ಲಿರುವ 13 ಬಿಡಿಎ ಅನುಮೋದಿತ ಬಡಾವಣೆಗಳು ಮತ್ತು ನಿರ್ಮಾಣ ಹಂತದಲ್ಲಿರುವ 2 ಬಹುಮಹಡಿ ಅಪಾರ್ಟ್‌ಮೆಂಟ್ ಸಂಕೀರ್ಣಗಳನ್ನು ಸ್ವಾಧೀನಪಡಿಸಿಕೊಳ್ಳಬಾರದು ಎಂದೂ ಸುಪ್ರೀಂಕೋರ್ಟ್ ಬಿಡಿಎಗೆ ಆದೇಶಿಸಿದೆ. ಬಡಾವಣೆಯಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು '2014ಕ್ಕೆ ಮುನ್ನ', '2014 ಮತ್ತು 2018ರ ನಡುವೆ' ಹಾಗೂ '2018ರ ನಂತರ' ಎಂದು ವರ್ಗೀಕರಿಸಲಾಗುವುದು. ಇದರ ಆಧಾರದ ಮೇಲೆ ಸೂಕ್ತ ಆದೇಶಗಳಿಗಾಗಿ ಸಮಿತಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಿದೆ' ಎಂದರು.

'ಸಮಿತಿ ವರದಿಯ ಆಧಾರದಲ್ಲಿ ಆವಲಹಳ್ಳಿಯಲ್ಲಿ 25 ಗುಂಟೆ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿದೆ. ಈ ಜಾಗವು ಬಿಎಂಎಸ್ ಎಜುಕೇಶನ್ ಟ್ರಸ್ಟ್‌ಗೆ ಸೇರಿದ ಜಾಗವಾಗಿದ್ದು, ಎಲ್ಲ ಅಗತ್ಯ ಅನುಮತಿ ಮತ್ತು ಅನುಮೋದನೆಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪಡೆದುಕೊಂಡಿದೆ. ಗಡಿ ಹೊಂದಾಣಿಕೆ ಆಗದ ಕಾರಣ ಹಾರೋಹಳ್ಳಿ ಗ್ರಾಮದಲ್ಲಿ 34 ಗುಂಟೆ ಜಮೀನನ್ನೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿದೆ' ಎಂದರು.

'ಬಿಡಿಎಗೆ 393 ಎಕರೆ ಮತ್ತು 31 ಗುಂಟೆ ಸರ್ಕಾರಿ ಜಮೀನನ್ನು ಹಸ್ತಾಂತರಿಸುವ ವಿಚಾರ ಸಂಬಂಧ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಜತೆ ಸಮಿತಿ ಚರ್ಚೆ ನಡೆಸುತ್ತಿದೆ. ಬಡಾವಣೆಗೆಂದು ಗುರುತಿಸಿರುವ ಸರ್ಕಾರಿ ಭೂಮಿಯನ್ನು ಶೀಘ್ರದಲ್ಲೇ ಬಿಡಿಎಗೆ ಹಸ್ತಾಂತರಿಸುವ ಪ್ರಕ್ರಿಯೆ ಕೈಗೊಂಡು, ಗಡಿ ಗುರುತಿಸುವಂತೆ ಬಿಡಿಎ ಉಪ ಆಯುಕ್ತರಿಗೆ (ಭೂಸ್ವಾಧೀನ) ಸಮಿತಿ ಸೂಚನೆ ನೀಡಿದೆ.

'ಬಡಾವಣೆಯಲ್ಲಿ 6 ಹಂತಗಳಲ್ಲಿ ತಲಾ 25 ಎಕರೆಯಂತೆ ಒಟ್ಟು 150 ಎಕರೆ ಭೂಮಿಯನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಮಂಜೂರು ಮಾಡುವಂತೆ ಬಿಡಿಎ ಆಯುಕ್ತರಿಗೆ ನ್ಯಾಯಾಲಯ ಸೂಚನೆ ನೀಡಿದೆ. ಈ ಜಾಗಗಳಲ್ಲಿ ನಿಗಮವು ಆರ್ಥಿಕವಾಗಿ ಹಿಂದುಳಿದವರಿಗೆ ಮನೆಗಳು, ಫ್ಲಾಟ್‌ಗಳನ್ನು ನಿರ್ಮಿಸಲಿದೆ. ಇಡಬ್ಲ್ಯುಎಸ್ ಯೋಜನೆಯಡಿ ವಿಶಾಲವಾದ ಜಾಗ ಮತ್ತು ಬಹುಮಹಡಿ ಕಟ್ಟಡಗಳ ಅಪಾರ್ಟ್‌ಮೆಂಟ್ ನಿರ್ಮಿಸಲು ಆದೇಶದಲ್ಲಿ ತಿಳಿಸಿದೆ. ಮಂಜೂರು ಮಾಡುವ ಭೂಮಿಯನ್ನು ಸಮಿತಿ ಮೇಲ್ವಿಚಾರಣೆ ಮಾಡಬೇಕೆಂದೂ ನ್ಯಾಯಾಲಯ ಸೂಚಿಸಿದೆ' ಎಂದು ತಿಳಿಸಿದರು.

ಸಮಿತಿಯ ಸದಸ್ಯ ಜೈಕರ್ ಜೆರೋಮ್, ಎಸ್.ಟಿ.ರಮೇಶ್ ಇದ್ದರು.

8 ಸಂಘ ಸಂಸ್ಥೆಗಳ ಸಕ್ರಮಕ್ಕೆ ಶಿಫಾರಸು

'ಬಡಾವಣೆಯಲ್ಲಿ ಸಾರ್ವಜನಿಕರ ಉದ್ದೇಶಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ವೀರಸಾಗರ ಗ್ರಾಮದ ವಿದ್ಯಾವಿಕಾಸ ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್, ಕೆಂಪನಹಳ್ಳಿಯ ನಿಕಿಸಾ ಡೆಮೆನ್ಷಿಯಾ ಹೋಂ ಆ್ಯಂಡ್ ಅಲ್ಜೈಮರ್ ಹಾಸ್ಪಿಟಲ್, ರಾಮಗೊಂಡನಹಳ್ಳಿಯ ಬಾಲಾಜಿ ಎಜುಕೇಶನ್ ಟ್ರಸ್ಟ್, ಕಾಳತಮ್ಮನಹಳ್ಳಿಯ ಗಂಗೋತ್ರಿ ಎಜುಕೇಶನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್, ಬ್ಯಾಲಕೆರೆಯ ಸೇಂಟ್ ಫಿಲೋಮಿನಾ ಸ್ಕೂಲ್, ಗಾಣಿಗರಹಳ್ಳಿಯ ಜಾಮಿಯಾ ಮಸೀದಿ, ವೀರಸಾಗರ ಸಂಜಯ್ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್, ಬ್ಯಾಲಕೆರೆಯ ದಿವ್ಯಾ ಕಾರುಣ್ಯ ಚಾರಿಟಬಲ್ ಟ್ರಸ್ಟ್‌ಗಳನ್ನು ಸಕ್ರಮಗೊಳಿಸಲಾಗುವುದು. ಈ ಬಗ್ಗೆಯೂ ಸಮಿತಿ ಶಿಫಾರಸು ಮಾಡಿದೆ' ಎಂದು ಎ.ವಿ.ಚಂದ್ರಶೇಖರ್ ಹೇಳಿದರು.

ಎ.ವಿ. ಚಂದ್ರಶೇಖರ್



ಮೂರನೆಯ ಲಸಿಕೆ ಈಗ ಎಲ್ಲಾ ವಯಸ್ಕರಿಗೂ ಲಭ್ಯ!

3 ತಿಂಗಳಲ್ಲಿ ಟಿಡಿಆರ್ ಪ್ರಮಾಣಪತ್ರ: ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಪರಿಷ್ಕೃತ ಮಾಸ್ಟರ್ ಪ್ಲಾನ್-2015'ರ ಅನುಸಾರ ರಸ್ತೆ ವಿಸ್ತರಣೆಗೆ ಜಮೀನು ಬಿಟ್ಟುಕೊಟ್ಟದ್ದ ಬಿದರಹಳ್ಳಿ ಹೋಬಳಿಯ ಕಣ್ಣೂರು, ದೊಮ್ಮಸಂದ್ರ ಮತ್ತು ಅದೂರು ಗ್ರಾಮಗಳ ಹತ್ತು ಭೂ ಮಾಲೀಕರಿಗೆ ಮೂರು ತಿಂಗಳಲ್ಲಿ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ (ಟಿಡಿಆರ್) ಪ್ರಮಾಣ ಪತ್ರ ವಿತರಿಸಿ' ಎಂದು ಹೈಕೋರ್ಟ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಆದೇಶಿಸಿದೆ.

'ರಸ್ತೆ ವಿಸ್ತರಣೆಗಾಗಿ ಜಮೀನು ನೀಡಿ ಸಾಕಷ್ಟು ವರ್ಷಗಳೇ ಕಳೆದಿದ್ದರೂ ನಮಗೆ ಟಿಡಿಆರ್ ವಿತರಣೆ ಆಗಿಲ್ಲ' ಎಂದು ಆಕ್ಷೇಪಿಸಿ ಕಣ್ಣೂರು ಗ್ರಾಮದ ಡಿ.ವಿ. ವೆಂಕಟೇಶಪ್ಪ, ದೊಮ್ಮಸಂದ್ರದ ಎ.ಬಾಬು ಮತ್ತು ಅದೂರು ಗ್ರಾಮದ ಅಶ್ವತ್ಥ ಲಕ್ಷ್ಮಿ ಸೇರಿದಂತೆ ಹತ್ತು ಭೂ ಮಾಲೀಕರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅರ್ಜಿದಾರರು ನೀಡಿರುವ ಜಮೀನನ್ನು ರಸ್ತೆ ವಿಸ್ತರಣೆಗೆ ಬಳಸಿಲ್ಲ. ಅವರು ನೀಡಿರುವ ಜಮೀನು ಬಿಬಿಎಂಪಿ ವ್ಯಾಪ್ತಿಯಿಂದ ಹೊರಗಿದೆ. ಆದ್ದರಿಂದ, ಟಿಡಿಆರ್ ನೀಡಲು ಸಾಧ್ಯವಿಲ್ಲ ಎಂಬ ಬಿಬಿಎಂಪಿ ಹೇಳಿಕೆ ಪ್ರಜ್ಞೆಯಿಲ್ಲದೆ ನೀಡಿರುವಂತಹುದಾಗಿದೆ' ಎಂದು ನ್ಯಾಯಪೀಠ ಕಿಡಿ ಕಾರಿದೆ.

'ಬಿಬಿಎಂಪಿಯ ಈ ವಾದವನ್ನು ಒಪ್ಪುವುದಾದರೆ ಜಮೀನು ಕಳೆದುಕೊಂಡಿರುವ ಅರ್ಜಿದಾರರು ಪರಿಹಾರ ಅಥವಾ ಟಿಡಿಆರ್ ಪಡೆಯಲು ಸಾಧ್ಯವೇ ಇಲ್ಲ. ಈ ಕ್ರಮ ಖಾಸಗಿ ವ್ಯಕ್ತಿಯ ಜಮೀನನ್ನು ಅನಧಿಕೃತವಾಗಿ ವಶಪಡಿಸಿಕೊಂಡ ರೀತಿಯಲ್ಲಿದೆ. ಇದರಿಂದ, ಅರ್ಜಿದಾರರ ಸಾಂವಿಧಾನಿಕ ಹಕ್ಕುಗಳು ಉಲ್ಲಂಘನೆಯಾಗುತ್ತವೆ. ಆದ್ದರಿಂದ, ಮೂರು ತಿಂಗಳಲ್ಲಿ ಅರ್ಜಿದಾರರಿಗೆ ಟಿಡಿಆರ್ ವಿತರಿಸಬೇಕು' ಎಂದು ನ್ಯಾಯಪೀಠ ಖಡಕ್ ಆದೇಶ ನೀಡಿದೆ.

'ಅರ್ಜಿದಾರರು ಬಯಸಿದರೆ ಬಿಬಿಎಂಪಿ ವಶಕ್ಕೆ ನೀಡಿರುವ ಜಮೀನನ್ನು ಹಿಂದಕ್ಕೆ ಪಡೆಯಬಹುದು. ಹಾಗೊಂದು ವೇಳೆ ಅರ್ಜಿದಾರರು ಈ ಸಂಬಂಧ ಮನವಿ ಸಲ್ಲಿಸಿದರೆ, ಅಂತಹ ಮನವಿ ಸಲ್ಲಿಸಿದ ದಿನದಿಂದ ಎಂಟು ವಾರದೊಳಗೆ ಜಮೀನು ಹಿಂದಿರುಗಿಸಬೇಕು. ತಪ್ಪಿದರೆ, ಒಂದು ಚದರ ಮೀಟರ್‌ಗೆ ವಾರಕ್ಕೆ ಸಾವಿರ ರೂಪಾಯಿ ಹೆಚ್ಚುವರಿಯಾಗಿ ನೀಡಬೇಕು ಮತ್ತು ನ್ಯಾಯಾಂಗ ನಿಂದನೆ ಪ್ರಕ್ರಿಯೆ ಎದುರಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಬಿಬಿಎಂಪಿಗೆ ಎಚ್ಚರಿಸಿದೆ.

ಬಿಬಿಎಂಪಿಗೆ ಶಾಲಾ ಮೈದಾನ: ಸಚಿವ ಅಶೋಕ ಪ್ರಭಾವದ ಆರೋಪ

ಪರಭಾರೆ ಪ್ರಕ್ರಿಯೆಗೆ ತಡೆ ನೀಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದ್ಮನಾಭನಗರ ಬಡಾವಣೆಯ ಮುಖ್ಯರಸ್ತೆಯಲ್ಲಿರುವ ಕಾರ್ಮೆಲ್ ಕನ್ನಡ ಶಾಲೆಗೆ ಅಂಟಿಕೊಂಡ ಅಂದಾಜು ಮೂರು ಸಾವಿರ ಚದರಡಿಯ ಆಟದ ಮೈದಾನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿಗೆ) ಹಸ್ತಾಂತರಿಸಬೇಕು' ಎಂದು ಕೋರಿ ಬಿಬಿಎಂಪಿ, ಬಿಡಿಎಗೆ (ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ) ಬರೆದಿರುವ ಪತ್ರ ಮತ್ತು ಈ ಸಂಬಂಧದ ಪರಭಾರೆ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಜಯನಗರ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್ ಕಾರ್ಯದರ್ಶಿ ಎಂ.ಶಿವಣ್ಣ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, 'ಖಾಸಗಿ ಕನ್ನಡ ಮಾಧ್ಯಮ ಶಾಲೆಯಾದ ಕಾರ್ಮೆಲ್ ವಿದ್ಯಾಸಂಸ್ಥೆಯಲ್ಲಿ ಎಲ್.ಕೆ.ಜಿ.ಯಿಂದ ಏಳನೇ ತರಗತಿಯವರಿಗೆ ಸುಮಾರು 400 ಮಕ್ಕಳು ಕಲಿಯುತ್ತಿದ್ದಾರೆ. 15 ಮಂದಿ ಬೋಧಕರಿದ್ದಾರೆ. ಈಗ ಏಕಾಏಕಿ ಈ ಪ್ರದೇಶವನ್ನು ಬಿಡಿಎ ತನಗೆ ಹಸ್ತಾಂತರಿಸಬೇಕು ಎಂದು ಬಿಬಿಎಂಪಿ ಕೋರಿದೆ. ಈ ಕೋರಿಕೆಯ ಹಿಂದೆ ಸ್ಥಳೀಯ ಶಾಸಕರೂ ಆದ ಕಂದಾಯ ಸಚಿವ ಆರ್.ಅಶೋಕ್ ಅವರ ನೇರ ಕುಮ್ಮಕ್ಕು ಇದೆ. ಆದ್ದರಿಂದ, ಈ ಜಾಗದ ಪರಭಾರೆ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು' ಎಂದು ಕೋರಿದರು.

ಈ ಮನವಿಗೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಹಾಗಾದರೆ ಸಚಿವರನ್ನೂ ಇದರಲ್ಲಿ ಪಾರ್ಟಿ ಮಾಡಬೇಕಲ್ಲವೇ' ಎಂದು ಪ್ರಶ್ನಿಸಿತು. ಇದಕ್ಕೆ ಉತ್ತರಿಸಿದ ವೆಂಕಟೇಶ್ ದಳವಾಯಿ, 'ಸ್ವಾಮಿ, ಸಚಿವರು ಸೂಚನೆ ನೀಡಿರುವುದಕ್ಕೆ ದಾಖಲೆ ಇಲ್ಲ. ಆದ್ದರಿಂದ, ಅವರ ಬದಲಿಗೆ ಈಗಿರುವ ಪ್ರತಿವಾದಿಗಳಿಗೇ ತಾವು ಆದೇಶ ಮಾಡಬಹುದು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಬಿಬಿಎಂಪಿ ದಕ್ಷಿಣ ವಲಯದ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಬಿಡಿಎ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮತ್ತು ಬಿಡಿಎ ಪ್ರದೇಶಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಪ್ರಕರಣವೇನು?: '182ನೇ ವಾರ್ಡ್‌ನಲ್ಲಿ ಕಾರ್ಮೆಲ್ ಶಾಲೆ ನಡೆಸಲು ಬಿಡಿಎ ಅನುಮತಿ ನೀಡಿದೆ. 30 ವರ್ಷಗಳ ಗುತ್ತಿಗೆ ಅವಧಿ 2022ರ ಫೆಬ್ರುವರಿಗೆ ಮುಕ್ತಾಯಗೊಂಡಿರುವುದರಿಂದ ಮುಂದಿನ ಅವಧಿಗೆ ವಿದ್ಯಾಸಂಸ್ಥೆ ಮುಂದುವರಿಸಲು ಅನುಮತಿ ನೀಡಬಾರದು ಎಂದು ಸ್ಥಳೀಯ ಶಾಸಕರೂ ಆದ ಸಚಿವರು ಸೂಚಿಸಿರುತ್ತಾರೆ' ಎಂದು ಬಿಬಿಎಂಪಿ ಅಧಿಕಾರಿಗಳು ಬಿಡಿಎಗೆ ಪತ್ರ ಬರೆದು ಮೈದಾನವನ್ನು ಹಸ್ತಾಂತರಿಸಲು ಕೋರಿ ಪತ್ರ ಬರೆದಿದ್ದಾರೆ.

'ಸಾರ್ವಜನಿಕರು ಹಾಗೂ ಪಾಲಿಕೆಯ ಆಸ್ತಿಯನ್ನು ಸಂರಕ್ಷಿಸುವ ಹಿತದೃಷ್ಟಿಯಿಂದ ಈ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದು ಅತ್ಯವಶ್ಯವಿದೆ ಎಂದು ಬಿಬಿಎಂಪಿ ದಕ್ಷಿಣ ವಲಯದ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಕಳೆದ ತಿಂಗಳ 10ರಂದು ಪತ್ರ ಬರೆದಿದ್ದಾರೆ. ಕಂದಾಯ ಸಚಿವರ ಸೂಚನೆಯಂತೆ ಈ ಪ್ರದೇಶವನ್ನು ಪಾಲಿಕೆಗೆ ಹಸ್ತಾಂತರಿಸಬೇಕು' ಎಂದೂ ಈ ಪತ್ರದಲ್ಲಿ ವಿವರಿಸಲಾಗಿದೆ.

ದಾಸರಹಳ್ಳಿ ವಲಯ ರಸ್ತೆ ಅಭಿವೃದ್ಧಿಗೆ ₹ 110 ಕೋಟಿ

ಬೆಂಗಳೂರು: 'ದಾಸರಹಳ್ಳಿ ವಲಯದಲ್ಲಿ ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅಂದಾಜು ₹ 110 ಕೋಟಿ ಮೊತ್ತದ ಸಮಗ್ರ ಕ್ರಿಯಾ ಯೋಜನೆ ರೂಪಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೈಕೋರ್ಟ್‌ಗೆ ತಿಳಿಸಿದೆ.

'ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವಾರ್ಡ್‌ನಲ್ಲಿ ರಸ್ತೆಗಳು ಹಾಳಾಗಿದ್ದರೂ ದುರಸ್ತಿ ಮಾಡುತ್ತಿಲ್ಲ' ಎಂದು ಆರೋಪಿಸಿ ವಕೀಲ ಅಶ್ವತ್ಥ ನಾರಾಯಣ ಚೌಧರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಲಯ ಆಯುಕ್ತ ಬಿ.ಶರತ್ ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿ, 'ದಾಸರಹಳ್ಳಿ ವಲಯದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ನನ್ನ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯಲ್ಲಿ ಬಿಬಿಎಂಪಿಯ 19 ಅಧಿಕಾರಿಗಳು, ಬೆಸ್ಕಾಂನ ಒಬ್ಬ ಮತ್ತು ಜಲಮಂಡಳಿಯ ಎಂಟು ಅಧಿಕಾರಿಗಳು ಸದಸ್ಯರಿದ್ದಾರೆ' ಎಂದು ವಿವರಿಸಿದರು.

'ಸಮಿತಿಯ ಎಲ್ಲ ಸದಸ್ಯರು ಮಾರ್ಚ್ 18ರಂದು ನಡೆದ ಸಭೆಯಲ್ಲಿ ಚರ್ಚಿಸಿದ್ದಾರೆ. ದಾಸರಹಳ್ಳಿ ವಲಯದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ₹ 110 ಕೋಟಿ ಮೊತ್ತದ ಸಮಗ್ರ ಕ್ರಿಯಾ ಯೋಜನೆಯನ್ನು ಸಮಿತಿ ರೂಪಿಸಿದೆ ಮತ್ತು ಇದರ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಪ್ರಮಾಣ ಪತ್ರವನ್ನು ದಾಖಲಿಸಿಕೊಂಡ ನ್ಯಾಯಪೀಠ, ಸರ್ಕಾರದ ಅನುಮೋದನೆ ದೊರೆತ ನಂತರ ಸಮಗ್ರ ಕ್ರಿಯಾ ಯೋಜನೆ ಜಾರಿಗೆ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿಗೆ ಸೂಚಿಸಿ ಅರ್ಜಿ ವಿಚಾರಣೆಯನ್ನು ರಜಾಕಾಲದ ನಂತರಕ್ಕೆ ಮುಂದೂಡಿತು.

ಕತ್ರಿಗುಪ್ಪೆಯ ಶ್ರೀಕಲ್ಯಾಣ ರಾಮಚಂದ್ರ ದೇವಸ್ಥಾನದಲ್ಲಿ ಶ್ರೀರಾಮನವಮಿ ಅಂಗವಾಗಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

'ರೋಬೋಟಿಕ್ ಶಸ್ತ್ರಚಿಕಿತ್ಸೆ: ಕಡಿಮೆ ಅವಧಿಯಲ್ಲಿ ಗುಣಮಟ್ಟದ ಚಿಕಿತ್ಸೆ'

ಬೆಂಗಳೂರು: 'ರೋಗಿಗಳಿಗೆ ಕಡಿಮೆ ಅವಧಿಯಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸುವ ಉದ್ದೇಶದಿಂದ 'ರೋಬೋಟಿಕ್ ಶಸ್ತ್ರಚಿಕಿತ್ಸೆ' ಪರಿಚಯಿಸಲಾಗುತ್ತಿದೆ' ಎಂದು ಎನ್‌ಯು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಕೆ.ಪ್ರಸನ್ನ ವೆಂಕಟೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಈ ಶಸ್ತ್ರಚಿಕಿತ್ಸೆ ಆಯ್ಕೆಮಾಡಿಕೊಳ್ಳುವ ರೋಗಿಗಳು, ಸಾಮಾನ್ಯ ರೋಗಿಗಳ ಹಾಗೆ ಆಸ್ಪತ್ರೆಗೆ ಹೆಚ್ಚು ಸಮಯ ದಾಖಲಾಗಬೇಕಾಗಿಲ್ಲ. ಈ ಶಸ್ತ್ರಚಿಕಿತ್ಸೆ ನೋವು ರಹಿತವಾಗಿರುತ್ತದೆ. ರೋಗಿಗಳು ವೇಗವಾಗಿ ಗುಣಮುಖರಾಗಿ ಎಂದಿನಂತೆ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಸಹಕಾರಿಯಾಗಿದೆ' ಎಂದು ತಿಳಿಸಿದರು.

'ಈ ಶಸ್ತ್ರಚಿಕಿತ್ಸೆಯಿಂದ ಸೋಂಕಿನ ಅಪಾಯ ಕಡಿಮೆ ಇರುತ್ತದೆ. ರಕ್ತವೂ ಹೆಚ್ಚಿನ ಪ್ರಮಾಣದಲ್ಲಿ ನಷ್ಟವಾಗುವುದಿಲ್ಲ. ದೇಹದಲ್ಲಿ ಗುರುತುಗಳೂ ಆಗುವುದಿಲ್ಲ' ಎಂದು ಹೇಳಿದರು.

ಆಸ್ಪತ್ರೆಯ ನಿರ್ದೇಶಕ ಎಂ.ರಾಮಚಂದ್ರ, 'ಇದೇ 23ರಂದು ರೋಬೋಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆಗೆ ಚಾಲನೆ ನೀಡಲಾಗುತ್ತದೆ. ಅತ್ಯಂತ ಕ್ಲಿಷ್ಟಕರವಾದ ಶಸ್ತ್ರಚಿಕಿತ್ಸೆಗಳನ್ನು ಸುಲಭವಾಗಿ ಮಾಡಲು ಇದು ನೆರವಾಗಲಿದೆ. ಬೆಂಗಳೂರಿನ ಎರಡು ಹಾಗೂ ಶಿವಮೊಗ್ಗದ ಒಂದು ಆಸ್ಪತ್ರೆಯಲ್ಲಿ ಸೇವೆ ಲಭ್ಯವಿರಲಿದೆ' ಎಂದು ತಿಳಿಸಿದರು.

Saba Fathima Age: 40
Missing from: 8/4/2022 evening from Richmond Town, Bengaluru
Please contact:
Syed: 9980911121,
Sadia: 9916807763

ಚಿತ್ರಾವಳಿ

ಸ್ವಾಭಿಮಾನಿ ಕರ್ನಾಟಕ ವೇದಿಕೆ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕರಾದ (ಕುಳಿತವರು ಎಡದಿಂದ) ಪೂರ್ಣಿಮಾ ಮಾಳಿಗೆಮನಿ, ಡಿ.ನಳಿನ, ಸತೀಶ್ ಕುಮಾರ್ ಎಸ್‌.ಹೊಸಮನಿ, ಎಚ್‌.ಎಸ್‌. ಅನುಪಮಾ, ಮುಮ್ತಾಜ್ ಬೇಗಂ, ದೇವು ಮಾಕೊಂಡ, ಆಕರ್ಷ ರಮೇಶ್ ಕಮಲ ಅವರಿಗೆ 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ, ವಿಮರ್ಶಕ ಎಚ್‌.ದಂಡಪ್ಪ ಹಾಗೂ ಇತರರು ಇದ್ದಾರೆ.

ಶ್ರೀರಾಮನವಮಿ ಅಂಗವಾಗಿ ಉತ್ತರಹಳ್ಳಿಯ ಪ್ರೆಸ್ಟೀಜ್ ಲೇಕ್ ರಿಡ್ಜ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಹಮ್ಮಿಕೊಂಡಿದ್ದ ಶ್ರೀರಾಮೋತ್ಸವ ಕಾರ್ಯಕ್ರಮದಲ್ಲಿ ಮಕ್ಕಳು 'ಸಂಪೂರ್ಣ ರಾಮಾಯಣ' ನಾಟಕ ಪ್ರದರ್ಶಿಸಿದರು

ಗಿರಿನಗರದಲ್ಲಿ ಮಂಗಳವಾರ ನಡೆದ ಸುಧಾಮಂಗಳ ಮಹೋತ್ಸವ ಸಮಾರೋಪದಲ್ಲಿ ಭಂಡಾರಕೇರಿ ಮಠದ ವಿದ್ಯೇಶತೀರ್ಥ ಸ್ವಾಮೀಜಿ ಅವರಿಗೆ ನಾಣ್ಯಗಳ ತುಲಾಭಾರ ಮಾಡಲಾಯಿತು. ಶಾಸಕ ಎಲ್‌.ಎ.ರವಿ ಸುಬ್ರಹ್ಮಣ್ಯ, ಮಠದ ಶ್ರೀರಾಮ ಸೇವಕ ಸಂಘದ ಪ್ರಮುಖರಾದ ಗೋಪಾಲಕೃಷ್ಣ, ಜಯರಾಂ, ಸುಭದ್ರಾ ವೆಂಕಟೇಶ, ಇಂದುಮತಿ ಗುರುಪ್ರಸಾದ್, ವಿದುಷಿ ಶುಭಾ ಸಂತೋಷ್ ಹಾಗೂ ಇತರರು ಇದ್ದಾರೆ.

'ನಾಲ್ಕನೇ ಅಲೆಗೂ ಲಸಿಕೆಯೇ ಮದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಾಲ್ಕನೇ ಅಲೆಯಿಂದ ಹಾನಿ ತಡೆಯುವುದಕ್ಕೂ ಲಸಿಕೆಯೇ ಮದ್ದು, ಬೇರೆ ಮಾರ್ಗಗಳಿಲ್ಲ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ಇನ್ನೂ ಸಂಪೂರ್ಣವಾಗಿ ಅಂತ್ಯವಾಗಿಲ್ಲ. ಹೊಸ ತಳಿಯ ರೂಪಾಂತರಿ ವೈರಾಣುಗಳು ಬರುತ್ತಲೇ ಇವೆ. ಸರ್ಕಾರವೇ ಉಚಿತವಾಗಿ ಲಸಿಕೆ ನೀಡುತ್ತಿದೆ. ಎಲ್ಲರೂ ಸಕಾಲಕ್ಕೆ ಲಸಿಕೆ ಪಡೆಯುವ ಮೂಲಕ ಕೋವಿಡ್ ವಿರುದ್ಧದ ಹೋರಾಟಕ್ಕೆ ಬಲ ತುಂಬಬೇಕು' ಎಂದರು.

ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ಫಲವಾಗಿ ಈವರೆಗೆ ದೇಶದ ಜನರಿಗೆ 185.90 ಕೋಟಿ ಡೋಸ್ ಲಸಿಕೆ ನೀಡಲು ಸಾಧ್ಯವಾಗಿದೆ. ರಾಜ್ಯದಲ್ಲಿ ಈವರೆಗೆ 10.54 ಕೋಟಿ ಡೋಸ್ ಕೋವಿಡ್ ಲಸಿಕೆಗಳನ್ನು ನೀಡಲಾಗಿದೆ. ಮುನ್ನೆಚ್ಚರಿಕೆ ಡೋಸ್ ಪಡೆಯುವುದಕ್ಕೆ ಹೆಚ್ಚಿನ ಜನರು ಮುಂದಾಗಬೇಕು ಎಂದು ಹೇಳಿದರು.

ಸಾಂಕ್ರಾಮಿಕ ರೋಗಗಳು ಬಂದಾಗ ಆಡಳಿತ ಮತ್ತು ವಿರೋಧ ಪಕ್ಷಗಳು ಒಗ್ಗೂಡಿ ಕೆಲಸ ಮಾಡಬೇಕು. ಆದರೆ, ಕೋವಿಡ್ ಎದುರಿಸುವ ವಿಚಾರದಲ್ಲಿ ವಿರೋಧ ಪಕ್ಷಗಳಿಂದ ಸರಿಯಾದ ಸಹಕಾರ ದೊರಕಲಿಲ್ಲ. ಲಸಿಕೆ ವಿಚಾರದಲ್ಲೇ ರಾಜಕಾರಣ ಮಾಡಿದರು. ವಿರೋಧ ಪಕ್ಷಗಳ ಅಸಹಕಾರ ಮತ್ತು ಅವಿಶ್ವಾಸದ ನಡೆಯನ್ನು ಸಾರ್ವಜನಿಕರು ಗಮನಿಸಿದ್ದಾರೆ ಎಂದರು.

ಕೋವಿಡ್: ನಿಯಮಿತ ಪರೀಕ್ಷೆಗೆ ಸೂಚನೆ

ಬೆಂಗಳೂರು: ಕೋವಿಡ್ ಸಕ್ರಿಯ ಪ್ರಕರಣಗಳ ಮೇಲೆ ನಿಗಾ ಇರಿಸಿ, ನಿಯಮಿತವಾಗಿ ಪರೀಕ್ಷೆಗಳನ್ನು ನಡೆಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ಬಿಬಿಎಂಪಿ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದ್ದಾರೆ.

ರಾಜ್ಯದಲ್ಲಿ ಸದ್ಯ ದೈನಂದಿನ ಕೋವಿಡ್ ಪ್ರಕರಣಗಳ ಸರಾಸರಿ ಸಂಖ್ಯೆ 200ರ ಆಸುಪಾಸಿನಲ್ಲಿದೆ. ಸೋಂಕು ದೃಢ ಪ್ರಮಾಣ ಶೇ 1ರ ಗಡಿಯೊಳಗಡೆ ಇದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಆದರೂ ಸಕ್ರಿಯ ಪ್ರಕರಣಗಳ ಮೇಲೆ ನಿಯಮಿತವಾಗಿ ನಿಗಾ ಇಡಬೇಕು ಎಂದು ಸೂಚಿಸಿದ್ದಾರೆ.

ಜಿಲ್ಲಾ ಆಸ್ಪತ್ರೆಗಳು ಮತ್ತು ತಾಲ್ಲೂಕು ಆಸ್ಪತ್ರೆಗಳು ಕೋವಿಡ್ ಪರೀಕ್ಷೆಗೆ ಮಾದರಿಗಳನ್ನು ಸಂಗ್ರಹಿಸಲು ಆದ್ಯತೆ ನೀಡಬೇಕು. ಪ್ರತಿನಿತ್ಯ 50 ಮತ್ತು 25 ಮಾದರಿಗಳನ್ನು ಆರ್‌ಟಿ–ಪಿಸಿಆರ್ ವಿಧಾನದ ಮೂಲಕ ಪರೀಕ್ಷಿಸಬೇಕು. ಹೊಸ ರೂಪಾಂತರಿ ಪತ್ತೆ ಹಚ್ಚಲು ವೈರಾಣು ಅನುಕ್ರಮಣಿಕೆ ಪರೀಕ್ಷೆಗೆ (ಜೀನೋಮ್ ಸೀಕ್ವೆನ್ಸಿಂಗ್) ಮಾದರಿಗಳನ್ನು ಕಳುಹಿಸಬೇಕು ಎಂದು ಹೇಳಲಾಗಿದೆ.

ಬಿಬಿಎಂಪಿ ಹಾಗೂ ಜಿಲ್ಲಾಡಳಿತ ನಿಗದಿಪಡಿಸಿದ ಕೋವಿಡ್ ಪರೀಕ್ಷೆಯ ದೈನಂದಿನ ಗುರಿ ತಲುಪಬೇಕು. ಕೋವಿಡ್‌ಗೆ ಸಂಬಂಧಿಸಿದ ದೈನಂದಿನ ಕ್ರೋಡೀಕೃತ ಮಾಹಿತಿಯನ್ನು ರಾಜ್ಯ ಕಣ್ಗಾವಲು ಘಟಕಕ್ಕೆ ಸಲ್ಲಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನಗರದಲ್ಲಿ ಇಂದು

'ನಿಮಾ' ಸಂಸ್ಥಾಪಕ ದಿನದ ಅಂಗವಾಗಿ ಆಯುಷ್ ಆಯುಕ್ತರ ಕಚೇರಿಯಿಂದ ಸ್ವಾತಂತ್ರ್ಯ ಉದ್ಯಾನದವರೆಗೂ 'ವಾಕಥಾನ್': ಸಾನ್ನಿಧ್ಯ–ಸಂತೋಷ ಸ್ವಾಮೀಜಿ, ಉದ್ಘಾಟನೆ–ರಾಮಚಂದ್ರ, ಮುಖ್ಯ ಅತಿಥಿಗಳು–ಬಿ.ಎಸ್.ಶ್ರೀಧರ್, ಮೊಹಮ್ಮದ್ ರಫಿ ಹಕೀಂ, ಅಹಲ್ಯ ಶರ್ಮಾ, ಆಯೋಜನೆ–ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ (ನಿಮಾ), ಸ್ಥಳ–ಆಯುಷ್ ಆಯುಕ್ತರ ಕಚೇರಿ ಆವರಣ, ಆನಂದರಾವ್ ವೃತ್ತದ ಹತ್ತಿರ, ಮೆಜೆಸ್ಟಿಕ್–ಬೆಳಿಗ್ಗೆ 7ರಿಂದ.

ವೈವಿಧ್ಯಮಯ ಹಾಗೂ ಆಕರ್ಷಕ ಆಭರಣ ಮತ್ತು ಸೀರೆಗಳ ಪ್ರದರ್ಶನ: ಆಯೋಜನೆ–ಕೊರ್ವಾಯ್, ಸ್ಥಳ–ಸ್ಯಾಂಕಿ ರಸ್ತೆಯಲ್ಲಿರುವ 'ರೇನ್ ಟ್ರೀ' –ಬೆಳಿಗ್ಗೆ 10ರಿಂದ.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ 6ನೇ ರಾಷ್ಟ್ರೀಯ ಟೆಕ್ನೋ ಪ್ರದರ್ಶನ: ಮುಖ್ಯ ಅತಿಥಿ–ಜೇಕಬ್ ಪೀಟರ್ ಕಿಡಾಂಗತ್, ಅಧ್ಯಕ್ಷತೆ–ಎಸ್.ಮರಿಸ್ವಾಮಿ, ಅತಿಥಿಗಳು–ಎ.ಆರ್.ಕೃಷ್ಣಮೂರ್ತಿ, ಬಿ.ಎನ್.ಉಮೇಶ್, ಆಯೋಜನೆ–ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ಸ್ಥಳ–ಏಐಟಿ ಆವರಣ–ಬೆಳಿಗ್ಗೆ 10.

ವಿಶ್ವ ಜಲ ದಿನದ ಪ್ರಯುಕ್ತ 'ಜಲಮೂಲಗಳ ಕಲುಷಿತತೆ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ: ಉದ್ಘಾಟನೆ–ಎಲ್.ಕೆ.ಅತೀಕ್, ಮಾತನಾಡುವವರು–ಎನ್.ರಂಗನಾಥ್, ಆಯೋಜನೆ–ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗ, ಸ್ಥಳ–ಪ್ರೇಮಚಂದ್ರ ಸಾಗರ್ ಸಭಾಂಗಣ, ಕುಮಾರಸ್ವಾಮಿ ಬಡಾವಣೆ–ಬೆಳಿಗ್ಗೆ 10.

ಎಂ.ವಿ.ರಾಜಶೇಖರನ್ ಅವರ 'ಮ್ಯಾನ್ ವಿಥ್ ಜೀಲ್' ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು–ಜಿ.ಪರಮೇಶ್ವರ್, ಈಶ್ವರ ಖಂಡ್ರೆ, ವಿ.ಸೋಮಣ್ಣ, ಅಧ್ಯಕ್ಷತೆ–ಪಿ.ಜಿ.ಆರ್.ಸಿಂಧ್ಯ, ಆಯೋಜನೆ–ಎಂವಿಆರ್ ಫೌಂಡೇಷನ್ ಮತ್ತು ಏಷ್ಯನ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್, ಸ್ಥಳ–ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರ ಪಾರ್ಕ್–ಬೆಳಿಗ್ಗೆ 11.30.

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಪ್ರತಿಭಾಕಾಂಕ್ಷಿ ಹಾಗೂ ಗಾಯತ್ರಿ ವೆಂಕಟರಾಘವನ್, ಎಚ್.ಎಂ.ಸ್ಮಿತಾ, ಅರ್ಜುನ್ ಕುಮಾರ್ ಮತ್ತು ಭಾರದ್ವಾಜ್ ಶಥವಲ್ಲಿ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ–ಸಂಜೆ 5.15ರಿಂದ.

29ನೇ ಶ್ರೀ ರಾಮನವಮಿ ಸಂಗೀತೋತ್ಸವ: ವಿ.ಪೂಜಾ ಹಾಗೂ ಬೆಂಗಳೂರು ಬ್ರದರ್ಸ್ ತಂಡದಿಂದ ಸಂಗೀತ ಕಾರ್ಯಕ್ರಮ, ಆಯೋಜನೆ–ಶ್ರೀವಾಣಿ ಕಲಾ ಕೇಂದ್ರ, ಸ್ಥಳ–ಶ್ರೀವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ–ಸಂಜೆ 5.30ರಿಂದ.

ಶ್ರೀ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಹಾಗೂ ಶ್ರೀ ಧರ್ಮರಾಯಸ್ವಾಮಿ ಮಹಾ ರಥೋತ್ಸವ ಅಂಗವಾಗಿ 'ಆರತಿ ದೀಪಗಳು': ಆಯೋಜನೆ–ಕರಗ ವ್ಯವಸ್ಥಾಪನ ಸಮಿತಿ, ಸ್ಥಳ–ಧರ್ಮರಾಯಸ್ವಾಮಿ ದೇವಾಲಯ–ರಾತ್ರಿ 3.

ಸಂಕ್ಷಿಪ್ತ ಸುದ್ದಿ

'ಇತಿಹಾಸ ಬದಲಿಸಲ್ಲ: ಸತ್ಯ ಹೊರ ತರುತ್ತೇವೆ'

ನವದೆಹಲಿ: 'ಸರ್ಕಾರವು ಇತಿಹಾಸವನ್ನು ಬದಲಾಯಿಸುವುದಿಲ್ಲ ಅಥವಾ ಪುನರ್‌ರಚಿಸುವುದಿಲ್ಲ. ಆದರೆ ಎಲ್ಲಾ ಐತಿಹಾಸಿಕ ಸತ್ಯಗಳನ್ನು ಹೊರತರಲು ತೆರೆಮರೆಗೆ ಸರಿದ ನಾಯಕರನ್ನೂ ಸೇರಿಸುತ್ತೇವೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಂಗಳವಾರ ತಿಳಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಶತಮಾನಗಳಿಂದಲೂ ಲಕ್ಷಾಂತರ ಮಂದಿ ದೇಶದ ನಾಗರಿಕತೆಯನ್ನು ರಕ್ಷಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಆದರೆ, ಅದು ನಮ್ಮ ಇತಿಹಾಸದ ಭಾಗವಾಗಲಿಲ್ಲ ಎಂದಿದ್ದಾರೆ.

ದಕ್ಷಿಣ ಆಫ್ರಿಕಾ: ಪ್ರವಾಹದಲ್ಲಿ 45 ಸಾವು

ಡರ್ಬನ್: ದಕ್ಷಿಣ ಆಫ್ರಿಕಾದ ಕ್ವಾಝುಲು ನಟಾಲ್ ಪ್ರಾಂತ್ಯದಲ್ಲಿ ಭಾರಿ ಮಳೆ ಸುರಿದಿದ್ದು, ನೆರೆ ಹಾಗೂ ಭೂಕುಸಿತದಿಂದಾಗಿ ಕನಿಷ್ಠ 45 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಭಾರಿ ಮಳೆಯ ಪರಿಣಾಮ ಹಲವು ಪ್ರದೇಶಗಳಲ್ಲಿ ಮನೆಗಳಿಗೆ ಹಾನಿಯಾಗಿವೆ. ಭೂಕುಸಿತದಿಂದಾಗಿ ಕ್ವಾಝುಲು ನಟಾಲ್‌ನಲ್ಲಿ ರೈಲು ಸಂಚಾರ ಸ್ಥಗಿತಗೊಂಡಿದೆ ಎಂದಿದ್ದಾರೆ.

ಮೇ 8ರಂದು ರಾಜ್ಯಮಟ್ಟದ ಕವಿಗೋಷ್ಠಿ

ಹರಿಹರ: ಇಲ್ಲಿನ ಚಿಂತನ ಪ್ರತಿಷ್ಠಾನ ಮತ್ತು ಪಂಡಿತ್ ಪುಟ್ಟರಾಜ ಸೇವಾ ಸಮಿತಿಯಿಂದ ನಗರದ ಮರಿಯ ಸದನದಲ್ಲಿ ಮೇ 8ರಂದು ರಾಜ್ಯಮಟ್ಟದ ಕವಿ, ಕಾವ್ಯ ಸಮ್ಮೇಳನದ ಅಂಗವಾಗಿ ಯುಗಾದಿ ಸಂಭ್ರಮ ರಾಜ್ಯಮಟ್ಟದ ಕವಿಗೋಷ್ಠಿ ಆಯೋಜಿಸಲಾಗಿದೆ.

ಕವಿಗೋಷ್ಠಿಯಲ್ಲಿ ಕವನ ವಾಚಿಸಲು ಆಸಕ್ತಿ ಇರುವ ಕವಿಗಳು ಸ್ವರಚಿತ ಕವನಗಳನ್ನು ಏ.25ರ ಒಳಗೆ ಸುಬ್ರಹ್ಮಣ್ಯ ನಾಡಿಗೇರ, ಅಧ್ಯಕ್ಷರು, ಚಿಂತನ ಪ್ರತಿಷ್ಠಾನ, ನಂ.194, ನಾಡಿಗೇರ ನಿಲಯ, ಕೋಟೆ, ಹರಿಹರ-577601, ಮೊ.ನಂ. 9242046726 ಈ ವಿಳಾಸಕ್ಕೆ ಅಂಚೆ ಅಥವಾ ಕೊರಿಯರ್ ಮೂಲಕ ಕಳುಹಿಸಬೇಕು. ಕವನಗಳು 20ರಿಂದ 25 ಸಾಲು ಮೀರಿರಬಾರದು. ಒಂದು ಕವನ ಆಯ್ಕೆ ಮಾಡಿ ಗೋಷ್ಠಿಯಲ್ಲಿ ವಾಚನ ಮಾಡಲು ಅವಕಾಶ ನೀಡಲಾಗುವುದು.

PUBLIC NOTICE

It is represented to the undersigned by **M/s. Sterling Urban Condominiums Private Limited** having its registered office at Unit No. 501, Prestige Nebula, No. 8, Cubbon Road, Bengaluru-560001 ('**Owner**') that the below mentioned original documents pertaining to the below mentioned survey numbers all situated at Chikkabanahalli Village, Bidarhalli Hobli, Bengaluru East Taluk have been lost/misplaced:

1. Sale Deed dated 03-01-1966, executed by Sri. Yallappa, son of Sri. Kurigala Munishamappa in favour of Smt. Munibalamma, daughter of Sri. Munishamappa, registered vide Document No. 3458/1966-67 of Book I, in the office of the Sub-Registrar, Hosakote with respect to Survey No. 49, measuring 08 guntas.
2. Sale Deed dated 12-06-1973 executed by Smt. Munibalamma, daughter of Sri. Munishamappa in favour of Sri. Yellappa, son of Sri. Kurigala Munishamappa, registered vide Document No.1146/1973-74 of Book I, in the office of the Sub-Registrar, Hosakote with respect to Survey No. 49 measuring 08 guntas.
3. Sale Deed dated 07-04-1975 executed by Sri. Yellappa, son of Sri. Munishamappa in favour of Sri. Chikka Abbaiah, son of Sri. Kurigala Munishamappa, registered vide Document No. 79/1975-76 of Book I, Volume 1445 at Pages 32 to 35, in the office of the Sub-Registrar, Hosakote with respect to Survey No. 49, measuring 14 guntas and Survey No 51, measuring 07 guntas.
4. Rectification Deed dated 13-02-1987 executed by Sri. Muniyappa, son of Sri. Jangamaiah alias Sri. Jangamappa in favour of Sri. Keshavalu Naidu, son of Krishnappa Naidu, registered vide Document No. 7440/1986-87 of Book I, Volume 2537, at Pages 244 to 246, in the office of the Sub-Registrar, Bengaluru East Taluk, Bengaluru with respect to Survey No. 44/1, measuring 2 acres.
5. Gift Deed dated 18-09-1975 executed by Sri. C. Venkatappa, son of Sri. Mylappa, in favour of Sri. A. Nanjunda Reddy, registered vide Document No. 2144/1975-76 of Book I, Volume 1460, at Pages 143 to 145 in the office of the Sub-Registrar, Hosakote, with respect to Survey No. 45/2, measuring 01 acre.
6. Sale Deed dated 15-09-1974 executed by Sri. Nanjappa, son of Sri. Vajjappa in favour of Sri. B. Anjanappa, son of Sri. Bandeppa, registered vide Document No. 4140/1974-75 of Book I, Volume 1420, at Pages 90 to 91, in the office of the Sub-Registrar, Hosakote with respect to Survey No. 59/1, measuring 17 guntas.
7. Sale Deed dated 11-08-1994 executed by Sri. Nanjappa, son of Sri. Vajjappa in favour of Sri. Nagaraju, son of Sri. Chikkathayappa, registered vide Document No. 4022/1994-95 of Book I, Volume 848, at Pages 73 to 79, in the office of the Sub-Registrar, Krishnarajapura, Bengaluru with respect to Survey No. 59/1 measuring 30 guntas.
8. Sale Deed dated 12-02-1970 executed by Sri. Muniyappa alias Thoti Muniyappa, son of Sri. Thoti Thimmaiah alias Thimmaiah in favour of Sri. Muniyappa, son of Sri. Munivenkatappa, registered vide Document No. 3681/1969-70 of Book I, Volume 1265, Pages 169 to 170, in the office of the Sub-Registrar, Hosakote with respect to portion of Survey No. 70, measuring 3 guntas.
9. Agreement of Sale dated 24-01-1974 entered between Sri. K. Mariyappa, son of Sri. Krishnappa and Sri. Muniyappa, son of Sri. Bandeppa with respect to Survey No. 13 (Block-F), measuring 24 guntas.
10. Sale Deed dated 24-12-1974 executed by Sri. Dasappa, son of Sri. Munishamappa in favour of Sri. Munivenkatappa, son of Sri. Dasappa registered vide Document No. 4714/1974-75 of Book I, Volume 1422, Pages 65 to 67 in the office of the Sub-Registrar, Hosakote, with respect to Survey No. 13 (Block-C), measuring 33 guntas.
11. Agreement of Sale dated 24-01-1974 entered between Sri. Abdul Rasheed alias Abdul Rasheed Sab, son of Sri. Abdul Raheem Sab and Sri. B. Muniyappa, son of Sri. Bandeppa, with respect to Survey No. 13 (Block-E), measuring 1 acre.
12. Sale Deed dated 24-12-1974 executed by Sri. Muniyappa, son of Sri. Jangamappa in favour of Sri. Munivenkatappa, son of Sri. Dasappa registered vide Document No. 4715/1974-75 of Book I, Volume 1425, Pages 1 to 2 in the office of the Sub-Registrar, Hosakote, with respect to Survey No. 13 (Block -D), measuring 33 guntas.
13. Sale Deed dated 26-05-1973 executed by Sri. Subbaiah, son of Sri. Muniyappa in favour of Sri. Bandeppa, son of Sri. Dasappa, registered vide Document No. 897/1973-74 of Book I, Volume 1363, Pages 228 to 230 in the office of the Sub-Registrar, Hosakote, with respect to Survey No. 13 (Block-B), measuring 3 acres.

It is further represented that the Owner has not mortgaged and have not created any lien or encumbered the Schedule Property in any manner. Any person/s in possession of the aforesaid original documents shall return the same to the undersigned or lodge their claims with documentary evidence **within seven (07) days** from the date of this notice.

Jayanth M Pattanshetti, Advocate,
Jayanth Pattanshetti Associates LLP
102, Ground Floor "Rams Infantry Manor", No.70, Infantry Road, Bengaluru-560001. Ph: 080 41238516 / 41238367

Place : Bengaluru
Date : 12-04-2022

ಹೆಬ್ಬಾಳ ಮೇಲ್ಸೇತುವೆ ಕೆಳಗಿನ ರೈಲ್ವೆ ಹಳಿ ದಾಟಲು ಪಾದಚಾರಿಗಳ ಪರದಾಟ

ಗುದ್ದಲಿ ಪೂಜೆಯಷ್ಟೇ: ಆರಂಭವಾಗದ ಕಾಮಗಾರಿ

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಜೀವ ಬಿಗಿ ಹಿಡಿದು ಹಳಿ ದಾಟುವ ಪಾದಚಾರಿಗಳು, ರಸ್ತೆ ದಾಟುವ ಬರದಲ್ಲಿ ರೈಲಿಗೆ ಸಿಕ್ಕಿ ಆಗಾಗ ಸಂಭವಿಸುವ ಸಾವು–ನೋವು, ಮೂರು ಬಾರಿ ಗುದ್ದಲಿ ಪೂಜೆ ನೆರವೇರಿದರೂ ಆರಂಭವೇ ಆಗದ ಕಾಮಗಾರಿ...

ಇದು ಹೆಬ್ಬಾಳ ಮೇಲ್ಸೇತುವೆ ಕೆಳಗಿನ ರೈಲು ಹಳಿ ಬಳಿಯ ದೃಶ್ಯ. ಹೆಬ್ಬಾಳ ಮೇಲ್ಸೇತುವೆಯ ಕೆಳಗೆ ರೈಲ್ವೆ ಹಳಿ ಹಾದು ಹೋಗಿದೆ. ಮೇಲ್ಸೇತುವೆ ಬಳಸದೆ ದಾರಿ ತಪ್ಪಿ ಕೆಳಗಿನ ಸರ್ವೀಸ್ ರಸ್ತೆಯಲ್ಲಿ ಸಾಗಿದರೆ ಮುಂದೆ ಸಾಗಲು ವಾಹನ ಸವಾರರಿಗೆ ಅವಕಾಶವಿಲ್ಲ. ಮತ್ತೆ ವಾಪಸ್ ಹೋಗಿ ಮೇಲ್ಸೇತುವೆ ಹತ್ತಿಯೇ ಮುಂದಕ್ಕೆ ತೆರಳಬೇಕು. ಪಾದಚಾರಿಗಳು ಹಳಿ ದಾಟಿಕೊಂಡೇ ಓಡಾಡಬೇಕಾದ ಅನಿವಾರ್ಯತೆ ಇದೆ.

‘ಸೇಲಂ, ಹೊಸೂರು, ಕೋಲ್ಕತ್ತ ಮತ್ತಿತರ ನಗರಗಳಿಗೆ ದಿನಕ್ಕೆ 30ಕ್ಕೂ ಹೆಚ್ಚು ರೈಲುಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ವೇಗವಾಗಿ ರೈಲು ಬರುವುದನ್ನು ಗಮನಿಸದೆ ಹಳಿ ದಾಟುವಾಗ ರೈಲಿಗೆ ಸಿಲುಕಿ ಈವರೆಗೆ 20ಕ್ಕೂ ಹೆಚ್ಚು ಜನ ಸತ್ತಿದ್ದಾರೆ’ ಎಂದು ಸ್ಥಳೀಯರು ಹೇಳುತ್ತಾರೆ.

‘ಕೆ.ಎಚ್.ಮುನಿಯಪ್ಪ ಅವರು ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಕಾಲದಿಂದಲೂ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಭರವಸೆಗಳನ್ನು ಕೇಳುತ್ತಲೇ ಇದ್ದೇವೆ. ಅವರು ಒಮ್ಮೆ ಸ್ಥಳಕ್ಕೆ ಭೇಟಿ ನೀಡಿ ಪಾದಚಾರಿಗಳ ಸಂಚಾರಕ್ಕೆ ಸುರಂಗ ಮಾರ್ಗ ನಿರ್ಮಿಸುವ ಭರವಸೆ ನೀಡಿದ್ದರು. ಅದಾದ ಬಳಿಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಶಾಸಕರಾಗಿದ್ದಾಗ ಒಮ್ಮೆ, ಜಗದೀಶ್‌ಕುಮಾರ್ ಶಾಸಕರಾಗಿದ್ದಾಗ ಮತ್ತೊಮ್ಮೆ, ವೈ.ಎ.ನಾರಾಯಣಸ್ವಾಮಿ ಶಾಸಕರಾಗಿದ್ದಾಗ ಮೂರನೇ ಬಾರಿಗೆ ಗುದ್ದಲಿ ಪೂಜೆ ನಡೆಸಲಾಗಿದೆ. ಆದರೆ, ಕಾಮಗಾರಿ ಮಾತ್ರ ಆರಂಭವೇ ಆಗಿಲ್ಲ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ.

‘ಹೆಬ್ಬಾಳದಿಂದ ಹೊರವರ್ತುಲ ರಸ್ತೆ ಕಡೆಗೆ ಹೋಗಲು ಬೇರೆ ದಾರಿ ಇಲ್ಲ. ಮೇಲ್ಸೇತುವೆಯ ಮೇಲೆ ಸಾಗಿದರೆ ಎರಡು ಕಿಲೋ ಮೀಟರ್ ಸುತ್ತಾಡಿಕೊಂಡು ಬರಬೇಕಾಗುತ್ತದೆ. ಮೇಲ್ಸೇತುವೆ ನಿರ್ಮಾಣದ ಸಂದರ್ಭದಲ್ಲೇ ಪಾದಚಾರಿ ಸುರಂಗಮಾರ್ಗ ಅಥವಾ ಪಾದಚಾರಿ ಮೇಲ್ಸೇತುವೆ ನಿರ್ಮಿಸಿದ್ದರೆ 20 ಜನರ ಪ್ರಾಣ ಉಳಿಯುತ್ತಿತ್ತು. ಈಗಲೂ ಸುರಂಗ ಮಾರ್ಗ ನಿರ್ಮಿಸದಿದ್ದರೆ ಹಲವರ ಜೀವ ಬಲಿಯಾಗಲಿದೆ’ ಎಂದು ಪಾದಚಾರಿ ಮಹೇಶ್ ಹೇಳಿದರು.

‘ಕೈಯಲ್ಲಿ ಮೊಬೈಲ್ ಫೋನ್ ಹಿಡಿದು ಕಿವಿಗೆ ಹೆಡ್‌ಸೆಟ್ ಹಾಕಿಕೊಂಡು ಯುವಕ–ಯುವತಿಯರು ಹಳಿ ದಾಟುತ್ತಾರೆ. ಆಗ ರೈಲು ಬರುವ ಶಬ್ದ ಕೇಳಿಸುವುದೇ ಇಲ್ಲ. ಆದ್ದರಿಂದಲೇ ಅಪಘಾತಗಳು ಸಂಭವಿಸುತ್ತಿವೆ. ಅಪಘಾತ ತಡೆಯಲು ಪಾದಚಾರಿ ಸುರಂಗಮಾರ್ಗ ಅಥವಾ ಪಾದಚಾರಿ ಮೇಲ್ಸೇತುವೆ ಅಗತ್ಯ’ ಎಂದರು.

ಹೆಬ್ಬಾಳ ಮೇಲ್ಸೇತುವೆ ಕೆಳಗಿನ ರೈಲು ಹಳಿ ದಾಟುತ್ತಿರುವ ಪಾದಚಾರಿಗಳು –ಪ್ರಜಾವಾಣಿ ಚಿತ್ರಗಳು/ರಂಜು ಪಿ.

ಗೇಟ್ ಹಾಕಿದರೆ ಸಂಚಾರ ದಟ್ಟಣೆ

ಹೆಬ್ಬಾಳ– ಬಾಣಸವಾಡಿ ನಡುವಿನ ರೈಲು ಮಾರ್ಗಕ್ಕೆ ಅಡ್ಡಲಾಗಿ ಕನಕನಗರ ಮತ್ತು ವೀರಣ್ಣಪಾಳ್ಯ ರಸ್ತೆ ಹಾದು ಹೋಗುತ್ತದೆ. ಈ ರಸ್ತೆಯಲ್ಲಿ ಸಾವಿರಾರು ವಾಹನಗಳು ನಿತ್ಯ ಸಂಚರಿಸುತ್ತವೆ. ರೈಲು ಬರುವ ಸಂದರ್ಭದಲ್ಲಿ ಗೇಟ್ ಹಾಕುವುದರಿಂದ ಸಂಚಾರ ದಟ್ಟಣೆ ನಿತ್ಯದ ಗೋಳಾಗಿದೆ.

ನಾಗವಾರ ರಿಂಗ್ ರಸ್ತೆಯಿಂದ ಕಾವಲು ಬೈರಸಂದ್ರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದೆ. ರೈಲು ಹಳಿಗೆ ಕೆಳ ಸೇತುವೆ ಅಥವಾ ಮೇಲ್ಸೇತುವೆ ನಿರ್ಮಿಸಬೇಕು ಎಂಬ ಒತ್ತಾಯವನ್ನು ಸ್ಥಳೀಯರು ಹಲವು ವರ್ಷಗಳಿಂದ ಮಾಡುತ್ತಿದ್ದಾರೆ.

‘ರೈಲು ಗೇಟ್ ಹಾಕಿದರೆ ಕನಿಷ್ಠ 15 ನಿಮಿಷ ಕಾಯಬೇಕು. ಅಷ್ಟರಲ್ಲಿ ನೂರಾರು ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಗೇಟ್ ತೆಗೆದ ಕೂಡಲೇ ನೂಕುನುಗ್ಗಲಿನಲ್ಲಿ ವಾಹನಗಳು ರೈಲ್ವೆ ಹಳಿ ದಾಟುತ್ತವೆ. ಮೇಲ್ಸೇತುವೆ ನಿರ್ಮಿಸಿ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲ ತಪ್ಪಿಸಬೇಕು’ ಎಂದು ಕನಕನಗರದ ವೆಂಕಟೇಶ್ ಒತ್ತಾಯಿಸಿದರು.

16ರಂದು ಜನಸ್ಪಂದನ

ನೀವು ಹೆಬ್ಬಾಳ ವಿಧಾನಸಭಾ ಕ್ಷೇತ್ರದ ನಿವಾಸಿಯೇ? ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಹಾಗಾದರೆ, ಇದೇ 16ರಂದು ಆರ್.ಟಿ.ನಗರ ಪೊಲೀಸ್ ಠಾಣೆ ಎದುರಿನ ಎಚ್.ಎಂ.ಟಿ ಮೈದಾನಕ್ಕೆ ಬನ್ನಿ.

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ ‘ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಶನಿವಾರ (ಇದೇ 16ರಂದು) ‘ಜನಸ್ಪಂದನ’ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶಾಸಕ ಬೈರತಿ ಸುರೇಶ್, ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಸ್ಥಳ: ಎಚ್.ಎಂ.ಟಿ ಮೈದಾನ, ಗಂಗಾನಗರ, ಆರ್.ಟಿ.ನಗರ ಠಾಣೆ ಎದುರು, ಬೆಂಗಳೂರು–32

ಸಂಪರ್ಕ: 9739997938

ಚಂದ್ರು ಕೊಲೆ: ಸಿಐಡಿಗೆ ಕಡತ ಹಸ್ತಾಂತರ

ಬೆಂಗಳೂರು: ಜಗಜೀವನ್‌ರಾಮ್ ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಚಂದ್ರಶೇಖರ್ (22) ಕೊಲೆ ಪ್ರಕರಣದ ತನಿಖಾ ಕಡತಗಳನ್ನು ಸಿಐಡಿ ಅಧಿಕಾರಿಗಳಿಗೆ ಸೋಮವಾರ ಹಸ್ತಾಂತರಿಸಲಾಗಿದೆ.

‘ಐಟಿಐ ಫಿಟ್ಟರ್’ ಕೋರ್ಸ್ ಮುಗಿಸಿದ್ದ ಚಂದ್ರಶೇಖರ್, ಏಪ್ರಿಲ್ 4ರಂದು ಸ್ನೇಹಿತನ ಜೊತೆ ಹಳೇ ಗುಡ್ಡದಹಳ್ಳಿ ಬಳಿ ಹೊರಟಿದ್ದರು. ಅದೇ ವೇಳೆ ಗಲಾಟೆ ಆಗಿ, ಚಂದ್ರಶೇಖರ್ ಕೊಲೆ ಆಗಿತ್ತು.

‘ಬೈಕ್‌ಗಳು ಪರಸ್ಪರ ತಗುಲಿದ್ದ ಕಾರಣಕ್ಕೆ ಗಲಾಟೆಯಾಗಿ ಚಂದ್ರಶೇಖರ್ ಕೊಲೆ ಆಗಿದೆ. ಮೂವರನ್ನು ಬಂಧಿಸಲಾಗಿದೆ’ ಎಂದು ಕಮಿಷನರ್ ಕಮಲ್ ಪಂತ್ ಹೇಳಿದ್ದರು. ‘ಉರ್ದು ಮಾತನಾಡದಿದ್ದಕ್ಕೆ ಕೊಲೆ ಆಗಿದೆ’ ಎಂದು ಹೇಳಿಕೆ ನೀಡಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ, ಬಳಿಕ ಹಿಂಪಡೆದಿದ್ದರು. ಅದೇ ಹೇಳಿಕೆಯನ್ನೇ ಪುನಃ ಪ್ರಸ್ತಾಪಿಸಿದ್ದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ‘ಉರ್ದು ಮಾತನಾಡದಿದ್ದಕ್ಕೆ ಕೊಲೆ ಆಗಿದೆ. ಕಮಿಷನರ್ ಸುಳ್ಳು ಹೇಳಿದ್ದಾರೆ’ ಎಂದು ದೂರಿದ್ದರು.

ಕೊಲೆ ಕಾರಣದ ಬಗ್ಗೆ ಗೊಂದಲಗಳು ಸೃಷ್ಟಿಯಾಗಿದ್ದರಿಂದ ಪ್ರಕರಣವನ್ನು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಇತ್ತೀಚೆಗಷ್ಟೇ ಆದೇಶ ಹೊರಡಿಸಿದೆ. ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ ಅಧಿಕಾರಿಗಳು, ಕೊಲೆ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ. ಪೊಲೀಸರಿಂದಲೂ ಕಡತಗಳನ್ನು ಪಡೆದುಕೊಂಡಿದ್ದಾರೆ. ಸದ್ಯದಲ್ಲೇ ಘಟನಾ ಸ್ಥಳಕ್ಕೂ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ.

‘ನೈತಿಕ ಸ್ಥೈರ್ಯ ಕುಗ್ಗಿಸುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಚಂದ್ರಶೇಖರ್ ಹತ್ಯೆಗೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ನೀಡಿರುವ ಹೇಳಿಕೆಯನ್ನು ಬಿಜೆಪಿ ವಕ್ತಾರರು ಅಲ್ಲಗಳೆದಿರುವುದರ ಹಿಂದೆ ಪೊಲೀಸರ ಮೇಲೆ ಪ್ರಭಾವ ಬೀರುವ ಮತ್ತು ನೈತಿಕ ಸ್ಥೈರ್ಯ ಕುಗ್ಗಿಸುವ ಪ್ರಯತ್ನ ಇದೆ’ ಎಂದು ಕಾಂಗ್ರೆಸ್ ಮುಖಂಡ ಪ್ರೊ. ಬಿ.ಕೆ. ಚಂದ್ರಶೇಖರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಈ ಕೊಲೆ ಘಟನೆಯ ಬಗ್ಗೆ ಗೃಹ ಸಚಿವರು ಬೆಳಿಗ್ಗೆ ನೀಡಿದ್ದ ಹೇಳಿಕೆಯನ್ನು ಸಂಜೆ ವಾಪಸು ಪಡೆದಿದ್ದಾರೆ. ಈ ಘಟನೆಯ ಕುರಿತು ಬಹಿರಂಗ ಹೇಳಿಕೆ ನೀಡುವ ಅಗತ್ಯ ಇತ್ತೇ’ ಎಂದು ಅವರು ಪ್ರಶ್ನಿಸಿದರು.

‘ಕೆಪಿಎಸ್‌ಸಿ ನಡೆಸಿದ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಕುರಿತು ಸಿಐಡಿ ವರದಿಯನ್ನು ಒಪ್ಪುವುದಿಲ್ಲ ಎನ್ನುವ ರಾಜ್ಯ ಬಿಜೆಪಿ ಸರ್ಕಾರ, ಇದೀಗ ಚಂದ್ರಶೇಖರ್ ಹತ್ಯೆ ಪ್ರಕರಣವನ್ನು ಸಿಐಡಿಗೆ ವಹಿಸುತ್ತಿದೆ. ಆಡಳಿತ ನಡೆಸುವ ಸರ್ಕಾರಕ್ಕೆ ಎರಡು ನಾಲಿಗೆ ಇರಬಾರದು. ಇವೆಲ್ಲ ನೋಡಿದರೆ ಸರ್ಕಾರದ ಆಡಳಿತ ವೈಫಲ್ಯ ಎದ್ದು ಕಾಣುತ್ತದೆ’ ಎಂದರು.

‘ಆರೆಸ್ಸೆಸ್ ಸ್ಥಾಪನೆ ಆದಾಗಿನಿಂದಲೂ ಅನಧಿಕೃತ ಪ್ರಭುತ್ವ ಚಾಲನೆಯಲ್ಲಿದೆ. ಸಂಘ ಪರಿವಾರ ಹುಟ್ಟುಹಾಕಿದ ಹಲವು ಸಂಘಟನೆಗಳು ಕೋಮು ಸೌಹಾರ್ದಕ್ಕೆ ಧಕ್ಕೆ ತರುತ್ತಿವೆ’ ಎಂದು ದೂರಿದರು.

‘ಧಾರವಾಡದಲ್ಲಿ 15 ದಿನದ ಹಿಂದೆಯೇ ದೇವಾಲಯದ ಆಡಳಿತ ಮಂಡಳಿಗೆ ಪತ್ರ ಬರೆದು ಅನ್ಯಧರ್ಮೀಯರ ಅಂಗಡಿ ತೆರವುಗೊಳಿಸದಿದ್ದರೆ ಧ್ವಂಸ ಮಾಡುವುದಾಗಿ ಹೇಳಿದ್ದರು. ಕಿಡಿಗೇಡಿಗಳು ಕಲ್ಲಂಗಡಿ ಅಂಗಡಿಯನ್ನು ಧ್ವಂಸಗೊಳಿಸಿದ್ದಾರೆ. ಅಲ್ಲಿ ಪೊಲೀಸರು ಇರಲಿಲ್ಲವೇ’ ಎಂದೂ ಅವರು ಪ್ರಶ್ನಿಸಿದರು.

ಐ‘ಲೋಕಸಭೆಯಲ್ಲಿ ಬಹುಮತ ಇರುವ ಬಿಜೆಪಿ, ರಾಜ್ಯ ಸಭೆಯಲ್ಲೂ ಬಹುಮತ ಗಳಿಸಿದರೆ ಸಂವಿಧಾನವನ್ನು ಬದಲಿಸುತ್ತದೆ. ಸಂವಿಧಾನ ಉಳಿಸಲು ಎಲ್ಲ ಸ್ವ ಪ್ರತಿಷ್ಠೆ ಬಿಟ್ಟು ವಿರೋಧ ಪಕ್ಷಗಳು ಒಗ್ಗೂಡಬೇಕು’ ಎಂದು ಅವರು ಅಭಿಪ್ರಾಯಪಟ್ಟರು.

ರೌಡಿ ಮೇಲಿನ ಸಿಟ್ಟಿಗೆ ವಾಹನಗಳು ಜಖಂ

ಬೆಂಗಳೂರು: ರೌಡಿಯೊಬ್ಬನನ್ನು ಕೊಲ್ಲಲು ಹೋಗಿ, ಆತ ಸಿಗಲಿಲ್ಲವೆಂಬ ಕಾರಣಕ್ಕೆ ಸಾರ್ವಜನಿಕರ 30 ವಾಹನಗಳಿಗೆ ರಾಡ್‌ನಿಂದ ಹೊಡೆದು ಜಖಂಗೊಳಿಸಿದ್ದ ಆರೋಪದಡಿ ಮೂವರನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ಮೂಡಲಪಾಳ್ಯದ ಸಾಗರ್, ಅಶೋಕ್ ಹಾಗೂ ಪ್ರಜ್ವಲ್ ಬಂಧಿತರು. ಏಪ್ರಿಲ್ 3ರಂದು ರಾತ್ರಿ ಕೃತ್ಯ ಎಸಗಿದ್ದರು. ವಿಡಿಯೊ ಆಧರಿಸಿ ವಾಹನಗಳ ಮಾಲೀಕರು ನೀಡಿದ್ದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರೌಡಿಯೊಬ್ಬನ ಪತ್ನಿ ಜೊತೆ ಆರೋಪಿ ಸಾಗರ್ ಸ್ನೇಹವಿಟ್ಟುಕೊಂಡಿದ್ದ. ಆಗಾಗ ಭೇಟಿಯಾಗುತ್ತಿದ್ದ. ಇದು ಗೊತ್ತಾಗುತ್ತಿದ್ದಂತೆ ರೌಡಿ, ಸಾಗರ್‌ಗೆ ಎಚ್ಚರಿಕೆ ನೀಡಿದ್ದ. ಅಷ್ಟಾದರೂ ಸಾಗರ್, ಭೇಟಿಯಾಗುವುದನ್ನು ನಿಲ್ಲಿಸಿರಲಿಲ್ಲ.’

‘ಕೆಲದಿನಗಳ ಹಿಂದಷ್ಟೇ ಮೂಡಲಪಾಳ್ಯದ ಬಾರೊಂದರಲ್ಲಿ ಸಾಗರ್ ಹಾಗೂ ರೌಡಿ ನಡುವೆ ಗಲಾಟೆ ಆಗಿತ್ತು. ಇಬ್ಬರೂ ಪರಸ್ಪರ ಕೊಲೆ ಬೆದರಿಕೆ ಹಾಕಿದ್ದರು. ಬಾರ್ ಸಿಬ್ಬಂದಿ ಜಗಳ ಬಿಡಿಸಿ ಕಳುಹಿಸಿದ್ದರು’ ಎಂದೂ ತಿಳಿಸಿದರು.

ರಾತ್ರಿ ಮನೆಗೆ ನುಗ್ಗಿದ್ದರು: ‘ರೌಡಿಯನ್ನು ಕೊಲೆ ಮಾಡಲು ಸಹಚರರ ಜೊತೆ ಸೇರಿ ಸಾಗರ್ ಸಂಚು ರೂಪಿಸಿದ್ದ. ಮೂವರು ಸೇರಿ ಏಪ್ರಿಲ್ 3ರಂದು ರಾತ್ರಿ ರೌಡಿ ಮನೆಗೆ ನುಗ್ಗಿದ್ದರು. ಆದರೆ, ರೌಡಿ ಇರಲಿಲ್ಲ. ವಾಪಸು ಬಂದಿದ್ದರು’ ಎಂದು ಹೇಳಿದರು.

‘ರೌಡಿ ಸಿಗಲಿಲ್ಲವೆಂದು ಸಿಟ್ಟಾಗಿದ್ದ ಆರೋಪಿಗಳು, ರಸ್ತೆಯ ಅಕ್ಕ–ಪಕ್ಕದಲ್ಲಿ ನಿಲ್ಲಿಸಿದ್ದ ಸಾರ್ವಜನಿಕರ ವಾಹನಗಳಿಗೆ ಕಬ್ಬಿಣದ ರಾಡ್‌ನಿಂದ ಹೊಡೆದು ಪರಾರಿಯಾಗಿದ್ದರು. ಕಾಮಾಕ್ಷಿಪಾಳ್ಯ, ಅನ್ನಪೂರ್ಣೇಶ್ವರಿನಗರ, ವಿಜಯನಗರ ಹಾಗೂ ಗೋವಿಂದರಾಜನಗರ ಠಾಣೆ ವ್ಯಾಪ್ತಿಯಲ್ಲಿ ಕಾರು, ಆಟೊ ಸೇರಿ 30 ವಾಹನಗಳು ಜಖಂಗೊಂಡಿದ್ದವು. ಬಹುತೇಕ ವಾಹನಗಳ ಗಾಜುಗಳು ಒಡೆದಿದ್ದವು’ ಎಂದೂ ತಿಳಿಸಿದರು

ಬ್ರಹ್ಮರಥೋತ್ಸ

ಶ್ರೀರಾಮನವಮಿ ಪ್ರಯುಕ್ತ ಮೈಸೂರು ರಸ್ತೆಯ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದ ಬ್ರಹ್ಮರಥೋತ್ಸವದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು -ಪ್ರಜಾವಾಣಿ ಚಿತ್ರ

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣ: ಬಂಧನಕ್ಕೆ ಆಗ್ರಹ

ಈಶ್ವರಪ್ಪ ಮನೆ ಮುತ್ತಿಗೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆಗೆ ಕಾರಣರಾಗಿರುವ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾ ಮಾಡಬೇಕು. ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು’ ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಎದುರು ಸೇರಿದ್ದ ಕಾರ್ಯಕರ್ತರು, ‘ಸಾವಿಗೆ ಬಿಜೆಪಿ ಸರ್ಕಾರವೇ ಹೊಣೆ’ ಎಂಬ ಘೋಷಣಾ ಫಲಕ ಪ್ರದರ್ಶಿಸಿದರು. ಪ್ರತಿಭಟನೆ ಬಳಿಕ ಗಾಂಧಿಭವನ ಬಳಿ ಇರುವ ಈಶ್ವರಪ್ಪ ಮನೆಗೆ ತೆರಳಿದ ಕಾರ್ಯಕರ್ತರು, ಮುತ್ತಿಗೆ ಹಾಕಲು ಯತ್ನಿಸಿದರು. ಮಹಿಳಾ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಸ್ಥಳದಲ್ಲಿದ್ದ ಪೊಲೀಸರು, ಕಾರ್ಯಕರ್ತರನ್ನು ವಶಕ್ಕೆ ಪಡೆದು ವಾಹನಗಳಲ್ಲಿ ಕರೆದೊಯ್ದರು. ಕೆಲ ಹೊತ್ತಿನ ನಂತರ ಕಾರ್ಯಕರ್ತರನ್ನು ಬಿಡುಗಡೆ ಮಾಡಿದರು.

‘ಬಿಜೆಪಿ ಕಾರ್ಯಕರ್ತರೇ ಆಗಿದ್ದ ಸಂತೋಷ್, ರಾಜ್ಯ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆ ಎಳೆದಿದ್ದರು. ಈಶ್ವರಪ್ಪ ವಿರುದ್ಧ ಪ್ರಧಾನಮಂತ್ರಿ ಹಾಗೂ ಇತರರು ದೂರು ಸಹ ನೀಡಿದ್ದರು. ಇದೀಗ ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿದ್ದು, ಇದಕ್ಕೆ ಈಶ್ವರಪ್ಪ ಹಾಗೂ ರಾಜ್ಯ ಸರ್ಕಾರ ಕಾರಣ’ ಎಂದು ಕಾರ್ಯಕರ್ತರು ಆರೋಪಿಸಿದರು.

‘ಸಂತೋಷ್ ಸಾವಿನ ಸಂಬಂಧ ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲಿಸಬೇಕು. ಸಾವಿನ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು’ ಎಂದೂ ಆಗ್ರಹಿಸಿದರು.

ಹೈಗ್ರೌಂಡ್ಸ್ ಠಾಣೆಗೆ ದೂರು: ‘ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಕೆ.ಎಸ್. ಈಶ್ವರಪ್ಪ ಅವರನ್ನು ಬಂಧಿಸಬೇಕು’ ಎಂದು ಆರೋಪಿಸಿ ಆಮ್ ಆದ್ಮಿ ಪಾರ್ಟಿ ಕಾರ್ಯಕರ್ತರು ಹೈಗ್ರೌಂಡ್ಸ್ ಠಾಣೆಗೆ ಮಂಗಳವಾರ ದೂರು ಸಲ್ಲಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಎಎಪಿ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ, ‘ತಮ್ಮ ಸಾವಿಗೆ ಸಚಿವ ಕೆ.ಎಸ್. ಈಶ್ವರಪ್ಪ ಅವರೇ ಕಾರಣವೆಂದು ಸಂತೋಷ್ ಮರಣಪತ್ರದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಹೀಗಾಗಿ, ಆರೋಪಿ ಈಶ್ವರಪ್ಪ ಅವರನ್ನು ಕೂಡಲೇ ಬಂಧಿಸಬೇಕು. ಅವರಿಂದ ಸಾಕ್ಷ್ಯ ನಾಶ ಆಗುವುದನ್ನು ತಡೆಯಬೇಕು’ ಎಂದರು.

‘ಈಶ್ವರಪ್ಪ ಅವರು ಶೇ 40ರಷ್ಟು ಕಮಿಷನ್ ಕೇಳುತ್ತಿದ್ದಾರೆಂದು ಸಂತೋಷ್ ಅವರು ಪ್ರಧಾನಮಂತ್ರಿಗೆ ದೂರು ನೀಡಿದ್ದರು. ಅವಾಗಲೇ ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿದ್ದರೆ, ಅಮಾಯಕ ವ್ಯಕ್ತಿ ಸಾಯುವುದು ತಪ್ಪುತ್ತಿತ್ತು. ಭ್ರಷ್ಟ ಬಿಜೆಪಿ ಆಡಳಿತದಲ್ಲಿ ಪ್ರಾಮಾಣಿಕರ ಧ್ವನಿಗೆ ಬೆಲೆ ಇಲ್ಲವಾಗಿದೆ’ ಎಂದೂ ಹೇಳಿದರು.

ಸಚಿವ ಕೆ.ಎಸ್.ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು

ಜಪ್ತಿ ಮಾಡಲಾದ ಗಾಂಜಾ, ವಾಹನ

ಕಲಾಸಿಪಾಳ್ಯದಲ್ಲಿ ಗಾಂಜಾ ಮಾರಾಟ: ಇಬ್ಬರ ಬಂಧನ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯ ಪ್ರದೇಶಗಳಲ್ಲಿ ಗಾಂಜಾ ಮಾರುತ್ತಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಭಾನುಪ್ರಕಾಶ್ ರೆಡ್ಡಿ ಹಾಗೂ ನಿತೇಶ್ ಬಂಧಿತರು. ಇವರಿಂದ 21 ಕೆ.ಜಿ 350 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹೊರ ಜಿಲ್ಲೆಗಳಿಂದ ಗಾಂಜಾ ತರಿಸಿಕೊಂಡಿದ್ದ ಆರೋಪಿಗಳು, ದ್ವಿಚಕ್ರ ವಾಹನದಲ್ಲಿ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಾರ್ಮಿಕರು ಹಾಗೂ ಕೆಲ ಕಂಪನಿಗಳ ನೌಕರರು ಆರೋಪಿಗಳ ಬಳಿ ಗಾಂಜಾ ಖರೀದಿಸುತ್ತಿದ್ದರು.’

‘ಏಪ್ರಿಲ್ 11ರಂದು ಗಸ್ತಿನಲ್ಲಿದ್ದ ಸಿಬ್ಬಂದಿ, ಆರೋಪಿಗಳನ್ನು ಬಂಧಿಸಿ ಗಾಂಜಾ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಿದ್ದರು. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿದರು.

ಜೆಎಸ್‌ಡಬ್ಲ್ಯು ತ್ಯಾಜ್ಯ ರಾಶಿ ಕುಸಿತ: ರಕ್ಷಣಾ ಕಾರ್ಯಾಚರಣೆ

ನಾಲ್ಕೈದು ಕಾರ್ಮಿಕರು ಸಿಲುಕಿರುವ ಶಂಕೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ತಾಲ್ಲೂಕಿನ ಕುಡತಿನಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಪ್ರತಿಷ್ಠಿತ ಜೆಎಸ್‌ಡಬ್ಲ್ಯು ಉಕ್ಕು ಕಾರ್ಖಾನೆ ತ್ಯಾಜ್ಯ ಸಂಗ್ರಹಿಸುವ ಕೆರೆ ಬಂಡು ಸುಮಾರು ನೂರು ಅಡಿಗಳಷ್ಟು ಕುಸಿದು ಕಬ್ಬಿಣ ಆಯುವ ಕೆಲವು ಕೂಲಿ ಕಾರ್ಮಿಕರು ಅದರಡಿ ಸಿಲುಕಿದ್ದಾರೆ ಎನ್ನಲಾಗಿದೆ.

ಕೆರೆ ಬಂಡು ಹೇಗೆ ಕುಸಿಯಿತು. ಅದರಡಿ ಎಷ್ಟು ಜನ ಕೂಲಿ ಕಾರ್ಮಿಕರು ಸಿಲುಕಿದ್ದಾರೆ ಎನ್ನುವ ಕುರಿತು ಮಾಹಿತಿ ಸಿಕ್ಕಿಲ್ಲ. ನಾಲ್ಕು ಜೆಸಿಬಿಗಳು ಹಾಗೂ ಎರಡು ಪೊಕ್ಲೇನ್‌ಗಳು ತ್ಯಾಜ್ಯ ತೆಗೆದು ಅದರಡಿ ಸಿಲುಕಿರುವ ಕಾರ್ಮಿಕರ ರಕ್ಷಣೆಗೆ ಕಾರ್ಯಾಚರಣೆ ಆರಂಭಿಸಿವೆ. ಮಧ್ಯರಾತ್ರಿಯೂ ಕಾರ್ಯಾಚರಣೆ ಮುಂದುವರಿದಿತ್ತು.

ಘಟನೆ ಸ್ಥಳಕ್ಕೆ ಕುಡತಿನಿ ಠಾಣೆ ಪೊಲೀಸರು ಧಾವಿಸಿದ್ದು, ತ್ಯಾಜ್ಯದ ಅಡಿಯಲ್ಲಿ ಸಿಲುಕಿರಬಹುದಾದ ಕಾರ್ಮಿಕರ ರಕ್ಷಣೆಗೆ ಮುಂದಾಗಿದ್ದಾರೆ.

ಆಗಿದ್ದೇನು?: ಕಾರ್ಖಾನೆಯಲ್ಲಿ ಉಕ್ಕಿನ ಜೊತೆ ತ್ಯಾಜ್ಯವೂ (ಕಿಟ್ಟ) ಉತ್ಪಾದನೆ ಆಗುತ್ತದೆ. ಈ ತ್ಯಾಜ್ಯವನ್ನು ಸುತ್ತ ತಡೆಗೋಡೆ ನಿರ್ಮಿಸಿದ ಕೆರೆಯಂತಹ (ಡಂಪಿಂಗ್ ಯಾರ್ಡ್) ಸ್ಥಳದಲ್ಲಿ ಸಂಗ್ರಹಿಸಲಾಗುತ್ತದೆ. ಇದರಲ್ಲಿ ಕಬ್ಬಿಣದ ಚೂರುಗಳೂ ಸಿಗುವುದರಿಂದ ಅವುಗಳನ್ನು ಸಂಗ್ರಹಿಸಿ ಮಾರುವ ದೊಡ್ಡ ಜಾಲವೇ ಇದೆ. ಕಿಟ್ಟ ಜಾಲಾಡಿ ಕಬ್ಬಿಣ ಸಂಗ್ರಹಿಸುವ ಕಾರ್ಮಿಕರು ಜೀವ ಪಣಕ್ಕಿಟ್ಟು ಕೂಲಿಗಾಗಿ ದುಡಿಯುತ್ತಾರೆ.

ಈಚೆಗೆ ಕಿಟ್ಟದ ಉತ್ಪಾದನೆ ಹೆಚ್ಚಿದ್ದು, ಅದನ್ನು ಸಂಗ್ರಹಿಸುವ ಕೆರೆಯ ವ್ಯಾಪ್ತಿ ವಿಸ್ತರಿಸಲಾಗಿದೆ. ಅದೇ ರೀತಿ ಸುತ್ತಲಿನ ಬಂಡ್ ವಿಸ್ತರಿಸಲಾಗಿದೆ. ವಿಸ್ತರಿಸಿದ ಕೆರೆಯ ಬಂಡ್ ಅನ್ನು ಬಿಗಿಗೊಳಿಸದ ಕಾರಣ ಕುಸಿತವಾಗಿರಬಹುದು ಎಂಬುದು ಸ್ಥಳೀಯರ ಅಭಿಪ್ರಾಯ.

ದೂರು ಕೊಡಲಾಗಿದೆ: ’ನಮ್ಮ ಉಪಕರಣಗಳನ್ನೇ ಬಳಸಿ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈ ಡಂಪಿಂಗ್ ಯಾರ್ಡ್ ನಮಗೆ ಸೇರಿದ ಜಾಗ. ಕಬ್ಬಿಣ ಆಯುವ ಆಸೆಗಾಗಿ ಕೆಲವರು ಬರುತ್ತಾರೆ. ಜನರ ಅಕ್ರಮ ಪ್ರವೇಶಕ್ಕೆ ಕಡಿವಾಣ ಹಾಕುವ ಪ್ರಯತ್ನ ನಡೆದಿದೆ. ನಮ್ಮ ಸೆಕ್ಯುರಿಟಿ ಹಾಕಲಾಗಿದೆ. ಪೊಲೀಸರಿಗೂ ಹಲವು ಸಲ ದೂರು ನೀಡಲಾಗಿದೆ. ಆದರೂ ಜನ ಬರುವುದು ನಿಂತಿಲ್ಲ‘ ಎಂದು ಜೆಎಸ್‌ಡಬ್ಲ್ಯು ಮೂಲಗಳು ತಿಳಿಸಿವೆ.

ಕೊಡಿಗೇಹಳ್ಳಿ ಪೊಲೀಸ್ ಠಾಣೆ ತೆರವಿಗೆ ಸೂಚನೆ

ಬೆಂಗಳೂರು: ‘ಡಾ.ಬಾಬು ಜಗಜೀವನ್‌ರಾಮ್’ ಸಮುದಾಯ ಭವನದಲ್ಲಿರುವ ಕೊಡಿಗೇಹಳ್ಳಿ ಪೊಲೀಸ್ ಠಾಣೆಯನ್ನು ತೆರವು ಮಾಡುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಈ ಬಗ್ಗೆ ಬಿಬಿಎಂಪಿ ಜಂಟಿ ಆಯುಕ್ತರಿಗೆ ಪತ್ರ ಬರೆದಿರುವ ಸಮಾಜ ಕಲ್ಯಾಣ ಇಲಾಖೆಯ ಬೆಂಗಳೂರು ಉತ್ತರ ತಾಲ್ಲೂಕಿನ ಸಹಾಯಕ ನಿರ್ದೇಶಕರು, ‘ಭವನದಲ್ಲಿ ಠಾಣೆ ಕಾರ್ಯನಿರ್ವಹಿಸುತ್ತಿರುವುದು ನಿಯಮಬಾಹಿರ’ ಎಂದಿದ್ದಾರೆ.

‘ಬಿಬಿಎಂಪಿ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಉಪಯೋಗಕ್ಕಾಗಿ ಸಮುದಾಯ ಭವನ ನಿರ್ಮಿಸಲಾಗಿದೆ. ಈ ಭವನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪೊಲೀಸ್ ಠಾಣೆಗೆ ನೀಡಿರುವುದು ತಿಳಿದುಬಂದಿದೆ’ ಎಂದು ಪತ್ರದಲ್ಲಿ ಹೇಳಲಾಗಿದೆ.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗಾಗಿ ಭವನ ಉಪಯೋಗಿಸಬೇಕು. ಅದನ್ನು ಅನ್ಯ ಉದ್ದೇಶಕ್ಕೆ ಬಳಸುವುದು ನಿಯಮಬಾಹಿರ’ ಎಂದೂ ತಿಳಿಸಲಾಗಿದೆ.

ಕುಡುಕ ಅಳಿಯನಿಗೆ ರಾಡ್‌ನಿಂದ ಹೊಡೆದ ಅತ್ತೆ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಕೇಶವ್ (40) ಕೊಲೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಅತ್ತೆ ಪಾರ್ವತಮ್ಮ (60) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಅಂದ್ರಹಳ್ಳಿ ಬಳಿಯ ಸಾಯಿಬಾಬಾ ನಗರದ ನಿವಾಸಿ ಕೇಶವ್, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ತಮ್ಮ ನವೀನ್ ನೀಡಿರುವ ದೂರು ಆಧರಿಸಿ ಪಾರ್ವತಮ್ಮ ಅವರನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಪಾರ್ವತಮ್ಮ ಅವರ ಮಗಳು ಶಕುಂತಲಾ ಅವರನ್ನು 16 ವರ್ಷಗಳ ಹಿಂದೆ ಕೇಶವ್ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇಡೀ ಕುಟುಂಬ ಸಾಯಿಬಾಬಾ ನಗರ ಮನೆಯಲ್ಲಿ ನೆಲೆಸಿತ್ತು.’

‘ಮದ್ಯವ್ಯಸನಿ ಆಗಿದ್ದ ಕೇಶವ್, ನಿತ್ಯವೂ ಪತ್ನಿ ಜೊತೆ ಜಗಳ ಮಾಡಿ ಹಲ್ಲೆ ಮಾಡುತ್ತಿದ್ದರು. ತಡೆಯಲು ಹೋದ ಮಕ್ಕಳು ಹಾಗೂ ಅತ್ತೆಗೂ ಹೊಡೆಯುತ್ತಿದ್ದರು.’

‘ಏಪ್ರಿಲ್ 9ರಂದು ಸಂಜೆ ಜಗಳ ತೆಗೆದಿದ್ದ ಕೇಶವ್, ಪತ್ನಿ ಹಾಗೂ ಅತ್ತೆಯನ್ನು ಥಳಿಸಿದ್ದರು. ಸಿಟ್ಟಾದ ಅತ್ತೆ ಪಾರ್ವತಮ್ಮ, ಕಬ್ಬಿಣದ ರಾಡ್‌ನಿಂದ ಕೇಶವ್ ತಲೆಗೆ ಹೊಡೆದಿದ್ದರು. ಕುಸಿದು ಬಿದ್ದಿದ್ದ ಕೇಶವ್ ಅವರನ್ನು ಪತ್ನಿ– ಅತ್ತೆಯೇ ಆಸ್ಪತ್ರೆಗೆ ದಾಖಲಿಸಿದ್ದರು. ವೈದ್ಯರು ನೀಡಿದ್ದ ಮಾಹಿತಿ ಆಧರಿಸಿ ಆಸ್ಪತ್ರೆಗೆ ಹೋದಾಗ, ಕೊಲೆ ಯತ್ನದ ಬಗ್ಗೆ ತಿಳಿಯಿತು’ ಎಂದೂ ಹೇಳಿವೆ.

ಕ್ರಿಪ್ಟೊ ಕರೆನ್ಸಿ ಹೂಡಿಕೆ: ₹ 57.56 ಲಕ್ಷ ವಂಚನೆ

ಬೆಂಗಳೂರು: ಕ್ರಿಪ್ಟೊ ಕರೆನ್ಸಿ ಮೇಲೆ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುವುದಾಗಿ ಹೇಳಿ ₹ 57.56 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜಯನಗರ 4ನೇ ಹಂತದ ನಿವಾಸಿಯಾದ 46 ವರ್ಷದ ಮಹಿಳೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕ್ರಿಪ್ಟೊ ಕರೆನ್ಸಿ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದ ಮಹಿಳೆ, ಗೂಗಲ್‌ನಲ್ಲಿ ಮಾಹಿತಿ ಹುಡುಕಾಡಿದ್ದರು. ಲೆಕ್ಸಾಟ್ರೇಡ್ ಜಾಲತಾಣದ ಬಗ್ಗೆ ತಿಳಿದುಕೊಂಡಿದ್ದರು. ಆ ಜಾಲತಾಣದಲ್ಲಿ ಖಾತೆ ತೆರೆದಿದ್ದ ಮಹಿಳೆ, ತಮ್ಮ ವೈಯಕ್ತಿಕ ವಿವರಗಳನ್ನು ದಾಖಲಿಸಿದ್ದರು.’

‘ಸ್ಕೈಪ್ ಆ್ಯಪ್ ಮೂಲಕ ಮಹಿಳೆಗೆ ಕರೆ ಮಾಡಿದ್ದ ಆರೋಪಿ, ಕ್ರಿಪ್ಟೊ ಕರೆನ್ಸಿ ವ್ಯವಹಾರದ ಏಜೆಂಟ್ ಎಂದು ಪರಿಚಯಿಸಿಕೊಂಡಿದ್ದ. ಹಣ ಹೂಡಿಕೆ ಮಾಡಿದರೆ, ಕೆಲವೇ ದಿನಗಳಲ್ಲಿ ದುಪ್ಪಟ್ಟು ಲಾಭ ಬರುವುದಾಗಿ ಹೇಳಿದ್ದ. ಅದನ್ನು ನಂಬಿದ್ದ ಮಹಿಳೆ, ಹಂತ ಹಂತವಾಗಿ ₹ 57.56 ಲಕ್ಷ ಹೂಡಿಕೆ ಮಾಡಿದ್ದರು. ಕೆಲ ದಿನಗಳ ನಂತರ ಆರೋಪಿ ಯಾವುದೇ ಹಣ ವಾಪಸು ನೀಡಿಲ್ಲ. ಸಂಪರ್ಕಕ್ಕೂ ಸಿಕ್ಕಿಲ್ಲ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಮೃತದೇಹ: ಪರಿಚಯಸ್ಥರೇ ಆರೋಪಿಗಳು

ಮಹಿಳೆ ಕೊಲೆ: ಕೊಳೆತ ಸ್ಥಿತಿಯಲ್ಲಿ ಮೃತದೇಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತೂರು ಠಾಣೆ ವ್ಯಾಪ್ತಿಯಲ್ಲಿ ಸುನೀತಾ ರಾಮಪ್ರಸಾದ್ (55) ಅವರನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಗೋವಿಂದಪುರ ನಿವಾಸಿ ಇಮ್ರಾನ್ (32), ವೆಂಕಟೇಶ್ (30) ಬಂಧಿತರು. ಪ್ರಕರಣದ ಪ್ರಮುಖ ಆರೋಪಿ ಕಿರಣ್ (25) ತಲೆಮರೆಸಿಕೊಂಡಿದ್ದಾನೆ. ಈತನ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಕಿರಣ್, ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಶಿಕ್ಷಕಿಯಾಗಿರುವ ಪತ್ನಿ ಜೊತೆ ವರ್ತೂರು ಬಳಿಯ ಕಾಚಮಾರನಹಳ್ಳಿ ಸಮೀಪದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ನೆಲೆಸಿದ್ದ. ಇನ್ನೊಬ್ಬ ಆರೋಪಿ ಇಮ್ರಾನ್, ಆಟೊ ಚಾಲಕ. ವೆಂಕಟೇಶ್, ಕಾರ್ಪೆಂಟರ್ ಕೆಲಸ ಮಾಡುತ್ತಿದ್ದ’ ಎಂದೂ ತಿಳಿಸಿದರು.

ಅವಿವಾಹಿತೆ: ‘ಮಲ್ಲೇಶ್ವರದ ಸಂಬಂಧಿಕರ ಮನೆಯಲ್ಲಿ ನೆಲೆಸಿದ್ದ ಸುನೀತಾ, ಅವಿವಾಹಿತೆ. ಅವರ ಸಹೋದರರು ವಿದೇಶದಲ್ಲಿ ವಾಸವಿದ್ದಾರೆ. ಫೈನಾನ್ಸ್ ವ್ಯವಹಾರ ಮಾಡುತ್ತಿದ್ದ ಸುನೀತಾ, ಹಲವರಿಗೆ ಸಾಲ ಕೊಟ್ಟಿದ್ದರು. ಅವರಿಗೆ ಕಿರಣ್, ಇಮ್ರಾನ್ ಹಾಗೂ ವೆಂಕಟೇಶ್ ಪರಿಚಯವಾಗಿತ್ತು. ಮೂವರು ಆಗಾಗ ಸುನೀತಾ ಅವರನ್ನು ಭೇಟಿಯಾಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

‘ಸುನೀತಾ ಬಳಿ ಹೆಚ್ಚು ಚಿನ್ನಾಭರಣ ಹಾಗೂ ಹಣ ಇರುವುದಾಗಿ ತಿಳಿದಿದ್ದ ಆರೋಪಿಗಳು, ಅದನ್ನು ತಮ್ಮದಾಗಿಸಿಕೊಳ್ಳಲು ಯೋಚಿಸುತ್ತಿದ್ದರು. ಕೊಲೆ ಮಾಡಲು ಸಂಚು ರೂಪಿಸಿದ್ದರು’ ಎಂದೂ ತಿಳಿಸಿದರು.

‘ಆರೋಪಿ ಕಿರಣ್, ಸುನೀತಾ ಅವರನ್ನು ಏಪ್ರಿಲ್ 1ರಂದು ತನ್ನ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ಗೆ ಕರೆದೊಯ್ದಿದ್ದ. ಅಲ್ಲೇ ಇತರೆ ಆರೋಪಿಗಳು ಇದ್ದರು. ಸುನೀತಾ ಮೇಲೆ ದಾಳಿ ಮಾಡಿದ್ದ ಆರೋಪಿಗಳು, ಉಸಿರುಗಟ್ಟಿಸಿ ಕೊಂದಿದ್ದರು. ಆದರೆ, ಯಾವುದೇ ಆಭರಣ ಹಾಗೂ ಹಣ ಸಿಕ್ಕಿರಲಿಲ್ಲ. ನಂತರ, ಫ್ಲ್ಯಾಟ್‌ಗೆ ಬೀಗ ಹಾಕಿಕೊಂಡು ಆರೋಪಿಗಳು ಪರಾರಿಯಾಗಿದ್ದರು.’

‘ಏ. 5ರಂದು ಫ್ಲ್ಯಾಟ್‌ನಿಂದ ದುರ್ವಾಸನೆ ಬರುತ್ತಿತ್ತು. ಅನುಮಾನಗೊಂಡ ನಿವಾಸಿಗಳು ಠಾಣೆಗೆ ಮಾಹಿತಿ ನೀಡಿದ್ದರು. ಬೀಗ ಮುರಿದು ಬಾಗಿಲು ತೆರೆದು ನೋಡಿದಾಗ, ಕೊಳೆತ ಸ್ಥಿತಿಯಲ್ಲಿ ಮೃತದೇಹ ಕಂಡಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಮೊಬೈಲ್ ಕರೆಗಳ ವಿವರ ಪರಿಶೀಲಿಸಿದಾಗ ಆರೋಪಿಗಳ ಸುಳಿವು ಪತ್ತೆಯಾಯಿತು’ ಎಂದೂ ಪೊಲೀಸರು ಹೇಳಿದರು.

ನಾಪತ್ತೆ ಬಗ್ಗೆ ದೂರು: ‘ಮನೆಯಿಂದ ಹೊರಹೋದ ಸುನೀತಾ ವಾಪಸು ಬಂದಿಲ್ಲವೆಂದು ಅವರ ಸಂಬಂಧಿಕರು ಮಲ್ಲೇಶ್ವರ ಠಾಣೆಗೆ ದೂರು ನೀಡಿದ್ದರು. ನಾಪತ್ತೆ ಬಗ್ಗೆ ಎಫ್‌ಐಆರ್ ದಾಖಲಾಗಿತ್ತು’ ಎಂದು ಪೊಲೀಸರು ತಿಳಿಸಿದರು.

ಬೈಕ್ ಕದ್ದೊಯ್ದು ಸುಲಿಗೆ

ಬೆಂಗಳೂರು: ನಗರದಲ್ಲಿ ಕದ್ದಿದ್ದ ಬೈಕ್‌ನಲ್ಲಿ ಸಕಲೇಶಪುರಕ್ಕೆ ಹೋಗಿ ದಂಪತಿಯನ್ನು ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ಅಂದ್ರಹಳ್ಳಿಯ ಸುದೀಪ್ ಹಾಗೂ ಬ್ಯಾಡರಹಳ್ಳಿಯ ವೀರೇಶ್ ಬಂಧಿತರು. ಇವರಿಂದ ₹ 6.37 ಲಕ್ಷ ಮೌಲ್ಯದ 105 ಗ್ರಾಂ ಚಿನ್ನಾಭರಣ ಹಾಗೂ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಾಲ್ಯದಿಂದಲೇ ಅಪರಾಧ ಕೃತ್ಯ ಎಸಗುತ್ತಿರುವ ಸುದೀಪ್ ವಿರುದ್ಧ 17 ಪ್ರಕರಣಗಳು ದಾಖಲಾಗಿವೆ. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿದ್ದ ಈತ, ಇದೇ ಫೆಬ್ರುವರಿಯಲ್ಲಿ ಜಾಮೀನು ಮೇಲೆ ಬಿಡುಗಡೆ ಆಗಿದ್ದ. ಸಹಚರ ವೀರೇಶ್ ಜೊತೆ ಸೇರಿ ಕೃತ್ಯ ಮುಂದುವರಿಸಿದ್ದ’ ಎಂದೂ ತಿಳಿಸಿದರು.

‘ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ಬೈಕ್‌ಗಳನ್ನು ಕದಿಯುತ್ತಿದ್ದರು. ಆ ಬೈಕ್‌ನಲ್ಲಿ ಸುತ್ತಾಡಿ ಸುಲಿಗೆ ಮಾಡುತ್ತಿದ್ದರು’ ಎಂದೂ ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ಬೈಕ್‌ಗಳು ಹಾಗೂ ಚಿನ್ನಾಭರಣ

ಚಾಕು ತೋರಿಸಿ ಸುಲಿಗೆ: ‘ನಗರದಲ್ಲಿ ಇತ್ತೀಚೆಗಷ್ಟೇ ಬೈಕ್ ಕದ್ದಿದ್ದ ಆರೋಪಿಗಳು, ಅದರಲ್ಲೇ ಸಕಲೇಶಪುರಕ್ಕೆ ಹೋಗಿದ್ದರು. ರಸ್ತೆಯಲ್ಲಿ ಹೊರಟಿದ್ದ ನವದಂಪತಿಯನ್ನು ಅಡ್ಡಗಟ್ಟಿ ಚಾಕು ತೋರಿಸಿ ಬೆದರಿಸಿದ್ದರು. ಚಿನ್ನಾಭರಣ ಸುಲಿಗೆ ಮಾಡಿದ್ದರು. ಘಟನೆ ಬಗ್ಗೆ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ಬೆಂಗಳೂರಿಗೆ ವಾಪಸು ಬಂದಿದ್ದ ಆರೋಪಿಗಳು, ಅಪರಾಧ ಕೃತ್ಯ ಮುಂದುವರಿಸಿದ್ದರು. ಠಾಣೆ ವ್ಯಾಪ್ತಿಯಲ್ಲಿ ಬೈಕ್ ಕಳ್ಳತನವಾಗಿದ್ದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ಹೇಳಿದರು.

ನಗರಸಭಾ ಕಾರ್ಯಾಲಯ, ಶಿರಾ

ನ.ಸ.ಶಿ/ಟೆಂಡರ್/ಸಿ.ಆರ್/01/2021-22 ದಿನಾಂಕ: 08.04.2022

ತಿದ್ದುಪಡಿ ಟೆಂಡರ್ ಪ್ರಕಟಣೆ

ಇಂಡೆಂಟ್ ಸಂ. (1) DMA/2021-22/BD/WORK_INDENT129614 , (2) DMA/2021-22/BD/WORK_INDENT129615 (3) DMA/2021-22/BD/WORK_ INDENT129442 ಗಳ ಸ್ವೀಕರಿಸುವ ದಿನಾಂಕವನ್ನು ಕಾರಣಾಂತರಗಳಿಂದ 18.04.2022ರ ಸಂಜೆ 5.00ಗಂಟೆವರೆಗೆ ಮುಂದೂಡಲಾಗಿದೆ. ಹೆಚ್ಚಿನ ವಿವರಗಳಿಗೆ http://eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು ಮತ್ತು ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/- ಅಧ್ಯಕ್ಷರು, ನಗರ ಸಭೆ, ಶಿರಾ DIPR/TUM/25/MCA/2022-23 ಸಹಿ/-ಪೌರಾಯುಕ್ತರು ನಗರಸಭೆ, ಶಿರಾ.

(ಕರ್ನಾಟಕ ಸರ್ಕಾರ)
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಬಿ.ಎಂ. ರೋಡ್, ಮಂಡ್ಯ-571 401
(ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ)
ದೂ:08232-231003, ಫ್ಯಾಕ್ಸ್ ಸಂಖ್ಯೆ: 08232-231001
E-Mail Address: mimsmandyaoffice@gmail.com
Website: www.mimsmandya.org

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

No.MIMS/UGC-3/SCP & STP/01/2021-22
ದಿನಾಂಕ:08.04.2022

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ Laptop ಗಳನ್ನು ಸರಬರಾಜು ಮಾಡಲು ಉತ್ಪಾದಕರು/ವಿತರಕರು ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕ್ರಸಂ : 01. ಟೆಂಡರ್ ವಿವರ : Laptop. ಸರಬರಾಜು ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ) : 24.00 (ಲಕ್ಷಗಳು). ಇ.ಎಂ.ಡಿ ಮೊತ್ತ : 50,000/- ಇ-ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಡನೆ ಟೆಂಡರ್ ಅರ್ಜಿ ಮತ್ತಿತರ ದಾಖಲೆಗಳನ್ನು ವೀಕ್ಷಿಸುವ ದಿನಾಂಕ.11.04.2022 ರಿಂದ ಪ್ರಾರಂಭವಾಗುವುದು. ಭರ್ತಿಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ.20.04.2022 ಸಂಜೆ 05.30 ಗಂಟೆಗೆ. ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ www.eproc.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅಥವಾ ಸ್ಪಷ್ಟೀಕರಣಕ್ಕಾಗಿ ಕಛೇರಿ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಮುಖ್ಯ ಆಡಳಿತಾಧಿಕಾರಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.

ವಾಸಾಸಂಇ/ಸನಿ-ಮಂಡ್ಯ/ಎಂಸಿ&ಎ/015/2022-23

ಕರ್ನಾಟಕ ಸರ್ಕಾರ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಅಲ್ಪಸಂಖ್ಯಾತರ ನಿರ್ದೇಶನಾಲಯ
ಮೌಲಾನ ಅಬುಲ್ ಕಲಾಂ ಆಜಾದ್ ಭವನ, ನಂ.16ಸಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560 052 ಸಹಾಯವಾಣಿ: 8277799990
ವೆಬ್‌ಸೈಟ್: https://dom.karnataka.gov.in ಇ-ಮೇಲ್ : directorgokdom@gmail.com
ಸಂ. ಡಿಒಎಂ/ಎಜುಕೇಷನ್ ವಿಂಗ್/ಸಿಆರ್-03/2022-23 ದಿನಾಂಕ: 12.04.2022

ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ (ಎಂಡಿಆರ್‌ಎಸ್/ ಜಿಎಂಆರ್‌ಎಸ್/ಎಂಎಂಆರ್‌ಎಸ್) 6ನೇ ತರಗತಿಗೆ ಪ್ರವೇಶ ಪ್ರಕಟಣೆ

ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ (ಎಂಡಿಆರ್‌ಎಸ್/ಜಿಎಂಆರ್‌ಎಸ್/ ಎಂಎಂಆರ್‌ಎಸ್) 6ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಸ್ತುತ ಕರ್ನಾಟಕದಾದ್ಯಂತ ಇರುವ ಅಲ್ಪಸಂಖ್ಯಾತರ ನಿರ್ದೇಶನಾಲಯ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಂದ ನಿರ್ವಹಣೆ ಮಾಡುತ್ತಿರುವ ಅಲ್ಪಸಂಖ್ಯಾತರ ವಸತಿ ಶಾಲೆಗಳ ಅಡಿಯಲ್ಲಿ ಅಂದರೆ 100 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ 5 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು/ 8 ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆಗಳಿಗೆ(ನವೋದಯ) ಶೈಕ್ಷಣಿಕ ವರ್ಷ 2022-23ರ ಸಾಲಿನಲ್ಲಿ 6ನೇ ತರಗತಿಗೆ ಉಚಿತ ಪ್ರವೇಶ ಪ್ರಾರಂಭವಾಗಿದೆ. ಪ್ರವೇಶ ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

1	ಅರ್ಜಿ ಸಲ್ಲಿಕೆ ಪ್ರಾರಂಭದ ದಿನಾಂಕ	:	12.04.2022
2	ಅರ್ಜಿ ಸಲ್ಲಿಕೆ ಮುಕ್ತಾಯದ ದಿನಾಂಕ	:	22.04.2022
3	ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ	:	ಸಹಾಯವಾಣಿ: 8277799990 080-22535916

ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮತ್ತು ಪಾಲಕರುಗಳು ಸೇವಾ ಸಿಂಧು ಪೋರ್ಟಲ್ ಲಿಂಕ್ https://sevasindhuservices.karnataka.gov.in ಮೂಲಕ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಉಚಿತ ಸೇವೆ ಪಡೆಯಲು ಸಮೀಪದ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ ಅಥವಾ ಎಂಡಿಆರ್‌ಎಸ್/ಎಂಎಂಆರ್‌ಎಸ್/ಜಿಎಂಆರ್‌ಎಸ್ ಶಾಲೆಗಳು ಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಬಹುದು. ಸಂಕ್ಷಿಪ್ತ ಅಧಿಸೂಚನೆ ಮತ್ತು ವಿವರಗಳಿಗಾಗಿ ನಮ್ಮ ವೆಬ್‌ಸೈಟ್: https://dom.karnataka.gov.in ನೋಡಬಹುದು.

ಸಹಿ/- ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ). ದೂರವಾಣಿ ಸಂಖ್ಯೆ: 08488-224328,
ಇ-ಮೇಲ್:kbjnleerampur@gmail.com.
ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ-2/2022-23/65
ದಿನಾಂಕ:08.04.2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಈ ಕೆಳಗಾಣಿಸಿದ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ದ್ವಿ-ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ (http://eproc.karnataka.gov.in) ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.
ಕಾಮಗಾರಿಗಳ ಹೆಸರು CONSTRUCTION OF SHRI MAHASHIVASHARANA HARALAYYA SAMUDAYA BHAVAN AT PROPERTY NO-1535/1 IN WARD NO 3 OF SINDAGI TALUK
ಟೆಂಡರಿಗಿಟ್ಟ ಮೊತ್ತ :- ರೂ: 75.00 ಲಕ್ಷಗಳು. ಇ.ಎಂ.ಡಿ. ಮೊತ್ತ :- ರೂ: 1.5 ಲಕ್ಷಗಳು
ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಗಿನಂತಿವೆ.
1) ಇ-ಪ್ರೊಕ್ಯೂರ್‌ಮೆಂಟ್ (http://eproc.karnataka.gov.in) ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: 08-04-2022 ರಿಂದ 27-04-2022 ರ ಸಾಯಂಕಾಲ 5.00 ಗಂಟೆಯವರೆಗೆ ಸಲ್ಲಿಸುವುದು. 2) ಭರ್ತಿಗೊಳಿಸಿದ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 27-04-2022 ರ ಸಾಯಂಕಾಲ 5.00 ಘಂಟೆಯವರೆಗೆ ಸಲ್ಲಿಸುವದು. 3) ತಾಂತ್ರಿಕ ಬಿಡ್‌ನ್ನು(ಕವರ್-1)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ:ವಿಜಯಪೂರ ಕಛೇರಿಯಲ್ಲಿ ದಿನಾಂಕ: 29-04-2022 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 4) ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ (http://eproc.karnataka.gov.in) ವೆಬ್‌ಸೈಟ್ ನಿಂದ ಪಡೆಯಬಹುದು. 5) ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ವಾಸಾಸಂಇ/ವಿಜಯಪುರ/29/ಎಂಸಿಎ/2022-23 ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ,ಐಬಿಸಿ ನಿಮಪೋ ವಿಭಾಗ ರಾಂಪೂರ(ಪಅ)

ರಾಮನಗರದಲ್ಲಿ ಜನತಾ ಜಲಧಾರೆ ಸಮಾವೇಶ: ಇದೇ 16ರಂದು ಅಧಿಕೃತ ಚಾಲನೆ

ಗಂಗಾ ರಥ ಸಂಚಾರಕ್ಕೆ ಹಸಿರು ನಿಶಾನೆ

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯಕ್ಕೆ ಉತ್ತಮ ನೀರಾವರಿ ವ್ಯವಸ್ಥೆಯ ಸಂಕಲ್ಪದೊಂದಿಗೆ ಜೆಡಿಎಸ್ ಹಮ್ಮಿಕೊಂಡಿರುವ ಜನತಾ ಜಲಧಾರೆ ಕಾರ್ಯಕ್ರಮದಡಿ ಜಲ ಸಂಗ್ರಹಕ್ಕೆ ಹೊರಟ 15 ಗಂಗಾ ರಥಗಳಿಗೆ ನಗರದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮಂಗಳವಾರ ಹಸಿರು ನಿಶಾನೆ ತೋರಿದರು.

ಗ್ರಾಮದೇವತೆ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಸಂಕಲ್ಪ ಮಾಡಿದ ನಂತರ ವಾಹನಗಳನ್ನು ರಾಜ್ಯದ 15 ಸ್ಥಳಗಳಿಗೆ ಬೀಳ್ಕೊಡಲಾಯಿತು. ಇದೇ 16ರಂದು ರಾಜ್ಯದಲ್ಲಿ ಏಕಕಾಲಕ್ಕೆ ಜಲಧಾರೆ ಕಾರ್ಯಕ್ರಮವು ಆರಂಭ ಆಗಲಿದೆ.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಧ್ಯಾಹ್ನ ನಡೆದ ಬೃಹತ್ ಸಮಾವೇಶದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮಾತನಾಡಿ 'ನೀರಾವರಿ ವಿಚಾರದಲ್ಲಿ ಲೋಕಸಭೆಯಲ್ಲಿ ನನಗಾದ ಅವಮಾನ ಮರೆತಿಲ್ಲ. ಆದರೂ ನನ್ನ ಕೊನೆ ಉಸಿರು ಇರುವವರೆಗೂ ರಾಜ್ಯದ ನೀರು ಉಳಿಸಲು ಹೋರಾಟ ಮಾಡುತ್ತೇನೆ' ಎಂದರು.

ಅಲ್ಪಸಂಖ್ಯಾತರನ್ನು ಎಲ್ಲಿಗೆ ಕಳಿಸುತ್ತೀರಿ?: 'ಮತ ಬೇಟೆಗಾಗಿ ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲ ಚಟುವಟಿಕೆಗಳನ್ನು ನೋಡುತ್ತಿದ್ದೇನೆ. 50 ಕೋಟಿ ಮುಸ್ಲಿಂ, ಸಿಖ್, ಜೈನರು, ಕ್ರೈಸ್ತರನ್ನು ಎಲ್ಲಿಗೆ ಕಳುಹಿಸಲು ಸಾಧ್ಯ? ನಾವೆಲ್ಲರೂ ಒಟ್ಟಿಗೆ ಬದುಕಬೇಕು. ಈ ದೇಶ ಸುಭಿಕ್ಷವಾಗಿರಬೇಕಾದರೆ ಎಲ್ಲ ಜನಾಂಗದವರು ಒಟ್ಟಾಗಿ ಇರೋಣ' ಎಂದು ಹೇಳಿದರು.

'ಚುನಾವಣೆ ಕಾರಣಕ್ಕೆ ಈ ಜಲಧಾರೆ ಕಾರ್ಯಕ್ರಮ ಹಮ್ಮಿಕೊಂಡಿಲ್ಲ. ಹನಿ ನೀರಿಗಾಗಿ ಹೋರಾಟ ಮಾಡುತ್ತಿದ್ದೇವೆ. ನೀರಾವರಿ ವಿಚಾರಕ್ಕೆ ಯಾವ ಪಕ್ಷ ಹೋರಾಟ ಮಾಡಿ, ಆಹ್ವಾನಿಸಿದರೂ ನಾನು ಹೋಗುತ್ತೇನೆ' ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, ಧರ್ಮದ ಹೆಸರಿನಲ್ಲಿ ರಕ್ತದ ಕೋಡಿ ಹರಿಸುವ ಬದಲು ನೀರಾವರಿ ವಿಚಾರಗಳ ಬಗ್ಗೆ ಬಜರಂಗದಳ, ವಿಶ್ವ ಹಿಂದೂ ಪರಿಷತ್ ಹೋರಾಟ ನಡೆಸಲಿ ಎಂದು ಸವಾಲು ಹಾಕಿದರು.

ಮುಖಂಡರಾದ ಸಿ.ಎಂ. ಇಬ್ರಾಹಿಂ, ಬಂಡೆಪ್ಪ ಖಾಶೆಂಪೂರ, ಜೆಡಿಎಸ್‌ನ ಶಾಸಕರು ವೇದಿಕೆಯಲ್ಲಿದ್ದರು.



ರಾಮನಗರದಲ್ಲಿ ಮಂಗಳವಾರ ನಡೆದ ಜನತಾ ಜಲಧಾರೆ ಸಮಾವೇಶವನ್ನು ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಉದ್ಘಾಟಿಸಿದರು. ಎಚ್‌.ಡಿ. ಕುಮಾರಸ್ವಾಮಿ, ಸಿ.ಎಂ. ಇಬ್ರಾಹಿಂ, ಬಂಡೆಪ್ಪ ಖಾಶೆಂಪೂರ, ಶರವಣ, ಶಾಸಕರಾದ ಎ.ಮಂಜುನಾಥ, ಅನಿತಾ ಕುಮಾರಸ್ವಾಮಿ ಮತ್ತಿತರರು ಇದ್ದರು

'ಸಿ.ಎಂ. ಇಬ್ರಾಹಿಂಗೆ ಜೆಡಿಎಸ್ ಅಧ್ಯಕ್ಷ ಸ್ಥಾನ'

ರಾಮನಗರ: ಈಚೆಗಷ್ಟೇ ಜೆಡಿಎಸ್‌ಗೆ ಸೇರ್ಪಡೆ ಆಗಿರುವ ಸಿ.ಎಂ. ಇಬ್ರಾಹಿಂ ಅವರಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡುವುದಾಗಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಘೋಷಿಸಿದ್ದಾರೆ.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಅವರು, 'ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರೂ ಇದಕ್ಕೆ ಒಪ್ಪಿಗೆ ನೀಡಿದ್ದು, ಇದೇ 17ರಂದು ಪಕ್ಷದ ಕಚೇರಿಯಲ್ಲಿ ಅವರಿಗೆ ಹೊಸ ಜವಾಬ್ದಾರಿ ನೀಡಲಾಗುವುದು. ಹಾಲಿ ಅಧ್ಯಕ್ಷರಾಗಿರುವ ಎಚ್. ಕೆ. ಕುಮಾರಸ್ವಾಮಿ ಅವರನ್ನು ಸಂಸದೀಯ ಮಂಡಳಿ ಅಧ್ಯಕ್ಷರನ್ನಾಗಿ ನೇಮಿಸಲಾಗುವುದು. ಇಬ್ಬರೂ ಸಹೋದರರಂತೆ ಪಕ್ಷವನ್ನು ಮುನ್ನಡೆಸಿಕೊಂಡು ಹೋಗಬೇಕು' ಎಂದು ಗೌಡರು ಹೇಳಿದರು.

'ಜನತಾ ಜಲಧಾರೆ' ಅಧಿಕೃತ ಚುನಾವಣಾ ಪ್ರಚಾರ'

ಮೈಸೂರು: 'ಜನತಾ ಜಲಧಾರೆ' ಯಾತ್ರೆ ಮೂಲಕ ಅಧಿಕೃತ ಚುನಾವಣಾ ಪ್ರಚಾರ ಆರಂಭಿಸಿದ್ದೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಯಾತ್ರೆಯ ವಾಹನಕ್ಕೆ ಇಲ್ಲಿನ ಚಾಮುಂಡಿಬೆಟ್ಟದಲ್ಲಿ ಮಂಗಳವಾರ ವಿಶೇಷ ಪೂಜೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶೋಗಾಗಿ ನಡೆಸಿದ ಕಾಂಗ್ರೆಸ್‌ನ ಮೇಕೆದಾಟು ಪಾದಯಾತ್ರೆಗೆ ಇದು ಪರ್ಯಾಯವಲ್ಲ. ಅವರು ಅದನ್ನು ರಾಜಕೀಯ ಯಾತ್ರೆ ಎಂದು ಹೇಳಲಿಲ್ಲ ಅಷ್ಟೆ. ನಮ್ಮದು ಜನರ ಮುಂದೆ ಸಮಸ್ಯೆ ಬಿಚ್ಚಿಡುವ ಯಾತ್ರೆ' ಎಂದರು.

'ಕೇವಲ 30- 40 ಸ್ಥಾನಕ್ಕಾಗಿ ನಡೆಸುವ ಹೋರಾಟವಲ್ಲ. ಧರ್ಮಗಳ ನಡುವೆ ಬೆಂಕಿ ಇಟ್ಟು ಮತ ಕೇಳುತ್ತಿಲ್ಲ. ಈ ಬಾರಿ ಕನ್ನಡಿಗರ ಬಹುಮತದ ಸರ್ಕಾರ ಬೇಕು. ಯಾರೊಂದಿಗೂ ಹೊಂದಾಣಿಕೆ ಇಲ್ಲ. ಬಹುಮತ ಕೊಟ್ಟರೆ ರಾಜ್ಯದಲ್ಲಿ ಹಲವು ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಸಾಧ್ಯವಾಗದಿದ್ದರೆ ಪಕ್ಷವನ್ನು ವಿಸರ್ಜಿಸುವೆ' ಎಂದರು.

'ಚುನಾವಣೆಯಲ್ಲಿ ಹೊಸಬರಿಗೆ ಅವಕಾಶ ಕೊಡಲಾಗುವುದು. ಯಾರೇ ಬಂದರೂ ಸ್ವಾಗತ. ಅಧಿಕಾರಕ್ಕಾಗಿ ಬಂದವರಿಗೆ ಅವಕಾಶವಿಲ್ಲ. ಈ ಮಾತು ಜಿ.ಟಿ.ದೇವೇಗೌಡರಿಗೂ ಅನ್ವಯ' ಎಂದರು.

'ಹಾಸನ ಜಿಲ್ಲೆಯ ಯಾವ ಜಾತ್ರೆಯಲ್ಲೂ ಮುಸ್ಲಿಮ್ ವ್ಯಾಪಾರಿಗಳ ನಿರ್ಬಂಧಕ್ಕೆ ಅವಕಾಶ ಕೊಡುವುದಿಲ್ಲ. ಚನ್ನಕೇಶವ ಜಾತ್ರೆಯಲ್ಲಿ ಆಗಿರುವ ಸಮಸ್ಯೆಯನ್ನು ಬಗೆಹರಿಸುವಂತೆ ಎಚ್.ಡಿ.ರೇವಣ್ಣ ಅವರಿಗೆ ಹೇಳಿರುವೆ. ಎಲ್ಲಾ ಜಿಲ್ಲೆಗಳಲ್ಲೂ ನಿರ್ಬಂಧ ತೆರವಿಗೆ ಹೋರಾಡುವೆ' ಎಂದರು.

'ಕಲ್ಲಂಗಡಿ ಒಡೆದಾಗ ತೋರಿದ ಅನುಕಂಪ ತಲೆ ಒಡೆದಾಗಲೂ ತೋರಿ ಎಂಬ ಸಿ.ಟಿ.ರವಿ ಮಾತಿನ ಅರ್ಥ ಏನು? ರಾಜ್ಯದಲ್ಲಿ ತಲೆ ಒಡೆಯುತ್ತಾ ಇರುತ್ತೇವೆ ಅಂತಾನಾ? ನೀವು ತಲೆ ಒಡೆಯುತ್ತೀರಿ, ನಾವು ಸಾಂತ್ವನ ಹೇಳಬೇಕು ಅನ್ನೋದಾ' ಎಂದೂ ಪ್ರಶ್ನಿಸಿದರು.

'ರಾಯಚೂರಿನಲ್ಲಿ ತಲವಾರ್ ಹಂಚಿದ್ದು ಏಕೆ, ಅವರನ್ನು ಏಕಿನ್ನೂ ಬಂಧಿಸಿಲ್ಲ ಎಂಬ ಪ್ರಶ್ನೆಗಳಿಗೆ ಮೌನಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಉತ್ತರಿಸಬೇಕು' ಎಂದು ಹೇಳಿದರು.

ಮಯೂರ ಸುಧಾ ಓದಿರಿ

ಕೇರಳದಿಂದ ಡ್ರಗ್ಸ್ ತಂದು ಮಾರಾಟ

ಬೆಂಗಳೂರು: ಕೇರಳದಿಂದ ನಗರಕ್ಕೆ ಡ್ರಗ್ಸ್ ತಂದು ಮಾರುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಯಶವಂತಪುರ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ ₹ 5 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಒಂದು ಗ್ರಾಂ ಡ್ರಗ್ಸ್‌ಗೆ ₹ 5,000 ರಿಂದ ₹ 8,000 ನಿಗದಿ ಮಾಡಲಾಗಿತ್ತು. ಕೆಲ ಕಾಲೇಜು ವಿದ್ಯಾರ್ಥಿಗಳು, ಡ್ರಗ್ಸ್ ಖರೀದಿಸುತ್ತಿದ್ದರು. ಜಾಲದಲ್ಲಿ ಮತ್ತಷ್ಟು ಆರೋಪಿಗಳು ಭಾಗಿಯಾಗಿರುವ ಮಾಹಿತಿ ಇದೆ' ಎಂದೂ ತಿಳಿಸಿದರು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2 ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು, ದೂ: 080-222122856
ತಿದ್ದುಪಡಿ
(ಕಂಡಿಕೆ, 3.2(ಎ), (ಬಿ), (ಸಿ), (ಡಿ), (ಇ), (ಎಫ್) ಮತ್ತು 3.3 (ಎ) (ಬಿ) ಮತ್ತು 3.6 ಗಳಲ್ಲಿ ವರ್ಷವಾರು 2016-17 ರಿಂದ 2020-21ರ ಬದಲಾಗಿ 2017-18 ರಿಂದ 2021-22 ಎಂದು ಪ್ರಕಟಿಸಿರುವುದನ್ನು ಇ-ಪೋರ್ಟಲ್‌ನಲ್ಲಿ ಓದಿಕೊಳ್ಳತಕ್ಕದ್ದು).
ಸಹಿ/-
ಕಾರ್ಯಪಾಲಕ ಇಂಜಿನಿಯರ್
ನಂ. 2 ಕಟ್ಟಡಗಳ ವಿಭಾಗ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/147/ಅಕಾರ್/22-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಸಂಚಾರ ಶಾಖೆ, ಚಿತ್ರದುರ್ಗ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕರಾಸಾ/ಚಿವಿ/ಸಂಚಾರ/ವಾಣಿಜ್ಯ/93/2022-23 ದಿನಾಂಕ: 11-04-2022
ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 01-01-02/2022-23
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿತ್ರದುರ್ಗ ವಿಭಾಗ, ಮೊದಲನೇ ಮಹಡಿ, ಚಿತ್ರದುರ್ಗ ಬಸ್ ನಿಲ್ದಾಣ, ಪಿ.ಬಿ. ರೋಡ್, ಚಿತ್ರದುರ್ಗ ಇವರು ಚಿತ್ರದುರ್ಗ ವಿಭಾಗದ ವ್ಯಾಪ್ತಿಯಲ್ಲಿ ಬರುವ ಹಿರಿಯೂರು ತಾಲ್ಲೂಕು ಮೇಟಿಕುರ್ಕೆ (ಚಿತ್ರದುರ್ಗ - ಬೆಂಗಳೂರು ಎನ್.ಎಚ್-48) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನಿಗಮದ ಉಪಹಾರ ಗೃಹ, ಚಿತ್ರದುರ್ಗ, ಚಳ್ಳಕೆರೆ, ಹೊಳಲ್ಕೆರೆ ಮತ್ತು ಹಿರಿಯೂರು ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ / ಮುಂದೆ ಖಾಲಿಯಾಗುವ ಕಟ್ಟದ ವಾಣಿಜ್ಯ ಮಳಿಗೆಗೆ 05 ವರ್ಷಗಳವರೆಗೆ / ತೆರೆದ ಮಳಿಗೆಗೆ 03 ವರ್ಷಗಳವರೆಗೆ ಹಾಗೂ ಚಿತ್ರದುರ್ಗ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ, ಚಳ್ಳಕೆರೆ, ಹೊಳಲ್ಕೆರೆ, ಹಿರಿಯೂರು, ಹೊಸದುರ್ಗ, ಸಿರಿಗೆರೆ ಮತ್ತು ಭರಮಸಾಗರ ಬಸ್ ನಿಲ್ದಾಣಗಳಲ್ಲಿ ಹೊರ ಮತ್ತು ಒಳ ಆವರಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್ ಬೋರ್ಡ್ ಅಳವಡಿಸಲು ಪ್ಯಾಕೇಜ್‌ವಾರು ಮಾದರಿಯಲ್ಲಿ ಐದು (05) ವರ್ಷದ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಸಲುವಾಗಿ ದಿನಾಂಕ: 02-05-2022ರಂದು 15.00 ಗಂಟೆಯವರೆಗೆ ಅರ್ಜಿಯನ್ನು ಸಲ್ಲಿಸಲು / ಪಡೆಯಬಹುದಾಗಿದೆ ಮತ್ತು ದಿನಾಂಕ: 05-05-2022 ರಂದು ಸಮಯ 11.00 ಗಂಟೆಗೆ, ವಿಭಾಗೀಯ ಕಛೇರಿಯಲ್ಲಿ ಇ-ಟೆಂಡರ್ ತೆರೆಯಲಾಗುವುದು ಮತ್ತು ಅರ್ಜಿದಾರರು / ಪ್ರತಿನಿಧಿಗಳ ಎದುರು ಸಂಧಾನ ಸಭೆ ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಚಿತ್ರದುರ್ಗ-577501 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ - 9606908962 ಹಾಗೂ 9606908971
ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಚಿತ್ರದುರ್ಗ ವಿಭಾಗ, ಚಿತ್ರದುರ್ಗ.
ವಾಸಾಸಂಇ/ವಾ.ಪ್ರ/149/ಅಡ್ವರ್ಟೈಸ್/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ 6 ಅಡಿ ದೈಹಿಕ ಅಂತರ ಪಾಲಿಸಿ ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Mysore Silk
ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿಕಟ್ಟಡ, ಎಂ.ಜಿ.ರಸ್ತೆ, ಬೆಂಗಳೂರು-560001.
ದೂ:080-25586550/25586399, ಫ್ಯಾಕ್ಸ್:080-25587020, ಇ-ಮೇಲ್: info@ksicsilk.com
ಸಂಖೆ:ಕೆಎಸ್‌ಐಸಿ/ಪಿಡಿ/ಎಫ್‌ಡಿ-ಇಂಟರೆಸ್ಟ್/11/2021-22 ದಿನಾಂಕ:08.04.2022
ಅಲ್ಪಾವಧಿ ಇ-ಟೆಂಡರ್‌ಗಾಗಿ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕೆಎಸ್‌ಐಸಿ ಹೆಚ್ಚುವರಿ ನಿಧಿಯ ಮೊತ್ತವನ್ನು ಸ್ಥಿರ ಠೇವಣಿಯ ಹೂಡಿಕೆಗಾಗಿ ಸ್ಪರ್ಧಾತ್ಮಕ ಬಡ್ಡಿ ದರವನ್ನು ಉಲ್ಲೇಖಿಸಲು ಆಸಕ್ತಿಯುಳ್ಳ ಪ್ರತಿಷ್ಠಿತ ಸಾರ್ವಜನಿಕ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಖಾಸಗಿ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್ ಕಡತ, ವೇಳಾಪಟ್ಟಿ, ನಿಯಮಗಳು ಮತ್ತು ಷರತ್ತುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಪ್ರಿ-ಬಿಡ್ ಸಭೆಯ ದಿನಾಂಕ : 20.04.2022 ರಂದು ಬೆಳಗ್ಗೆ 11.00 ಗಂಟೆಗೆ ನಡೆಯಲಿದೆ. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ.ಎಂ.ಡಿ. ಮೊತ್ತದೊಂದಿಗೆ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.05.2022ರ ಅಪರಾಹ್ನ 3.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 06.05.2022 ರ ಸಂಜೆ 4.00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ಈ ಕೆಳಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ, ಪ್ರಧಾನ ವ್ಯವಸ್ಥಾಪಕರು (ಹ) ಇವರ ಮೊಬೈಲ್ ಸಂಖ್ಯೆ 7338462106ಕ್ಕೆ ಕರೆ ಮಾಡಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಸಹಾಯವಾಣಿ 080-46010000, 080-22631200 ಮೂಲಕ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.
ಸಹಿ/- ಪ್ರಧಾನ ವ್ಯವಸ್ಥಾಪಕರು(ಹ&ಲೆ)
ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/129/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ 6 ಅಡಿ ದೈಹಿಕ ಅಂತರ ಪಾಲಿಸಿ ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.
ಸಂ: ಕಾ.ಸಾ.ಚಿ/ಪಿ.ಬಿ-1/ಅಲ್ಪಾವಧಿ ಟೆಂಡರ್ ಪ್ರಕಟಣೆ-ಐಎಫ್‌ಟಿ-03/2022-23/ ದಿನಾಂಕ: 06.04.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್-2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-2 ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು: (1) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಚಿಕ್ಕೆರೆಯ ಅಭಿವೃದ್ಧಿ, ಹೂಳು ತೆಗೆಯುವುದು ಹಾಗೂ 01.00 ಕಿ.ಮೀ. ಉದ್ದದ ಪೋಷಕ. ಟೆಂಡರ್‌ಗಿಟ್ಟಿರುವ ಮೊತ್ತ: ರೂ. 43.43 ಲಕ್ಷ, ಮುಂಗಡ ಠೇವಣಿ ಮೊತ್ತ: ರೂ. 87,000/-. ಕಾಲಾವಧಿ (ಮಳೆಗಾಲ ಸೇರಿ): 03 ತಿಂಗಳು.
ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 08.04.2022ರಿಂದ ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಣೆಗಳು/ಮಾಹಿತಿ ಪಡೆಯುವ ಕೊನೆಯ ದಿನಾಂಕ: 13.04.2022 ಸಾಯಂಕಾಲ 05:30ರ ವರೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 16.04.2022ರ ಸಾಯಂಕಾಲ 04:00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 18.04.2022 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಿಂದ (08194-231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080-25501216/080-25501227ರಿಂದ ಪಡೆಯಬಹುದು.
RO No. 18: DIPR/CTA/MCA/2022-23 ಸಹಿ/- ಕಾರ್ಯಪಾಲಕ ಇಂಜಿನಿಯರ್

ಸಂಸದ ಪ್ರತಾಪಸಿಂಹ ಕಚೇರಿ ಎದುರು ರಾಗಿ, ಭತ್ತ ರಾಶಿ ಹಾಕಿ ಪ್ರತಿಭಟನೆ

ಎಂಎಸ್‌ಪಿ ಎಲ್ಲಿದೆ ತೋರಿಸಿ?

ಪ್ರಜಾವಾಣಿ ವಾರ್ತೆ

ಮೈಸೂರು: ಕೃಷಿ ಉತ್ಪನ್ನಗಳಿಗೆ ಶಾಸನಬದ್ಧ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಗೆ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಸಂಯುಕ್ತ ಹೋರಾಟ-ಕರ್ನಾಟಕದ ಪ್ರಮುಖರು ನಗರದಲ್ಲಿ ಸಂಸದ ಪ್ರತಾಪಸಿಂಹ ಅವರ ಕಚೇರಿ ಎದುರು ಮಂಗಳವಾರ ಭತ್ತ ಹಾಗೂ ರಾಗಿ ರಾಶಿ ಹಾಕಿ ಪ್ರತಿಭಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಯೋಗೇಂದ್ರ ಯಾದವ್ , 'ಕನಿಷ್ಠ ಬೆಂಬಲ ಬೆಲೆ ಎಲ್ಲಿದೆ ತೋರಿಸಿ' ಎಂದು ಆಗ್ರಹಿಸಿದರು.

'ಸೀತೆಯ ಪತಿ ರಾಮನ ಹೆಸರು ಹೇಳಿಕೊಂಡು ಪ್ರಧಾನಿ ಮೋದಿ ಅವರು ನೀತಾಳ ಪತಿ ಮುಖೇಶ್ ಅಂಬಾನಿ ಅವರಿಗೆ ಕೆಲಸ ಮಾಡಿಕೊಡುತ್ತಿದ್ದಾರೆ. ರೈತರ ಹೆಸರಿನಲ್ಲಿ ಬಿಜೆಪಿ ಸರ್ಕಾರ ದರೋಡೆ ನಡೆಸುತ್ತಿದೆ. ನ್ಯಾಯಯುತ ಎಂಎಸ್‌ಪಿ ಸಿಗುವವರೆಗೆ ದೇಶದಾದ್ಯಂತ ಹೋರಾಟ ಮುಂದುವರಿಯಲಿದೆ' ಎಂದರು.

'ಕನಿಷ್ಠ ಬೆಂಬಲ ಬೆಲೆಯ ಹಿಸಾಬ್ (ಲೆಕ್ಕ) ಕೇಳಿದರೆ ಹಿಜಾಬ್ ತೋರಿಸಿ ನಿಜವಾದ ವಿಚಾರಗಳನ್ನು ಕೇಂದ್ರ ಸರ್ಕಾರ ಮರೆಮಾಚುತ್ತಿದೆ. ರಾಮನವಮಿ ದಿನವೇ ರಾಮನ ಹೆಸರಿನಲ್ಲಿ ದೇಶದ ವಿವಿಧೆಡೆ ಮುಸ್ಲಿಮರು ಹಾಗೂ ಮಸೀದಿಗಳ ಮೇಲೆ ದಾಳಿ ನಡೆಸಲಾಗಿದೆ. ಮುಸ್ಲಿಂ ವ್ಯಾಪಾರಿಗಳಿಗೆ ತೊಂದರೆ ಕೊಡುತ್ತಿದ್ದಾರೆ. ಜೆಎನ್‌ಯುನಲ್ಲಿ ವಿದ್ಯಾರ್ಥಿಗಳು ಮಾಂಸಾಹಾರ ಸೇವಿಸಬಾರದು ಎನ್ನುತ್ತಿದ್ದಾರೆ. ರೈತರ, ಜನಸಾಮಾನ್ಯರ ಸಮಸ್ಯೆಗಳನ್ನು ಮುಚ್ಚಿಹಾಕಲು ಪ್ರಯತ್ನ ನಡೆಸಿದ್ದಾರೆ' ಎಂದು ಆರೋಪಿಸಿದರು.

'ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸಿ, ಎಲ್ಲಾ ಬೆಳೆಗಳಿಗೆ ವಿಸ್ತರಿಸಬೇಕು. ಸ್ವಾಮಿನಾಥನ್ ಆಯೋಗದ ಶಿಫಾರಸು ಜಾರಿ ಮಾಡಿ. ಕೃಷಿ ಪರಿಕರಗಳಿಗೂ ಗರಿಷ್ಠ ಮಾರಾಟ ದರ (ಎಂಆರ್‌ಪಿ) ನಿಗದಿಪಡಿಸಬೇಕು' ಎಂದು ಆಗ್ರಹಿಸಿದರು.

ಸಂಸದ ಪ್ರತಾಪಸಿಂಹ ಅವರು ಸ್ಥಳಕ್ಕೆ ಬಂದು ಮನವಿ ಆಲಿಸಿದರು.

ಮೈಸೂರಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸ್ಥಳಕ್ಕೆ ಬಂದ ಸಂಸದ ಪ್ರತಾಪಸಿಂಹ ಅವರಿಗೆ ಎಂಎಸ್‌ಪಿ ಕುರಿತು ದನಿ ಎತ್ತುವಂತೆ ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಯೋಗೇಂದ್ರ ಯಾದವ್ ಆಗ್ರಹಿಸಿದರು. ದೇವನೂರ ಮಹಾದೇವ, ಎಸ್‌.ಆರ್‌.ಹಿರೇಮಠ, ಬಡಗಲಪುರ ನಾಗೇಂದ್ರ, ಬೈಯಾರೆಡ್ಡಿ, ಚಾಮರಸ ಮಾಲಿಪಾಟೀಲ, ಗುರುಪ್ರಸಾದ್ ಕೆರಗೋಡು ಇದ್ದಾರೆ

> **ರಾಗಿ-ಭತ್ತ ಖರೀದಿಗೆ ₹ 1,341 ಕೋಟಿ ನೀಡಿದೆ. ಪಂಜಾಬ್, ಹರಿಯಾಣದಂತೆ ರೈತರ ಉತ್ಪನ್ನಗಳನ್ನು ಸಂಪೂರ್ಣವಾಗಿ ಎಲ್ಲ ರಾಜ್ಯಗಳೂ ಖರೀದಿಸುವಂತಾಗಬೇಕು**
> **ಪ್ರತಾಪಸಿಂಹ,** ಸಂಸದ

> **ರೈತರು ಹಾಗೂ ಕಾರ್ಮಿಕರ ಒಗ್ಗಟ್ಟನ್ನು ಒಡೆಯಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಹಿಂದೂ ಹಾಗೂ ಮುಸ್ಲಿಮರ ನಡುವೆ ಕಂದಕ ನಿರ್ಮಿಸುತ್ತಿದೆ**
> **ಯೋಗೇಂದ್ರ ಯಾದವ್,** ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ

ಬಿಜೆಪಿಗೂ ಶ್ರೀರಾಮಸೇನೆಗೂ ಸಂಬಂಧ ಇಲ್ಲ: ನಳಿನ್ ಕುಮಾರ್ ಕಟೀಲ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪಕ್ಷ ಯಾವುದೇ ಸಮುದಾಯವನ್ನು ಗುರಿಯಾಗಿಸಿಕೊಂಡಿಲ್ಲ
- ಪಕ್ಷಕ್ಕೆ ಹಿಂದೂ ಮತಬ್ಯಾಂಕಿನ ಅಗತ್ಯವಿಲ್ಲ

ಮೈಸೂರು: 'ಬಿಜೆಪಿಗೂ ಶ್ರೀರಾಮಸೇನೆಗೂ ಯಾವುದೇ ಸಂಬಂಧವಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದರು.

'ಮುಸ್ಲಿಂ ವ್ಯಾಪಾರಿಯ ಕಲ್ಲಂಗಡಿ ಹಣ್ಣು ಒಡೆದಿರುವುದಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ. ಪಕ್ಷ ಯಾವುದೇ ಸಮುದಾಯವನ್ನು ಗುರಿಯಾಗಿಸಿಕೊಂಡಿಲ್ಲ. ಸಂಘ ಪರಿವಾರದೊಂದಿಗೆ ಸಂಬಂಧವಿದೆ. ಅಶಾಂತಿ ಎಬ್ಬಿಸುತ್ತಿರುವ ಸಂಘಟನೆಗಳೊಂದಿಗೆ ಸಂಬಂಧವಿಲ್ಲ' ಎಂದು ಅವರು ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಪಾದಿಸಿದರು.

'ವಿಧಾನಸಭಾ ಚುನಾವಣೆಯಲ್ಲಿ ಪಕ್ಷ 150 ಸ್ಥಾನ ಗಳಿಸಲಿದೆ. ಯಾರೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಮತಬ್ಯಾಂಕ್‌ಗಾಗಿ ಕಾಂಗ್ರೆಸ್ ಎಲ್ಲವನ್ನೂ ರಾಜಕೀಯಕ್ಕೆ ಬಳಸಿಕೊಳ್ಳುತ್ತದೆ. ಆದರೆ ಬಿಜೆಪಿಗೆ ಹಿಂದೂ ಮತಬ್ಯಾಂಕಿನ ಅಗತ್ಯವಿಲ್ಲ. ಕಾಂಗ್ರೆಸ್‌ನ ಇಂದಿನ ಸ್ಥಿತಿ ನೋಡಿದರೆ ಕಣ್ಣೀರು ಬರುತ್ತಿದೆ. ವಿಧಾನಸಭೆಯಲ್ಲಿ ಚರ್ಚೆ ಮಾಡಲೂ ಹೆದರುವಷ್ಟರ ಮಟ್ಟಿಗೆ ಅದು ದುರ್ಬಲಗೊಂಡಿದೆ' ಎಂದು ಲೇವಡಿ ಮಾಡಿದರು.

'ಪಕ್ಷದ ವಿಭಾಗಮಟ್ಟದ ಸಭೆಯ ಜೊತೆಗೇ, ಏ.16 ಮತ್ತು 17ರಂದು ರಾಜ್ಯ ಕಾರ್ಯಕಾರಿಣಿಯೂ ನಡೆಯಲಿದೆ. ಮತದಾರರ ಪಟ್ಟಿಯ ಪ್ರತಿ ಪುಟಕ್ಕೂ 6 ಜನರ ಸಮಿತಿ ರಚಿಸಿ, ಮತದಾರರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರಲು ಸೂಚಿಸಲಾಗಿದೆ' ಎಂದರು.

'ಹಿಜಾಬ್ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದ ವಿರುದ್ಧ ದನಿ ಎತ್ತಿದವರನ್ನು ಬೆಂಬಲಿಸಿ, ಕೋರ್ಟ್ ಆದೇಶದ ವಿರುದ್ಧ ನಿಂತ ಮೊದಲ ವಿರೋಧ ಪಕ್ಷದ ನಾಯಕ ಎಂಬ ಹೆಸರಿಗೆ ಸಿದ್ದರಾಮಯ್ಯ ಪಾತ್ರರಾಗಿದ್ದಾರೆ' ಎಂದು ಟೀಕಿಸಿದರು.

ಮೀಸಲಾತಿ ಕೊಟ್ಟರೆ ಸಿಎಂಗೆ ಕಲ್ಲುಸಕ್ಕರೆ ತುಲಾಭಾರ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಈ ಹಿಂದೆ ಭರವಸೆ ಕೊಟ್ಟಂತೆ ಏಪ್ರಿಲ್ 14ರಂದು 2ಎ ಮೀಸಲಾತಿ ಘೋಷಿಸಿದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಲ್ಲುಸಕ್ಕರೆ ತುಲಾಭಾರ ಮಾಡಲಾಗುವುದು. ಇಲ್ಲದಿದ್ದರೆ ಮತ್ತೆ ಹೋರಾಟ ಕೈಗೆತ್ತಿಕೊಳ್ಳಲಾಗುವುದು' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '12ನೇ ಶತಮಾನದಲ್ಲಿ ಕಾಯಕ ಸಮಾಜಗಳು ಸಾಮಾಜಿಕ ನ್ಯಾಯಕ್ಕಾಗಿ ಬಸವಣ್ಣನವರನ್ನು ನಂಬಿದಂತೆ ಮೀಸಲಾತಿ ವಿಚಾರದಲ್ಲಿ ಪಂಚಮಸಾಲಿ ಸಮುದಾಯ ಇಂದು ಬಸವರಾಜ ಬೊಮ್ಮಾಯಿ ಅವರ ಮೇಲೆ ನಿರೀಕ್ಷೆ ಇಟ್ಟಿದೆ' ಎಂದರು.

'ಗಡುವಿನೊಳಗೆ ಮೀಸಲಾತಿ ಘೋಷಣೆ ಮಾಡದಿದ್ದಲ್ಲಿ ಏಪ್ರಿಲ್ 15ರಂದು ಕೂಡಲಸಂಗಮದಲ್ಲಿ ರಾಜ್ಯಮಟ್ಟದ ಪದಾಧಿಕಾರಿಗಳ ಸಭೆ ನಡೆಸಿ ಮುಂದಿನ ಹೋರಾಟದ ರೂಪುರೇಷೆ ನಿರ್ಧರಿಸಲಾಗುವುದು' ಎಂದು ಹೇಳಿದರು.

'ಮೀಸಲಾತಿ ನೀಡಿಕೆಗೆ ಸಂಬಂಧಿಸಿದಂತೆ ಸರ್ಕಾರ ಹಿಂದುಳಿದ ವರ್ಗದ ಆಯೋಗದ ವರದಿ ಕೇಳಿದೆ. ಆದರೆ ಆಯೋಗ ಮಾತ್ರ ಇನ್ನೂ ಜಿಲ್ಲೆಗಳಲ್ಲಿ ಪ್ರವಾಸ ಕಾರ್ಯ ಪೂರ್ಣಗೊಳಿಸದೇ ವಿಳಂಬ ಧೋರಣೆ ತಾಳಿದೆ' ಎಂದು ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ನಕಲಿ ಅಭ್ಯರ್ಥಿ ಹುಡುಕಿ ಕರೆತಂದ ಸಿಬ್ಬಂದಿ

ತಿಪಟೂರು: ನಗರದ ಠಾಗೋರ್ ವಿದ್ಯಾಸಂಸ್ಥೆ ಪರೀಕ್ಷಾ ಕೇಂದ್ರದಲ್ಲಿ ಸೋಮವಾರ ಎಸ್ಎಸ್ಎಲ್‌ಸಿ ವಿಜ್ಞಾನ ಪರೀಕ್ಷೆ ಬರೆಯುತ್ತಿದ್ದ ನಕಲಿ ಅಭ್ಯರ್ಥಿಯನ್ನು ಬಿಟ್ಟು ಕಳುಹಿಸಿದ್ದ ಶಿಕ್ಷಣ ಇಲಾಖೆ ಮತ್ತು ಪರೀಕ್ಷಾ ಕೇಂದ್ರದ ಸಿಬ್ಬಂದಿ ತಡರಾತ್ರಿ ಆರೋಪಿಗಳನ್ನು ಖುದ್ದು ಪತ್ತೆ ಹಚ್ಚಿ ಪೊಲೀಸ್ ಠಾಣೆಗೆ ಕರೆತಂದು ಒಪ್ಪಿಸಿದ್ದಾರೆ.

ಮಂಜುನಾಥ್ ಎಂಬ ಅಭ್ಯರ್ಥಿ ಬದಲು ಮುರಳೀಧರ ಎಂಬಾತ ಪರೀಕ್ಷೆ ಬರೆಯುತ್ತಿದ್ದ. ಈ ವಿಚಾರ ಗಮನಕ್ಕೆ ಬರುತ್ತಿದ್ದಂತೆಯೇ ಪರೀಕ್ಷಾ ಕೇಂದ್ರದ ಅಧಿಕಾರಿ ಮತ್ತು ಸಿಬ್ಬಂದಿ ಉತ್ತರ ಪತ್ರಿಕೆ ಪಡೆದು ಆತನನ್ನು ಪರೀಕ್ಷಾ ಕೇಂದ್ರದಿಂದ ಹೊರ ಹಾಕಿದ್ದರು. ಆದರೆ, ಆತನ ವಿರುದ್ಧ ದೂರು ದಾಖಲಿಸಿರಲಿಲ್ಲ.

ಸೋಮವಾರ ತಡರಾತ್ರಿ ಇಬ್ಬರು ಆರೋಪಿಗಳನ್ನು ಖುದ್ದಾಗಿ ಪತ್ತೆಹಚ್ಚಿ ನಗರ ಠಾಣೆಗೆ ಕರೆತಂದ ಶಿಕ್ಷಣಇಲಾಖೆ ಅಧಿಕಾರಿಗಳು ಪೊಲೀಸರಿಗೆ ಒಪ್ಪಿಸಿದ್ದಾರೆ. ಇಬ್ಬರ ವಿರುದ್ಧ ದೂರು ದಾಖಲಿಸಿದ್ದು, ಎಫ್‌ಐಆರ್ ದಾಖಲಾಗಿದೆ.

ದತ್ತಿ ಪ್ರಶಸ್ತಿಗೆ ನಿರ್ಮಲಾ ಆಯ್ಕೆ

ನಿರ್ಮಲಾ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಕವಯತ್ರಿ ನಿರ್ಮಲಾ ಸಿ. ಎಲಿಗಾರ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣ: ಕೊಲೆ ಪ್ರಕರಣ ದಾಖಲಿಸಿ, ಬಂಧಿಸಲು ಕಾಂಗ್ರೆಸ್ ಒತ್ತಾಯ

ಸಚಿವ ಸ್ಥಾನದಿಂದ ಈಶ್ವರಪ್ಪ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಸಾವಿಗೆ ಸಚಿವ ಈಶ್ವರಪ್ಪ ಕಾರಣ ಎಂದು ನೇರವಾಗಿ ಆರೋಪಿಸಿ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗಾಗಿ, ಈಶ್ವರಪ್ಪ ಅವರ ವಿರುದ್ಧ ಕೊಲೆ ಪ್ರಕರಣ ದಾಖಲಿಸಿ, ತಕ್ಷಣ ಬಂಧಿಸಬೇಕು. ಸಚಿವ ಸಂಪುಟದಿಂದ ವಜಾಗೊಳಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೊಲೆ ಆರೋಪ ಎದುರಿಸುತ್ತಿರುವ ಈಶ್ವರಪ್ಪ ಸಚಿವ ಸಂಪುಟದಲ್ಲಿ ಮುಂದುವರಿಯಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವಕಾಶ ನೀಡಬಾರದು' ಎಂದರು.

'ಆದರೆ, ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರ, ಕೊಲೆ ಪ್ರಕರಣ ದಾಖಲಿಸಿಲ್ಲ. ಈ ಬಗ್ಗೆ ನಾವು ಧ್ವನಿ ಎತ್ತುತ್ತೇವೆ. ಈಶ್ವರಪ್ಪ ಹೇಳಿಕೆಗೆ ನಾವು ಮಹತ್ವ ನೀಡುವುದಿಲ್ಲ. ಅವರೊಬ್ಬ ಕೊಲೆ ಆರೋಪ ಹೊತ್ತಿರುವ ವ್ಯಕ್ತಿ. ಅವರು ಎಷ್ಟು ದೊಡ್ಡ ಭ್ರಷ್ಟ ಎಂದು ಇಡೀ ರಾಜ್ಯಕ್ಕೆ ಗೊತ್ತಿದೆ' ಎಂದರು.

'ಈ ಹಿಂದೆ ನಮ್ಮ ಸರ್ಕಾರ ಇದ್ದಾಗ ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಾಗ ಗೃಹ ಸಚಿವರಾಗಿದ್ದ ಕೆ.ಜೆ. ಜಾರ್ಜ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಪಾಟೀಲ ಆತ್ಮಹತ್ಯೆಯು ಭ್ರಷ್ಟಾಚಾರ ಪ್ರಕರಣ. ಈಶ್ವರಪ್ಪ ಅವರಿಗೆ ಸಂತೋಷ್ ಪಾಟೀಲ ಈಗಾಗಲೇ ಕಮಿಷನ್ ನೀಡಿದ್ದಾರೆ. ಬಾಕಿ ಬಿಲ್ ಬಿಡುಗಡೆ ಮಾಡಲು ಸಚಿವರು ಹೆಚ್ಚಿನ ಕಮಿಷನ್‌ಗೆ ಬೇಡಿಕೆ ಇಟ್ಟಿದ್ದಾರೆ. ಆ ಹಣ ಹೊಂದಿಸಲು ಸಾಧ್ಯವಾಗದ ಕಾರಣಕ್ಕೆ ಮನನೊಂದು ಆತ ಆತ್ಮಹತ್ಯೆಗೆ ಶರಣಾಗಿದ್ದಾನೆ' ಎಂದರು. 'ಆತ್ಮಹತ್ಯೆಗೆ ಶರಣಾಗುವ ಮುನ್ನ ಆತ ಈಶ್ವರಪ್ಪ ಅವರೇ ನನ್ನ ಸಾವಿಗೆ ಕಾರಣ ಎಂದು ಆರೋಪ ಮಾಡಿರುವುದರಿಂದ ಇದಕ್ಕಿಂತ ಬೇರೆ ಸಾಕ್ಷ್ಯ ಬೇಕೆ' ಎಂದೂ ಸಿದ್ದರಾಮಯ್ಯ ಪ್ರಶ್ನಿಸಿದರು.

ಬಿಜೆಪಿ ಕಾರ್ಯಕರ್ತ ಸಂತೋಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಈಶ್ವರಪ್ಪ ಅವರನ್ನು ಬಂಧಿಸುವಂತೆ ಆಗ್ರಹಿಸಿ ಮಂಗಳೂರಿನಲ್ಲಿ ಮಂಗಳವಾರ ಸಿ.ಎಂ ಸಭೆ ನಡೆಸುತ್ತಿದ್ದ ಹೋಟೆಲ್‌ಗೆ ಮುತ್ತಿಗೆ ಹಾಕಲು ಯತ್ನಿಸಿದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು —ಪ್ರಜಾವಾಣಿ ಚಿತ್ರ

'ಸ್ವಂತ ಕಾರ್ಯಕರ್ತನನ್ನೇ ಬಿಡದೆ ಬಿಜೆಪಿಯಿಂದ ಭ್ರಷ್ಟಾಚಾರ'

ಬೆಂಗಳೂರು: 'ಕರ್ನಾಟಕದ ಬಿಜೆಪಿ ಸರ್ಕಾರ, ತನ್ನ ಕಾರ್ಯಕರ್ತನನ್ನು ಬಿಡದಿರುವ ಮಟ್ಟಿಗೆ ಭ್ರಷ್ಟಾಚಾರ ಮಾಡುತ್ತಿದೆ. ಸಂತೋಷ್ ಪಾಟೀಲ ಮಾಡಿರುವ ಆರೋಪ ಇದಕ್ಕೆ ಸಾಕ್ಷಿ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಹೇಳಿದರು.

'ಶೇ 40ರಷ್ಟು ಕಮಿಷನ್ ಆರೋಪ ಸಚಿವ ಈಶ್ವರಪ್ಪ ವಿರುದ್ಧ ಮಾತ್ರ ಕೇಳಿಬಂದಿಲ್ಲ. ಇಡೀ ರಾಜ್ಯ ಸರ್ಕಾರದ ವಿರುದ್ಧವೇ ಕೇಳಿ ಬಂದಿದೆ. ಬಸವರಾಜ ಬೊಮ್ಮಾಯಿ ಸರ್ಕಾರ ಅಡಿಯಿಂದ ಮುಡಿಯವರೆಗೂ ಭ್ರಷ್ಟಾಚಾರದಲ್ಲಿ ಮುಳುಗಿದೆ' ಎಂದು ಆರೋಪಿಸಿದರು.

'ಈ ಭ್ರಷ್ಟ ಸರ್ಕಾರ ತನ್ನ ಕಾರ್ಯಕರ್ತರನ್ನೇ ಬಿಟ್ಟಿಲ್ಲ ಎಂದಾದರೆ ಜನಸಾಮಾನ್ಯರನ್ನು ಯಾವ ಮಟ್ಟಿಗೆ ಲೂಟಿ ಮಾಡುತ್ತಿರಬಹುದು. ಸರ್ಕಾರ ವಿರುದ್ಧ ಶೇ 40ರಷ್ಟು ಕಮಿಷನ್ ಆರೋಪ ಕೇಳಿಬಂದಾಗ ಬೊಮ್ಮಾಯಿ ಮೌನಕ್ಕೆ ಶರಣಾದರು. ಕ್ರಮ ಕೈಗೊಳ್ಳಲು ಅಮಿತ್ ಶಾ ನಿರಾಕರಿಸಿದರು. ಪ್ರಧಾನಿಯಂತೂ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಅದರ ಪರಿಣಾಮ ಅಂತಿಮವಾಗಿ ಬಿಜೆಪಿ ಕಾರ್ಯಕರ್ತ ಆತ್ಮಹತ್ಯೆಗೆ ಶರಣಾಗಿದ್ದು, ಇದೊಂದು ಭ್ರಷ್ಟಾಚಾರ, ಕೊಲೆ ಪ್ರಕರಣ' ಎಂದರು.

ಸಚಿವ ಕೆ.ಎಸ್. ಈಶ್ವರಪ್ಪ ಅವರೊಂದಿಗೆ ಸಂತೋಷ್ (ಎಡತುದಿ)

ಮುಖ್ಯಮಂತ್ರಿ ಯಾರನ್ನೂ ರಕ್ಷಿಸಬಾರದು: ಡಿಕೆಶಿ

ಬೆಂಗಳೂರು: 'ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಮುಖ್ಯಮಂತ್ರಿ ಯಾರ ರಕ್ಷಣೆಯನ್ನೂ ಮಾಡಬಾರದು. ಕೇವಲ ಮೌಖಿಕವಾಗಿ ತನಿಖೆ ಮಾಡುತ್ತೇವೆ, ಸತ್ಯಾಂಶ ತಿಳಿಯುತ್ತೇವೆ ಎಂದು ಕಾಲಹರಣ ಮಾಡಬಾರದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಇದು ಕೇವಲ ಆತ್ಮಹತ್ಯೆಯಲ್ಲ. ಕೊಲೆ ಪ್ರಕರಣ. ತನ್ನ ಸಾವಿಗೆ ಕಾರಣ ಯಾರು ಎಂಬುದನ್ನು ಸಂತೋಷ್ ಪಾಟೀಲ ಮರಣಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಹೀಗಾಗಿ, ರಾಜ್ಯದಲ್ಲಿ ಕಾನೂನು ಯಾವ ರೀತಿ ಜಾರಿಗೆ ತರಲಾಗುತ್ತದೆ ಎಂಬುದಷ್ಟೇ ಈಗ ಉಳಿದಿರುವ ವಿಚಾರ' ಎಂದರು.

'ಈ ಹಿಂದೆ ಕೆಲವು ಸಚಿವರ ವಿರುದ್ಧದ ಪ್ರಕರಣದ ತನಿಖೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿ 'ಬಿ' ರಿಪೋರ್ಟ್ ಹಾಕಿ ರಕ್ಷಣೆ ಮಾಡಿದೆ. ಈ ಪ್ರಕರಣದಲ್ಲಿ ಆ ರೀತಿ ಮಾಡಬಾರದು. ಇಂಥ ಪ್ರಕರಣಗಳಲ್ಲಿ ಹಿಂದೆ ಅನೇಕ ಸಚಿವರುಗಳ ರಾಜೀನಾಮೆ ಪಡೆಯಲಾಗಿದೆ. ಆರೋಪ ಹೊತ್ತಿರುವ ಸಚಿವನ ವಿರುದ್ದ ಪ್ರಕರಣ ದಾಖಲಿಸಿ, ಸ್ಥಾನದಿಂದ ವಜಾಗೊಳಿಸಬೇಕು' ಎಂದು ಅವರು ಆಗ್ರಹಿಸಿದರು.

ತನಿಖೆಯಾಗಲಿ

ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದ ಕುರಿತು ಸಮಿತಿ ರಚಿಸಿ ತನಿಖೆಗೊಳಪಡಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೋರಲಾಗಿದೆ. ಕಾಂಗ್ರೆಸ್‌ನವರು ಕೇಳಿದರೆಂದು ರಾಜೀನಾಮೆ ಕೊಟ್ಟಿದ್ದರೆ ಇಷ್ಟೊತ್ತಿಗೆ ಪ್ರತಿದಿನ ಒಬ್ಬೊಬ್ಬರು ಕೊಡಬೇಕಾಗುತ್ತಿತ್ತು

ನಳೀನ್‌ಕುಮಾರ್ ಕಟೀಲು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಮಾಹಿತಿ ಇಲ್ಲ

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಹೀಗಾಗಿ ಪ್ರತಿಕ್ರಿಯೆ ಕೊಡುವುದಿಲ್ಲ.

ಬಿ.ಎಸ್. ಯಡಿಯೂರಪ್ಪ, ಶಾಸಕ

ತನಿಖೆ ಆಗಿ ಸತ್ಯ ಹೊರಬರಲಿ

ಒಬ್ಬರ ಸಾವು ಒಳ್ಳೆಯ ಸುದ್ದಿ ಅಲ್ಲ. ಸಾವಿನ ಕುರಿತು ಸಂಪೂರ್ಣ ತನಿಖೆ ನಡೆದು ಸತ್ಯಾಸತ್ಯತೆ ಹೊರಬರಬೇಕು. ಯಾರೊಬ್ಬರ ಆತ್ಮಹತ್ಯೆಯನ್ನೂ ಹಗುರವಾಗಿ ತೆಗೆದುಕೊಳ್ಳಬಾರದು.

ಪಿ.ರಾಜೀವ್, ಶಾಸಕ

'ರಾಜ್ಯದಲ್ಲಿ ಏನಾಗುತ್ತಿದೆ ಎಂಬುದನ್ನು ಮೋದಿ ನೋಡಲಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯ ಬಿಜೆಪಿ ಸರ್ಕಾರದಲ್ಲಿ ಕಾಮಗಾರಿಗಳಲ್ಲಿ ತಮ್ಮಿಂದ ಪರ್ಸೆಂಟೇಜ್ ಪಡೆಯಲಾಗುತ್ತಿದೆ ಎಂದು ಗುತ್ತಿಗೆದಾರರು ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಈಗಲಾದರೂ ರಾಜ್ಯದಲ್ಲಿ ಏನಾಗುತ್ತಿದೆ ಎಂಬುದನ್ನು ಪ್ರಧಾನಿ ನೋಡಲಿ' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಪರ್ಸೆಂಟೇಜ್ ರಾಜಕಾರಣ ನಡೆಯುತ್ತಿದ್ದರೂ ಆ ಬಗ್ಗೆ ಗಮನ ಹರಿಸುವ ಬದಲು ಮೋದಿ ಅವರು ತಾವು ಮಾಡಿದ್ದೇ ಸರಿ ಅನ್ನುವ ಭ್ರಮೆಯಲ್ಲಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಗುತ್ತಿಗೆದಾರರು ಪರ್ಸೆಂಟೇಜ್‌ಗೆ ನಲುಗಿ ಹೋಗಿದ್ದಾರೆ. ಡಬಲ್ ಎಂಜಿನ್ ಸರ್ಕಾರವೆಂದು ಹೇಳಿಕೊಂಡು ಜನರನ್ನು ಯಾಮಾರಿಸುತ್ತಿರುವ ಬಿಜೆಪಿ ರಾಜ್ಯವನ್ನು ಹಾಳು ಮಾಡುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೆಹಲಿಗೆ ಬಂದಾಗ, ಹೀಗಾದರೆ ಸರ್ಕಾರಕ್ಕೆ ಮತ್ತು ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದೆ. ಇದಕ್ಕೆ ಕಡಿವಾಣ ಹಾಕಿ ಎಂದು ಹೇಳಿದ್ದೆ' ಎಂದ ಅವರು, ಸಂತೋಷ ಪಾಟೀಲ ಆತ್ಮಹತ್ಯೆ ಪ್ರಕರಣ ಕುರಿತಂತೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ತಮ್ಮನ್ನು ಜಾರಿ ನಿರ್ದೇಶನಾಲಯ (ಇ.ಡಿ.) ವಿಚಾರಣೆಗೆ ಒಳಪಡಿಸಿದ ಕುರಿತು ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಖರ್ಗೆ, 'ಇದು ನಮ್ಮ ಪಕ್ಷದ ಆಂತರಿಕ ವಿಚಾರ. ಹೀಗಾಗಿ, ಇಲ್ಲಿ ಮಾತನಾಡಲಾರೆ' ಎಂದರು.

ಡಬಲ್ ಎಂಜಿನ್ ಸರ್ಕಾರ ಇರುವುದರಿಂದ ರೈಲ್ವೆ ಹಳಿ ಮೇಲೆ ಕುಳಿತಿರುವ ಜನರು ಸಾಯುತ್ತಿದ್ದಾರೆ. ರೈಲು ಹಿಂದೆ ಹೋದರೂ, ಮುಂದೆ ಹೋದರೂ ಜನರ ಮೇಲೆ ಹಾಯ್ದುಕೊಂಡು ಹೋಗುತ್ತಿದೆ

ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆ ವಿರೋಧ ಪಕ್ಷದ ನಾಯಕ

ಸಂಘಟನೆಯಲ್ಲೂ ಭಾಗಿ, ಹಲವು ವರ್ಷಗಳಿಂದ ಗುತ್ತಿಗೆದಾರರಾಗಿದ್ದರು

ಪಕ್ಷದಿಂದ ಸ್ಪಂದನೆ ಸಿಗದಿದ್ದರಿಂದ ನೊಂದಿದ್ದರು...

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆ.ಎಸ್.ಈಶ್ವರಪ್ಪ ವಿರುದ್ಧ ಶೇ 40ರಷ್ಟು ಕಮಿಷನ್ ಆರೋಪ ಮಾಡಿದ್ದ ನಂತರ ಇಲ್ಲಿನ ಗುತ್ತಿಗೆದಾರ ಸಂತೋಷ್ ಪಾಟೀಲ ಹೆಚ್ಚು ಚರ್ಚೆಗೆ ಒಳಗಾಗಿದ್ದರು.

ಬಿಜೆಪಿ ಕಾರ್ಯಕರ್ತರಾಗಿದ್ದ (ಸದಸ್ಯತ್ವ ಸಂಖ್ಯೆ: 2003910134–ಸಂತೋಷ್ ಹೇಳಿಕೊಂಡಿದ್ದಂತೆ) ಅವರು 'ಹಿಂದೂ ವಾಹಿನಿ' ಎನ್ನುವ ಸಂಘಟನೆಯ ಕಾರ್ಯದರ್ಶಿಯೂ ಆಗಿದ್ದರು. ಪಕ್ಷ ಸಂಘಟನೆಯಲ್ಲೂ ಗುರುತಿಸಿಕೊಂಡಿದ್ದರು. ನಾಲ್ಕೈದು ವರ್ಷಗಳಿಂದ ಗುತ್ತಿಗೆದಾರರಾಗಿದ್ದರು. ಗುತ್ತಿಗೆದಾರರ ಸಂಘದಲ್ಲೂ ಸಕ್ರಿಯವಾಗಿದ್ದರು.

ಅವರಿಗೆ ತಾಯಿ, ಪತ್ನಿ, ಒಂದೂವರೆ ವರ್ಷದ ಮಗು, ಇಬ್ಬರು ಅಣ್ಣಂದಿರು ಇದ್ದಾರೆ. ಬಸನಗೌಡ ಪಾಟೀಲ ಎಂಬುವವರು ಪೊಲೀಸ್ ಇಲಾಖೆಯಲ್ಲಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನಲಾಗಿದೆ. ಮೂಲತಃ ತಾಲ್ಲೂಕಿನ ಬಡಸ ಗ್ರಾಮದವರಾದ ಸಂತೋಷ್, ವಿಜಯನಗರದಲ್ಲಿ ವಾಸವಿದ್ದರು. 'ಹಿಂಡಲಗಾ ಭಾಗದಲ್ಲಿಯೇ ನಾನು ರಸ್ತೆ ನಿರ್ಮಾಣ ಮೊದಲಾದ ಕಾಮಗಾರಿಗಳನ್ನು ನಡೆಸಿದ್ದೇನೆ' ಎಂದು ಹೇಳಿಕೊಂಡಿದ್ದರು.

ನೋವು ತೋಡಿಕೊಂಡಿದ್ದರು: ಸಚಿವರ ವಿರುದ್ಧ ಆರೋಪ ಮಾಡಿದ ನಂತರ ಪಕ್ಷದಿಂದ ಸೂಕ್ತ ಸ್ಪಂದನೆ ದೊರೆಯಲಿಲ್ಲ ಎನ್ನುವ ಕಾರಣಕ್ಕೆ ಆಪ್ತರೊಂದಿಗೆ ನೋವು ತೋಡಿಕೊಂಡಿದ್ದರು. ಮಾರ್ಚ್ 13ರಂದು ಪ್ರಧಾನಿ ಮೊದಲಾದವರಿಗೆ ದೂರು ನೀಡಿದ್ದರು. ಕೆಲವು ದಿನಗಳ ನಂತರ ಮಾಧ್ಯಮದಲ್ಲಿ ಅದು ಸುದ್ದಿಯಾಗಿತ್ತು.

'ಸಂತೋಷ್ ಯಾರು ಎನ್ನುವುದೇ ಗೊತ್ತಿಲ್ಲ, ಆತ ಬಿಜೆಪಿ ಕಾರ್ಯಕರ್ತನೇ ಅಲ್ಲ' ಎಂದು ಸಚಿವ ಕೆ.ಎಸ್.ಈಶ್ವರಪ್ಪ ಅವರು ಹೇಳಿಕೆ ನೀಡಿದ್ದಕ್ಕೆ ಪ್ರತ್ಯುತ್ತರವಾಗಿ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿದ್ದರು ಸಂತೋಷ್.

'ನಿಮ್ಮ ಮೇಲೆ ವಿಶ್ವಾಸವಿಟ್ಟು ಕಾಮಗಾರಿ ಕೈಗೊಂಡಿದ್ದೆ. ಈಗ ನುಣುಚಿಕೊಳ್ಳಲು ನಾನೇನೂ ಹೇಳೇ ಇಲ್ಲ, ಅವರಾರು ಎನ್ನುವುದೇ ಗೊತ್ತಿಲ್ಲ ಎಂದು ಸಚಿವರು ಹೇಳಿರುವುದು ಸರಿಯಲ್ಲ. ಅವರೊಂದಿಗೆ ಇರುವ ಫೋಟೊಗಳು ಮೊದಲಾದ ದಾಖಲೆಗಳಿವೆ. ಅವುಗಳನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಿದ್ದೇನೆ. 108 ಕಾಮಗಾರಿ ಸುಮ್ಮನೆ ಮಾಡಲಾಗುತ್ತದೆಯೇ? ಅಭಿವೃದ್ಧಿ ಮಾಡಿದ್ದೇವೆ. ಅದರಿಂದ ಪಕ್ಷಕ್ಕೂ ಒಳ್ಳೆಯ ಹೆಸರು ಬಂದಿದೆ. ಆದ್ದರಿಂದ ಹಣ ಕೇಳುತ್ತಿದ್ದೇವೆ. ನುಣುಚಿಕೊಳ್ಳಲು ಹೋಗಬೇಡಿ. ನಿಮ್ಮ ಹಿರಿಯತನಕ್ಕೆ ಒಳ್ಳೆಯದಲ್ಲ' ಎಂದು ತಿರುಗೇಟು ನೀಡಿದ್ದರು.

ಬೆಳಗಾವಿಯ ವಿಜಯನಗರದಲ್ಲಿರುವ ಸಂತೋಷ್ ಪಾಟೀಲ ಅವರ ಮನೆಗೆ ಬೀಗ ಹಾಕಿದೆ

ಕೆಲವು ದಿನಗಳ ಹಿಂದೆಯೇ ಬೆದರಿಕೆ ಹಾಕಿದ್ದರು

'ಹಣ ಬಿಡುಗಡೆ ಮಾಡದಿದ್ದರೆ ಮುಂದಿನ ಎಲ್ಲ ಅನಾಹುತಕ್ಕೆ ಈಶ್ವರಪ್ಪ ಅವರೇ ಕಾರಣರಾಗುತ್ತಾರೆ' ಎಂದು ಇತ್ತೀಚೆಗೆ ವಿಡಿಯೊ ಹೇಳಿಕೆಯನ್ನೂ ಬಿಡುಗಡೆ ಮಾಡಿದ್ದರು. ಇದಕ್ಕೂ ಪಕ್ಷದ ಮಟ್ಟದಲ್ಲಿ ಸೂಕ್ತ ಸ್ಪಂದನೆ ದೊರೆಯಲಿಲ್ಲ ಎನ್ನಲಾಗುತ್ತಿದೆ.

ಇಲ್ಲಿನ ವಿಜಯನಗರದಲ್ಲಿ ಅವರಿದ್ದ ಮನೆಗೆ ಬೀಗ ಹಾಕಲಾಗಿದೆ. ಸಂತೋಷ್ ಮತ್ತು ಕುಟುಂಬದವರು ಹಲವು ದಿನಗಳಿಂದ ಇಲ್ಲಿಲ್ಲ ಎಂದು ನೆರೆಯವರು ತಿಳಿಸಿದರು.

'ಸಂತೋಷ್ ಅವರನ್ನು ಪಕ್ಷದಲ್ಲಿದ್ದಾಗ ಆಗಾಗ ಭೇಟಿಯಾಗುತ್ತಿದ್ದೆ. ಅವರು ಪಕ್ಷದ ಕಾರ್ಯಕರ್ತರಾಗಿದ್ದರು. ಆ ಸಂಪರ್ಕದ ಮೇಲೆಯೇ ಈಶ್ವರಪ್ಪ ಅವರೊಂದಿಗೆ ಒಡನಾಟ ಇಟ್ಟುಕೊಂಡಿದ್ದರು. ಹಿಂಡಲಗಾ ಜಾತ್ರೆ ಸಂದರ್ಭದಲ್ಲಿ ಟೆಂಡರ್ ಆಗದಿದ್ದರೂ ವಿಶ್ವಾಸದ ಮೇಲೆ ಕೆಲಸ ಮಾಡಿದ್ದರು. ಈಗ, ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ' ಎಂದು ಆಮ್ ಆದ್ಮಿ ಪಕ್ಷದ ಮುಖಂಡ ರಾಜು ಟೋಪಣ್ಣವರ ಹೇಳಿದರು.

ಸಂತೋಷ್ ಕಾರ್ಯಾದೇಶ ಪಡೆಯದೆ ಕೆಲಸ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

'ತಮ್ಮನ ಸಾವಿಗೆ ಈಶ್ವರಪ್ಪ ನೇರ ಹೊಣೆ'

ಬೆಳಗಾವಿ: 'ಗುತ್ತಿಗೆದಾರನಾಗಿದ್ದ ನನ್ನ ತಮ್ಮ ಸಂತೋಷ್ ಪಾಟೀಲ ಸಾವಿಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಈಶ್ವರಪ್ಪ ಅವರೇ ನೇರ ಕಾರಣ' ಎಂದು ಸಂತೋಷ ಅವರ ಅಣ್ಣ ಪ್ರಶಾಂತ್ ಪಾಟೀಲ ಆರೋಪಿಸಿದರು.

ಇಲ್ಲಿನ ಕ್ಯಾಂಪ್ ಪೊಲೀಸ್ ಠಾಣೆಗೆ ಬಂದಿದ್ದ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ತಮ್ಮ ಹಿಂದಿನಿಂದಲೂ ಗುತ್ತಿಗೆ ಮಾಡುತ್ತಿದ್ದ. ₹ 4 ಕೋಟಿ ಮೊತ್ತದ ಕೆಲಸ ಮಾಡಿದ್ದೇನೆ. ಹಣ ಬಂದಿಲ್ಲ, ಬಹಳ ಕಷ್ಟವಾಗಿದೆ ಎಂದು ಹೇಳಿದ್ದ. ಅವರ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನೂ ಸಚಿವರು ದಾಖಲಿಸಿದ್ದರು. ಜೀವ ಬೆದರಿಕೆಯೂ ಇದೆ ಎಂದಿದ್ದ. ಈ ಸಾವಿಗೆ ನ್ಯಾಯ ದೊರಕಿಸಿಕೊಡಬೇಕು. ನಮ್ಮ ಸಮುದಾಯದವರೇ ಆದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ನಮಗೆ ನ್ಯಾಯ ದೊರಕಿಸಿಕೊಡಬೇಕು' ಎಂದು ಒತ್ತಾಯಿಸಿದರು.

'ಸಂತೋಷ್, ಈಶ್ವರಪ್ಪ ಜೊತೆ ಚೆನ್ನಾಗಿದ್ದ. ಅವರ ಮನೆಗೂ ಹೋಗಿದ್ದ. ಪರಿಚಯವೇ ಇಲ್ಲದಿದ್ದರೆ ಸಚಿವರ ಮನೆಗೆ ಹೋಗಲು ಆಗುತ್ತದೆಯೇ? ಸಂತೋಷ್ ಪರಿಚಯವೇ ಇಲ್ಲ ಎಂದು ಈಶ್ವರಪ್ಪ ಸುಳ್ಳು ಹೇಳುತ್ತಿದ್ದಾರೆ. ಈಶ್ವರಪ್ಪ ಅವರನ್ನು ಬಂಧಿಸುವವರೆಗೂ ನಾವು ಅಂತ್ಯಕ್ರಿಯೆ ನಡೆಸುವುದಿಲ್ಲ' ಎಂದು ತಿಳಿಸಿದರು.

'ಸಂತೋಷ್ ಪತ್ನಿ ಊರಲ್ಲಿಲ್ಲ; ಬೆಂಗಳೂರಿಗೆ ಹೋಗಿದ್ದಾರೆ, ಒಂದು ವರ್ಷದ ಮಗುವಿದೆ' ಎಂದು ಕಣ್ಣೀರಿಟ್ಟರು. 'ತಮ್ಮ ನಾಪತ್ತೆಯಾಗಿದ್ದಾಗಿ ಟಿವಿಗಳಲ್ಲಿ ಸುದ್ದಿ ನೋಡಿ ದೂರು ಕೊಡಲು ಬಂದಿದ್ದೆ. ಆದರೆ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿಯಿತು. ದೂರು ಕೊಡಲಿಲ್ಲ' ಎಂದು ಹೇಳಿ ಅವರು ಉಡುಪಿಗೆ ತೆರಳಿದರು.

ಪ್ರಶಾಂತ್ ಪಾಟೀಲ

ಈಶ್ವರಪ್ಪ ಮನೆಗೆ ಮುತ್ತಿಗೆ ಯತ್ನ; ಲಾಠಿ ಪ್ರಹಾರ

ಶಿವಮೊಗ್ಗ: ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆಗೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರೇ ಕಾರಣ ಎಂದು ಆರೋಪಿಸಿ ಅವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಬೀಸಿದ್ದು, ಕೆಲವರು ಗಾಯಗೊಂಡಿದ್ದಾರೆ.

ನಗರದ ಮಲ್ಲೇಶ್ವರ ಬಡಾವಣೆಯಲ್ಲಿರುವ ಈಶ್ವರಪ್ಪ ಅವರ ಮನೆಗೆ ಮಂಗಳವಾರ ಯುವ ಕಾಂಗ್ರೆಸ್‌ನ ನೂರಾರು ಕಾರ್ಯಕರ್ತರು ಮುತ್ತಿಗೆ ಹಾಕಲು ಯತ್ನಿಸಿದರು. ಅವರನ್ನು ರೈಲ್ವೆ ಗೇಟ್ ಬಳಿಯೇ ತಡೆದ ಪೊಲೀಸರು ಮರಳಿ ಹಿಂದಕ್ಕೆ ಹೋಗಲು ಸೂಚಿಸಿದರು. ಆದರೆ, ಪ್ರತಿಭಟನಾನಿರತರು ಪಟ್ಟು ಸಡಿಲಿಸಲಿಲ್ಲ. ಈ ಸಮಯದಲ್ಲಿ ಲಾಠಿ ಬೀಸಿ, ಗುಂಪು ಚದುರಿಸಿದರು. ಉತ್ತರ ಬ್ಲಾಕ್ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದರ್ಶನ್, ಶ್ಯಾಮ್ ಸೇರಿ ಕೆಲವರಿಗೆ ಗಾಯಗಳಾಗಿವೆ. ಮತ್ತೆ ಪ್ರತಿಭಟನೆ ಮುಂದುವರಿಸಿದ ಹಲವರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ಈಶ್ವರಪ್ಪ ಅವರ ಮನೆ ಬಳಿ ಪೊಲೀಸ್ ಪಹರೆ ನಿಯೋಜಿಸಲಾಗಿದ್ದು, ಭದ್ರತೆ ಬಿಗಿಗೊಳಿಸಲಾಗಿದೆ.

ನಿಷ್ಪಕ್ಷಪಾತ ತನಿಖೆಯಾಗಲಿ: ಡಿ. ಕೆಂಪಣ್ಣ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದ ಗುತ್ತಿಗೆದಾರ ಸಂತೋಷ್ ಪಾಟೀಲ ಸಾವಿನ ಪ್ರಕರಣದ ಕುರಿತು ರಾಜ್ಯ ಸರ್ಕಾರ ಉನ್ನತಮಟ್ಟದ ತನಿಖೆಗೆ ಆದೇಶಿಸಬೇಕು ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಒತ್ತಾಯಿಸಿದರು.

ಘಟನೆ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಬಿಲ್ ಮೊತ್ತ ಬಿಡುಗಡೆ ಮಾಡಲು ಸಚಿವರು ಶೇ 40ರಷ್ಟು ಲಂಚ ಕೇಳುತ್ತಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವುದು ದುರದೃಷ್ಟಕರ ಬೆಳವಣಿಗೆ. ಈ ಪ್ರಕರಣದಲ್ಲಿ ಸತ್ಯಾಂಶ ಹೊರತರಲು ನಿಷ್ಪಕ್ಷಪಾತ ತನಿಖೆಯಾಗಬೇಕು' ಎಂದರು.

'ಮೃತ ಗುತ್ತಿಗೆದಾರ ಕೆಲವು ದಿನಗಳ ಹಿಂದೆ ನನ್ನ ಜತೆ ದೂರವಾಣಿ ಮೂಲಕ ಮಾತನಾಡಿದ್ದರು. ಈಶ್ವರಪ್ಪ ಅವರ ಪುತ್ರನಿಗೆ ಒಂದಷ್ಟು ಹಣ ನೀಡಿದ್ದು, ಇನ್ನೂ ಹೆಚ್ಚಿನ ಮೊತ್ತಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂಬ ವಿಷಯ ತಿಳಿಸಿದ್ದರು. ಸಂತೋಷ್ ಪಾಟೀಲ ಸಚಿವರ ವಿರುದ್ಧ ಆರೋಪ ಮಾಡಿರುವ ಕುರಿತು ಮಾರ್ಚ್ 11ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಕ್ರಮಕ್ಕೆ ಒತ್ತಾಯಿಸಿದ್ದೆ. ಅವರು ಪ್ರತಿಕ್ರಿಯೆಯನ್ನೇ ನೀಡಿರಲಿಲ್ಲ' ಎಂದರು.

ಲಂಚಕ್ಕಾಗಿ ಬೇಡಿಕೆ ಇಟ್ಟು, ಹಿಂಸೆ ಕೊಟ್ಟಿರುವುದೇ ಗುತ್ತಿಗೆದಾರನ ಸಾವಿಗೆ ಕಾರಣ. ಈ ಬಗ್ಗೆ ಸಮಗ್ರವಾದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಡಿ. ಕೆಂಪಣ್ಣ

ವಿಪಕ್ಷ ಪಟ್ಟು: ಈಶ್ವರಪ್ಪಗೆ ಇಕ್ಕಟ್ಟು

ಒಂದನೇ ಪುಟದಿಂದ

ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಮಂಗಳೂರಿನ ಓಷಿಯನ್ ಪರ್ಲ್ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಬಿಜೆಪಿ ವಿಭಾಗೀಯ ಮಟ್ಟದ ಸಭೆಗೂ ನುಗ್ಗಲು ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದರು. ಮೈಸೂರಿನಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಹಾಗೂ ಬೆಳಗಾವಿಯಲ್ಲಿ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ನೇತೃತ್ವದಲ್ಲಿ ಸಭೆ ನಡೆಯುತ್ತಿದ್ದ ಹೋಟೆಲ್‌ಗಳ ಎದುರಿನಲ್ಲೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು.

ಬೆಂಗಳೂರಿನ ಕುಮಾರ ಪಾರ್ಕ್ ಬಳಿ ಇರುವ ಈಶ್ವರಪ್ಪ ಅವರ ಅಧಿಕೃತ ನಿವಾಸದ ಎದುರಿನಲ್ಲೂ ಯುವ ಮತ್ತು ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸಚಿವರ ರಾಜೀನಾಮೆಗೆ ಆಗ್ರಹಿಸಿ ನಿವಾಸದ ಆವರಣಕ್ಕೆ ನುಗ್ಗಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ನಿವಾಸದ ಪ್ರವೇಶ ದ್ವಾರಗಳನ್ನು ಮುಚ್ಚಿ, ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಸಚಿವರ ತವರು ಕ್ಷೇತ್ರ ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ಮಂಗಳವಾರ ಪ್ರತಿಭಟನೆಗಳು ನಡೆದಿವೆ. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಬುಧವಾರ ಕೂಡ ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ. ಆಮ್ ಆದ್ಮಿ ಪಕ್ಷದ ಕಾರ್ಯಕರ್ತರೂ ಮಂಗಳವಾರ ಬೆಳಗಾವಿಯಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ರಾಜ್ಯಪಾಲರಿಗೆ ದೂರು: ಈಶ್ವರಪ್ಪ ಅವರನ್ನು ಸಂಪುಟದಿಂದ ಕೈಬಿಡುವಂತೆ ರಾಜ್ಯಪಾಲರನ್ನು ಭೇಟಿಮಾಡಿ ಒತ್ತಾಯ ಮಾಡಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ. ಬುಧವಾರ ಬೆಳಿಗ್ಗೆ 9 ಗಂಟೆಗೆ ರಾಜ್ಯಪಾಲರ ಭೇಟಿ ನಿಗದಿಯಾಗಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಪ್ರಮುಖ ನಾಯಕರ ನಿಯೋಗ ರಾಜ್ಯಪಾಲರನ್ನು ಭೇಟಿಮಾಡಲಿದ್ದು, ಈಶ್ವರಪ್ಪ ಅವರನ್ನು ಸಂಪುಟದಿಂದ ಕೈಬಿಡುವಂತೆ ಮನವಿ ಸಲ್ಲಿಸಲಿದೆ.

ತಿಂಗಳಿಂದ ಸಂಘರ್ಷ: 'ಬೆಳಗಾವಿ ತಾಲ್ಲೂಕಿನ ಹಿಂಡಲಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ₹ 4 ಕೋಟಿ ವೆಚ್ಚದ ಕಾಮಗಾರಿಗಳನ್ನು ಮಾಡಿದ್ದು, ಬಿಲ್ ಪಾವತಿಗೆ ಸಚಿವ ಈಶ್ವರಪ್ಪ ಶೇ 40ರಷ್ಟು ಲಂಚ ಕೇಳುತ್ತಿದ್ದಾರೆ' ಎಂದು ಆರೋಪಿಸಿ ಸಂತೋಷ್ ಪಾಟೀಲ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರಿಗೆ ಮಾರ್ಚ್ ಮೊದಲ ವಾರ ದೂರು ನೀಡಿದ್ದರು.

ಆರೋಪವನ್ನು ಅಲ್ಲಗಳೆದಿದ್ದ ಈಶ್ವರಪ್ಪ, 'ಸಂತೋಷ್ ಪಾಟೀಲ ಯಾರು ಎಂಬುದೇ ಗೊತ್ತಿಲ್ಲ' ಎಂದಿದ್ದರು. ದೂರು ನೀಡಿದ್ದ ಗುತ್ತಿಗೆದಾರನ ವಿರುದ್ಧ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆಯನ್ನೂ ಹೂಡಿದ್ದರು. ಹಲವು ದಿನಗಳಿಂದಲೂ ಸಚಿವರು ಮತ್ತು ಸಂತೋಷ್ ನಡುವೆ ಆರೋಪ– ಪ್ರತ್ಯಾರೋಪ ನಡೆಯುತ್ತಲೇ ಇತ್ತು. ಸಚಿವರ ಜತೆ ಇರುವ ಫೋಟೊಗಳು ಹಾಗೂ ಸಚಿವರ ಜತೆಗಿನ ಸಂಪರ್ಕದ ಕುರಿತ ವಿಡಿಯೊ ಹೇಳಿಕೆಗಳನ್ನು ಪಾಟೀಲ ಕೆಲವು ದಿನಗಳ ಹಿಂದೆ ಮಾಧ್ಯಮಗಳಿಗೆ ಕಳುಹಿಸಿದ್ದರು.

ಸೋಮವಾರ ಇಬ್ಬರು ಸ್ನೇಹಿತರ ಜತೆ ಬೆಳಗಾವಿಯಿಂದ ಉಡುಪಿಗೆ ಹೋಗಿದ್ದ ಗುತ್ತಿಗೆದಾರ, ಲಾಡ್ಜ್ ಒಂದರಲ್ಲಿ ಕೊಠಡಿ ಪಡೆದು ತಂಗಿದ್ದರು. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅಲ್ಲಿಂದಲೇ ವಾಟ್ಸ್ ಆ್ಯಪ್ ಮೂಲಕ ಸಂದೇಶ ಕಳುಹಿಸಿದ್ದರು. ಮೊಬೈಲ್ ಲೊಕೇಷನ್ ಆಧರಿಸಿ ಪೊಲೀಸರು ಉಡುಪಿಯ ವಿವಿಧೆಡೆ ಶೋಧ ನಡೆಸಿದ್ದರು. ಆದರೆ, ಪತ್ತೆಯಾಗಿರಲಿಲ್ಲ. ಪಕ್ಕದ ಕೊಠಡಿಯಲ್ಲಿ ಉಳಿದಿದ್ದ ಸ್ನೇಹಿತರು ಬೆಳಿಗ್ಗೆ ಕೊಠಡಿ ಬಾಗಿಲು ಬಡಿದರೂ ತೆರೆಯಲಿಲ್ಲ. ಲಾಡ್ಜ್ ಸಿಬ್ಬಂದಿ ನೆರವಿನಲ್ಲಿ ಬಾಗಿಲು ತೆರೆದು ನೋಡಿದಾಗ ಸಂತೋಷ್ ಮೃತಪಟ್ಟಿರುವುದು ಗೊತ್ತಾಯಿತು.

108 ಕಾಮಗಾರಿಗಳ ಬಿಲ್‌ಗೆ ತಡೆ?

ಒಂದನೇ ಪುಟದಿಂದ

'ಸಚಿವರ ಭರವಸೆಯನ್ನು ನಂಬಿ ಕಾರ್ಯಾದೇಶ ಇಲ್ಲದೇ ಕಾಮಗಾರಿ ಕೈಗೊಂಡಿದ್ದೆ. ಹಿಂಡಲಗಾ ದೇವಸ್ಥಾನದ ಜಾತ್ರೆ ಇದ್ದ ಕಾರಣದಿಂದ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ನಂತರದಲ್ಲಿ ಬಿಲ್ ಮಂಜೂರು ಮಾಡದೇ ಸತಾಯಿಸಿದರು. ಶೇ 40ರಷ್ಟು ಲಂಚ ನೀಡಿದರೆ ಬಿಲ್ ಪಾವತಿಗೆ ಒಪ್ಪಿಗೆ ನೀಡುವುದಾಗಿ ಸಚಿವ ಈಶ್ವರಪ್ಪ ತಮ್ಮ ಸಹವರ್ತಿಗಳ ಮೂಲಕ ಬೇಡಿಕೆ ಇಟ್ಟಿದ್ದರು' ಎಂದು ಸಂತೋಷ್ ದೂರಿನಲ್ಲಿ ಆರೋಪಿಸಿದ್ದರು. 'ಸಂತೋಷ್ ಕಾರ್ಯಾದೇಶ ಇಲ್ಲದೇ ರಸ್ತೆ ಕಾಮಗಾರಿಗಳನ್ನು ನಡೆಸಿದ್ದಾರೆ' ಎಂದು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ಸ್ಪಷ್ಟನೆ ನೀಡಿದ್ದರು.

ವಾಟ್ಸ್ ಆ್ಯಪ್ ಸಂದೇಶ: ಸಾಕ್ಷ್ಯ ಮಾನ್ಯ

ಬೆಂಗಳೂರು: 'ಯಾವುದೇ ಎಸ್‌ಎಂಎಸ್, ಇ–ಮೇಲ್, ವಾಟ್ಸ್ ಆ್ಯಪ್ ಸಂದೇಶ, ಲಿಖಿತ ಪತ್ರ ಅಥವಾ ಓದಬಹುದಾದ ಮಾಧ್ಯಮದ ಮೂಲಕ ದಾಖಲಿಸಲಾದ ಮರಣ ಹೇಳಿಕೆಯನ್ನು (ಡೈಯಿಂಗ್ ಡಿಕ್ಲರೇಷನ್) ಸಾಕ್ಷ್ಯ' ಎಂದು ಪರಿಗಣಿಸಬಹುದು ಎಂಬುದು ಕಾನೂನು ತಜ್ಞರ ಅಭಿಮತ.

ಈ ಕುರಿತಂತೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಹೆಸರು ಬಹಿರಂಗಪಡಿಸಲು ಇಚ್ಛಿಸದ ಹೈಕೋರ್ಟ್‌ನ ಹಿರಿಯ ವಕೀಲರೊಬ್ಬರು, 'ಭಾರತೀಯ ಸಾಕ್ಷ್ಯ ಅಧಿನಿಯಮ–1872ರ ಕಲಂ 32ರ ಅನುಸಾರ, 'ಇಂತಹ ದಾಖಲೆಯ ಆಧಾರದಲ್ಲಿ ಅಪರಾಧ ದಾಖಲಿಸಿ ಆರೋಪಿಯನ್ನು ಬಂಧಿಸಬಹುದು' ಎಂದು ವಿವರಿಸಿದರು.

ಮತ್ತೊಬ್ಬ ಖ್ಯಾತ ಕ್ರಿಮಿನಲ್ ವಕೀಲ ಸಿ.ಎಚ್.ಹನುಮಂತರಾಯ, 'ಇಂತಹ ದಾಖಲೆಯ ಆಧಾರದಲ್ಲಿ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬಹುದು. ಇದನ್ನು ಐಪಿಸಿ ಕಲಂ 316ರ ಪ್ರಕಾರ, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಅಪರಾಧ ಎಂದು ಪರಿಗಣಿಸಬೇಕಾಗುತ್ತದೆ' ಎಂದರು.

'ಇಂತಹ ಪ್ರಕರಣಗಳಲ್ಲಿ ಪೊಲೀಸರಿಗೆ ಯಾವುದೇ ದೂರುದಾರನೇ ಬೇಕಿಲ್ಲ. ಎಫ್‌ಐಆರ್ ದಾಖಲಿಸಿ ಕೋರ್ಟ್‌ಗೆ ಕಳುಹಿಸಿದ ನಂತರ ಆರೋಪಿಯನ್ನು ಬಂಧಿಸಬಹುದು. ಆದರೆ, ಬಂಧನಕ್ಕೂ ಮುನ್ನ ತನಿಖಾಧಿಕಾರಿ ವಿಚಾರಣೆ ನಡೆಸಬೇಕು. ತನಗೆ ದೊರೆತ ಮರಣ ಹೇಳಿಕೆಯನ್ನು ಪರಿಶೀಲಿಸಿ ಯಾರು, ಎಲ್ಲಿಂದ, ಯಾವಾಗ, ಹೇಗೆ ಕೊಟ್ಟರು ಎಂಬಿತ್ಯಾದಿ ಅಂಶಗಳನ್ನು ಪರಾಂಬರಿಸಿ ಆರೋಪ ಮೇಲ್ನೋಟಕ್ಕೆ ದೃಢಪಟ್ಟ ನಂತರ ಮುಂದುವರಿಯಬೇಕಾಗುತ್ತದೆ' ಎಂದರು.

'ಯಾರೇ ಸಚಿವರು ಆರೋಪಿ ಎಂದು ಕಂಡುಬಂದಲ್ಲಿ ಆಗ ಬಂಧನಕ್ಕೆ ಸರ್ಕಾರದ ಅನುಮತಿ ಕೋರಬೇಕಾಗುತ್ತದೆ. ಒಂದು ವೇಳೆ ಸರ್ಕಾರ ಅನುಮತಿ ನೀಡದಿದ್ದರೆ ಅದನ್ನು ನೇರವಾಗಿ ಹೈಕೋರ್ಟ್‌ನಲ್ಲಿ ರಿಟ್ ವ್ಯಾಪ್ತಿಯಲ್ಲಿ ಪ್ರಶ್ನಿಸಬೇಕಾಗುತ್ತದೆ' ಎಂದು ಹನುಮಂತರಾಯ ವಿವರಿಸಿದರು.

ಕೊನೆಯ ಸಂದೇಶದಲ್ಲಿ ಏನಿದೆ?

'ನನ್ನ ಸಾವಿಗೆ ನೇರ ಕಾರಣ ಕೆ.ಎಸ್. ಈಶ್ವರಪ್ಪ. ಅವರಿಗೆ ತಕ್ಕ ಶಿಕ್ಷೆಯಾಗಬೇಕು. ನನ್ನೆಲ್ಲ ಆಸೆಗಳನ್ನು ಬದಿಗೊತ್ತಿ ಈ ನಿರ್ಧಾರ ಮಾಡಿರುತ್ತೇನೆ. ನನ್ನ ಹೆಂಡತಿ, ಮಗುವಿಗೆ ಸರ್ಕಾರ ಅಂದರೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಹಾಗೂ ನಮ್ಮ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಹಾಗೆ ಅವರಿವರೆನ್ನದೆ ಎಲ್ಲರೂ ಸಹಾಯ ಹಸ್ತ ನೀಡಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಮಾಧ್ಯಮ ಮಿತ್ರರಿಗೆ ಕೋಟಿ ಕೋಟಿ ಧನ್ಯವಾದಗಳು. ನನ್ನ ಜೊತೆ ಬಂದ ಗೆಳೆಯರಾದ ಸಂತೋಷ ಹಾಗೂ ಪ್ರಶಾಂತಗೆ ಪ್ರವಾಸ ಹೋಗೋಣ ಎಂದು ಕರೆದುಕೊಂಡು ಬಂದಿದ್ದೇನೆ ಅಷ್ಟೆ. ಅವರಿಗೆ ನನ್ನ ಸಾವಿಗೆ ಯಾವುದೇ ಸಂಬಂಧ ಇರುವುದಿಲ್ಲ' ಎಂದು ಸಂತೋಷ್ ಅವರು ಮಾಧ್ಯಮದವರಿಗೆ ಕಳುಹಿಸಿದ ಕೊನೆಯ ಸಂದೇಶದಲ್ಲಿದೆ.

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 (ನಿಯಮಾವಳಿಗಳು) ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದೆ ಏಳುವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2014–15ರಲ್ಲಿ ಘೋಷಿಸಲಾದ ಅಂತಿಮ ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಸಹ ಮೇಲೆ ಹೇಳಲಾದ ನಿಯಮಾವಳಿಗನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ಜುಲೈ 23, 2022** ರಂದು ವರ್ಗಾಯಿಸಲಾಗುವುದು ಇಲ್ಲವೇ ಜಮಾ ಮಾಡಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ನಿಯಮಾವಳಿಗನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವೆಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

1) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂಚಾಲಿತವಾಗಿ ರದ್ದಾಗುತ್ತವೆ.
2) **ಷೇರುಗಳನ್ನು ನೀವು ವಿದ್ಯುನ್ಮಾನ ರೂಪದಲ್ಲಿ ಹೊಂದಿದ್ದಿರೆ:** ಐಇಪಿಎಫ್ ಖಾತೆಗೆ ವರ್ಗವಾಗಲು ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ಜುಲೈ 13, 2022**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ಕೊಡದೆ ಜಾರಿಮಾಡುತ್ತದೆ. ನಿಯಮಾವಳಿಗನುಸಾರ ಸಂಬಂಧಿಸಿದ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಬಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ಈ ಷೇರುಗಳು ಮತ್ತು ಲಾಭಾಂಶಗಳನ್ನು ಐಇಪಿಎಫ್ ಪ್ರಾಧಿಕಾರದಿಂದ ನಿಗದಿತ ನಮೂನೆ ಐಇಪಿಎಫ್–5ರಲ್ಲಿ ಕೋರಿಕೆಯನ್ನು ಆನ್‌ಲೈನ್ ಮೂಲಕ ಸಲ್ಲಿಸಿ ಮತ್ತು ನಿಗದಿತ ನಮೂನೆ ಐಇಪಿಎಫ್–5ರಲ್ಲಿ ಅಗತ್ಯವೆಂದು ಹೇಳಲಾದ ದಸ್ತಾವೇಜುಗಳೊಂದಿಗೆ ಭೌತಿಕ ಪ್ರತಿಯನ್ನು ಕಂಪನಿಯ ನೋಡಲ್ ಅಧಿಕಾರಿಗೆ ಸಲ್ಲಿಸಿ ಪಡೆಯಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪ ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಹಿಂದಿನ ಕೆಫಿನ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್) ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೇನಿಯಮ್ ಟವರ್ ಬಿ, ಪ್ಲಾಟ್ 31–32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರವ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ – 500032. ದೂರವಾಣಿ: +91 40 6716 2222 ಅಥವಾ ಮಿ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಏಪ್ರಿಲ್ 12, 2022
ಬೆಂಗಳೂರು, ಭಾರತ

ನಾಳೆ ಚಿತ್ರ ಬಿಡುಗಡೆ • ಸ್ವಾಗತಕ್ಕೆ ಸಿದ್ಧತೆ

ಕೆಜಿಎಫ್–2: ಭರ್ಜರಿ ಬುಕ್ಕಿಂಗ್

ಪ್ರಜಾವಾಣಿ ವಾರ್ತೆ


ಯಶ್

ಬೆಂಗಳೂರು: ಬಹುನಿರೀಕ್ಷಿತ ಕೆಜಿಎಫ್ ಚಾಪ್ಟರ್–2 ಏ. 14ರಂದು ಬಿಡುಗಡೆ ಆಗಲಿದೆ. ದೇಶ ವಿದೇಶಗಳ 'ರಾಕಿಭಾಯ್' ಅಭಿಮಾನಿಗಳು ಈ ಚಿತ್ರದ ಸ್ವಾಗತಕ್ಕೆ ತುದಿಗಾಲಲ್ಲಿ ನಿಂತಿದ್ದಾರೆ.

ಹಿಂದಿ ಭಾಷಾ ಪ್ರದೇಶದಲ್ಲೇ ಇದುವರೆಗೆ ₹ 11.40 ಕೋಟಿ ಮೊತ್ತದ ಮುಂಗಡ ಟಿಕೆಟ್ ಬುಕ್ಕಿಂಗ್ ಆಗಿದೆ. ಈ ಚಿತ್ರ ಬಿಡುಗಡೆಗೂ ಒಂದು ದಿನ ಮುನ್ನ (ಏ. 13) ವಿಜಯ್ ದಳಪತಿ ಅವರ 'ಬೀಸ್ಟ್' ಚಿತ್ರ ಬಿಡುಗಡೆಯಾಗುತ್ತಿದೆ. ಆದರೆ, ಕೆಜಿಎಫ್ ಹವಾ ಎದುರು 'ಬೀಸ್ಟ್' ಮಂಕಾಗುವ ಆತಂಕವಿದೆ.

ಕೆಜಿಎಫ್ ಚಾಪ್ಟರ್ 2ನ ಐದು ಭಾಷಾ ಅವತರಣಿಕೆಗಳು ಸೇರಿ ₹ 20 ಕೋಟಿ ಮೊತ್ತದ ಮುಂಗಡ ಬುಕ್ಕಿಂಗ್ ಆಗಿದೆ ಎಂದು ಚಿತ್ರೋದ್ಯಮದ ವಿಶ್ಲೇಷಕರು ಅಂದಾಜಿಸಿದ್ದಾರೆ. ಮೊದಲ ದಿನದ ಟಿಕೆಟ್ ದರ ₹ 1,450ರಿಂದ ₹ 2,000 ವರೆಗೂ ಇದೆ. ಮೊದಲ ಪ್ರದರ್ಶನ ನಡುರಾತ್ರಿ 1ಗಂಟೆಯಿಂದ ಆರಂಭವಾಗಲಿದೆ.

ಇಡೀ ಚಿತ್ರಮಂದಿರ ಬುಕ್: ನಗರದ ವೆಂಕಟೇಶ್ವರ ಚಿತ್ರಮಂದಿರದಲ್ಲಿ ಮಹಿಳಾ ಅಭಿಮಾನಿಗಳಿಗಾಗಿ ಈ ಚಿತ್ರದ ವಿಶೇಷ ಪ್ರದರ್ಶನ ಏರ್ಪಡಿಸಲಾಗಿದೆ. ಬೆಳಿಗ್ಗೆ 5.45 ಹಾಗೂ 10 ಗಂಟೆಯ ಪ್ರದರ್ಶನದ ಎಲ್ಲ ಟಿಕೆಟ್‌ಗಳು ಮಾರಾಟವಾಗಿವೆ.

ಕ್ರೇಜ್ ಯಾಕೆ?: ಈ ವಾರಾಂತ್ಯದಲ್ಲಿ ಸಾಲು ರಜೆಗಳು ಬಂದಿವೆ. ಏ. 14 ಅಂಬೇಡ್ಕರ್ ಜಯಂತಿ, 15ರಂದು ಗುಡ್‌ಫ್ರೈಡೇ, 16ರಂದು ಶನಿವಾರ, 17ರಂದು ಭಾನುವಾರ ಹೀಗೆ ಸಾಲು ರಜಾಗಳು ಇರುವುದು ಪ್ರೇಕ್ಷಕರು ಚಿತ್ರಮಂದಿರದತ್ತ ಬರುವಂತಾಗಲು ಇರುವ ಪ್ಲಸ್ ಪಾಯಿಂಟ್.

ತೆರೆ ಲೆಕ್ಕ: ಗುರುವಾರ ಕೆಜಿಎಫ್ ಚಾಪ್ಟರ್ 2 ರಾಜ್ಯದ 500 ಏಕತೆರೆಯ ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣಲಿದೆ. ತಮಿಳುನಾಡಿನಲ್ಲಿ 1 ಸಾವಿರ ಏಕತೆರೆಯ ಚಿತ್ರಮಂದಿರಗಳ ಪೈಕಿ 350 ಚಿತ್ರಮಂದಿರಗಳಲ್ಲಿ ತೆರೆ ಕಾಣಲಿದೆ ಎಂದು ಹೊಂಬಾಳೆ ಫಿಲ್ಮ್ಸ್‌ನ ಪ್ರತಿನಿಧಿಯೊಬ್ಬರು ಮಾಹಿತಿ ನೀಡಿದರು.

ತೆಲುಗು ಅವತರಣಿಕೆಗೂ ಇದೇ ರೀತಿಯ ಪ್ರತಿಕ್ರಿಯೆ ಇದೆ.

'ಬೀಸ್ಟ್' ಚಿತ್ರವು ಬುಧವಾರ ರಾಜ್ಯದ 300 ಚಿತ್ರಮಂದಿರಗಳಲ್ಲಿ 1,500 ಪ್ರದರ್ಶನ ಕಾಣಲಿದೆ. ಮರುದಿನ ಕೆಜಿಎಫ್ –2 ಬಿಡುಗಡೆ ಹಿನ್ನೆಲೆಯಲ್ಲಿ 'ಬೀಸ್ಟ್' ಚಿತ್ರವು 50 ಚಿತ್ರಮಂದಿರಗಳಲ್ಲಷ್ಟೇ ಪ್ರದರ್ಶನ ಕಾಣಲಿದೆ.

ಈ ಎರಡು ಚಿತ್ರಗಳ ಅಬ್ಬರದ ಹಿನ್ನೆಲೆಯಲ್ಲಿ ಶಾಹಿದ್ ಕಪೂರ್ ನಟನೆಯ 'ಜೆರ್ಸಿ' ಚಿತ್ರದ ಬಿಡುಗಡೆ ಮುಂದಕ್ಕೆ ಹೋಗಿದೆ. ಬಾಲಿವುಡ್ ಪ್ರಭಾವಳಿಯ ಪ್ರದೇಶದಲ್ಲೂ ಕೆಜಿಎಫ್–2 ಹವೆಯೆಬ್ಬಿಸಿರುವುದು ಇದಕ್ಕೆ ಕಾರಣ.

ಒಟ್ಟಿನಲ್ಲಿ ಕೆಜಿಎಫ್ 2 ಚಿತ್ರೋದ್ಯಮದ ವಾಣಿಜ್ಯ ಲೆಕ್ಕಾಚಾರದಲ್ಲಿ ಮಹತ್ವದ ದಾಖಲೆ ಸ್ಥಾಪಿಸಲಿದೆ ಎಂಬ ನಿರೀಕ್ಷೆ ನಿಚ್ಚಳವಾಗಿದೆ.

ಧಾರವಾಡ: ಹಿಂದಿ ಹೇರಿಕೆಗೆ ವಿದ್ಯಾವರ್ಧಕ ಸಂಘ ಖಂಡನೆ

ಧಾರವಾಡ: ಯಾವುದೇ ಭಾಷೆ ಕನ್ನಡ ಭಾಷೆಯ ಮೇಲೆ ಸವಾರಿ ಮಾಡುವುದು ಹಾಗೂ ಹಿಂದಿ ಭಾಷೆಯನ್ನು ಹೇರಲು ಹೊರಟಿರುವ ಧೋರಣೆ ಖಂಡನೀಯ ಎಂದು ಕರ್ನಾಟಕ ವಿದ್ಯಾವರ್ಧಕ ಸಂಘ ಹೇಳಿದೆ.

ಹಿಂದಿ ಬಳಕೆ ಕುರಿತಂತೆ ಇತ್ತೀಚೆಗೆ ಕೇಂದ್ರ ಸಚಿವ ಅಮಿತ್ ಶಾ ಹೇಳಿಕೆಗೆ ಸಂಬಂಧಿಸಿದಂತೆ ಮಂಗಳವಾರ ಸಭೆ ನಡೆಸಿದ ವಿದ್ಯಾವರ್ಧಕ ಸಂಘವು ಕೆಲ ನಿರ್ಣಯಗಳನ್ನು ತೆಗೆದುಕೊಂಡಿತು.

ಸಂವಿಧಾನದ 8ನೇ ಪರಿಚ್ಛೇದದಲ್ಲಿರುವ ಎಲ್ಲ 22 ಭಾಷೆಗಳಿಗೂ ಸಮಾನ ಸ್ಥಾನಮಾನ ನೀಡಬೇಕು. ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಯನ್ನು ಹೇರಲು ಒಕ್ಕೂಟ ಸರ್ಕಾರ ಅವಕಾಶ ಕೊಡಬಾರದು.

ಭಾರತದ ಒಕ್ಕೂಟ ಸರ್ಕಾರವನ್ನು ಕೇಂದ್ರ ಸರ್ಕಾರವೆನ್ನುವ ಪರಿಭಾಷೆಯನ್ನು ಕೈಬಿಡಬೇಕು. ಕಲಿಕೆಯ ಭಾಷೆ, ಸಂಪರ್ಕ ಭಾಷೆ, ಜ್ಞಾನದ ಭಾಷೆ ಹೀಗೆ ಭಾಷೆಗೆ ಅನೇಕ ಆಯಾಮಗಳಿವೆ. ಅದರ ಅನುಸಾರ ಆಡಳಿತ ವ್ಯವಸ್ಥೆ ನಡೆದುಕೊಳ್ಳಬೇಕು. ಭಾರತದ ಪ್ರತಿಯೊಂದು ಭಾಷೆಗೂ ಪ್ರಾಮುಖ್ಯ ಸಿಗಲೆಂದು ಭಾಷಾವಾರು ಪ್ರಾಂತ್ಯ ರಚನೆ ಮಾಡಲಾಯಿತು. ಹೀಗಿದ್ದರೂ ಒಕ್ಕೂಟ ವ್ಯವಸ್ಥೆ ಪ್ರಾದೇಶಿಕ ಭಾಷೆಯ ಮೇಲೆ ಹಿಂದಿ ಭಾಷೆಯನ್ನು ಹೇರಬಾರದು.

ಕನ್ನಡ ನಮ್ಮ ಬದುಕಿನ ಭಾಷೆ. ನಮ್ಮ ಹೃದಯವನ್ನು ಪ್ರೀತಿಸಿದಂತೆ ನಮ್ಮ ಭಾಷೆಯನ್ನೂ ಪ್ರೀತಿಸುವಂತೆ ಕನ್ನಡಿಗರ ಮನದಲ್ಲಿ ಅಭಿಮಾನ ಮೂಡಿಸುವ ಅಭಿಯಾನ ನಡೆಸಲಾಗುವುದು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗಿರಬೇಕು ಹಾಗೂ ಉಳಿಬೇಕು ಎಂಬ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ತರಲಾಗುವುದು.

ಆಂಧ್ರ ಪ್ರದೇಶದಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಸಾರ್ವತ್ರಿಕರಿಸಿದ್ದನ್ನು ಆಂಧ್ರಪ್ರದೇಶ ಹೈಕೋರ್ಟ್ ರದ್ದುಪಡಿಸಿದ್ದು ಅದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಈ ಪ್ರಕರಣದಲ್ಲಿ ಕನ್ನಡ ಮಾಧ್ಯಮಕ್ಕಾಗಿ ವಿದ್ಯಾವರ್ಧಕ ಸಂಘವು ಸೇರಲು ಅಗತ್ಯ ಕ್ರಮ ಕೈಗೊಳ್ಳಲು ನಿರ್ಣಯ ತೆಗೆದುಕೊಳ್ಳಲಾಯಿತು.

ಹಿರಿಯ ವಿದ್ವಾಂಸ ಡಾ. ಗುರುಲಿಂಗ ಕಾಪಸೆ, ಸಭೆಯಲ್ಲಿ ಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಪ್ರೊ. ಐ.ಜಿ.ಸನದಿ ಇದ್ದರು.

ಕೋವಿಡ್: 796 ಹೊಸ ಪ್ರಕರಣ– 19 ಸಾವು

ನವದೆಹಲಿ (ಪಿಟಿಐ): ಮಂಗಳವಾರ ಬೆಳಿಗ್ಗೆ 8ಕ್ಕೆ ಲಭ್ಯವಿರುವ ಮಾಹಿತಿ ಪ್ರಕಾರ ದೇಶದಲ್ಲಿ 796 ಹೊಸ ಪ್ರಕರಣಗಳು ವರದಿಯಾಗಿವೆ. 19 ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿಕೆ ತಿಳಿಸಿದೆ.

ಇದೇ ಅವಧಿಯಲ್ಲಿ 169 ಮಂದಿ ಗುಣಮುಖರಾಗಿದ್ದು, ಸಕ್ರಿಯ ಪ್ರಕರಣಗಳು 10,889ಕ್ಕೆ ಇಳಿಕೆಯಾಗಿವೆ. ಚೇತರಿಕೆ ಪ್ರಮಾಣ ಶೇ 98.76 ರಷ್ಟಿದೆ. ಒಟ್ಟು ಸೋಂಕಿತರ ಸಂಖ್ಯೆ 4,30,36,928ಕ್ಕೆ ಏರಿಕೆಯಾಗಿದೆ. ಇದುವರೆಗೆ 5,21,710 ಸೋಂಕಿತರು ಸಾವಿಗೀಡಾಗಿದ್ದಾರೆ ಎಂದು ತಿಳಿಸಿದೆ.

ವರನಟ ಡಾ.ರಾಜ್‌ಕುಮಾರ್ ಅವರ 16ನೇ ಪುಣ್ಯಸ್ಮರಣೆ

ಕುಟುಂಬಸ್ಥರು, ಅಭಿಮಾನಿಗಳ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರನಟ ಡಾ.ರಾಜ್‌ಕುಮಾರ್ ಅವರ 16ನೇ ಪುಣ್ಯಸ್ಮರಣೆ ದಿನವಾದ ಮಂಗಳವಾರ ದೊಡ್ಮನೆ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು.

ಪುತ್ರರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಸೇರಿದಂತೆ ಕುಟುಂಬದ ಸದಸ್ಯರು ಪುಷ್ಪನಮನ ಸಲ್ಲಿಸಿದರು. ಸಮಾಧಿಯ ಮುಂದೆ ರಾಜ್‌ಕುಮಾರ್ ಅವರ ನೆಚ್ಚಿನ ತಿಂಡಿ, ಸಿಹಿ ತಿನಿಸುಗಳನ್ನು ಎಡೆ ಇಡಲಾಗಿತ್ತು. ಸಾವಿರಾರು ಅಭಿಮಾನಿಗಳು ರಾಜ್‌ಕುಮಾರ್ ಅವರ ಸಮಾಧಿಗೆ ನಮಿಸಿದರು. ಪುಣ್ಯಸ್ಮರಣೆ ಅಂಗವಾಗಿ ರಾಜ್ಯದ ಹಲವೆಡೆ ರಾಜ್‌ಕುಮಾರ್ ಅಭಿಮಾನಿಗಳು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು.

'ಈ ವರ್ಷ ಅಪ್ಪುವನ್ನು (ಪುನೀತ್ ರಾಜ್‌ಕುಮಾರ್) ಕಳೆದುಕೊಂಡ ಕಾರಣ ನೋವು ಜಾಸ್ತಿ. ನೋವಿನ ಜೊತೆಯಲ್ಲಿ ಅವರ ನೆನಪುಗಳನ್ನು ಜೀವಂತವಾಗಿ ಇಟ್ಟುಕೊಳ್ಳಲು ಪ್ರಯತ್ನಪಡುತ್ತಿದ್ದೇವೆ. ಒಳ್ಳೆಯತನಕ್ಕೆ ಪ್ರೀತಿ, ವಿಶ್ವಾಸವನ್ನು ಜನರು ನೀಡುತ್ತಲೇ ಬಂದಿದ್ದಾರೆ. ಹೀಗಾಗಿಯೇ ಅಭಿಮಾನಿಗಳನ್ನೇ ದೇವರು ಎಂದು ಅಪ್ಪಾಜಿ ಹೇಳಿದರು. ಹೀಗಾಗಿ ಅಭಿಮಾನಿ ಗಳು ಈ ದೇವರನ್ನು ನೋಡಲು ಇನ್ನೂ ಬರುತ್ತಿದ್ದಾರೆ' ಎಂದರುಶಿವರಾಜ್‌ಕುಮಾರ್.ಪುಣ್ಯಸ್ಮರಣೆ ಯಂದು ರಾಜ್‌ಕುಮಾರ್ ಅವರನ್ನು ಸ್ಮರಿಸಿ ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದಾರೆ. 'ಕನ್ನಡಿಗರ ಹೆಮ್ಮೆ, ಕಲಾಸರಸ್ವತಿಯ ವರಪುತ್ರ, ಕೋಟ್ಯಂತರ ಅಭಿಮಾನಿಗಳ ಪಾಲಿನ ಅಣ್ಣಾವ್ರು ಕನ್ನಡಿಗರ ಹೃದಯ ಮಂದಿರದಲ್ಲಿ ಚಿರಸ್ಥಾಯಿಯಾಗಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಟ್ವೀಟ್ ಮಾಡಿದ್ದಾರೆ.

ಪುತ್ರರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಸೇರಿದಂತೆ ಕುಟುಂಬದ ಸದಸ್ಯರು ಸಲ್ಲಿಸಿದರು

ಮಂಡ್ಯ: ವಕೀಲರ ಪ್ರತಿಭಟನೆ, ಸಂಘಟನೆಗಳ ಸಭೆ

ಮಂಡ್ಯ: 'ಜಿಲ್ಲಾ ನ್ಯಾಯಾಲಯಕ್ಕೆ ಮಂಜೂರಾಗಿರುವ 2.30 ಎಕರೆ ಭೂಮಿಯನ್ನು ಜಿಲ್ಲಾಡಳಿತ ಕೂಡಲೇ ಹಸ್ತಾಂತರಿಸಬೇಕು' ಎಂದು ಒತ್ತಾಯಿಸಿ ವಕೀಲರ ಸಂಘದ ಸದಸ್ಯರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿದರು.

ಇದೇ ವೇಳೆ, ಭೂಮಿಯನ್ನು ನ್ಯಾಯಾಲಯ ನಿರ್ಮಾಣಕ್ಕೆ ನೀಡಬಾರದು ಎಂಬ ಒತ್ತಾಯದೊಂದಿಗೆ ವಿವಿಧ ಸಂಘಟನೆಗಳ ಮುಖಂಡರು, ಜನಪ್ರತಿನಿಧಿಗಳು ನಗರದಲ್ಲಿರುವ ತೋಟಗಾರಿಕೆ ಇಲಾಖೆ ಕಚೇರಿ ಆವರಣದಲ್ಲಿ ಸಭೆ ನಡೆಸಿದರು.

'ತೋಟಗಾರಿಕೆ ಇಲಾಖೆಯ ಜಮೀನು ಮಂಜೂರಾಗಿ ಹಲವು ತಿಂಗಳಾಗಿದ್ದರೂ ಹಸ್ತಾಂತರವಾಗಿಲ್ಲ. ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಜಾಗದ ಕೊರತೆ ಇದ್ದು ಕಲಾಪಕ್ಕೆ ತೊಂದರೆಯಾಗುತ್ತಿದೆ. ಸರ್ಕಾರ ಬಿಡುಗಡೆ ಮಾಡಿರುವ ಹಣವೂ ವಾಪಸ್ ಹೋಗುತ್ತಿದೆ' ಎಂದು ವಕೀಲರ ಸಂಘದ ಅಧ್ಯಕ್ಷ ಎಂ.ಟಿ.ರಾಜೇಂದ್ರ ಅಸಮಾಧಾನ ವ್ಯಕ್ತಪಡಿಸಿದರು.

'ನಗರದ ಹೃದಯ ಭಾಗದಲ್ಲಿ ಸುಂದರ ಹಸಿರು ವಾತಾವರಣ ಸೃಷ್ಟಿಸಿರುವ ತೋಟಗಾರಿಕೆ ಇಲಾಖೆಯ ಒಂದಿಂಚೂ ಭೂಮಿಯನ್ನು ಅನ್ಯ ಉದ್ದೇಶಕ್ಕೆ ನೀಡಬಾರದು. ತೋಟಗಾರಿಕೆ ಆಸ್ತಿ ಉಳಿಸಿಕೊಳ್ಳಲು ಜಿಲ್ಲೆಯಾದ್ಯಂತ ಹೋರಾಟ ರೂಪಿಸಲಾಗಿದ್ದು ಜಿಲ್ಲೆಯ ಎಲ್ಲಾ ಸಂಘಟನೆಗಳು ಕೈಜೋಡಿಸಬೇಕು. ಯಾವುದೇ ಪರ್ಯಾಯ ಭೂಮಿಯಲ್ಲಿ ಕೋರ್ಟ್ ನಿರ್ಮಾಣಕ್ಕೆ ಭೂಮಿ ಕೊಡಲಿ' ಎಂದು ವಿಧಾನ ಪರಿಷತ್ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ತಿಳಿಸಿದರು. ಜೆಡಿಎಸ್ ಮುಖಂಡ ಜಿ.ಬಿ.ಶಿವಕುಮಾರ್, ರೈತ ನಾಯಕಿ ಸುನಂದಾ ಜಯರಾಂ ಇದ್ದರು.

'ಪ್ರಜಾವಾಣಿ'ಯಲ್ಲಿ ಮಂಗಳವಾರ 'ಕ್ಯಾಂಟೀನ್, ಕಾರ್‌ಶೆಡ್‌ನಲ್ಲಿ ಕೋರ್ಟ್ ಕಾರ್ಯಕಲಾಪ' ವಿಶೇಷ ವರದಿ ಪ್ರಕಟವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಮಹದಾಯಿ ವರದಿಗೆ ಅನುಮೋದನೆ ಅವಶ್ಯ:ಕಾರಜೋಳ

ಬೆಳಗಾವಿ: 'ಮಹದಾಯಿ ಯೋಜನೆ ಅನುಷ್ಠಾನಕ್ಕೆ ಪೂರ್ವ ಸಿದ್ಧತಾ ವರದಿಗೆ ಅನುಮೋದನೆ ಪಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಜಲಶಕ್ತಿ ಸಚಿವರ ಗಮನ ಸೆಳೆಯಲಾಗಿದೆ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಂಗಳವಾರ ಮಾತನಾಡಿದ ಅವರು, 'ಯಾವುದೇ ಯೋಜನೆ ಕೈಗೆತ್ತಿಕೊಳ್ಳುವ ಮುನ್ನ ಈ ವರದಿಗೆ (ಪ್ರಿ ಫಿಸಿಬಿಲಿಟಿ ರಿಪೋರ್ಟ್) ಅನುಮೋದನೆ ಬೇಕಾಗುತ್ತದೆ' ಎಂದರು.

'ಈ ವಿಷಯವಾಗಿ ನಾನು ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸಚಿವರನ್ನು ಭೇಟಿಯಾಗಿ ಚರ್ಚಿಸಿದ್ದೇವೆ. ಶೀಘ್ರವೇ ಅನುಮೋದನೆ ಕೊಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ' ಎಂದು ಹೇಳಿದರು.

'ಮಹದಾಯಿ ವಿವಾದ ಬಗೆಹರಿಸಲು ನಾವು ಕ್ರಮವಹಿಸಿದ್ದೇವೆ. ನಮ್ಮ ಸರ್ಕಾರದಲ್ಲೆ ಅನುಷ್ಠಾನಗೊಳಿಸುತ್ತೇವೆ. ಈ ವಿಷಯವಾಗಿ ಹೋರಾಟ ನಡೆಸುವುದಕ್ಕೆ ಕಾಂಗ್ರೆಸ್‌ನವರಿಗೆ ಯಾವುದೇ ನೈತಿಕ ಹಕ್ಕಿಲ್ಲ' ಎಂದರು.

ಸಾವಿರದ ಗಡಿ ದಾಟಿದ ಡೆಂಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಏರುಗತಿ ಪಡೆದುಕೊಂಡಿವೆ. ವಾರದಲ್ಲಿ 53 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 1,007ಕ್ಕೆ ತಲುಪಿದೆ.

ಕಳೆದ ವರ್ಷ ಆರು ತಿಂಗಳ ಅವಧಿಯಲ್ಲಿ ಇಷ್ಟು ಪ್ರಕರಣಗಳು ವರದಿಯಾಗಿದ್ದವು. ಈ ವರ್ಷ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 205 ಮಂದಿ ಡೆಂಗಿ ಜ್ವರಕ್ಕೆ ಒಳಗಾಗಿದ್ದಾರೆ. 22 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿಯಲ್ಲಿವೆ.

ಮೈಸೂರಿನಲ್ಲಿ 93, ಬಳ್ಳಾರಿಯಲ್ಲಿ 76, ಉಡುಪಿಯಲ್ಲಿ 75, ಚಿತ್ರದುರ್ಗದಲ್ಲಿ 68, ಕೊಪ್ಪಳದಲ್ಲಿ 67, ಶಿವಮೊಗ್ಗದಲ್ಲಿ 43, ವಿಜಯಪುರದಲ್ಲಿ 37, ದಕ್ಷಿಣ ಕನ್ನಡದಲ್ಲಿ 36, ಕೋಲಾರದಲ್ಲಿ 33, ರಾಯಚೂರಿನಲ್ಲಿ 28, ತುಮಕೂರಿನಲ್ಲಿ 26 ಹಾಗೂ ಯಾದಗಿರಿಯಲ್ಲಿ 24 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 20ಕ್ಕಿಂತ ಕಡಿಮೆ ಇವೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ಕೊಡಗು, ಚಿಕ್ಕಮಗಳೂರು, ಹಾಸನ, ಮಂಡ್ಯ, ಬೀದರ್, ಕಲಬುರಗಿ ಹಾಗೂ ಉತ್ತರ ಕನ್ನಡದಲ್ಲಿ ಡೆಂಗಿ ನಿಯಂತ್ರಣದಲ್ಲಿದ್ದು, ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿವೆ.

23 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿದ್ದು, 273 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ಕೋಲಾರ ಹಾಗೂ ವಿಜಯಪುರದಲ್ಲಿ ತಲಾ 52, ಬೆಂಗಳೂರು ಗ್ರಾಮಾಂತರದಲ್ಲಿ 34, ತುಮಕೂರಿನಲ್ಲಿ 29, ಚಿತ್ರದುರ್ಗದಲ್ಲಿ 17 ಹಾಗೂ ದಾವಣಗೆರೆಯಲ್ಲಿ 14 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

'ಡೆಂಗಿ ಜ್ವರ ಈ ವರ್ಷ ಕೆಲವರಲ್ಲಿ ಕಾಣಿಸಿಕೊಳ್ಳುತ್ತಿದೆ. ಮನೆಯ ಸುತ್ತಮುತ್ತಲಿನ ಘನತ್ಯಾಜ್ಯ ವಸ್ತುಗಳಲ್ಲಿ ಸಂಗ್ರಹವಾಗುವ ನೀರಿನಿಂದ ಈಡಿಸ್ ಜಾತಿಯ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಆ ಸೊಳ್ಳೆಗಳ ಕಡಿತದಿಂದ ಡೆಂಗಿ ಜ್ವರ ಬರುತ್ತದೆ. ಅಕಾಲಿಕ ಮಳೆಯಿಂದ ಈ ಜ್ವರ ಹೆಚ್ಚುವ ಸಾಧ್ಯತೆ ಇದೆ. ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಪಠ್ಯದಲ್ಲಿ ಉದ್ಯಮಶೀಲತೆ, ವೃತ್ತಿ ಮಾರ್ಗದರ್ಶನ ಕಡ್ಡಾಯ: ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಶೀಲತೆ ಬೆಳವಣಿಗೆ ಕುರಿತ ಪಠ್ಯವನ್ನು ಒಂಬತ್ತನೇ ತರಗತಿಯಿಂದ ಪಿಯುಸಿವರೆಗೆ ಅಳವಡಿಸಬೇಕು ಮತ್ತು ಎಂಟನೇ ತರಗತಿಯಿಂದ ಪದವಿ ಹಂತದವರೆಗೆ ವೃತ್ತಿ ಮಾರ್ಗದರ್ಶನ ಕಡ್ಡಾಯಗೊಳಿಸಬೇಕು ಎಂದು ಕೌಶಲ, ಉದ್ಯಮಶೀಲತೆ ಮತ್ತು ನವೋದ್ಯಮ ಕಾರ್ಯಪಡೆ ಶಿಫಾರಸು ಮಾಡಿದೆ.

ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್, ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರಿಗೆ ಮಂಗಳವಾರ ವರದಿ ಸಲ್ಲಿಸಿದರು.

ವರದಿ ಸ್ವೀಕರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, 'ಮುಂದಿನ 10 ವರ್ಷಗಳಲ್ಲಿ ಒಂದು ಕೋಟಿ ಉದ್ಯೋಗ ಸೃಷ್ಟಿಸುವ ಗುರಿ ಇದೆ. ಅದನ್ನು ಸಾಧಿಸುವುದಕ್ಕಾಗಿ ಕಾರ್ಯಪಡೆಯ ಶಿಫಾರಸಿನಂತೆ ಜಿಲ್ಲಾ ಮಟ್ಟದಲ್ಲಿ ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಉದ್ಯಮಶೀಲತಾ ವಿಕಸನ ಕೇಂದ್ರಗಳನ್ನು ಸ್ಥಾಪಿಸಲಾಗುವುದು' ಎಂದರು.

ಉದ್ಯಮಶೀಲತೆ ಮತ್ತು ಕೌಶಲಾಭಿವೃದ್ಧಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಇಸ್ರೇಲ್‌ನ ತಂತ್ರಜ್ಞಾನ ವರ್ಗಾವಣೆ ಕೇಂದ್ರಗಳ ಮಾದರಿಯಲ್ಲಿ 'ಕರ್ನಾಟಕ ಸಂಶೋಧನೆ ಮತ್ತು ನಾವೀನ್ಯತೆ ಪ್ರಾಧಿಕಾರ' ಸ್ಥಾಪಿಸಿ, ಅದನ್ನು ನೋಡಲ್ ಏಜೆನ್ಸಿಯನ್ನಾಗಿ ಮಾಡಲಾಗುವುದು. ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಕೌಶಲದ ಕುರಿತು ಮಾದರಿ ಸಮೀಕ್ಷೆ, ಜಿಲ್ಲಾ ಮಟ್ಟದಲ್ಲಿ ಉದ್ಯಮ ಸೌಲಭ್ಯ ಕೇಂದ್ರಗಳ ಸ್ಥಾಪನೆ, ಹೊಸ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಸುಲಭ ಸಾಲದ ವ್ಯವಸ್ಥೆ ಸೇರಿದಂತೆ ಕಾರ್ಯಪಡೆಯ ಶಿಫಾರಸುಗಳ ಆಧಾರದಲ್ಲಿ ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ಡಿಜಿಟಲ್ ಆರ್ಥಿಕತೆಯಲ್ಲಿ ಅದಕ್ಕೆ ಸಂಬಂಧಿಸಿದ ಕೌಶಲ ಹೊಂದಿರುವ ಯುವಜನರಿಗೆ ಹೆಚ್ಚಿನ ಬೇಡಿಕೆ ಇದೆ. ಇನ್ಫೋಸಿಸ್, ಮೈಕ್ರೋಸಾಫ್ಟ್, ಐಬಿಎಂ ಸೇರಿದಂತೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಂಪನಿಗಳಲ್ಲಿ ಇಂಟರ್ನ್‌ಶಿಪ್ ಮೂಲಕ ತರಬೇತಿ ಪಡೆಯಲು ಅವಕಾಶ ಕಲ್ಪಿಸಲಾಗುವುದು. 'ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್' ಮತ್ತು ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ ಈ ಯೋಜನೆ ಜಾರಿಗೊಳಿಸಲಾಗುವುದು ಎಂದರು.

'ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿರಾಜ್ ವಿಶ್ವವಿದ್ಯಾಲಯ ಹಾಗೂ ಎಂಟು ನಿರ್ವಹಣಾ ಅಧ್ಯಯನ ಸಂಸ್ಥೆಗಳ ಸಹಯೋಗದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ನಿರ್ವಾಹಕರಿಗೆ ಕೃಷಿ ಮತ್ತು ಕೃಷಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ತರಬೇತಿ ಆಯೋಜಿಸುವಂತೆ ಶಿಫಾರಸು ಮಾಡಲಾಗಿದೆ. ಇದರಿಂದ ಕೃಷಿ ಕ್ಷೇತ್ರದ ಸಬಲೀಕರಣ ಸಾಧ್ಯವಾಗುತ್ತದೆ' ಎಂದು ಸೆಲ್ವಕುಮಾರ್ ತಿಳಿಸಿದರು.

ರಾಜ್ಯ ನವೋದ್ಯಮ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ಜೀವನೋಪಾಯ ಇಲಾಖೆ ಮಿಷನ್ ನಿರ್ದೇಶಕಿ ಮಂಜುಶ್ರೀ, ಜಿಟಿಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಘವೇಂದ್ರ, ಕಾರ್ಯಪಡೆಯ ಸಂಚಾಲಕ ಮದನ್ ಪದಕಿ ಇದ್ದರು.

'ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಅಭಿವೃದ್ಧಿಗೆ ಐಬಿಎಂ ಆಸಕ್ತಿ'

ಬೆಂಗಳೂರು: 'ನಗರ ಸರ್ಕಾರಿ ಶ್ರೀಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ತಾಂತ್ರಿಕ ಮಹಾ ವಿದ್ಯಾಲಯದ (ಎಂಜಿನಿಯರಿಂಗ್ ಕಾಲೇಜು) ಅಭಿವೃದ್ಧಿಯಲ್ಲಿ ಸಹಭಾಗಿತ್ವ ವಹಿಸುವಂತೆ ಐಬಿಎಂ ಕಂಪನಿಗೆ ಮನವಿ ಮಾಡಲಾಗಿದೆ. ಸಕಾರಾತ್ಮಕ ಸ್ಪಂದನೆ ಲಭಿಸಿದೆ' ಎಂದು ಮಾಹಿತಿ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಐಬಿಎಂ ಕಂಪನಿಯ ಹಿರಿಯ ಅಧಿಕಾರಿಗಳ ತಂಡವು ಸಚಿವರನ್ನು ಮಂಗಳವಾರ ಭೇಟಿಮಾಡಿ ಚರ್ಚೆ ನಡೆಸಿತು. ಬಳಿಕ ಸಚಿವರು ಈ ವಿಷಯ ತಿಳಿಸಿದರು.

ಐಬಿಎಂ ದಕ್ಷಿಣ ಏಷ್ಯಾ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಪಟೇಲ್, 'ಸೈಬರ್ ಭದ್ರತೆಗೆ ಸಂಬಂಧಿಸಿದ ಅತ್ಯಾಧುನಿಕ ಕಮಾಂಡ್ ಸೆಂಟರ್ ಅನ್ನು ಕಂಪನಿಯು ಬೆಂಗಳೂರಿನಲ್ಲಿ ತೆರೆದಿದೆ. ರಾಜ್ಯ ಸರ್ಕಾರವು ತನ್ನ ದತ್ತಾಂಶಗಳ ಸಂರಕ್ಷಣೆಗೆ ಈ ಕೇಂದ್ರವನ್ನು ಬಳಸಿಕೊಳ್ಳಬಹುದು' ಎಂದರು.

ಸೈಬರ್ ಭದ್ರತಾ ನೀತಿ ರೂಪಿಸುವ ಪ್ರಕ್ರಿಯೆಯಲ್ಲೂ ರಾಜ್ಯ ಸರ್ಕಾರಕ್ಕೆ ಸಹಕಾರ ನೀಡಲು ಸಿದ್ಧ. ಕರ್ನಾಟಕ ಹಾಲು ಮಹಾಮಂಡಳದಲ್ಲೂ (ಕೆಎಂಎಫ್) ಸೈಬರ್ ಭದ್ರತೆಗೆ ನೆರವು ನೀಡಲು ಕಂಪನಿ ಸಿದ್ಧವಿದೆ ಎಂದರು.

ಸಹಭಾಗಿತ್ವ: ರಾಜ್ಯದಲ್ಲಿ 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿವೆ. ಅವುಗಳ ಅಭಿವೃದ್ಧಿಗೂ ನೆರವು ನೀಡಲು ಐಬಿಎಂ ಆಸಕ್ತಿ ಹೊಂದಿದೆ. ರಾಜ್ಯ ಸರ್ಕಾರ ವಿವಿಧೆಡೆ ಸ್ಥಾಪಿಸಿರುವ ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಉನ್ನತೀಕರಣದಲ್ಲೂ ಸಹಭಾಗಿತ್ವ ವಹಿಸಲು ಕಂಪನಿ ಮುಕ್ತ ಮನಸ್ಸು ಹೊಂದಿದೆ ಎಂದರು.

ಐಬಿಎಂ ಕ್ಲೌಡ್ ಮತ್ತು ಕಾಗ್ನಿಟಿವ್ ಸಾಫ್ಟ್‌ವೇರ್ ಲ್ಯಾಬ್ಸ್ ವಿಭಾಗದ ಉಪಾಧ್ಯಕ್ಷ ಗೌರವ್ ಶರ್ಮ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಕಿಶೋರ್ ಬಾಲಾಜಿ ಇದ್ದರು.

ಗಡುವು ನೀಡಿದ ಹೈಕೋರ್ಟ್

ಬೆಂಗಳೂರು: 'ಡಿಪ್ಲೊಮಾ ಇನ್ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫರಿ (ಜಿಎನ್ಎಂ) ಕೋರ್ಸ್ ಆರಂಭಿಸಲು ಅನುಮತಿ ಕೋರಿ 25 ನರ್ಸಿಂಗ್ ಶಿಕ್ಷಣ ಸಂಸ್ಥೆಗಳು 2019ರಲ್ಲಿ ಸಲ್ಲಿಸಿರುವ ಅರ್ಜಿಗಳನ್ನು 8 ವಾರಗಳಲ್ಲಿ ಪರಿಗಣಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಜೆಪಿಐ ದಾಸ್ ಸ್ಕೂಲ್ ಆಫ್ ನರ್ಸಿಂಗ್ ಮತ್ತು ಇತರೆ 24 ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'2021–22ನೇ ಸಾಲಿನಲ್ಲಿ ಹೊಸ ಕೋರ್ಸ್ ಆರಂಭಕ್ಕೆ ಅನುಮತಿ ನೀಡುವ ಅಥವಾ ನೀಡದೇ ಇರುವ ಬಗ್ಗೆ ಸರ್ಕಾರ ಯಾವುದಾದರೂ ಒಂದು ನಿರ್ಧಾರ ಕೈಗೊಳ್ಳಬೇಕು.

ಒಂದು ವೇಳೆ ಅರ್ಜಿ ತಿರಸ್ಕರಿಸಿದರೆ ಅದಕ್ಕೆ ಸೂಕ್ತ ಕಾರಣ ನೀಡಬೇಕಾಗುತ್ತದೆ' ಎಂದು ನ್ಯಾಯಪೀಠ ಆದೇಶಿಸಿದೆ.

ಮೌಲ್ಯಮಾಪನ ಲೋಪ: 1,200 ಶಿಕ್ಷಕರು ಕಪ್ಪುಪಟ್ಟಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಹಿಂದೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಲೋಪ ಎಸಗಿದ 1,200 ಶಿಕ್ಷಕರನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಪ್ಪುಪಟ್ಟಿಗೆ ಸೇರಿಸಿದೆ. ಅಲ್ಲದೆ, ಈ ಶಿಕ್ಷಕರಿಗೆ ದಂಡವನ್ನೂ ವಿಧಿಸಿದೆ.

2021–22ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ 234 ಕೇಂದ್ರಗಳಲ್ಲಿ ಇದೇ 23ರಿಂದ ಆರಂಭವಾಗಲಿದೆ. ಆದರೆ, ಕಪ್ಪುಪಟ್ಟಿಯಲ್ಲಿ ಹೆಸರಿರುವ ಶಿಕ್ಷಕರನ್ನು ಮೌಲ್ಯಮಾಪನ ಕಾರ್ಯದಿಂದ ಹೊರಗಿಡಲಾಗಿದೆ. ಈ ವರ್ಷ 65 ಸಾವಿರಕ್ಕೂ ಹೆಚ್ಚು ಶಿಕ್ಷಕರು ಮೌಲ್ಯಮಾಪನದಲ್ಲಿ ಭಾಗವಹಿಸಲಿದ್ದಾರೆ.

ಮೌಲ್ಯಮಾಪನಗೊಂಡ ಉತ್ತರಪತ್ರಿಕೆಗಳ ಮರು ಮೌಲ್ಯಮಾಪನದ ಸಂದರ್ಭದಲ್ಲಿ ಆರು ಅಥವಾ ಅದಕ್ಕಿಂತ ಹೆಚ್ಚು ಅಂಕಗಳ ವ್ಯತ್ಯಾಸ ಕಂಡುಬಂದ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಿದ ಶಿಕ್ಷಕರಿಗೆ ದಂಡ ವಿಧಿಸಿ, ಕಪ್ಪುಪಟ್ಟಿಗೆ ಸೇರಿಸಲಾಗಿದೆ.

'ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನದ ಸಂದರ್ಭದಲ್ಲಿ ಪತ್ತೆಯಾದ ಅಂಕಗಳ ವ್ಯತ್ಯಾಸವನ್ನು ಆಧರಿಸಿ ₹ 800ರಿಂದ ₹ 2000ದವರೆಗೆ ದಂಡ ವಿಧಿಸಲಾಗಿದೆ. ದಂಡ ಪಾವತಿಸಿದ ಶಿಕ್ಷಕರನ್ನು ಮುಂದಿನ ವರ್ಷದಿಂದ ಮೌಲ್ಯಮಾಪನ ಕಾರ್ಯಕ್ಕೆ ಪರಿಗಣಿಸಲಾಗುವುದು. ಪಾವತಿಸದವರು, ದಡ ಮೊತ್ತ ಪಾವತಿಸುವರೆಗೂ ಕಪ್ಪುಪಟ್ಟಿಯಲ್ಲಿಯೇ ಮುಂದುವರಿಯಲಿದ್ದಾರೆ' ಎಂದು ಪರೀಕ್ಷಾ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

ಮೌಲ್ಯಮಾಪನ ಲೋಪಕ್ಕೆ ಎಷ್ಟು ದಂಡ

ಅಂಕ ವ್ಯತ್ಯಾಸ	ದಂಡ (₹ಗಳಲ್ಲಿ)
6ರಿಂದ 10	800
11ರಿಂದ 15	1,000
16ರಿಂದ 20	1,500
20ಕ್ಕಿಂತ ಹೆಚ್ಚು	2,000

ಕರ್ನಾಟಕವನ್ನು ಎಟಿಎಂ ಆಗಿ ಬಳಸಿಕೊಳ್ಳಲು ಬಿಡುವುದಿಲ್ಲ: ಅರುಣ್ ಸಿಂಗ್

'ಕಾಂಗ್ರೆಸ್ ನಾಯಕತ್ವರಹಿತ ಪಕ್ಷ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ದೇಶ ಮತ್ತು ರಾಜ್ಯದಲ್ಲಿ ನಾಯಕತ್ವರಹಿತ ಪಕ್ಷವಿದ್ದರೆ ಅದು ಕಾಂಗ್ರೆಸ್ ಮಾತ್ರ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ಅರುಣ್ ಸಿಂಗ್ ಟೀಕಿಸಿದರು.

ಪಕ್ಷದ ಸಂಘಟನಾತ್ಮಕ ಸಭೆಗಾಗಿ ಇಲ್ಲಿಗೆ ಬಂದಿರುವ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದರು.

'ರಾಜಸ್ಥಾನ ಹಾಗೂ ಛತ್ತೀಸಗಡದಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿದೆ. ಉಳಿದೆಲ್ಲ ರಾಜ್ಯಗಳಲ್ಲೂ ತನ್ನ ಅಸ್ತಿತ್ವಕ್ಕಾಗಿ ಪರದಾಡುತ್ತಿದೆ. ನಾಯಕತ್ವದ ಕೊರತೆಯಿಂದ ಆ ಪಕ್ಷದಲ್ಲಿ ಸಂಪೂರ್ಣ ಗೊಂದಲಮಯ ಸ್ಥಿತಿ ಇದೆ. ಅಂಥವರಿಗೆ ನಮ್ಮ ಸರ್ಕಾರದ ಬಗ್ಗೆ ಮಾತನಾಡಲು ಯಾವುದೇ ವಿಷಯಗಳಿಲ್ಲ ಹಾಗೂ ನೈತಿಕತೆಯೂ ಇಲ್ಲ. ಕರ್ನಾಟಕದಲ್ಲೂ ಸಂಪೂರ್ಣ ನೆಲ ಕಚ್ಚಿದೆ' ಎಂದು ವಾಗ್ದಾಳಿ ನಡೆಸಿದರು.

'ಅಧಿಕಾರದಲ್ಲಿದ್ದಾಗ ಕರ್ನಾಟಕವನ್ನು ಕಾಂಗ್ರೆಸ್‌ನವರು ಎಟಿಎಂನಂತೆ ಬಳಸಿಕೊಂಡಿದ್ದರು. ಈಗ ಮತ್ತದೇ ಗುಂಗಿನಲ್ಲಿದ್ದಾರೆ. ಅಧಿಕಾರಕ್ಕಾಗಿ ಹವಣಿಸುತ್ತಿದ್ದಾರೆ. ಆದರೆ, ಯಾವುದೇ ಕಾರಣಕ್ಕೂ ನಾವು ಕರ್ನಾಟಕವನ್ನು ಎಟಿಎಂ ಆಗಿ ಮಾಡಿಕೊಳ್ಳಲು ಬಿಡುವುದಿಲ್ಲ' ಎಂದು ಗುಡುಗಿದರು.

ಪರಿವಾರ ಸಂಪ್ರದಾಯವಿಲ್ಲ: 'ಕಾಂಗ್ರೆಸ್, ಎನ್‌ಸಿಪಿ, ಸಮಾಜವಾದಿ ಪಕ್ಷ ಸೇರಿದಂತೆ ಬಹುತೇಕ ಪಕ್ಷಗಳಲ್ಲಿ ಪರಿವಾರದ ನಾಯಕತ್ವದ ಹಾಗೂ ಅವರಿಗೆ ಮಣೆ ಹಾಕುವ ಸಂಪ್ರದಾಯವಿದೆ. ಆದರೆ, ಬಿಜೆಪಿಯಲ್ಲಿ ಅಂತಹ ಯಾವುದೇ ಸಂಪ್ರದಾಯ ಇಲ್ಲ' ಎಂದರು.

ಕಾಂಗ್ರೆಸ್ ನೆಲ ಕಚ್ಚಿಸುತ್ತೇವೆ: 'ಡಬಲ್ ಎಂಜಿನ್ ಸರ್ಕಾರಗಳ ಬಗ್ಗೆ ಉತ್ತಮ ಅಭಿಪ್ರಾಯವಿದೆ. ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ಬಸವರಾಜ ಬೊಮ್ಮಾಯಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಾಯಕತ್ವದಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ನೆಲ ಕಚ್ಚುವಂತೆ ಮಾಡುತ್ತೇವೆ' ಎಂದರು.

'ಕಾಂಗ್ರೆಸ್ ಪಕ್ಷವು ಜಾತಿ-ಧರ್ಮವನ್ನು ಒಡೆಯುವ ಕಾರ್ಯದಲ್ಲಿ ತೊಡಗಿದೆ. ಹಿಜಾಬ್ ವಿವಾದವನ್ನು ಬೆಂಬಲಿಸಿದವರೆ ಕಾಂಗ್ರೆಸ್ಸಿಗರು. ಸಿದ್ದರಾಮಯ್ಯ ಸೇರಿದಂತೆ ಅನೇಕ ನಾಯಕರು ಎಸ್‌ಡಿಪಿಐ, ಪಿಎಫ್‌ಐ ಮೊದಲಾದ ಸಂಘಟನೆಗಳಿಗೆ ಬೆಂಬಲ ಕೊಡುತ್ತಾ ಬಂದಿದ್ದಾರೆ' ಎಂದು ಆರೋಪಿಸಿದರು.

'ನಮ್ಮ ಸರ್ಕಾರ ಸೂಕ್ಷ್ಮ ವಿಷಯಗಳನ್ನು ಕಾನೂನು ಚೌಕಟ್ಟಿನಲ್ಲಿ ಸಮರ್ಥವಾಗಿ ನಿಭಾಯಿಸಿದೆ' ಎಂದು ಪ್ರತಿಕ್ರಿಯಿಸಿದರು.

ಮಹದಾಯಿ ಚಿಂತಿಸಬೇಡಿ: 'ಮಹದಾಯಿ ವಿವಾದ ಅಂತರರಾಜ್ಯ ಹಾಗೂ ದೊಡ್ಡದಾದ ವಿಷಯ ಆಗಿರುವುದರಿಂದ ಅದನ್ನು ಸೂಕ್ಷ್ಮವಾಗಿ ನಿಭಾಯಿಸಲಾಗುತ್ತಿದೆ. ಆದಷ್ಟು ಬೇಗ ವಿವಾದಕ್ಕೆ ಪರಿಹಾರ ಸಿಗಲಿದೆ. ನೀವು (ಮಾಧ್ಯಮದವರು) ಚಿಂತಿಸಬೇಡಿ' ಎಂದು ಅರುಣ್ ಸಿಂಗ್ ಹೇಳಿದರು.

ಉದ್ಯೋಗ ವಾಣಿ

MARIGOLD INTERNATIONAL SCHOOL
KUMBALGODU, MYSORE ROAD,
BANGALORE -560 074.

Invites applications for the following positions from dynamic & experienced candidates with good academic record & excellent communication skill with proficiency in computer applications for the academic year 2022-2023

1. **Pre-Primary Teachers :** Graduation with MTT/ NTT/ B.Ed.
2. **Activity Teacher:** Graduation with proficiency in Performing & Visual Arts.
3. **Primary Teachers (All subjects) :** Graduation / Post Graduation in respective subject with B.Ed.
4. **Teachers to Teach English, Hindi & Social Science at Middle & Secondary level :** Graduation/ Post Graduation in respective subject with B.Ed.
5. **Music (classical & western) Teacher** : BA / MA (Music) with knowledge of Carnatic / Hindustani & Folk music. Should be proficient to play one string instrument and Harmonium / Synthesizer.
6. **Special Education Teacher** : Graduate with B.Ed. (Special Education) / B.Ed. (General and Diploma in Special Education).

Salary shall commensurate with experience & merit and shall not be a constraint for the deserving candidate. Only shortlisted candidates will be called for interview. Interested candidates can send their CV to:- **career@marigold.school** within 10 days from the date of advertisement.

KLE TECHNOLOGICAL UNIVERSITY
Creating Value, Leveraging Knowledge
VIDYANAGAR, HUBBALLI-580 031

Call for Ph.D. Admissions

KLE Technological University invites applications for PhD Programmes in the following Schools, Departments, & Centers

- School of Civil Engineering
- School of Computer Science Engineering
- School of Electronics & Communication Engineering
- School of Mechanical Engineering
- School of Management Studies & Research
- Department of Electrical & Electronics Engineering
- Department of Biotechnology
- Department of Automation & Robotics
- Department of Humanities & Social Studies
- Department of Physics
- Department of Chemistry
- Department of Mathematics
- Centre for Engineering Education & Research

Last date for submitting application : 29-04-2022
Date of Research Entrance Test (RET) : 22-05-2022

RET Exam timings : 10.30 AM to 12.30 PM

For application form, eligibility criteria and other details, please visit www.kletech.ac.in

Registrar
KLE Technological University, Hubballi

NMDC Limited
(A GOVERNMENT OF INDIA ENTERPRISE)
"Khanij Bhavan",10-3-311/A, Castle Hills, Masab Tank, Hyderabad-500028.
Phone +91-40-23538713-20; Fax:+91-40-23538711.
CIN:L13100TG1958GOI001674

Employment Notification No. 09/2022 **Date:08.04.2022**

NMDC Ltd. a Navaratna Public Sector Enterprise under the Ministry of Steel, Government of India and a multi locational, multi product and consistently profit-making Mining & Mineral Exploration Organization is in the process of expansion and diversification activities both in India and abroad. NMDC is operating a Pellet Plant at Donimalai, Dist-Bellary, Karnataka.

2.0 For Operation & Maintenance and other allied services of NMDC's Pellet Plant at Donimalai, NMDC needs to engage persons having experience in various areas of Pellet Plant/Steel Plant such as Metallurgy/Mineral Processing, Chemical, Electrical, Instrumentation, Mechanical, Civil, C&IT, IE, Materials Management and Commercial & Logistics. The candidates who are having above experience of Pellet Plant/Steel Plant will be engaged on contract basis in Pellet Plant, Donimalai, Dist. Bellary, Karnataka.

Sl. No.	POST	DISCIPLINE
01.	Executive-II (Contract)	1) Metallurgy/Mineral Processing 2) Chemical 3) Electrical 4) Instrumentation 5) Mechanical 6) Civil 7) C&IT 8) Industrial Engg. 9) Materials Management 10) Commercial & Logistics
02.	Executive-I(b) (Contract)	
03.	Executive-I(a) (Contract)	

For further details regarding Age, Qualification, Experience, Post, Remuneration to be paid, Selection process etc. and for online registration, interested candidates may visit **"Careers"** page of NMDC website, **www.nmdc.co.in**

CGM (Personnel)

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಸೆಂಟರ್, ಮುಂಬೈ
ದೂರವಾಣಿ: 022-22820427; ಫ್ಯಾಕ್ಸ್: 022-22820411

ನಿಯಮಿತ/ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ	ಹುದ್ದೆ	ಗುತ್ತಿಗೆ/ ನಿಯಮಿತ ಶ್ರೇಣಿ/ಸ್ಕೇಲ್	ಖಾಲಿ ಹುದ್ದೆ	ಜಾಹೀರಾತು ನಂ.
1	ಹಿರಿಯ ಕಾರ್ಯ ನಿರ್ವಾಹಕರು (ಅರ್ಥ ಶಾಸ್ತ್ರಜ್ಞ)	ಗುತ್ತಿಗೆಗೆ ಸಮಾನ ಎಮ್‌ಎಮ್‌ಜಿಎಸ್-II	02	CRPD/SCO/ 2022-23/01
2	ಸಲಹೆಗಾರರು (ವಂಚನೆ ರಿಸ್ಕ್)	ಗುತ್ತಿಗೆಗೆ ಸಮಾನ ಟಿಇಜಿಎಸ್-VII (ಪ್ರಧಾನ ವ್ಯವಸ್ಥಾಪಕರು)	04	CRPD/SCO/ 2022-23/02
3	ವ್ಯವಸ್ಥಾಪಕರು (ಕಾರ್ಯ ನಿರ್ವಹಣೆ ಯೋಜನೆ ಮತ್ತು ವಿಮರ್ಶೆ)	ನಿಯಮಿತ ಎಮ್‌ಎಮ್‌ಜಿಎಸ್-III	02	CRPD/SCO/ 2022-23/03

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿರಿ https://bank.sbi/web/careers. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ನೋಡಿರಿ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ:** 08.04.2022 **ರಿಂದ** 28.04.2022

ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: **"CONTACT US" —> "Post Your Query"** ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಸ್ಥಳ: ಮುಂಬೈ
ದಿನಾಂಕ: 08.04.2022

ಪ್ರಧಾನ ವ್ಯವಸ್ಥಾಪಕರು

ರಷ್ಯಾ ಪಡೆಗಳ ವಿರುದ್ಧ ನಗರದ ಮೇಯರ್ ಆರೋಪ ● ರಸಾಯನಿಕ ದಾಳಿ ನಡೆಸುವ ಸಾಧ್ಯತೆ: ಝುಲೆನ್‌ಸ್ಕಿ

ಮರಿಯುಪೋಲ್: 10 ಸಾವಿರಕ್ಕೂ ಹೆಚ್ಚು ಜನ ಬಲಿ

ಕೀವ್ (ಎಪಿ): ಆರು ವಾರಗಳಿಂದ ರಷ್ಯಾ ನಡೆಸುತ್ತಿರುವ ಭೀಕರ ದಾಳಿಯಿಂದ ಉಕ್ರೇನ್‌ನ ಪ್ರಮುಖ ಬಂದರು ನಗರ ಮರಿಯುಪೋಲ್‌ನಲ್ಲಿ 10,000ಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದಾರೆ. ಬಲಿಯಾದವರ ಕಳೇಬರಹಗಳು ರಸ್ತೆಯುದ್ದಕ್ಕೂ ಚಾಚಿಕೊಂಡಿವೆ ಎಂದು ಮೇಯರ್ ವಾಡಿಂ ಬಾಯ್ಚೆಂಕೊ ತಿಳಿಸಿದ್ದಾರೆ.

ಈ ಸಂಬಂಧ ಮಂಗಳವಾರ ದೂರವಾಣಿ ಮುಖಾಂತರ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ಮರಿಯುಪೋಲ್‌ನ ಮೇಯರ್, 'ತಾನು ನಡೆಸಿದ ಹತ್ಯಾಕಾಂಡವನ್ನು ಹೊರ ಜಗತ್ತಿಗೆ ಗೊತ್ತಾಗದಂತೆ ಕೆಲವು ವಾರಗಳ ಕಾಲ ರಷ್ಯಾದ ಪಡೆಗಳು ತಡೆದಿದ್ದವು. ರಷ್ಯಾದ ದಾಳಿಯಿಂದ ನಗರದಲ್ಲಿ ಸಾವಿಗೀಡಾದವರ ಸಂಖ್ಯೆ 20,000 ಮೀರಿರಬಹುದು. ಶವಗಳನ್ನು ತ್ವರಿತವಾಗಿ ದಹಿಸಲು ಸಂಚಾರಿ ದಹನ ಯಂತ್ರಗಳನ್ನು ರಷ್ಯಾ ಪಡೆಗಳು ಟ್ರಕ್‌ಗಳಲ್ಲಿ ತಂದಿದ್ದವು' ಎಂದು ದೂರಿದ್ದಾರೆ.

ರಷ್ಯಾದಿಂದ ರಸಾಯನಿಕ ದಾಳಿ ಸಾಧ್ಯತೆ- ಝುಲೆನ್‌ಸ್ಕಿ ಎಚ್ಚರಿಕೆ: ರಷ್ಯಾ ರಸಾಯನಿಕ ಶಸ್ತ್ರಾಸ್ತ್ರಗಳ ಮೂಲಕ ದಾಳಿ ನಡೆಸುವ ಸಾಧ್ಯತೆಯಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್‌ಸ್ಕಿ ಎಚ್ಚರಿಕೆ ನೀಡಿದ್ದಾರೆ. ಈ ವಿಚಾರವನ್ನು ಸಾಧ್ಯವಾದಷ್ಟು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ಹೇಳಿದ್ದಾರೆ.

ಎಲ್ಲಾ ಆಯ್ಕೆಗಳು ನಮ್ಮ ಮುಂದಿವೆ- ಬ್ರಿಟನ್ (ಲಂಡನ್ ವರದಿ, **ರಾಯಿಟರ್ಸ್):** 'ರಷ್ಯಾದಿಂದ ಉಕ್ರೇನ್‌ನಲ್ಲಿ ಯಾವುದೇ ಬಗೆಯ ರಾಸಾಯನಿಕ ಅಸ್ತ್ರಗಳ ಬಳಕೆಯಾದರೆ, ಅದಕ್ಕೆ ಪ್ರತಿಕ್ರಿಯೆಯಾಗಿ ಏನು ಮಾಡಬೇಕು ಎಂಬುದರ ಕುರಿತ ಎಲ್ಲಾ ಆಯ್ಕೆಗಳು ನಮ್ಮ ಮುಂದಿವೆ' ಎಂದು ಬ್ರಿಟನ್ ರಕ್ಷಣಾ ಸಚಿವ ಜೇಮ್ಸ್ ಹೆಪ್ಪಿ ಮಂಗಳವಾರ ತಿಳಿಸಿದ್ದಾರೆ.

ಮನೆ-ಮಠ ತೊರೆದಿರುವ ಮಕ್ಕಳು: ರಷ್ಯಾದ ದಾಳಿಯಿಂದಾಗಿ ಉಕ್ರೇನ್‌ನ ಒಟ್ಟಾರೆ ಮಕ್ಕಳ ಪೈಕಿ ಸುಮಾರು ಮೂರನೇ ಎರಡರಷ್ಟು ಮಕ್ಕಳು ಮನೆಗಳನ್ನು ತೊರೆದಿದ್ದಾರೆ ಎಂದು ವಿಶ್ವಸಂಸ್ಥೆಯ ಮಕ್ಕಳ ಏಜೆನ್ಸಿಯಾದ ಯುನಿಸೆಫ್ ಹೇಳಿದೆ. ಅಲ್ಲದೆ 142 ಯುವಕರು ಮೃತಪಟ್ಟಿರುವುದನ್ನು ವಿಶ್ವಸಂಸ್ಥೆ ದೃಢಪಡಿಸಿದೆ.

ರಷ್ಯಾ ದಾಳಿಗೆ ತುತ್ತಾದ ಉಕ್ರೇನ್‌ಗೆ ಭೇಟಿ ನೀಡಿ ವಾಪಸ್ಸಾಗಿರುವ ಯುನಿಸೆಫ್‌ನ ತುರ್ತು ಕಾರ್ಯಕ್ರಮದ ನಿರ್ದೇಶಕ ಮಾನ್ಯುವೆಲ್ ಫಾಂಟೇನ್ ಅವರು, 'ಉಕ್ರೇನ್‌ನ 75 ಲಕ್ಷ ಮಕ್ಕಳ ಪೈಕಿ 48 ಲಕ್ಷ ಮಕ್ಕಳು ತಮ್ಮ ಮನೆ ಮಠಗಳನ್ನು ತೊರೆದಿದ್ದಾರೆ. ಅಲ್ಲದೆ ಅವರು ಓದು-ಬರಹಗಳಿಂದಲೂ ದೂರವಾಗಿದ್ದಾರೆ' ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಮಾಹಿತಿ ನೀಡಿದ್ದಾರೆ.

ಜಾನ್ಸನ್-ಬೈಡನ್ ಚರ್ಚೆ: ಲಂಡನ್ (ರಾಯಿಟರ್ಸ್): ಉಕ್ರೇನ್‌ಗೆ ಮಿಲಿಟರಿ ಮತ್ತು ಆರ್ಥಿಕ ಬೆಂಬಲವನ್ನು ಹೆಚ್ಚಿಸುವುದರ ಜೊತೆಗೆ ರಷ್ಯಾದ ತೈಲ ಮತ್ತು ಅನಿಲದ ಮೇಲಿನ ಪಾಶ್ಚಿಮಾತ್ಯ ಅವಲಂಬನೆಯನ್ನು ಕೊನೆಗೊಳಿಸುವ ಕುರಿತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಮಂಗಳವಾರ ಚರ್ಚಿಸಿದ್ದಾರೆ ಎಂದು ಜಾನ್ಸನ್ ಕಚೇರಿಯ ವಕ್ತಾರರು ತಿಳಿಸಿದ್ದಾರೆ.

ಉಕ್ರೇನ್‌ನ ಸ್ಲೋವಿಯನ್ಸ್ಕ್ ಕೇಂದ್ರ ರೈಲು ನಿಲ್ದಾಣದಲ್ಲಿ ವಲಸೆ ಹೊರಟ ಜನರು – ಎಎಫ್‌ಪಿ ಚಿತ್ರ

ರಷ್ಯಾವನ್ನು ಏಕಾಂಗಿಯಾಗಿಸುವುದು ಅಸಾಧ್ಯ: ಅಧ್ಯಕ್ಷ ಪುಟಿನ್

ಮಾಸ್ಕೊ (ಎಪಿ): ಯಾವುದೇ ಕಾರಣಕ್ಕೂ ವಿದೇಶಿ ಶಕ್ತಿಗಳಿಗೆ ರಷ್ಯಾವನ್ನು ಏಕಾಂಗಿಯಾಗಿಸಲು ಸಾಧ್ಯವಿಲ್ಲ ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಗುಡುಗಿದ್ದಾರೆ. ರಷ್ಯಾದ ಪೂರ್ವ ಭಾಗದಲ್ಲಿರುವ 'ವೊಸ್ಟೊಚ್ನಿ' ಬಾಹ್ಯಾಕಾಶ ಉಡ್ಡಯನ ಕೇಂದ್ರಕ್ಕೆ ಮಂಗಳವಾರ ಭೇಟಿ ನೀಡಿ ಮಾತನಾಡಿದ ಅವರು, 'ರಷ್ಯಾ ತನ್ನಿಂತಾನೇ ಏಕಾಂಗಿಯಾಗಿರಲು ಇಚ್ಛಿಸುವುದಿಲ್ಲ. ಅದೇ ರೀತಿ ವಿಶ್ವದ ಯಾವುದೇ ದೇಶವೂ ರಷ್ಯಾವನ್ನು ಏಕಾಂಗಿಯಾಗಿಸಲು ಆಗದು. ನಮ್ಮ ಜೊತೆಗೆ ಸಹಕರಿಸುವ ದೇಶಗಳೊಂದಿಗೆ ನಾವು ಕಾರ್ಯ ನಿರ್ವಹಿಸುತ್ತೇವೆ' ಎಂದು ಅವರು ಹೇಳಿದ್ದಾರೆ. ಉಕ್ರೇನ್ ಮೇಲೆ ದಾಳಿ ಆರಂಭಿಸಿದ ಫೆಬ್ರುವರಿ 24ರ ಬಳಿಕ ಅಧ್ಯಕ್ಷ ಪುಟಿನ್ ಅವರು ರಾಜಧಾನಿ ಮಾಸ್ಕೊದ ಹೊರ ಭಾಗಕ್ಕೆ ನೀಡಿದ ಮೊದಲ ಭೇಟಿ ಇದಾಗಿದೆ.

48ನೇ ದಿನದ ಬೆಳವಣಿಗೆ

- ಯುರೋಪ್‌ನ ಕೆಲ ದೇಶಗಳಿಂದಾಗಿ ದಾಳಿಯನ್ನು ಮುಂದುವರಿಸಬಹುದು ಎಂದು ರಷ್ಯಾದ ರಾಜಕೀಯ ಮತ್ತು ಸೇನಾ ನಾಯಕತ್ವ ಭಾವಿಸಿದೆ. ಹೀಗಾಗಿ ರಷ್ಯಾದ ಎಲ್ಲಾ ಬ್ಯಾಂಕ್‌ಗಳ ಮೇಲೆ ನಿರ್ಬಂಧ ಹೇರಬೇಕು. ಯುರೋಪ್ ಈ ಯುದ್ಧ ಗೆಲ್ಲಲೇಬೇಕು: ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್‌ಸ್ಕಿ
- ಉಕ್ರೇನ್ ಮೇಲೆ ದಾಳಿ ನಡೆಸುತ್ತಿರುವ ಕಾರಣ ರಷ್ಯಾದ ಮಾರುಕಟ್ಟೆಯಿಂದ ಹೊರ ನಡೆಯುತ್ತೇವೆ: ಟೆಲಿಕಾಮ್ಸ್ ನೆಟ್‌ವರ್ಕ್ ಮತ್ತು 5ಜಿ ತಂತ್ರಜ್ಞಾನ ಪೂರೈಕೆದಾರ ನೋಕಿಯಾ ಘೋಷಣೆ
- ಮರಿಯುಪೋಲ್ ನಗರದಲ್ಲಿ ಉಕ್ರೇನ್ ಪಡೆಗಳನ್ನು ನಾಶ ಮಾಡಲು ರಾಸಯನಿಕ ಅಸ್ತ್ರ ಬಳಸಲಾಗಿದೆ ಎಂಬ ಆರೋಪ ತಳ್ಳಿಹಾಕಿದ ರಷ್ಯಾ ಬೆಂಬಲಿತ ಉಕ್ರೇನ್ನಿನ ಪ್ರತ್ಯೇಕತಾವಾದಿಗಳು
- ಉಕ್ರೇನ್ ಮೇಲಿನ ಯುದ್ಧವನ್ನು ನಿಲ್ಲಿಸುವಂತೆ ಒತ್ತಡ ಹೇರುವ ಭಾಗವಾಗಿ ಜಪಾನ್ ಸರ್ಕಾರ, ರಷ್ಯಾದ ಮೇಲೆ ಮತ್ತಷ್ಟು ನಿರ್ಬಂಧಗಳನ್ನು ಹೇರಲು ಮುಂದಾಗಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಇಬ್ಬರು ಪುತ್ರಿಯರು ಸೇರಿದಂತೆ ರಷ್ಯಾದ 400 ಮಂದಿಯ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆ. ಜೊತೆಗೆ ಜಪಾನ್ ದೇಶದಲ್ಲಿನ ರಷ್ಯಾದ ಹೊಸ ಹೂಡಿಕೆಗಳು ಮತ್ತು ವೊಡ್ಕಾ ಆಮದುಗಳಿಗೆ ನಿರ್ಬಂಧ
- ಉಕ್ರೇನ್‌ನ ಮಹಿಳೆಯರು ಸೇರಿದಂತೆ 130ಕ್ಕೂ ಹೆಚ್ಚು ಮಂದಿಗೆ ಝೆಕ್ ರಿಪಬ್ಲಿಕ್‌ನಿಂದ ರೈಫಲ್ ಬಳಕೆ ಸಂಬಂಧ ಉಚಿತ ತರಬೇತಿ. ಇವರಲ್ಲಿ ಬಹುತೇಕರು ಇದೇ ಮೊದಲ ಬಾರಿಗೆ ಶಸ್ತ್ರಾಸ್ತ್ರಗಳನ್ನು ಬಳಸುತ್ತಿದ್ದಾರೆ.
- ಜಪಾನ್ ಮತ್ತು ಇಟಲಿ ಮಿಲಿಟರಿ ಸಹಕಾರವನ್ನು ವೃದ್ಧಿಸಲು ಮುಂದಾಗಿವೆ. 'ಯುರೋಪ್ ಜೊತೆಗೆ ಭದ್ರತಾ ಸಂಬಂಧಗಳನ್ನು ವಿಸ್ತರಿಸುತ್ತಿರುವುದರ ಭಾಗವಾಗಿ ನಾನು ಮತ್ತು ಇಟಲಿ ವಿದೇಶಾಂಗ ಸಚಿವರು ಪರಸ್ಪರ ಮಿಲಿಟರಿ ಸಹಕಾರಕ್ಕೆ ಒಪ್ಪಿಗೆ ಸೂಚಿಸಿದ್ದೇವೆ' ಎಂದು ಮಂಗಳವಾರ ಜಪಾನಿನ ರಕ್ಷಣಾ ಸಚಿವ ನೊಬುವೊ ಕಿಶಿ ಹೇಳಿದ್ದಾರೆ.
- ತನ್ನ ಗುರಿಗಳನ್ನು ಈಡೇರಿಸಿಕೊಳ್ಳುವವರೆಗೆ ಉಕ್ರೇನ್‌ನಲ್ಲಿ ರಷ್ಯಾ ತನ್ನ ಮಿಲಿಟರಿ ಕಾರ್ಯಾಚರಣೆಯನ್ನು ಮುಂದುವರೆಸಲಿದೆ ಎಂದು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪುನರುಚ್ಚಾರ.

ಬಹು ಮಾಧ್ಯಮ
ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಧರ್ಮದ ಆಧಾರದಲ್ಲಿ ವ್ಯಾಪಾರ ಬಹಿಷ್ಕಾರ ವಾಣಿಜ್ಯೋದ್ಯಮ ಚಟುವಟಿಕೆಗೆ ತೊಡಕೇ?
ಸಂವಾದ
ಸಂಜೆ 4 ರಿಂದ
ಭಾಗವಹಿಸುವವರು:
ಟಿ.ವಿ. ಮೋಹನದಾಸ್ ಪೈ, ಹೂಡಿಕೆದಾರ, ಆರಿನ್ ಕ್ಯಾಪಿಟಲ್ ಅಧ್ಯಕ್ಷ
ಡಿ. ಮುರಳೀಧರ, ಉದ್ಯಮಿ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ
ಸುಧಾಕರ ಎಸ್. ಶೆಟ್ಟಿ, ಉದ್ಯಮಿ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಮೀನುಗಳಲ್ಲಿ ಹೃದಯ ಸಮಸ್ಯೆ: ಐಐಎಸ್‌ಸಿ ವಿಜ್ಞಾನಿಗಳ ಸಂಶೋಧನೆ

ಕಾವೇರಿಯಲ್ಲಿ ಪ್ಲಾಸ್ಟಿಕ್‌ನ ಸೂಕ್ಷ್ಮಕಣಗಳ ಅಪಾಯ

● ಕಲ್ಯಾಣ್ ರೇ

ನವದೆಹಲಿ: ಮೀನುಗಳಲ್ಲಿ ಹೃದಯ ಸಮಸ್ಯೆ ಹಾಗೂ ಅಸ್ಥಿಪಂಜರ ವಿರೂಪಗೊಳ್ಳುವ ಸಮಸ್ಯೆಗೆ ಕಾವೇರಿ ನದಿಯ ನೀರಿನಲ್ಲಿರುವ ಪ್ಲಾಸ್ಟಿಕ್‌ನ ಸೂಕ್ಷ್ಮ ಕಣಗಳು ಕಾರಣವಾಗಬಹುದು ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ವಿಚಾರವು ಕರ್ನಾಟಕದಲ್ಲಿ ಹರಿಯುವ ಪ್ರಮುಖ ನದಿಯ ನೀರಿನ ಗುಣಮಟ್ಟದ ಮೇಲೆ ಬೆಳಕು ಚೆಲ್ಲಿದೆ.

ಕೆಆರ್‌ಎಸ್ ಜಲಾಶಯ ಸಮೀಪದ ಮೂರು ಕಡೆಗಳಿಂದ ಸಂಗ್ರಹಿಸಿದ ನೀರಿನ ಮಾದರಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ, ಬರಿಗಣ್ಣಿಗೆ ಕಾಣುವ ಪ್ಲಾಸ್ಟಿಕ್‌ನ ಸೂಕ್ಷ್ಮಕಣಗಳು ಪತ್ತೆಯಾಗಿವೆ. ನಿಂತಿರುವ ಅಥವಾ ನಿಧಾನವಾಗಿ ಹರಿಯುತ್ತಿರುವ ಸ್ಥಳಗಳಲ್ಲಿ ಸಂಗ್ರಹಿಸಿದ ನೀರಿನ ಮಾದರಿಗಳಲ್ಲಿ ವಿಷಕಾರಿ ರಾಸಾಯನಿಕಗಳೂ ಕಂಡುಬಂದಿವೆ.

ಈ ಸ್ಥಳಗಳಲ್ಲಿ ಸಂಗ್ರಹಿಸಿದ ನೀರಿಗೆ ಜೆಬ್ರಾ ಮೀನಿನ ಭ್ರೂಣವನ್ನು ಹರಿಬಿಟ್ಟು ಪರಿಶೀಲನೆ ನಡೆಸಲಾಗಿದೆ. ಅವುಗಳ ಅಸ್ಥಿಪಂಜರ ವಿರೂಪಗೊಂಡಿತು, ಡಿಎನ್‌ಎ ಹಾಳಾಯಿತು, ಜೀವಕೋಶಗಳಿಗೆ ಅವಧಿಪೂರ್ವ ಸಾವು ಸಂಭವಿಸಿತು, ಹೃದಯ ಸಮಸ್ಯೆ ಕಂಡುಬಂತು ಮತ್ತು ಸಾವಿನ ಪ್ರಮಾಣ ಹೆಚ್ಚಳವಾಯಿತು ಎಂದು ಸಂಶೋಧನೆಯಲ್ಲಿ ತಿಳಿದು ಬಂದಿದೆ.

'ಪ್ಲಾಸ್ಟಿಕ್‌ನ ಸೂಕ್ಷ್ಮಕಣಗಳ ಸಾಂದ್ರತೆ ಕಡಿಮೆಯಿರುವ ಕಾರಣ, ಮನುಷ್ಯರಿಗೆ ತಕ್ಷಣಕ್ಕೆ ಅಪಾಯವಿಲ್ಲ ಎಂದು ಹೇಳಬಹುದು. ಆದರೆ ಈವರೆಗೆ ಅದರ ರೋಗಶಾಸ್ತ್ರವನ್ನು ನಾವು ತಿಳಿದಿಲ್ಲ. ಚಯಾಪಚಯ ಕ್ರಿಯೆಗೆ ಒಳಪಡದಿದ್ದಲ್ಲಿ, ಅವುಗಳ ಸಂಗ್ರಹದಿಂದ ದೇಹಕ್ಕೆ ಅಪಾಯವಾಗುವ ಸಾಧ್ಯತೆಯಿದೆ' ಎಂದು ಪ್ರಾಧ್ಯಾಪಕ ಉಪೇಂದ್ರ ನೊಂಗ್ತೊಂಬಾ ಅವರು ಹೇಳಿದ್ದಾರೆ.

ಸುತ್ತಲಿನ ಪರಿಸರದಲ್ಲಿ ಪ್ಲಾಸ್ಟಿಕ್‌ನ ಸೂಕ್ಷ್ಮಕಣಗಳಿಂದ ಮಾಲಿನ್ಯ ಆಗುತ್ತಿದ್ದರೂ, ಕಾವೇರಿ ನೀರಿನಲ್ಲಿ ಇಂತಹ ಕಣಗಳು ಸಂಗ್ರಹವಾಗುತ್ತಿರುವ ಬಗ್ಗೆ ಈವರೆಗೆ ಅಧ್ಯಯನ ಆಗಿರಲಿಲ್ಲ. ಕೆಆರ್‌ಎಸ್‌ಗೆ ನಿಯಮಿತವಾಗಿ ಭೇಟಿ ನೀಡುವ ನೊಂಗ್ತೊಂಬಾ ಅವರು, ರೊಹು, ತಿಲಾಪಿಯ ಮತ್ತು ಹಾವುತಲೆ ಮೀನುಗಳು ವಿರೂಪಗೊಂಡಿರುವುದನ್ನು ಗಮನಿಸಿದ್ದು, ಬೇರೆ ಸ್ವರೂಪದ ಮಾಲಿನ್ಯದಿಂದ ಇವು ತೊಂದರೆಗೊಳಗಾಗಿವೆಯೇ ಎಂಬುದನ್ನು ಪತ್ತೆಹಚ್ಚಲು ನಿರ್ಧರಿಸಿದ್ದಾರೆ.

'ಹಲವು ವರ್ಷಗಳಿಂದ ಕೆಆರ್‌ಎಸ್ ಜಲಾಶಯದ ಹಿನ್ನೀರಿಗೆ ಭೇಟಿ ನೀಡುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ, ಕೆಲವು ಮೀನುಗಳು ದೈಹಿಕವಾಗಿ ವಿರೂಪಗೊಂಡಿರುವುದನ್ನು ಗಮನಿಸಿದೆ' ಎಂದು ಅವರು ಹೇಳಿದ್ದಾರೆ.

ಕಾವೇರಿ ನೀರು ವೇಗವಾಗಿ ಹರಿಯುವ, ಮಧ್ಯಮ ವೇಗದಲ್ಲಿ ಹರಿಯುವ ಹಾಗೂ ನೀರು ನಿಂತು ಸಾಗುವ ಮೂರು ಸ್ಥಳಗಳಿಂದ ನೀರಿನ ಮಾದರಿಗಳನ್ನು ಉಪೇಂದ್ರ ಅವರ ತಂಡ ಸಂಗ್ರಹಿಸಿತ್ತು. 1991 ಹಾಗೂ 2021ರ ನಡುವಿನ ಅವಧಿಯಲ್ಲಿ ಇವುಗಳನ್ನು ಸಂಗ್ರಹಿಸಲಾಗಿದೆ. ಕಲ್ಮಶವನ್ನು ಹೊತ್ತು ತರುವ ಮುಂಗಾರು ಮಳೆಯ ನೀರು ನದಿಗೆ ಹರಿಯುವುದಕ್ಕೂ ಮುನ್ನ ಈ ಮಾದರಿಗಳನ್ನು ಸಂಗ್ರಹಿಸಲಾಗಿತ್ತು.

ಕಾವೇರಿ ನದಿ–ಸಾಂದರ್ಭಿಕ ಚಿತ್ರ

ಸಂಶೋಧನೆಯ ಅಂಶಗಳು

- ಐಐಎಸ್‌ಸಿ ವಿಜ್ಞಾನಿಗಳಾದ ಉಪೇಂದ್ರ ನಂಗ್ತೊಂಬಾ, ಅಬಾಸ್ ಟೋಬಾ ಅನಿಫೊವೊಶೆ, ದೇಬಶಿಶ್ ರಾಯ್ ಸೋಮಿತ್ ದತ್ತಾ ಅವರ ತಂಡವು ರಾಮನ್ ಸ್ಪೆಕ್ಟ್ರೊಸ್ಕೋಪಿ ಬಳಸಿಕೊಂಡು ನೀರಿನಲ್ಲಿರುವ ಪ್ಲಾಸ್ಟಿಕ್ ಸೂಕ್ಷ್ಮಕಣಗಳು ಹಾಗೂ ವಿಷಕಾರಿ ರಾಸಾಯನಿಕಗಳನ್ನು ಗುರುತಿಸಿದೆ
- ನಿಧಾನವಾಗಿ ಹರಿಯುವ ಅಥವಾ ನಿಂತ ನೀರಿನ ಮಾದರಿಯಲ್ಲಿ ಆಮ್ಲಜನಕದ ಪ್ರಮಾಣ ನಿಗದಿಗಿಂತ ಕಡಿಮೆ ಪ್ರಮಾಣದಲ್ಲಿದೆ; ಉಳಿದ ಅಂಶಗಳು ನಿಗದಿತ ಪ್ರಮಾಣದಲ್ಲಿವೆ
- ಮೂರು ರೀತಿಯ ನೀರಿನ ಮಾದರಿಗಳಲ್ಲಿ ಮಾಲಿನ್ಯದ ಜೈವಿಕ ಸೂಚಕಗಳಾದ ಸೈಕ್ಲೋಪ್ಸ್, ಡ್ಯಾಫ್ನಿಯಾ, ಸ್ಪಿರೋಗೈರಾ ಮತ್ತು ಇ. ಕೋಲಿ ಮೊದಲಾದ ಸೂಕ್ಷ್ಮಕಣಗಳು ಕಂಡುಬಂದಿವೆ

20 ವರ್ಷಗಳಲ್ಲಿ ಕಾವೇರಿಯಲ್ಲಿ ಮೀನಿನ ಪ್ರಬೇಧಗಳಲ್ಲಿ ಭಾರಿ ಕುಸಿತ ಕಂಡುಬಂದಿದೆ. ಇದಕ್ಕೆ ಪ್ಲಾಸ್ಟಿಕ್ ಸೂಕ್ಷ್ಮಕಣಗಳು ಮುಖ್ಯ ಕಾರಣವಾಗಿರುವ ಸಾಧ್ಯತೆಯಿದೆ. ಇನ್ನಷ್ಟು ಸಂಶೋಧನೆ ಅಗತ್ಯ

ಉಪೇಂದ್ರ ನೊಂಗ್ತೊಂಬಾ, ಐಐಎಸ್‌ಸಿ ಪ್ರಾಧ್ಯಾಪಕ

ಹಣ ಅಕ್ರಮ: ಇ.ಡಿಯಿಂದ ಫ್ಲ್ಯಾಟ್ ಜಪ್ತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಭೂಗತ ಪಾತಕಿ ದಾವೂದ್ ಇಬ್ರಾಹಿಂ ಸಹೋದರ ಇಕ್ಬಾಲ್ ಕಸ್ಕರ್‌ನ ಆಪ್ತರ ಹೆಸರಿನಲ್ಲಿರುವ ಮಹಾರಾಷ್ಟ್ರದ ಠಾಣೆ ಫ್ಲ್ಯಾಟ್‌ನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಮುಮ್ತಾಜ್ ಶೇಖ್ ಅವರ ಸ್ಥಿರ ಆಸ್ತಿಯಾದ 55 ಲಕ್ಷ ₹ ಮೌಲ್ಯದ ಫ್ಲ್ಯಾಟ್‌ನ್ನು ವಶ ಮಾಡಿಕೊಳ್ಳಲಾಗಿದೆ ಎಂದು ಇ.ಡಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ರಷ್ಯಾ ತೈಲ: ಜೈಶಂಕರ್ ತಿರುಗೇಟು

ವಾಷಿಂಗ್ಟನ್ (ಪಿಟಿಐ): ರಷ್ಯಾದಿಂದ ಭಾರತವು ಒಂದು ತಿಂಗಳಲ್ಲಿ ಖರೀದಿಸುವ ತೈಲದ ಪ್ರಮಾಣವು ಯುರೋಪ್ ಒಂದು ಅಪರಾಹ್ನದ ಹೊತ್ತಿಗೆ ಖರೀದಿಸುವ ತೈಲಕ್ಕಿಂತ ಕಡಿಮೆ ಇರಬಹುದು ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ರಷ್ಯಾದಿಂದ ಭಾರತವು ತೈಲ ಖರೀದಿಸುತ್ತಿರುವುದರ ಕುರಿತು ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ.

'ತೈಲ ಖರೀದಿಯನ್ನು ನೀವು ಉಲ್ಲೇಖಿಸಿದ್ದನ್ನು ಗಮನಿಸಿದ್ದೇನೆ. ರಷ್ಯಾದಿಂದ ತೈಲ ಖರೀದಿಯ ಕುರಿತು ನಿಮ್ಮ ಪ್ರಶ್ನೆಯಾಗಿದ್ದರೆ, ಯುರೋಪ್‌ನತ್ತ ಗಮನ ಕೇಂದ್ರೀಕರಿಸಿ ಎಂಬುದು ನನ್ನ ಸಲಹೆ. ನಾವು ಇಂಧನ ಖರೀದಿ ಮಾಡುತ್ತಿದ್ದೇವೆ. ಅದು ನಮ್ಮ ಇಂಧನ ಸುರಕ್ಷತೆಗೆ ಅಗತ್ಯವೂ ಹೌದು. ಅಂಕಿ ಸಂಖ್ಯೆಯನ್ನು ಗಮನಿಸಿದರೆ, ನಾವು ಒಂದು ತಿಂಗಳಲ್ಲಿ ಖರೀದಿಸುವ ತೈಲದ ಪ್ರಮಾಣವು ಯುರೋಪ್ ಒಂದು ಅಪರಾಹ್ನದಲ್ಲಿ ಖರೀದಿಸುವ ತೈಲದ ಪ್ರಮಾಣಕ್ಕಿಂತ ಕಡಿಮೆ ಇರಬಹುದು' ಎಂದು ಜೈಶಂಕರ್ ಹೇಳಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್, ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರ ಜತೆಗೆ ಮಾಧ್ಯಮಗೋಷ್ಠಿ ನಡೆಸಿ ಜೈಶಂಕರ್ ಮಾತನಾಡಿದರು.

'ಭಾರತದ ನಿಲುವು (ರಷ್ಯಾ–ಉಕ್ರೇನ್ ಯುದ್ಧ) ಏನು ಎಂಬುದನ್ನು ಸ್ಪಷ್ಟಪಡಿಸುವ ಹಲವು ಹೇಳಿಕೆಗಳನ್ನು ವಿಶ್ವಸಂಸ್ಥೆ, ಭಾರತದ ಸಂಸತ್ತು ಮತ್ತು ಇತರ ವೇದಿಕೆಗಳಲ್ಲಿ ನೀಡಲಾಗಿದೆ. ನಾವು ಸಂಘರ್ಷದ ವಿರುದ್ಧ ಇದ್ದೇವೆ ಎಂಬುದೇ ಆ ನಿಲುವು. ಮಾತುಕತೆ ಮತ್ತು ರಾಜತಾಂತ್ರಿಕತೆಯ ಪರ ನಾವು ಇದ್ದೇವೆ. ಈ ಉದ್ದೇಶಗಳಿಗಾಗಿ ಯಾವುದೇ ರೀತಿಯ ಕೊಡುಗೆ ನೀಡಲು ಸಿದ್ಧರಿದ್ದೇವೆ' ಎಂದು ಜೈಶಂಕರ್ ಹೇಳಿದರು.

ರಷ್ಯಾದಿಂದ ತೈಲ ಖರೀದಿ ವಿಚಾರದಲ್ಲಿ ಅಮೆರಿಕ ಸರ್ಕಾರ ಕೂಡ ಭಾರತದ ಬೆಂಬಲಕ್ಕೆ ನಿಂತಿದೆ. ರಷ್ಯಾದಿಂದ ಭಾರತ ಖರೀದಿಸುತ್ತಿರುವ ತೈಲದ ಪ್ರಮಾಣವು ಒಟ್ಟು ಬಳಕೆಯ ಶೇ 2ಕ್ಕಿಂತ ಕಡಿಮೆ ಇದೆ. ಅಮೆರಿಕದಿಂದ ಶೇ 10ರಷ್ಟು ಖರೀದಿಸಲಾಗುತ್ತಿದೆ ಎಂದು ಅಮೆರಿಕ ಹೇಳಿದೆ.

ತೈಲ ಆಮದು ಮೂಲಗಳನ್ನು ವಿಸ್ತರಿಸಲು ಭಾರತಕ್ಕೆ ಅಮೆರಿಕ ನೆರವಾಗಲಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದರು. ಪ್ರಧಾನಿ ನರೇಂದ್ರ ಮೋದಿ ಜತೆಗೆ ನಡೆಸಿದ ವರ್ಚುವಲ್ ಸಭೆಯಲ್ಲಿ ಬೈಡನ್ ಹೀಗೆ ಹೇಳಿದ್ದರು.

ಶಿವಸೇನಾ ಮೆಚ್ಚುಗೆ

ಮುಂಬೈ (ಪಿಟಿಐ): ಜೈಶಂಕರ್ ಅವರ ಪ್ರತಿಕ್ರಿಯೆಯು 'ಅತ್ಯದ್ಭುತ' ಆಗಿದೆ ಎಂದು ಶಿವಸೇನಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಹೇಳಿದ್ದಾರೆ. ಕೇಂದ್ರದ ಸಚಿವರೊಬ್ಬರ ಕುರಿತು ಶಿವಸೇನಾ ಇತ್ತೀಚಿನ ದಿನಗಳಲ್ಲಿ ಮೆಚ್ಚುಗೆ ವ್ಯಕ್ತಪಡಿಸಿರುವುದು ಇದೇ ಮೊದಲು.

ಶಿವಸೇನಾ ಒಂದು ಕಾಲದಲ್ಲಿ ಬಿಜೆಪಿಯ ಅತ್ಯಂತ ನೆಚ್ಚಿನ ಮಿತ್ರ ಪಕ್ಷವಾಗಿತ್ತು. ಈಗ, ಎನ್‌ಸಿಪಿ ಮತ್ತು ಕಾಂಗ್ರೆಸ್ ಜತೆ ಸೇರಿ ಮಹಾರಾಷ್ಟ್ರದಲ್ಲಿ ಶಿವಸೇನಾ ಸರ್ಕಾರ ರಚಿಸಿದೆ. ಬಿಜೆಪಿಯ ಬದ್ಧ ಪ್ರತಿಸ್ಪರ್ಧಿಯಾಗಿದೆ. ಭದ್ರತೆ, ವಿದೇಶಾಂಗ ನೀತಿ, ಆರ್ಥಿಕತೆ ಎಲ್ಲದರ ಕುರಿತೂ ಕೇಂದ್ರವನ್ನು ಸೇನಾ ಟೀಕಿಸುತ್ತಿದೆ.

ವಿದೇಶಿ ಸಾಲ ಮರುಪಾವತಿ ಸಾಧ್ಯವಿಲ್ಲ: ಶ್ರೀಲಂಕಾ ಘೋಷಣೆ

ಕೊಲಂಬೊ (ಎಎಫ್‌ಪಿ): ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾವು, 5,100 ಕೋಟಿ ಅಮೆರಿಕನ್ ಡಾಲರ್ (ಸುಮಾರು ₹3.87 ಲಕ್ಷ ಕೋಟಿ) ಮೊತ್ತದಷ್ಟು ವಿದೇಶಿ ಸಾಲ ಮರುಪಾವತಿ ಸಾಧ್ಯವಿಲ್ಲ ಎಂದು ಮಂಗಳವಾರ ಘೋಷಿಸಿದೆ.

ವಿದೇಶಗಳಿಂದ ಇಂಧನ, ಆಹಾರ ಪದಾರ್ಥಗಳನ್ನು ಖರೀದಿಸಲು ಸಾಧ್ಯವಿಲ್ಲದೇ ಇರುವಷ್ಟು ಕನಿಷ್ಠಮಟ್ಟಕ್ಕೆ ಶ್ರೀಲಂಕಾದ ವಿದೇಶಿ ವಿನಿಮಯ ನಿಧಿ ಕುಸಿದಿದೆ. ಮುಂದಿನ ದಿನಗಳಲ್ಲಿ ಸಾಲದ ಕಂತು ಪಾವತಿಸಬೇಕಾಗಿತ್ತು. ಆದರೆ ಸಾಲ ತೀರಿಸಲು ಅಗತ್ಯವಿರುವಷ್ಟು ವಿದೇಶಿ ವಿನಿಮಯ ನಿಧಿ ಇಲ್ಲದೇ ಇರುವ ಕಾರಣಕ್ಕೆ, ವಿದೇಶಿ ಸಾಲ ಮರುಪಾವತಿ ಸಾಧ್ಯವಿಲ್ಲ ಎಂದು ಶ್ರೀಲಂಕಾ ಹೇಳಿದೆ.

'ವಿದೇಶಿ ಸಾಲವನ್ನು ಮಾರುಪಾವತಿ ಮಾಡುವ ಸಾಮರ್ಥ್ಯವನ್ನು ನಾವು ಕಳೆದುಕೊಂಡಿದ್ದೇವೆ. ಇದನ್ನು ನಾವು ಸಾಲದಾತರಿಗೆ ತಿಳಿಸಿದ್ದೇವೆ. ದೇಶದ ಆರ್ಥಿಕ ಸ್ಥಿತಿ ಮತ್ತಷ್ಟು ಶೋಚನೀಯವಾಗುವುದನ್ನು ತಡೆಯುವ ಅತ್ಯಂತ ಕೊನೆಯ ಯತ್ನವಾಗಿ ಈ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಶ್ರೀಲಂಕಾ ಕೇಂದ್ರೀಯ ಬ್ಯಾಂಕ್‌ನ ಗವರ್ನರ್ ನಂದಲಾಲ್ ವೀರಸಿಂಘೆ ಹೇಳಿದ್ದಾರೆ.

ಶ್ರೀಲಂಕಾದಲ್ಲಿ ಹಲವು ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು 2005ರಿಂದ ಚೀನಾ ಸಾಲ ನೀಡುತ್ತಾ ಬಂದಿದೆ. ದೇಶದ ಒಟ್ಟು ಸಾಲದಲ್ಲಿ ಚೀನಾದ ಪಾಲು ಶೇ 10ರಷ್ಟನ್ನು ಮೀರುತ್ತದೆ. ಸಾಲ ಮರುಪಾವತಿ ಸಾಧ್ಯವಿಲ್ಲ ಎಂದು ಘೋಷಿಸಿದ್ದರೂ, ಶ್ರೀಲಂಕಾಗೆ ನೆರವು ನೀಡಲು ನಾವು ಸಿದ್ಧರಿದ್ದೇವೆ ಎಂದು ಚೀನಾ ಘೋಷಿಸಿದೆ.

ಚೀನಾ ನಂತರ ಶ್ರೀಲಂಕಾಗೆ ಹೆಚ್ಚು ಸಾಲ ನೀಡಿದ ದೇಶಗಳ ಸಾಲಿನಲ್ಲಿ ಜಪಾನ್ ಮತ್ತು ಭಾರತ ಇವೆ. ಆರ್ಥಿಕ ಬಿಕ್ಕಟ್ಟು ಬಿಗಡಾಯಿಸಿದ ಕಾರಣ ಸಾಲ ಮರುಪಾವತಿ ವಿಧಾನವನ್ನು ಬದಲಿಸುವಂತೆ ಶ್ರೀಲಂಕಾವು ಚೀನಾ ಮತ್ತು ಭಾರತಕ್ಕೆ ಮನವಿ ಮಾಡಿಕೊಂಡಿತ್ತು. ಆದರೆ ಎರಡೂ ದೇಶಗಳು ಈ ಬೇಡಿಕೆಯನ್ನು ತಿರಸ್ಕರಿಸಿದ್ದವು. ಬದಲಿಗೆ, ಕಡಿಮೆ ಬಡ್ಡಿ ದರದಲ್ಲಿ ಮತ್ತಷ್ಟು ಸಾಲ ನೀಡಿದ್ದವು.

ವಿದೇಶಿ ವಿನಿಮಯ ನಿಧಿಯ ಬಹುಪಾಲನ್ನು ಸಾಲ ಮರುಪಾವತಿಸಲು ಸರ್ಕಾರ ಬಳಸಿದೆ. ಕೊನೆಯ ಕ್ಷಣದವರೆಗೂ ಸಾಲ ಮರುಪಾವತಿಗೆ ಸರ್ಕಾರ ಸಿದ್ಧವಿತ್ತು. ಜನರ ಹಿತಾಸಕ್ತಿಯನ್ನು ಬಲಿಕೊಟ್ಟು, ಸಾಲ ಮರುಪಾವತಿಸಲು ಸರ್ಕಾರ ಮುಂದಾಗಿತ್ತು. ಸಾಲ ಮರುಪಾವತಿ ಸಾಧ್ಯವಿಲ್ಲ ಎಂಬುದು ಈ ಮೊದಲೇ ಗೊತ್ತಾಗಿತ್ತು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಮುಖ್ಯಾಂಶಗಳು

- ಶ್ರೀಲಂಕಾ ಕೇಂದ್ರೀಯ ಬ್ಯಾಂಕ್ ಗವರ್ನರ್‌ರಿಂದ ಘೋಷಣೆ
- ಚೀನಾ, ಜಪಾನ್ ಮತ್ತು ಭಾರತದಿಂದ ಗರಿಷ್ಠ ಪ್ರಮಾಣದ ಸಾಲ
- ಸಾಲ ಮರುಪಾವತಿ ಸದಿದ್ದರೂ ನೆರವು ಮುಂದುವರಿಸಲು ನಿರ್ಧಾರ

ಶಾಂಘೈ ಲಾಕ್‌ಡೌನ್: ಮನೆಯಿಂದ ಹೊರ ಬರಲು ಅವಕಾಶ

ಬೀಜಿಂಗ್ (ಎಪಿ): ಚೀನಾದ ವಾಣಿಜ್ಯ ನಗರಿ ಶಾಂಘೈನಲ್ಲಿ ವಿಧಿಸಿರುವ ಕಠಿಣ ಲಾಕ್‌ಡೌನ್‌ಗೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಮಂಗಳವಾರದಿಂದ ಕೆಲ ಪ್ರದೇಶಗಳ ನಿವಾಸಿಗಳಿಗೆ ಮನೆಯಿಂದ ಹೊರ ಬರಲು ಅನುವು ಮಾಡಿಕೊಡಲಾಗಿದೆ.

ಎಷ್ಟು ಮಂದಿಗೆ ಮನೆಯಿಂದ ಹೊರ ಬರಲು ಅವಕಾಶ ನೀಡಲಾಗಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಸದ್ಯಕ್ಕೆ ಸೂಪರ್ ಮಾರ್ಕೆಟ್ ಮತ್ತು ಔಷಧಿ ಮಳಿಗೆಗಳು ಪುನರಾರಂಭಗೊಳ್ಳಲಿವೆ ಎಂದು ಇಲ್ಲಿನ ಸರ್ಕಾರ ತಿಳಿಸಿದೆ.

ಕಠಿಣ ಲಾಕ್‌ಡೌನ್ ನಿಂದ ಉಂಟಾದ ಆಹಾರ ಮತ್ತು ಔಷಧಿ ಕೊರತೆ ಜನರನ್ನು ಕೆರಳಿಸಿತ್ತು. ಇದರಿಂದ ಸಾರ್ವಜನಿಕರು ತಂಡೋಪತಂಡವಾಗಿ ಮಾಲ್‌ಗಳಿಗೆ ನುಗ್ಗಿದ್ದರು. ಮನೆ ಒಳಗಿನಿಂದಲೇ ಪಾತ್ರೆಗಳನ್ನು ಬಡಿದು ಪ್ರತಿಭಟಿಸಿದ್ದರು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚಾಗಿ ಹಂಚಿಕೆಯಾದ ಬೆನ್ನಲ್ಲೆ ಈ ಸಡಿಲಿಕೆ ಘೋಷಿಸಲಾಗಿದೆ.

ಚೀನಾದಲ್ಲಿ ಸೋಮವಾರ ಮಧ್ಯ ರಾತ್ರಿ ವೇಳೆಗೆ 24,659 ಹೊಸ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ ಶಾಂಘೈನಲ್ಲಿಯೇ 23,346 ಹೊಸ ಪ್ರಕರಣಗಳು ದಾಖಲಾಗಿವೆ. ಇಲ್ಲಿ ಇದುವರೆಗೆ 2 ಲಕ್ಷ ಮಂದಿಗೆ ಸೋಂಕು ತಗುಲಿದೆ.

ದಕ್ಷಿಣ ಆಫ್ರಿಕಾ: ಓಮೈಕ್ರಾನ್ ಹೊಸ ಉಪತಳಿ ಪತ್ತೆ

ಜೋಹಾನ್ಸ್‌ಬರ್ಗ್ (ಪಿಟಿಐ): ಓಮೈಕ್ರಾನ್‌ನ ಎರಡು ಹೊಸ ಉಪತಳಿಯನ್ನು ದಕ್ಷಿಣ ಆಫ್ರಿಕಾದ ವಿಜ್ಞಾನಿಗಳು ಪತ್ತೆ ಹಚ್ಚಿದ್ದು, ಬಿಎ.4 ಮತ್ತು ಬಿಎ.5 ಎಂದು ಹೆಸರಿಸಲಾಗಿದೆ.

ಈ ತಳಿಯಿಂದ ಜನರು ಭಯಭೀತರಾಗುವ ಅಗತ್ಯವಿಲ್ಲ. ಇದು ಸಾಂಕ್ರಾಮಿಕದ ಮೇಲೆ ಯಾವ ಪರಿಣಾಮ ಬೀರಲಿದೆ ಎಂಬುದನ್ನು ಆರಂಭಿಕ ಹಂತದಲ್ಲೇ ಹೇಳಲು ಸಾಧ್ಯವಿಲ್ಲ ಎಂದು ದಕ್ಷಿಣ ಆಫ್ರಿಕಾದ 'ಎಪಿಡೆಮಿಕ್ ರೆಸ್ಪಾನ್ಸ್ ಆ್ಯಂಡ್ ಇನೋವೇಷನ್' ನಿರ್ದೇಶಕ ಟುಲಿಯೊ ಡಿ ಒಲಿವೇರಾ ಅವರು ಟ್ವೀಟ್ ಮಾಡಿದ್ದಾರೆ. ಈ ತಳಿಗಳು ದಕ್ಷಿಣ ಆಫ್ರಿಕಾ, ಬೋಟ್ಸ್‌ವಾನ, ಬೆಲ್ಜಿಯಂ, ಜರ್ಮನಿ, ಡೆನ್ಮಾರ್ಕ್ ಮತ್ತು ಇಂಗ್ಲೆಂಡ್‌ನಲ್ಲೂ ಪತ್ತೆಯಾಗಿವೆ. ಈ ತಳಿಗಳು ಹೊಸ ಉಪತಳಿಗಳ ಹೆಚ್ಚಳಕ್ಕೆ ಕಾರಣ ಆಗಬಹುದು ಎಂಬ ಸೂಚನೆ ಸಿಕ್ಕಿದೆ.

ಅರುಣಾಚಲ ಪ್ರದೇಶದ ಖೋನ್ಸಾದಲ್ಲಿ ನಡೆದ 'ಪೊಂಗ್ಟು ಕುಹ್' ಹಬ್ಬದ ಸಂದರ್ಭದಲ್ಲಿ ಸೋಮವಾರ ಜನಪದ ನೃತ್ಯವನ್ನು ಪ್ರದರ್ಶಿಸಿದ ಮಹಿಳೆಯರು – ಪಿಟಿಐ ಚಿತ್ರ

ಜನಪದ ನೃತ್ಯ

ಸಂಕ್ಷಿಪ್ತ ಸುದ್ದಿ

ಪಾರ್ಟಿಗೇಟ್ ಹಗರಣ: ಪ್ರಧಾನಿಗೆ ಶೀಘ್ರವೇ ದಂಡ

ಲಂಡನ್ (ಪಿಟಿಐ): ಪಾರ್ಟಿಗೇಟ್ ಹಗರಣಕ್ಕೆ ಸಂಬಂಧಿಸಿದಂತೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಹಾಗೂ ಚಾನ್ಸಲರ್ ರಿಷಿ ಸುನಕ್‌ಗೆ ಮೆಟ್ರೋಪಾಲಿಟನ್ ಪೊಲೀಸರು ದಂಡ ವಿಧಿಸಲಿದ್ದಾರೆ ಎಂದು ತಿಳಿದುಬಂದಿದೆ. 'ಕೋವಿಡ್ – 19 ಸಂದರ್ಭದಲ್ಲಿ ಕೊರೊನಾ ನಿಯಮಗಳನ್ನು ಉಲ್ಲಂಘಿಸಿದ್ದ ಕಾರಣಕ್ಕಾಗಿ ಪೊಲೀಸರು ನಿಗದಿತ ದಂಡ ಸೂಚನೆಯನ್ನು ವಿಧಿಸಲಿ ದ್ದಾರೆ. ಈಗಾಗಲೇ ಪೊಲೀಸರು ಈ ಸಂಬಂಧ ಬೋರಿಸ್ ಹಾಗೂ ರಿಷಿ ಅವರಿಗೆ ಸೂಚನೆ ನೀಡಿದ್ದಾರೆ' ಎಂದು ಡೌನಿಂಗ್ ಸ್ಟ್ರೀಟ್ ವಕ್ತಾರ ಮಾಹಿತಿ ನೀಡಿದ್ದಾರೆ.

ವಿಕ್ರಾಂತ್ ಪ್ರಕರಣ: ಸೋಮಯ್ಯಗೆ ಸಮನ್ಸ್

ಮುಂಬೈ (ಪಿಟಿಐ): ಮಹಾರಾಷ್ಟ್ರದ ಬಿಜೆಪಿ ನಾಯಕ ಕಿರಿತ್ ಸೋಮಯ್ಯ ಮತ್ತು ಅವರ ಪುತ್ರ ನೀಲ್ ವಿರುದ್ಧ ದಾಖಲಾಗಿರುವ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈನ ಆರ್ಥಿಕ ಅಪರಾಧ ವಿಭಾಗ (ಇಒಡಬ್ಲ್ಯು) ಪೊಲೀಸರು ಬುಧವಾರ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ್ದಾರೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ. ಒಂಬತ್ತು ವರ್ಷಗಳ ಹಿಂದೆ ಕಾರ್ಯಾಚರಣೆಯಿಂದ ಸ್ಥಗಿತಗೊಂಡಿದ್ದ ನೌಕಾಪಡೆಯ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್ ಅನ್ನು ವಸ್ತುಸಂಗ್ರಹಾಲಯವನ್ನಾಗಿ ಪರಿವರ್ತಿಸುವ ಹೆಸರಿನಲ್ಲಿ ಸಂಗ್ರಹಿಸಿದ ₹ 57 ಕೋಟಿಗೂ ಹೆಚ್ಚು ಹಣವನ್ನು ದುರುಪಯೋಗಪಡಿಸಿಕೊಂಡ ಪ್ರಕರಣ ಸೋಮಯ್ಯ ಹಾಗೂ ಅವರ ಪುತ್ರನ ವಿರುದ್ಧ ದಾಖಲಾಗಿದೆ.

'ಭಾರತದೊಂದಿಗೆ ಶಾಂತಿ ಬಯಸುತ್ತೇವೆ'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ನೂತನ ಪ್ರಧಾನಿ ಶಾಹಬಾಝ್ ಷರೀಫ್ ಅವರು ತಮಗೆ ಶುಭಕೋರಿದ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಹೇಳಿದ್ದಾರೆ. ಪಾಕಿಸ್ತಾನವು ಭಾರತದ ಜತೆಗೆ ಶಾಂತಿಯುತ ಮತ್ತು ಸಹಕಾರದ ಬಾಂಧವ್ಯವನ್ನು ಬಯಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ಎರಡೂ ದೇಶಗಳ ನಡುವೆ ಬಾಕಿ ಉಳಿದಿರುವ ವಿವಾದಗಳನ್ನು ಶಾಂತಿಯುತವಾಗಿ ಇತ್ಯರ್ಥಪಡಿಸುವುದು ಅನಿವಾರ್ಯವಾಗಿದೆ ಎಂದು ಷರೀಫ್ ಒತ್ತಿ ಹೇಳಿದ್ದಾರೆ.

'ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಪಾಕಿಸ್ತಾನದ ತ್ಯಾಗಗಳು ಎಲ್ಲರಿಗೂ ಗೊತ್ತಿವೆ. ನಾವು ಶಾಂತಿಯನ್ನು ಭದ್ರಪಡಿಸೋಣ ಮತ್ತು ನಮ್ಮ ಜನರ ಸಾಮಾಜಿಕ- ಆರ್ಥಿಕ ಅಭಿವೃದ್ಧಿಯತ್ತ ಗಮನ ಹರಿಸೋಣ' ಎಂದು ಷರೀಫ್ ಟ್ವೀಟ್ ಮಾಡಿದ್ದಾರೆ.

ನ್ಯೂಯಾರ್ಕ್‌ನ ಸಬ್ ವೇ ಸ್ಟೇಷನ್‌ನಲ್ಲಿ ಮಂಗಳವಾರ ಬೆಳಿಗ್ಗೆ ನಡೆದ ಗುಂಡಿನ ದಾಳಿಯಲ್ಲಿ ಗಾಯಗೊಂಡ ಪ್ರಯಾಣಿಕರ ಆಕ್ರಂದನ – ಎಪಿ ಚಿತ್ರ

ಗುಂಡಿನ ದಾಳಿ-16 ಮಂದಿಗೆ ಗಾಯ

ನ್ಯೂಯಾರ್ಕ್ (ಎಪಿ): ಅಮೆರಿಕದ ನ್ಯೂಯಾರ್ಕ್‌ನ ಸಬ್ ವೇ ಸ್ಟೇಷನ್‌ನಲ್ಲಿ ಮಂಗಳವಾರ ಬೆಳ್ಳಂಬೆಳಗ್ಗೆ ಗುಂಡಿನ ದಾಳಿ ನಡೆದಿದ್ದು, 16 ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ 10 ಜನರಿಗೆ ಗುಂಡೇಟು ಬಿದ್ದಿದೆ.

'ಸನ್‌ಸೆಟ್ ಪಾರ್ಕ್ ಸಮೀಪದ ನಿಲ್ದಾಣದಲ್ಲಿ ಹೊಗೆ ಕಾಣಿಸಿಕೊಂಡಿತ್ತು. ಅಲ್ಲಿ ಹಲವು ಜನರಿಗೆ ಗುಂಡೇಟು ಬಿದ್ದಿತ್ತು ಹಾಗೂ ಸ್ಫೋಟಕ ಸಾಧನಗಳು ಪತ್ತೆಯಾಗಿವೆ' ಎಂದು ನ್ಯೂಯಾರ್ಕ್ ನಗರದ ಅಗ್ನಿಶಾಮಕ ಇಲಾಖೆ ವಕ್ತಾರರು ಹೇಳಿದ್ದಾರೆ.

'ಆಹಾರ ದಾಸ್ತಾನು ಪೂರೈಸಲು ಸಿದ್ಧ'

ಅಹಮದಾಬಾದ್ (ಪಿಟಿಐ): 'ವಿಶ್ವ ವ್ಯಾಪಾರ ಸಂಸ್ಥೆ ಒಪ್ಪಿದರೆ ವಿಶ್ವಕ್ಕೆ ಆಹಾರ ದಾಸ್ತಾನು ಪೂರೈಸಲು ಭಾರತ ಸಿದ್ಧವಿದೆ' ಎಂದು ಪ್ರಧಾನಿ ಮೋದಿ ಹೇಳಿದರು.

ಮಂಗಳವಾರ ಅಹಮದಾಬಾದ್ ಬಳಿಯಲ್ಲಿನ ಅದಾಲಜ್‌ನಲ್ಲಿನ ಅನ್ನಪೂರ್ಣ ಧಾಮ ಟ್ರಸ್ಟ್‌ನ ಬಾಲಕರ ವಸತಿ ನಿಲಯವನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿ ಮಾತನಾಡಿದರು.

ವಿಧಾನ ಪರಿಷತ್ ಚುನಾವಣೆ:ಬಿಜೆಪಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ 36 ಸ್ಥಾನಗಳ ಪೈಕಿ 33ರಲ್ಲಿ ಗೆಲುವು ಸಾಧಿಸಿದೆ. ಈ ಸ್ಥಾನಗಳಿಗೆ ಶನಿವಾರ ಚುನಾವಣೆ ನಡೆದಿದ್ದು, ಮಂಗಳವಾರ ಫಲಿತಾಂಶ ಪ್ರಕಟವಾಗಿದೆ. ನಿರೀಕ್ಷೆಯಂತೆ ಬಿಜೆಪಿ ಭಾರಿ ಗೆಲುವು ಸಾಧಿಸಿದೆ. ಆದರೆ ವಾರಾಣಸಿ ಲೋಕಸಭೆ ಕ್ಷೇತ್ರದಲ್ಲಿ ಬಿಜೆಪಿ ಸೋಲನುಭವಿಸಿದೆ.

ಬಿಜೆಪಿಯ ಪ್ರಮುಖ ಪ್ರತಿಸ್ಪರ್ಧಿ ಸಮಾಜವಾದಿ ಪಕ್ಷ (ಎಸ್‌ಪಿ) ಸೋಲನುಭವಿಸಿದ್ದು, ಸ್ವತಂತ್ರ ಅಭ್ಯರ್ಥಿಗಳು ಮೂರು ಸ್ಥಾನಗಳಲ್ಲಿ ಗೆಲುವು ದಾಖಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಪ್ರತಿನಿಧಿಸುವ ಲೋಕಸಭೆ ಕ್ಷೇತ್ರವಾದ ವಾರಾಣಸಿಯಲ್ಲಿ ಮಾಫಿಯಾ ಡಾನ್ ಪತ್ನಿ ಸ್ವತಂತ್ರವಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ.

ಪ್ರತಿಸ್ಪರ್ಧಿ ಅಭ್ಯರ್ಥಿಗಳು ಕೊನೆಯ ಕ್ಷಣದಲ್ಲಿ ತಮ್ಮ ಉಮೇದುವಾರಿಕೆ ಹಿಂತೆಗೆದುಕೊಂಡಿದ್ದರಿಂದ ಅಥವಾ ತಾಂತ್ರಿಕ ಕಾರಣಗಳಿಗಾಗಿ ಅವರ ನಾಮಪತ್ರಗಳು ತಿರಸ್ಕೃತಗೊಂಡಿದ್ದರಿಂದ ಒಂಬತ್ತು ಕ್ಷೇತ್ರಗಳಲ್ಲಿ ಬಿಜೆಪಿ ಯಾವುದೇ ಸ್ಪರ್ಧೆಯಿಲ್ಲದೆ ಗೆಲುವು ಸಾಧಿಸಿದೆ.

ಗಾಜಿಪುರ್, ಮೀರತ್, ಘಾಜಿಯಾಬಾದ್, ಫತೇಪುರ್-ಕಾನ್ಪುರ್, ಲಖನೌ, ಸೀತಾಪುರ್, ಉನ್ನಾವ್, ರಾಯ್‌ಬರೇಲಿ, ಜೌನ್‌ಪುರ್, ಬಹರೈಚ್, ಗೋರಖ್‌ಪುರ, ಗೊಂಡಾ, ಬಲ್ಲಿಯಾ, ಫಾರೂಕಾಬಾದ್, ಝಾನ್ಸಿ-ಲಲಿತ್‌ಪುರ-ಜಲೌನ್, ಪ್ರಯಾಗರಾಜ್-ಕೌಶಂಬಿ, ಪಿಲಿಭಿಟ್–ಶಹಜಾನಪುರ ಕ್ಷೇತ್ರಗಳಿಂದ ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದಾರೆ. ವಾರಾಣಸಿ, ಪ್ರತಾಪಗಡ ಮತ್ತು ಅಜಂಗಡ ಕ್ಷೇತ್ರಗಳಲ್ಲಿ ಸ್ವತಂತ್ರ ಅಭ್ಯರ್ಥಿಗಳು ಗೆಲುವು ಕಂಡಿದ್ದಾರೆ.

ಆಡಳಿತಾರೂಢ ಪಕ್ಷವು ಪರಿಷತ್ ಚುನಾವಣೆಯಲ್ಲಿ ಯಾವಾಗಲೂ ಹೆಚ್ಚಿನ ಸಂಖ್ಯೆಯ ಸ್ಥಾನಗಳನ್ನು ಗೆಲ್ಲುತ್ತ ಬಂದಿರುವುದು ಹಿಂದಿನ ಚುನಾವಣೆಗಳಿಂದ ಗೊತ್ತಾಗುತ್ತದೆ. ಬಿಜೆಪಿ ಗೆಲುವು ಆಶ್ಚರ್ಯವನ್ನೇನೂ ಹುಟ್ಟಿಸಿಲ್ಲ.

ಎಸ್‌ಪಿ ಅಧಿಕಾರದಲ್ಲಿದ್ದ ಸಮಯದಲ್ಲಿ 2016ರಲ್ಲಿ 36 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 31 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಅಧಿಕಾರದಲ್ಲಿದ್ದ ಬಿಎಸ್‌ಪಿ ಸಹ 2010ರಲ್ಲಿ ನಡೆದ ಚುನಾವಣೆಯಲ್ಲಿ 36 ಸ್ಥಾನಗಳಲ್ಲಿ 34 ಸ್ಥಾನಗಳನ್ನು ತನ್ನದಾಗಿಸಿಕೊಂಡಿತ್ತು..



EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ~~₹599~~ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ



ಅಗಾಧ ಸಾಧ್ಯತೆಗಳ ಗೂಗಲ್ ಲೆನ್ಸ್

ಅವಿನಾಶ್ ಬಿ.

ಸ್ಮಾರ್ಟ್‌ಫೋನ್ ಇದ್ದವರಿಗೆ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಅಥವಾ ಆ್ಯಪಲ್ ಸ್ಟೋರ್‌ಗಳಲ್ಲಿ ಲಭ್ಯವಿರುವ ಲಕ್ಷಾಂತರ ಆ್ಯಪ್‌ಗಳಲ್ಲಿ (ಅಪ್ಲಿಕೇಶನ್‌ಗಳು ಅಥವಾ ಕಿರು ತಂತ್ರಾಂಶಗಳು) ಯಾವುದನ್ನು ಬಳಸಬೇಕು, ಯಾವುದು ಬೇಕಾಗಿಲ್ಲ ಎಂಬುದೇ ಗೊಂದಲದ ವಿಷಯ. ಇದರ ಮಧ್ಯೆ, ಈ ತಂತ್ರಜ್ಞಾನ ಯುಗದಲ್ಲಿ ನಮಗೆ ಪ್ರತಿಕ್ಷಣವೂ ನೆರವಾಗಬಲ್ಲ ಆ್ಯಪ್‌ಗಳಲ್ಲಿ ಪ್ರಮುಖವಾದದ್ದು ಗೂಗಲ್ ಲೆನ್ಸ್. ಇದರ ಕೆಲಸವನ್ನು ಒಂದೇ ವಾಕ್ಯದಲ್ಲಿ ವಿವರಿಸಬಹುದಾದರೆ, ನಾವೇನು ನೋಡುತ್ತೇವೆಯೋ, ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಮ್ಮ ಮುಂದೆ ಥುತ್ತನೇ ಮುಂದಿಡಬಲ್ಲ ಆ್ಯಪ್ ಇದು.

ಇದು ಬಹುತೇಕ ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಲ್ಲಿ ಅಂತರ್‌-ನಿರ್ಮಿತವಾಗಿಯೇ ಇರುತ್ತದೆ ಮತ್ತು ಫೋನ್‌ನ ಕ್ಯಾಮೆರಾ ಬಳಸಿ ಕೆಲಸ ಮಾಡುತ್ತದೆ. ಆ್ಯಪ್ ಸ್ಟೋರ್‌ನಿಂದಲೂ ಅಳವಡಿಸಿಕೊಳ್ಳಬಹುದು.

ಎಲ್ಲಿರುತ್ತದೆ?

ಹೆಚ್ಚಿನ ಆಧುನಿಕ ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಲ್ಲಿ ಗೂಗಲ್ ಸರ್ಚ್ ಆ್ಯಪ್ ಇರುತ್ತದೆ. ಹೋಂ ಸ್ಕ್ರೀನ್‌ನಲ್ಲೇ ಗೂಗಲ್ ಸರ್ಚ್ ಬಾರ್ (ಪಟ್ಟಿ) ಇರುತ್ತದೆಯಲ್ಲವೇ? ಅದರಲ್ಲಿ ಒಂದು ಮೈಕ್ ಐಕಾನ್ ಇದೆ, ಮತ್ತೊಂದು ಕ್ಯಾಮೆರಾ ಐಕಾನ್ ಇದೆ. ಇವೆರಡರ ಪ್ರಯೋಜನವೇನು ಎಂದು ಹಲವರು ವಿಚಾರಿಸಿದ್ದಾರೆ. ಕ್ಯಾಮೆರಾ ಐಕಾನ್ ಇರುವುದೇ ಗೂಗಲ್ ಲೆನ್ಸ್. ಇದೊಂದು ಭೂತಕನ್ನಡಿಯಿದ್ದಂತೆ, ಇದಕ್ಕಾಗಿಯೇ ಲೆನ್ಸ್ (ಮಸೂರ) ಎಂಬ ಹೆಸರು.

ಏನೆಲ್ಲಾ ಉಪಯೋಗಗಳು?

ವಸ್ತು, ಗಿಡ, ಪ್ರಾಣಿ

ರಸ್ತೆಯಲ್ಲಿ ನಡೆಯುತ್ತಿರುವಾಗ ಏನೋ ಆಕರ್ಷಕ ವಸ್ತು ನಿಮ್ಮ ಕಣ್ಣಿಗೆ ಕಾಣಿಸುತ್ತದೆ ಅಥವಾ ಹೊಸ ಗಿಡ ಇಲ್ಲವೇ ಹೊಸ ಹಣ್ಣು, ಪ್ರಾಣಿ ಏನಾದರೂ ನಿಮ್ಮ ಗಮನ ಸೆಳೆಯುತ್ತದೆ. ಅದೇನೆಂದು ತಿಳಿದುಕೊಳ್ಳಬೇಕೇ? ಈ ಗೂಗಲ್ ಲೆನ್ಸ್ ತೆರೆದು ಫೋನ್‌ನ ಕ್ಯಾಮೆರಾವನ್ನು ಅದಕ್ಕೆ ಫೋಕಸ್ ಮಾಡಿದರೆ, ಅಂತರ್ಜಾಲದಿಂದ ಮಾಹಿತಿಯನ್ನು ಹೆಕ್ಕಿ ನಿಮ್ಮ ಮುಂದಿಡುತ್ತದೆ.

ಕ್ಯೂಆರ್ ಕೋಡ್

ಅದೇ ರೀತಿ, ಇತ್ತೀಚೆಗೆ ಪತ್ರಿಕೆಗಳು, ಆಮಂತ್ರಣ ಪತ್ರಗಳು, ಜಾಲತಾಣಗಳು, ಹಣಕಾಸು ಆ್ಯಪ್‌ಗಳೇ ಮೊದಲಾದವುಗಳಲ್ಲಿ ಕ್ಯೂಆರ್ ಕೋಡ್ ಹೆಚ್ಚಾಗಿ ಬಳಕೆಯಾಗುತ್ತದೆ. ಜೊತೆಗೆ ಬಾರ್ ಕೋಡ್ ಕೂಡ. ಅವುಗಳನ್ನೂ ಲೆನ್ಸ್ ಬಳಸಿ ಸ್ಕ್ಯಾನ್ ಮಾಡಿ, ಸಂಬಂಧಪಟ್ಟ ಕೆಲಸವನ್ನು ಮಾಡಬಹುದು. ಅಂದರೆ, ವಿಡಿಯೊ, ಗೂಗಲ್ ಫಾರ್ಮ್, ಲೇಖನ, ಹಣಪಾವತಿ (ಯುಪಿಐ) ಇವುಗಳಿಗೆಲ್ಲ ನೇರವಾಗಿ ಸಂಪರ್ಕಿಸಬಹುದು.

ಪಠ್ಯ, ಅನುವಾದ

ಯಾವುದಾದರೂ ನಾಮ ಫಲಕ, ವಿಸಿಟಿಂಗ್ ಕಾರ್ಡ್‌ನಲ್ಲಿ ನಿಮಗೆ ತಿಳಿಯದ ಭಾಷೆಯ ಶಬ್ದಗಳಿದ್ದರೆ ಅಥವಾ ಒಂದು ಫೋಟೊ ಇಲ್ಲವೇ ಪುಸ್ತಕದಲ್ಲಿರುವ ಪಠ್ಯವನ್ನು ನಕಲಿಸಬೇಕೆಂದಿದ್ದರೆ, ಗೂಗಲ್ ಲೆನ್ಸ್ ಮೂಲಕ ಅದರ ಮೇಲೆ ಫೋಕಸ್ ಮಾಡಿ, ಪಠ್ಯವನ್ನು ಕಾಪಿ ಮಾಡಬಹುದು, ಅನುವಾದವನ್ನೂ ನೋಡಬಹುದು.

ಖರೀದಿಗೆ

ನೀವು ನೋಡಿದ ಯಾವುದೇ ತಿಂಡಿ, ಉಡುಪು, ಪೀಠೋಪಕರಣ ನಿಮಗಿಷ್ಟವಾಯಿತೇ? ಅದನ್ನು ಮನೆಗೆ ತರಿಸಿಕೊಳ್ಳಬೇಕಿದ್ದರೆ, ಗೂಗಲ್ ಲೆನ್ಸ್ ಮೂಲಕ ಸ್ಕ್ಯಾನ್ ಮಾಡಿದರೆ, ಆ ವಸ್ತು ಲಭ್ಯವಾಗುವ ಆನ್‌ಲೈನ್ ಮಳಿಗೆಗೆ ನಿಮ್ಮನ್ನು ಸಂಪರ್ಕಿಸುತ್ತದೆ. ಅಲ್ಲಿಂದಲೇ ಖರೀದಿ ಮಾಡಬಹುದು ಅಥವಾ ಎಲ್ಲಿ ಸಿಗುತ್ತದೆ ಎಂಬುದನ್ನು ಗೂಗಲ್ ಸರ್ಚ್ ಎಂಜಿನ್ ಸಹಾಯದಿಂದ ನೇರವಾಗಿ ಕಂಡುಕೊಳ್ಳಬಹುದು.

ಹೋಂ ವರ್ಕ್

ಕೆಲವೊಂದು ಗಣಿತದ ಸೂತ್ರ ಅಥವಾ ಲೆಕ್ಕಾಚಾರಗಳನ್ನು ಲೆನ್ಸ್ ಮೂಲಕ ಸ್ಕ್ಯಾನ್ ಮಾಡಿದರೆ, ಅದರ ಉತ್ತರವನ್ನೂ ನಮ್ಮ ಮುಂದೆ ತೋರಿಸುತ್ತದೆ.

ಉಪಯೋಗಿಸುವುದು ಹೇಗೆ?

ಗೂಗಲ್ ಲೆನ್ಸ್‌ನ ಬಹುತೇಕ ಕಾರ್ಯಗಳಿಗೆ ಅಂತರ್ಜಾಲ ಸಂಪರ್ಕ ಇರಬೇಕಾಗುತ್ತದೆ. ಹೋಂ ಸ್ಕ್ರೀನ್‌ನಲ್ಲಿರುವ ಗೂಗಲ್ ಸರ್ಚ್ ಬಾರ್‌ನಲ್ಲಿರುವ ಕ್ಯಾಮೆರಾ ಐಕಾನ್ ಕ್ಲಿಕ್ ಮಾಡಿ, ಮೊಬೈಲ್‌ನ ಕ್ಯಾಮೆರಾವನ್ನು ಯಾವುದೇ ಫಲಕ/ವಸ್ತುವಿನ ಮೇಲೆ ಹಿಡಿದಾಗ, ಸ್ಕ್ರೀನ್‌ನ ಕೆಳಭಾಗದಲ್ಲಿ ನಮಗೆ ಸಾಕಷ್ಟು ಆಯ್ಕೆಗಳು ಗೋಚರಿಸುತ್ತವೆ. ಟ್ರಾನ್ಸ್‌ಲೇಟ್, ಟೆಕ್ಸ್ಟ್, ಸರ್ಚ್, ಹೋಮ್ ವರ್ಕ್, ಶಾಪಿಂಗ್, ಪ್ಲೇಸಸ್, ಡೈನಿಂಗ್ ಇತ್ಯಾದಿ. ನಮಗೆ ಬೇಕಾಗಿರುವುದನ್ನು ಕ್ಲಿಕ್ ಮಾಡಿದರೆ ಸ್ಕ್ರೀನ್ ಮೇಲೆ ಪೂರ್ಣ ಮಾಹಿತಿ ಕಾಣಿಸುತ್ತದೆ. ಪಠ್ಯವನ್ನಾದರೆ, ಧ್ವನಿ ಮೂಲಕ ಆಲಿಸುವ ಆಯ್ಕೆಯೂ ಇರುತ್ತದೆ. ಬೇಕಾದ ಪದಗಳನ್ನಷ್ಟೇ ಆಯ್ಕೆ ಮಾಡಿ ಗೂಗಲ್ ಸರ್ಚ್ ಕೂಡ ಮಾಡಬಹುದು, ಭಾಷಾಂತರಿಸಿಕೊಳ್ಳಬಹುದು.

ಇನ್ನು ಗೂಗಲ್ ಸರ್ಚ್ ಬಾರ್‌ನಲ್ಲಿರುವ ಮೈಕ್ ಬಟನ್ ಒತ್ತಿ, ನಾವು ಯಾವುದೇ ಪದ ಅಥವಾ ವಾಕ್ಯವನ್ನು ಹೇಳಿದರೆ, ಮೊಬೈಲ್ ಫೋನ್ ಅದನ್ನು ಅರ್ಥೈಸಿಕೊಂಡು, ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅಂತರಜಾಲವನ್ನು ಜಾಲಾಡಿ ನಮ್ಮ ಮುಂದಿಡುತ್ತದೆ.

ಇಷ್ಟೆಲ್ಲ ಕೆಲಸ ಕಾರ್ಯಗಳನ್ನು ಮಾಡಬಲ್ಲ, ವಿಶೇಷವಾಗಿ ಗೂಗಲ್ ಎಂಬ ಸರ್ಚ್ ಎಂಜಿನ್ ಮಾಡಬಹುದಾದ ಕೆಲಸಗಳನ್ನು ಸುಲಭವಾಗಿಸುವ ಈ ಗೂಗಲ್ ಲೆನ್ಸ್ ನಮಗೆ ಆಪ್ತ ಸಹಾಯಕನಿದ್ದಂತೆ. ಗೂಗಲ್ ಅಸಿಸ್ಟೆಂಟ್ ಎಂಬ ಧ್ವನಿ ಸಹಾಯಕ ತಂತ್ರಾಂಶದ ಮತ್ತೊಂದು ರೂಪವಿದು. ❖

ಪಿಯುಸಿ ಪರೀಕ್ಷೆ ದಿಕ್ಸೂಚಿ

ಕ್ಷೇತ್ರಫಲ

ಮಾದರಿ ಪ್ರಶ್ನೆಗಳು

ಗಣಿತಶಾಸ್ತ್ರ

36) $y = x^2$ ವಕ್ರರೇಖೆ ಮತ್ತು $y = 4$ ಸರಳರೇಖೆಗಳ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಉತ್ತರ: $y = x^2$ ವಕ್ರ ರೇಖೆಯು y – ಅಕ್ಷದಲ್ಲಿ, ಮಾತ್ರ ಸಮ್ಮಿತಿಯವಾಗಿರುವುದರಿಂದ, ಚಿತ್ರದಲ್ಲಿ ತೋರಿಸಿರುವಂತೆ,



ಬೇಕಾದ ಕ್ಷೇತ್ರಫಲ

= AOBA ಪ್ರದೇಶದ ಕ್ಷೇತ್ರಫಲ

$$2\int_0^4 x\, dy$$

= 2[ವಕ್ರರೇಖೆ $x^2 = y$, y–ಅಕ್ಷ $y = 0$ ಮತ್ತು $y = 4$ರೇಖೆಗಳ ನಡುವಣ BONB ಪ್ರದೇಶದ ಕ್ಷೇತ್ರಫಲ]

$$2\int_0^4 \sqrt{y}\, dy = 2x\frac{2}{3}\left[y^{3/2}\right]_0^4 = \frac{4}{3}x8 = \frac{32}{3}$$

37) X–ಅಕ್ಷ, $y=x$ ಸರಳರೇಖೆ ಮತ್ತು $x^2+y^2=32$ ವೃತ್ತಗಳಿಂದ ಆವೃತವಾದ ಮೊದಲ ಚತರ್ಥಾಂಕದಲ್ಲಿನ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಉತ್ತರ: $y = x$...... (1) ಮತ್ತು

$x^2 + y^2 = 32$ .... (2) ಗಳು ದತ್ತ ಸಮೀಕರಣಗಳು ಇವೆರಡೂ ಸಮೀಕರಣಗಳನ್ನು ಏಕಕಾಲಿಕವಾಗಿ ಬಿಡಿಸಿದಾಗ ಅವು ಪ್ರಥಮ ಚತುರ್ಥಾಂಕದಲ್ಲಿ B(4, 4) ರಲ್ಲಿ ಸಂಧಿಸುತ್ತದೆ ಎಂದು ತಿಳಿಯುತ್ತದೆ.



∴ ಬೇಕಾದ ಕ್ಷೇತ್ರಫಲ = OBMO ಪ್ರದೇಶ ಕ್ಷೇತ್ರಫಲ + BMAB ಪ್ರದೇಶದ ಕ್ಷೇತ್ರಫಲ

OBMO ಪ್ರದೇಶದ ಕ್ಷೇತ್ರಫಲ =

$$\int_0^4 y\, dx = \int_0^4 x\, dx$$

$$= \left(\frac{x^2}{2}\right)^4 = 8$$

BMAB ಪ್ರದೇಶದ ಕ್ಷೇತ್ರಫಲ =

$$\int_4^{4\sqrt{2}} y\, dx = \int_4^{4\sqrt{2}} \sqrt{32 - x^2}\, dx$$

$$= \left[\frac{1}{2}\cdot x\sqrt{32-x^2} + \frac{1}{2}\times 32\times \sin^{-1}\frac{x}{4\sqrt{2}}\right]_4^{4\sqrt{2}}$$

$$= \left(\frac{1}{2}\times 4\sqrt{2}\times 0 + \frac{1}{2}\times 32\times \sin^{-1}1\right) - \left(\frac{4}{2}\sqrt{32-16} + \frac{1}{2}\times 32\times \sin^{-1}\frac{4}{4\sqrt{2}}\right)$$

$$= 16\times\frac{\pi}{2} - 8 - 16\times\frac{\pi}{4} = (4\pi - 8) \quad ... (4)$$

(3) ಮತ್ತು (4) ನ್ನು ಕೂಡಿದಾಗ ಬೇಕಾದ ಕ್ಷೇತ್ರಫಲ $= 4\pi$ ಎಂದಾಗುತ್ತದೆ

38) ಉತ್ಪನ್ನ $y = e^{-3x}$, $\frac{d^2y}{dx^2} + \frac{dy}{dx} - 6y = 0$ ಅವಕಲನ ಸಮೀಕರಣದ ಪರಿಹಾರವೇ ಎಂದು ತಾಳೆ ನೋಡಿ

ಉತ್ತರ: ದತ್ತ ಉತ್ಪನ್ನ $y=e^{-3x}$. ಎರಡು ಬದಿಯಲ್ಲಿ x ಗೆ ಅನುಗುಣವಾಗಿ, ಅವಕಲಿಸಿದಾಗ

$$\frac{dy}{dx} = -3e^{-3x} \quad .... (1)$$

ದೊರೆಯುತ್ತದೆ ಸಮೀಕರಣ (1)ನ್ನು ಮತ್ತೆ ಅವಕಲಿಸಿದಾಗ,

$$\frac{d^2y}{dx^2} = -9e^{-3x}$$

ದೊರೆಯುತ್ತದೆ. $\frac{d^2y}{dx^2}$, $\frac{dy}{dx}$ ಮತ್ತು y ನ ಬೆಲೆಗಳನ್ನು ದತ್ತ ಸಮೀಕರಣದಲ್ಲಿ ಆದೇಶಿಸಿದಾಗ,

ಎಡಬದಿ= $9e^{-3x} + (-3e^{-3x}) - 6e^{-3x} = 9e^{-3x} - 9e^{-3x} = 0$

= ಬಲಬದಿ ಆಗುವುದು

ಆದುದರಿಂದ, ದತ್ತ ಉತ್ಪನ್ನವು ದತ್ತ ಅವಕಲನ ಸಮೀಕರಣದ ಪರಿಹಾರವೆಂದು ನಿರ್ಧರಿಸಬಹುದು.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ಆಂಗ್ಲ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

॥ಶ್ರೀ ರಾಮಕೃಷ್ಣಾಯ ತೇ ನಮಃ॥

ಶ್ರೀ ರಾಮಕೃಷ್ಣ ಗುರುಕುಲಾಶ್ರಮ ಟ್ರಸ್ಟ್ (ರಿ.)

STATE & CBSE SYLLABUS

ಪ್ರಕೃತಿಯೊಂದಿಗೆ ಪರಿಪೂರ್ಣ ಶಿಕ್ಷಣ

ಶ್ರೀ ರಾಮಕೃಷ್ಣ ವಸತಿ ವಿದ್ಯಾಲಯ
ಎಂ.ಎಲ್.ಹಳ್ಳಿ, ಸಾಗರ ತಾ॥, ಶಿವಮೊಗ್ಗ ಜಿಲ್ಲೆ.
Affiliated to CBSE Board. Affiliation No.830795
Mob: 9483312141

ಶ್ರೀ ರಾಮಕೃಷ್ಣ ವಸತಿ ವಿದ್ಯಾಲಯ
ಐ.ಬಿ.ಹತ್ತಿರ, ಹೊಸನಗರ, ಶಿವಮೊಗ್ಗ ಜಿಲ್ಲೆ.
Affiliated to CBSE Board. Affiliation No.831009
Mob: 8762713257

ಎಂ.ಎಲ್.ಹಳ್ಳಿ ಸ್ಕೂಲ್ ಬಿಲ್ಡಿಂಗ್

ಹೊಸನಗರ ಸ್ಕೂಲ್ ಬಿಲ್ಡಿಂಗ್

ಪ್ರವೇಶ ಪ್ರಕಟಣೆ 2022–23

ಆತ್ಮೀಯ ಪೋಷಕ ಬಂಧುಗಳೇ,

ನಮ್ಮ ದೇಶಕ್ಕೆ ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡ, ಉಕ್ಕಿನಂತಹ ನರ, ಯಾವುದಕ್ಕೂ ಜಗ್ಗದ ಪ್ರಚಂಡ ಇಚ್ಛಾಶಕ್ತಿ ಇರುವ ಶಕ್ತಿಯುತ ವ್ಯಕ್ತಿಗಳು ಎಂಬುದು ಸ್ವಾಮಿ ವಿವೇಕಾನಂದರ ಸ್ಫೂರ್ತಿವಾಣಿ.ಇಂತಹ ಸದೃಢಶಾಲಿ, ಸುಶಿಕ್ಷಿತ, ಸಂಸ್ಕಾರಯುತ ವೈಜ್ಞಾನಿಕ ಶಿಕ್ಷಣವನ್ನು ಗುರುಕುಲ ಮಾದರಿಯಲ್ಲಿ ನೀಡಿ, ದೇಶದ ಸತ್ಪ್ರಜೆಗಳನ್ನು ರೂಪಿಸಲು ನಮ್ಮ ಶ್ರೀ ರಾಮಕೃಷ್ಣ ವಸತಿ ವಿದ್ಯಾಸಂಸ್ಥೆಗಳು ಶಿಕ್ಷಣ ಕ್ಷೇತ್ರಕ್ಕೆ ಸಮರ್ಪಿಸಿಕೊಂಡಿವೆ. ಹಲವಾರು ವರ್ಷಗಳಿಂದ ಮಲೆನಾಡಿನ ಅಚ್ಚಹಸಿರಿನ ರಮ್ಯತಾಣದಲ್ಲಿ ನೆಲೆಗೊಂಡಿರುವ ನಮ್ಮ ವಿದ್ಯಾಲಯಗಳು ಸಹಸ್ರ ಸಹಸ್ರ ಸಜ್ಜನರನ್ನು ಸಮಾಜಕ್ಕೆ ನೀಡಿರುವುದು ಹೆಮ್ಮೆಯ ಸಂಗತಿ. ಪೋಷಕ ಬಂಧುಗಳು ನಮ್ಮ ವಿದ್ಯಾಲಯಗಳ ಪ್ರಯೋಜನ ಪಡೆಯುವಂತಾಗಲಿ ಎಂಬುದು ನಮ್ಮ ಆಶಯ. ಬನ್ನಿ, ಮಹಾತ್ಮರ ಆದರ್ಶದಡಿಯಲ್ಲಿ ಪರಿಪೂರ್ಣ ಶಿಕ್ಷಣದ ಜೊತೆಗೆ ಸುಸಂಸ್ಕೃತರನ್ನು ಬೆಳೆಸೋಣ–ಹೆಮ್ಮೆಯ ನಾಡನ್ನು ಕಟ್ಟೋಣ.

–ಆಡಳಿತ ಮಂಡಳಿ

ಪ್ರವೇಶಕ್ಕಿರುವ ತರಗತಿಗಳು: 5ರಿಂದ 10ನೇ ತರಗತಿಯವರೆಗೆ

Both STATE & CBSE SYLLABUS

ಪ್ರವೇಶಾವಕಾಶ: ಬಾಲಕ ಮತ್ತು ಬಾಲಕಿಯರಿಗೆ

(ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆಯೊಂದಿಗೆ)

ಆಯ್ಕೆ ವಿಧಾನ:

ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದ ಆಧಾರದ ಮೇಲೆ

ನಮ್ಮ ಶಿಕ್ಷಣದ ವಿಶೇಷತೆಗಳು

- ಮಾತೃವಾತ್ಸಲ್ಯದೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ವಿಶೇಷ ಕಾಳಜಿ ಇರುತ್ತದೆ.
- ಪ್ರಾರ್ಥನೆ, ಯೋಗ, ಧ್ಯಾನ, ಸಂಗೀತ, ನೃತ್ಯ, ಚಿತ್ರಕಲೆ, ನಾಟಕ, ಯಕ್ಷಗಾನ ಇತ್ಯಾದಿ ಚಟುವಟಿಕೆಗಳೊಂದಿಗೆ ಸಂಸ್ಕಾರಯುತ ಶಿಕ್ಷಣ ನೀಡಲಗುತ್ತದೆ.
- ಕ್ರೀಡೆ ಮತ್ತು ಪ್ರತಿಭಾಕ್ಷೇತ್ರದಲ್ಲಿ ರಾಷ್ಟ್ರಮಟ್ಟದವರೆಗೂ ಸಾಧನೆ ಇದೆ.
- ಎಸ್.ಎಸ್.ಎಲ್.ಸಿ.ಯಲ್ಲಿ ಹಲವಾರು ವರ್ಷ ಶೇ.100 ಫಲಿತಾಂಶ ಮತ್ತು ರಾಜ್ಯ ಶ್ರೇಣಿ & 2ನೇ ಶ್ರೇಣಿ ಹಾಗೂ ಅತ್ಯುನ್ನತ ಶ್ರೇಣಿ.
- ತಂದೆ–ತಾಯಿ, ಗುರು–ಹಿರಿಯರ ಬಗ್ಗೆ ಗೌರವ ಭಾವನೆ ಕಲ್ಪಿಸಲಾಗುತ್ತಿದೆ.
- ಕಂಪ್ಯೂಟರ್, ಪ್ರಯೋಗಾಲಯ, ಗ್ರಂಥಾಲಯ, ಸ್ಮಾರ್ಟ್ ಕ್ಲಾಸ್ ಸೌಲಭ್ಯದೊಂದಿಗೆ ಶಿಕ್ಷಣ ನೀಡಲಾಗುತ್ತಿದೆ.
- ಶುಚಿ–ರುಚಿಯಾದ ಮನೆ ಮಾದರಿ ಊಟ, ಸುಸಜ್ಜಿತ ಶಾಲಾ ಕಟ್ಟಡ, ಆಟದ ಮೈದಾನದ ವ್ಯವಸ್ಥೆ ಇದೆ.
- ಶಿಕ್ಷಣ ಕ್ಷೇತ್ರದಲ್ಲಿ ನುರಿತ ಆಡಳಿತ ಮಂಡಳಿ ಮತ್ತು ಅನುಭವಿ ಶಿಕ್ಷಕವರ್ಗದ ತ್ಯಾಗಮಯ ಸೇವೆ ಇಲ್ಲಿದೆ.

ಅರ್ಜಿ ಮತ್ತು ಪ್ರಾಸ್ಪೆಕ್ಟಸ್‌ಗಾಗಿ ರೂ. 250/–ನ್ನು ಈ ಕೆಳಕಂಡ ಖಾತೆಗೆ ಪಾವತಿಸಿ ಹಾಗೂ ಪಾವತಿಸಿದ ಬಗ್ಗೆ ವಿಳಾಸದೊಂದಿಗೆ ಮಾಹಿತಿ ಕಳುಹಿಸಿ.

Sri Ramakrishna Gurukulashrama Trust (R.)
CANARA BANK Account No.: 0574101030268, IFSC: CNRB0000574
or Google Pay: 6361467191

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

9449774451, 9449921950
6361464798, 6364706870

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಅದೃಷ್ಟದ ಮೇಲೆ ಎಂದಿಗೂ ನಂಬಿಕೆ ಇಡಬೇಡಿ. ನಿಮ್ಮ ಕಠಿಣ ಶ್ರಮದ ಮೇಲೆ ನಂಬಿಕೆ ಇಡಿ, ಯಶಸ್ಸು ನಿಮ್ಮದಾಗುತ್ತದೆ.

–ಎ.ಪಿ.ಜೆ. ಅಬ್ದುಲ್ ಕಲಾಂ

ಪಾಕಿಸ್ತಾನದ ಹೊಸ ಸರ್ಕಾರದ ಮುಂದೆ ಸವಾಲುಗಳು ಹಲವು

ಪಾಕಿಸ್ತಾನದಲ್ಲಿ ಸರ್ಕಾರ ಬದಲಾಗಿದೆ. ಪ್ರಧಾನಿಯಾಗಿದ್ದ ಇಮ್ರಾನ್ ಖಾನ್ ಅವರನ್ನು ಪದಚ್ಯುತಗೊಳಿಸಲಾಗಿದ್ದು, ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿದ್ದ ಶಾಹಬಾಝ್ ಷರೀಫ್ ಅವರು ದೇಶದ ಚುಕ್ಕಾಣಿ ಹಿಡಿದಿದ್ದಾರೆ. ಸರ್ಕಾರ ಬದಲಾವಣೆ ಪ್ರಕ್ರಿಯೆಯು ಸುಗಮವಾಗಿಯೇನೂ ನಡೆಯಲಿಲ್ಲ. ಪಾಕಿಸ್ತಾನದ ಸಂಸತ್ತು ನ್ಯಾಷನಲ್ ಅಸೆಂಬ್ಲಿಯಲ್ಲಿ ಇಮ್ರಾನ್ ನೇತೃತ್ವದ ಸರ್ಕಾರವು ಬಹುಮತ ಕಳೆದುಕೊಂಡಿದೆ ಎಂಬುದು ನಿಚ್ಚಳವಾಗಿತ್ತು. ಆದರೆ, ಅಧಿಕಾರದಿಂದ ಕೆಳಕ್ಕೆ ಇಳಿಯಲು ಒಪ್ಪದೇ ಅವರು ನಡೆಸಿದ ರಾಜಕೀಯ ಆಟಗಳು ಪ್ರಜಾಪ್ರಭುತ್ವಕ್ಕೆ ತಕ್ಕದ್ದಾದ ನಡೆಯಲ್ಲ. ಸ್ವಾತಂತ್ರ್ಯ ಪಡೆದ ನಂತರದ 75 ವರ್ಷಗಳಲ್ಲಿ ಸುಮಾರು ಅರ್ಧದಷ್ಟು ಅವಧಿಗೆ ಆ ದೇಶವು ಸೇನೆಯ ನಿರಂಕುಶ ಆಡಳಿತವನ್ನು ಕಂಡಿದೆ. ಈ ಕಾರಣಕ್ಕಾಗಿಯೇ ಪಾಕಿಸ್ತಾನದ ರಾಜಕೀಯ ಸ್ಥಿತಿಯು ಅತ್ಯಂತ ನಾಜೂಕು. ಸಣ್ಣ ಅನಾಸ್ಥೆ ಕೂಡ ಈ ದೇಶವನ್ನು ಪ್ರಜಾಸತ್ತೆಯಿಂದ ನಿರಂಕುಶಾಧಿಪತ್ಯಕ್ಕೆ ತಳ್ಳಬಹುದು ಎಂಬ ಪಾಠವನ್ನು ಇತಿಹಾಸವು ಕಲಿಸಿದೆ. ಹೀಗಿರುವಾಗ, ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಇಮ್ರಾನ್ ಅವರು, ಪ್ರಜಾಸತ್ತೆಯನ್ನೇ ಒತ್ತೆ ಇರಿಸಿದ್ದು, ರಾಜಕೀಯ ಅಸ್ಥಿರತೆ ಮೂಡಿಸಿದ್ದು, ಸೇನೆಯು ಆಳ್ವಿಕೆಯನ್ನು ಕೈಗೆತ್ತಿಕೊಳ್ಳಬಹುದಾದ ಸನ್ನಿವೇಶ ಸೃಷ್ಟಿಸಿದ್ದು ಎಳ್ಳಷ್ಟೂ ಸರಿ ಅಲ್ಲ. ವಿಶ್ವಾಸಮತ ನಿರ್ಣಯವನ್ನು ತಿರಸ್ಕರಿಸಿದ ಉಪ ಸ್ಪೀಕರ್ ನಡೆ, ಪ್ರಧಾನಿ ಶಿಫಾರಸಿನಂತೆ ನ್ಯಾಷನಲ್ ಅಸೆಂಬ್ಲಿ ವಿಸರ್ಜನೆ ಮಾಡಿದ ಅಧ್ಯಕ್ಷರ ತೀರ್ಮಾನ ಪ್ರಜಾಪ್ರಭುತ್ವ ವಿರೋಧಿ ಎಂಬುದರಲ್ಲಿ ಅನುಮಾನವೇ ಇಲ್ಲ. ಸಕಾಲದಲ್ಲಿ ಮಧ್ಯಪ್ರವೇಶಿಸಿದ ಸುಪ್ರೀಂ ಕೋರ್ಟ್, ಪ್ರಜಾಪ್ರಭುತ್ವವನ್ನು ರಕ್ಷಿಸುವ ಕೆಲಸ ಮಾಡಿದ್ದು ಶ್ಲಾಘನೀಯ.

ಪಾಕಿಸ್ತಾನವು ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿದೆ. ಇಂತಹ ಸನ್ನಿವೇಶದಲ್ಲಿ, ಭಾರತದ ಜತೆಗೆ ಸಂಘರ್ಷಕ್ಕೆ ನಿಲ್ಲುವ ಬದಲು ಸಹಕಾರ ಮನೋಭಾವದಿಂದ ಇರುವುದು ಆ ದೇಶಕ್ಕೆ ಅನುಕೂಲಕರ

ಸರ್ಕಾರ ಬದಲಾವಣೆಯ ಹಿಂದೆ ಅಮೆರಿಕದ ಕೈವಾಡವಿದೆ ಎಂದು ಇಮ್ರಾನ್ ಮಾಡಿರುವ ಆರೋಪವು ಅಧಿಕಾರಕ್ಕೆ ಅಂಟಿಕೊಳ್ಳುವ ತಂತ್ರವೇ ವಿನಾ ಬೇರೇನೂ ಅಲ್ಲ ಎಂಬುದು ಸ್ಪಷ್ಟವಾಗಿದೆ. ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿದ ಕಾರಣಕ್ಕೆ ಅಮೆರಿಕವು ತಮ್ಮ ವಿರುದ್ಧ ಸಂಚು ನಡೆಸಿದೆ ಎಂದು ಇಮ್ರಾನ್ ಹೇಳಿದ್ದರು. ಭಾರತವು ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿದೆ ಎಂದು ಇಮ್ರಾನ್ ಅವರು ಹೊಗಳಿದ್ದರ ಹಿಂದೆಯೂ ಅವರ ಕಾರ್ಯತಂತ್ರಕ್ಕೆ ಪೂರಕವಾದ ವಾತಾವರಣ ಸೃಷ್ಟಿಸುವ ಹುನ್ನಾರವಿತ್ತು. ಭಾರತದ ಬಗ್ಗೆ ಇಮ್ರಾನ್ ನೀಡಿದ ಹೇಳಿಕೆಯಲ್ಲಿ ಪ್ರಾಮಾಣಿಕತೆಯ ಕೊರತೆ ಎದ್ದು ಕಾಣುತ್ತಿದೆ. ಶಾಹಬಾಝ್ ಅವರ ಪಾಕಿಸ್ತಾನ್ ಮುಸ್ಲಿಂ ಲೀಗ್– ಎನ್ ಮತ್ತು ಬಿಲಾವಲ್ ಭುಟ್ಟೊ ಅವರ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯ ನಡುವೆ ಅಪನಂಬಿಕೆಯ ಇತಿಹಾಸವೇ ಇದೆ. ಆದರೆ, ಈ ಎರಡು ಪಕ್ಷಗಳು ಈಗ ಒಟ್ಟಾಗಿ ಅಧಿಕಾರಕ್ಕೆ ಬಂದಿವೆ. ಇವಲ್ಲದೆ, ಕೆಲವು ಸಣ್ಣ ಪಕ್ಷಗಳ ಸಂಸದರು ಮತ್ತು ಪಕ್ಷೇತರ ಸಂಸದರು ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ. ಇವರೆಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಮುಂದೆ ಸಾಗುವುದು ಸುಲಭದ ಕೆಲಸವೇನಲ್ಲ. ಜತೆಗೆ, ಹಣದುಬ್ಬರ, ಭ್ರಷ್ಟಾಚಾರದಂತಹ ಹಲವು ಸಮಸ್ಯೆಗಳನ್ನೂ ನಿಭಾಯಿಸಬೇಕಿದೆ. ಇಮ್ರಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ ಪಕ್ಷದ ಸಂಸದರು ನ್ಯಾಷನಲ್ ಅಸೆಂಬ್ಲಿಗೆ ರಾಜೀನಾಮೆ ನೀಡಿದ್ದಾರೆ. ಈ ಮೂಲಕ ರಾಜಕೀಯ ಬಿಕ್ಕಟ್ಟು ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ. ಬೀದಿಗಿಳಿದು ಹೋರಾಡುವ ಸುಳಿವನ್ನೂ ಅವರು ನೀಡಿದ್ದಾರೆ. ಹಾಗಾಗಿ, ಆಡಳಿತದ ಸಮಸ್ಯೆಗಳ ಜತೆಗೆ ರಾಜಕೀಯ ತೊಡಕುಗಳನ್ನೂ ಹೊಸ ಸರ್ಕಾರವು ನಿರ್ವಹಿಸಬೇಕಿದೆ. ಇಮ್ರಾನ್ ಅವರು ಆಳ್ವಿಕೆಯ ಕೊನೆಯ ದಿನಗಳಲ್ಲಿ, ಅಮೆರಿಕ ಮತ್ತು ಪಾಶ್ಚಾತ್ಯ ದೇಶಗಳ ಜತೆಗಿನ ಸಂಬಂಧ ಕೆಡಿಸಿಕೊಂಡಿದ್ದಾರೆ. ಈ ದೇಶಗಳ ವಿಶ್ವಾಸವನ್ನು ಮರಳಿ ಗಳಿಸಬೇಕಾದ ಅನಿವಾರ್ಯವೂ ಹೊಸ ಸರ್ಕಾರಕ್ಕೆ ಇದೆ.

ಪಾಕಿಸ್ತಾನದಲ್ಲಿ ಸ್ಥಿರವಾದ ಮತ್ತು ಪ್ರಜಾಸತ್ತಾತ್ಮಕವಾದ ಸರ್ಕಾರ ಇರುವುದು ಭಾರತಕ್ಕೆ ಒಳ್ಳೆಯದು. ಇತ್ತೀಚಿನ ದಿನಗಳಲ್ಲಿ ಭಾರತ–ಪಾಕಿಸ್ತಾನ ನಡುವಣ ದ್ವಿಪಕ್ಷೀಯ ಸಂಬಂಧ ಉತ್ತಮವಾಗಿಲ್ಲ. ಮಾತುಕತೆ ಸ್ಥಗಿತವಾಗಿದೆ. ಭಾರತದ ಜತೆಗೆ ಉತ್ತಮ ಸಂಬಂಧ ಬೇಕು ಎಂದು ಹೊಸ ಪ್ರಧಾನಿ ಶಾಹಬಾಝ್ ಅವರು ಹೇಳಿದ್ದಾರೆ. ಆದರೆ, 'ಕಾಶ್ಮೀರ ವಿವಾದ' ಪರಿಹಾರವಾಗದೆ ದೀರ್ಘಕಾಲದ ಶಾಂತಿ ಸಾಧ್ಯವಿಲ್ಲ ಎಂದಿದ್ದಾರೆ. ಕಾಶ್ಮೀರದಲ್ಲಿ ಏನೇ ಸಮಸ್ಯೆ ಇದ್ದರೂ ಅದು ಭಾರತದ ಆಂತರಿಕ ವಿಚಾರ ಎಂಬುದನ್ನು ಶಾಹಬಾಝ್ ಅರ್ಥ ಮಾಡಿಕೊಳ್ಳಬೇಕು. ಪಾಕಿಸ್ತಾನವು ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿದೆ. ಇಂತಹ ಸನ್ನಿವೇಶದಲ್ಲಿ, ಭಾರತದ ಜತೆಗೆ ಸಂಘರ್ಷಕ್ಕೆ ನಿಲ್ಲುವ ಬದಲು ಸಹಕಾರ ಮನೋಭಾವದಿಂದ ಇರುವುದು ಆ ದೇಶಕ್ಕೆ ಅನುಕೂಲಕರ. ಶಾಹಬಾಝ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಈ ಪ್ರದೇಶವು ಭಯೋತ್ಪಾದನೆ ಮುಕ್ತವಾಗಿ, ಶಾಂತಿ ಮತ್ತು ಸ್ಥಿರತೆಯಿಂದ ಇರಬೇಕು ಎಂಬುದು ತಮ್ಮ ಅಪೇಕ್ಷೆ ಎಂದೂ ಮೋದಿ ಹೇಳಿದ್ದಾರೆ. ಭಾರತದ ಈ ನಿಲುವನ್ನು ಪಾಕಿಸ್ತಾನ ಅರ್ಥ ಮಾಡಿಕೊಳ್ಳಬೇಕು.

ದಿನದ ಟ್ವೀಟ್

ಅವಲಂಬನೆ ಕಡಿಮೆ ಮಾಡಲು...

ಭಾರತೀಯ ಭಾಷೆಗಳಲ್ಲಿ ಗ್ರಾಹಕ ಸೇವೆ ನೀಡುವಂತೆ ಗಟ್ಟಿಯಾದ ಕಾನೂನುಗಳನ್ನು ರೂಪಿಸಿದರೆ, ಇಂಗ್ಲಿಷ್ ಗೊತ್ತಿಲ್ಲದ ಬಹುಸಂಖ್ಯಾತ ಭಾರತೀಯರ ಗ್ರಾಹಕ ಹಕ್ಕು ರಕ್ಷಣೆಯಾಗುವುದರ ಜೊತೆಗೆ ಭಾರತೀಯ ಭಾಷೆಗಳು ಗೊತ್ತಿರುವವರಿಗೆ ಉದ್ಯೋಗಾವಕಾಶಗಳೂ ಹೆಚ್ಚಾಗುತ್ತವೆ, ಇಂಗ್ಲಿಷ್ ಮೇಲಿನ ಅವಲಂಬನೆಯೂ ಕಡಿಮೆಯಾಗುತ್ತದೆ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ

ಕ್ವಿಂಟಲ್ ಭತ್ತಕ್ಕೆ ₹ 1,940 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ರೈತರಿಗೆ ಸಿಗುತ್ತಿರುವುದು ಸುಮಾರು ₹ 1,400. ಕ್ವಿಂಟಲ್ ರಾಗಿಗೆ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ₹ 3,377. ರೈತರಿಗೆ ಸಿಗುತ್ತಿರುವುದು ಕೇವಲ ಸುಮಾರು ₹ 1,900. ಉಳಿದ ಬೆಳೆಗಳದ್ದೂ ಇದೇ ಪಾಡು. ಸರ್ಕಾರದ ಘೋಷಣೆ, ಭರವಸೆ ಏನಾಯಿತು?

ಯೋಗೇಂದ್ರ ಯಾದವ್, ಸಂಚಾಲಕ, ಸಂಯುಕ್ತ ಕಿಸಾನ್ ಮೋರ್ಚಾ

25 ವರ್ಷಗಳ ಹಿಂದೆ

ಭಾನುವಾರ, 13-4-1997

• ಅನಿಶ್ಚಿತ ಸ್ಥಿತಿ ಚರ್ಚೆಗೆ ನಾಳೆ ಕಾಂಗ್ರೆಸ್ ಕಾರ್ಯಕಾರಿಣಿ

ನವದೆಹಲಿ, ಏ. 12– ಪ್ರಧಾನಿ ಎಚ್.ಡಿ. ದೇವೇಗೌಡ ನೇತೃತ್ವದ ಸಂಯುಕ್ತ ರಂಗ ಸರ್ಕಾರದ ಪತನಕ್ಕೆ ಕಾರಣವಾದ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರ ಆತುರದ ನಿರ್ಧಾರ ಮತ್ತು ಈಗ ಉದ್ಭವಿಸಿರುವ ರಾಜಕೀಯ ಅನಿಶ್ಚಿತ ಪರಿಸ್ಥಿತಿಯ ಬಗೆಗೆ ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯು ಬರುವ ಸೋಮವಾರ ನಡೆಯಲಿದೆ.

ಈಗಿನ ರಾಜಕೀಯ ಅಸ್ಥಿರತೆಗೆ ಕಾರಣವಾದ ಕೇಸರಿ ಅವರ ನಿರ್ಧಾರದಿಂದ ಉಂಟಾಗಿರುವ ಪ್ರತಿಕೂಲ ಪರಿಸ್ಥಿತಿಯ ಬಗೆಗೆ ಸುಮಾರು 150 ಮಂದಿ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರು ಇಂದು ಬಂಡಾಯ ಎದ್ದ ಹಿನ್ನೆಲೆಯಲ್ಲಿ ಕೇಸರಿ ಅವರು ಈ ನಿರ್ಧಾರ ಕೈಗೊಂಡರು. ಈ ತೀರ್ಮಾನವನ್ನು ಕೇಸರಿ ಅವರ ರಾಜಕೀಯ ಆಪ್ತ ಕಾರ್ಯದರ್ಶಿ ತಾರಿಖ್ ಅನ್ವರ್ ಅವರು ಇಂದು ರಾತ್ರಿ ಪ್ರಕಟಿಸಿದರು.

ಇವರಲ್ಲಿ ಬಹುತೇಕ ಮಂದಿ ಶರದ್ ಪವಾರ್ ಮತ್ತು ನರಸಿಂಹರಾವ್ ಬೆಂಬಲಿಗರು. ಸಂಜೆ ಶರದ್ ಪವಾರ್ ಅವರ ನಿವಾಸದಲ್ಲಿ ನಡೆದ ಆತ್ಮಶೋಧನಾ ಚರ್ಚೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದ್ದಾಗಿ ಸಭೆಯಲ್ಲಿ ಭಾಗವಹಿಸಿದ್ದ ಎ.ಆರ್. ಅಂಟುಲೆ ಮತ್ತು ಮಮತಾ ಬ್ಯಾನರ್ಜಿ ಅವರು ತಿಳಿಸಿದರು.

ಪಕ್ಷದ ವಿಪ್ ಉಲ್ಲಂಘಿಸದೇ ನಾವು ಮತ ಹಾಕಿ ಸರ್ಕಾರ ಬೀಳಿಸಿದೆವು. ಆದರೆ, ನಮ್ಮ ಆತ್ಮಸಾಕ್ಷಿಯನ್ನು ವಂಚನೆ ಮಾಡಿಕೊಂಡೆವು ಎಂದು ಅವರು ಪವಾರ್ ನಿವಾಸದ ಮುಂದೆ ಸೇರಿದ್ದ ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಗುರುವಾರ, 13-4-1972

• ಮಾತುಕತೆಗೆ ಭುಟ್ಟೊ ಒಪ್ಪಿಗೆ

ನವದೆಹಲಿ, ಏ. 12– ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರಿಗೆ ಪಾಕಿಸ್ತಾನದ ಅಧ್ಯಕ್ಷ ಜಡ್. ಎ. ಭುಟ್ಟೊ ಅವರು ಬರೆದ ಪತ್ರವನ್ನು ಪ್ರಧಾನಿ ಅವರ ಮುಖ್ಯ ಆಪ್ತ ಕಾರ್ಯದರ್ಶಿ ಶ್ರೀ ಪಿ.ಎನ್. ಹಕ್ಸರ್ ಅವರಿಗೆ ಸ್ವಿಸ್ ರಾಯಭಾರಿ ಫ್ರಿಟ್ಜ್‌ರಿಯಲ್ ಅವರು ಇಂದು ಮಧ್ಯಾಹ್ನ ತಲುಪಿಸಿದರು.

ಭುಟ್ಟೊರವರ ಪತ್ರದಲ್ಲಿನ ವಿಷಯಗಳನ್ನು ಇಲ್ಲಿ ಇನ್ನೂ ಬಹಿರಂಗಪಡಿಸಿಲ್ಲ. ಆದರೆ, ಭುಟ್ಟೊರವರು ರಾವಲ್ಪಿಂಡಿಯಲ್ಲಿ ಸುದ್ದಿಗಾರರೊಡನೆ ಇಂದು ಮಾತನಾಡಿದಾಗ, ಅಧಿಕಾರಿಗಳ ಮಟ್ಟದಲ್ಲಿ ಸಭೆ ನಡೆಯಬೇಕೆಂಬ ಶ್ರೀಮತಿ ಗಾಂಧಿ ಅವರ ಸೂಚನೆಯನ್ನು ತಾವು ಒಪ್ಪಿಕೊಂಡಿರುವುದಾಗಿ ಖಚಿತಪಡಿಸಿದರು.

• ದೇಶದಲ್ಲಿ ಲೆಕ್ಕ ಸಿಕ್ಕದ ಕಪ್ಪುಹಣದ ಮೊತ್ತ ಎಷ್ಟು?

ನವದೆಹಲಿ, ಏ. 12– ತೆರಿಗೆ ತಪ್ಪಿಸಿಕೊಳ್ಳುವಿಕೆ ಮತ್ತು ಕಪ್ಪುಹಣ ಕುರಿತು ವಾಂಛೂ ಸಮಿತಿ ಮಾಡಿರುವ ಶಿಫಾರಸುಗಳ ಬಗ್ಗೆ ಚರ್ಚಿಸಲು ಆರ್ಥಿಕ ವಿಷಯಗಳ ಸಂಸದೀಯ ಸಮಾಲೋಚನಾ ಸಮಿತಿಯ ವಿಶೇಷ ಸಭೆಯು ಮುಂದಿನ ತಿಂಗಳು ನಡೆಯಲಿದೆ.

ಮಾಜಿ ಶಿಕ್ಷಣ ಸಚಿವ ಶ್ರೀ ವಿ.ಕೆ.ಆರ್. ವಿ. ರಾವ್ ಅವರು ಈ ವಿಷಯವನ್ನು ಇಂದು ಇಲ್ಲಿ ನಡೆದ ಸಮಿತಿಯ ಸಭೆಯಲ್ಲಿ ಚರ್ಚೆಗಾಗಿ ಎತ್ತಿದರು. ಆದರೆ, ವಿಷಯದ ಮಹತ್ವದ ದೃಷ್ಟಿಯಿಂದ ಪ್ರತ್ಯೇಕ ಸಭೆಯಲ್ಲಿ ಇದನ್ನು ಚರ್ಚಿಸಲು ನಿರ್ಧರಿಸಲಾಯಿತು.

ಮಹಿಳೆಯರು ತಾಯಿಯಾದ ನಂತರವೂ ಕ್ರೀಡೆಯಲ್ಲಿ ಮಾಡುತ್ತಿರುವ ಸಾಧನೆ ಪ್ರೇರಣಾದಾಯಿ

ಅಮ್ಮಂದಿರ ಆಟ: ಕ್ರೀಡೆಗೆ ಕಿರೀಟ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಆರು ತಿಂಗಳ ಹಿಂದಿನ ಮಾತು. ಕ್ರಿಕೆಟಿಗ ದಿನೇಶ್ ಕಾರ್ತಿಕ್ ಮತ್ತು ಸ್ಕ್ವಾಷ್ ತಾರೆ ದೀಪಿಕಾ ಪಳ್ಳಿಕಲ್ ದಂಪತಿ ಮುದ್ದಾದ ಅವಳಿ ಮಕ್ಕಳೊಂದಿಗೆ ಸಂಭ್ರಮಿಸುವ ಚಿತ್ರಗಳು ಎಲ್ಲ ಪತ್ರಿಕೆಗಳಲ್ಲಿ ರಾರಾಜಿಸಿದ್ದವು. ಈಗ ಅದೇ ದೀಪಿಕಾ, ಗ್ಲಾಸ್ಗೊದಲ್ಲಿ ನಡೆದ ವಿಶ್ವ ಸ್ಕ್ವಾಷ್ ಚಾಂಪಿಯನ್‌ಷಿಪ್‌ನ ಎರಡು ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ತಾವು ಮತ್ತೆ ಅಂಕಣಕ್ಕೆ ಮರಳಿದ ಕ್ಷಣವನ್ನು ಅದ್ಧೂರಿಯಾಗಿ ಆಚರಿಸಿದ್ದಾರೆ. ತಾಯಿಯಾದ ನಂತರವೂ ದೊಡ್ಡ ಸಾಧನೆ ಮಾಡಲು ಹೆಣ್ಣಿಗೆ ಸಾಧ್ಯವಿದೆ ಎಂಬ ಸಂದೇಶವನ್ನು ಕ್ರೀಡಾಲೋಕಕ್ಕೆ ನೀಡಿದ್ದಾರೆ.

ದಶಕಗಳ ಹಿಂದೆ ಮಹಿಳಾ ಅಥ್ಲೀಟ್‌ಗಳು ಮದುವೆ, ಮಕ್ಕಳು ಎಂದಾದ ಕೂಡಲೇ ಕ್ರೀಡೆಯಿಂದ ವಿಮುಖರಾಗುತ್ತಿದ್ದರು. ಇದಕ್ಕೆ ಹಲವಾರು ಉದಾಹರಣೆಗಳು ಸಿಗುತ್ತವೆ. ಆದರೆ ಅದಕ್ಕೆ ಅಪವಾದವೆಂಬಂತೆ ಅಲ್ಲೊಬ್ಬರು, ಇಲ್ಲೊಬ್ಬರು ಅಂಗಳಕ್ಕೆ ಮರಳುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಈ ಸಂಖ್ಯೆ ಹೆಚ್ಚುತ್ತಿರುವುದು ಮಹಿಳಾ ಕ್ರೀಡೆಯ ಮಟ್ಟಿಗೆ ಆಶಾದಾಯಕ ಬೆಳವಣಿಗೆ. ಒಲಿಂಪಿಯನ್ ಬಾಕ್ಸರ್, ಮೂವರು ಮಕ್ಕಳ ತಾಯಿ ಮೇರಿ ಕೋಮ್, ಟೆನಿಸ್ ತಾರೆ ಸಾನಿಯಾ ಮಿರ್ಜಾ ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ. ಮೂಗು ಮುರಿದವರೇ ನಿಬ್ಬೆರಗಾಗುವಂತೆ ಮಾಡಿದ್ದಾರೆ. ಮೇರಿ ಕೋಮ್ ಮೂರನೇ ಮಗುವಿನ ತಾಯಿಯಾದ ನಂತರವೇ ಎರಡು ಒಲಿಂಪಿಕ್ಸ್‌ಗಳಲ್ಲಿ ಆಡಿದ್ದಾರೆ. ಒಂದು ಬಾರಿ ವಿಶ್ವ ಚಾಂಪಿಯನ್‌ಷಿಪ್ ಚಿನ್ನ ಗೆದ್ದಿದ್ದಾರೆ. ಅದರಲ್ಲೂ ಬಾಕ್ಸಿಂಗ್‌ನಂತಹ ದೇಹದಂಡನೆ ಮತ್ತು ಅಪಾರ ಶಕ್ತಿ ಬೇಡುವ ಕ್ರೀಡೆಯಲ್ಲಿ ಈ ಸಾಧನೆ ಮಾಡಿದ್ದು ಸಣ್ಣ ವಿಷಯವಲ್ಲ. ಇದೇ ವರ್ಷ ನಡೆಯುವ ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾಗವಹಿಸಲು ಅಭ್ಯಾಸ ಕೂಡ ಆರಂಭಿಸಿದ್ದಾರೆ. ಈ ಋತುವಿನ ನಂತರ ನಿವೃತ್ತರಾಗುವುದಾಗಿ ಸಾನಿಯಾ ಘೋಷಿಸಿದ್ದಾರೆ.

ಮೂರು ದಶಕಗಳ ಹಿಂದೆ, ಓಟದ ರಾಣಿ ಪಿ.ಟಿ. ಉಷಾ, ಕನ್ನಡತಿ ಪ್ರಮೀಳಾ ಅಯ್ಯಪ್ಪ ಮತ್ತು ಹೈಜಂಪ್ ಅಥ್ಲೀಟ್ ಸಹನಾಕುಮಾರಿ ಕೂಡ ತಾಯಂದಿರಾದ ನಂತರವೇ ಕಣಕ್ಕಿಳಿದು ಸಾಮರ್ಥ್ಯ ತೋರಿದ್ದರು. ಆದರೆ ಇಂದಿಗೂ ಮಹಿಳಾ ಕ್ರೀಡಾಪಟುಗಳಿಗೆ ಮದುವೆ ಮತ್ತು ಮಾತೃತ್ವವು ವೃತ್ತಿ ಮುಂದುವರಿಸಲು ಅಡೆತಡೆಗಳೇ ಆಗಿ ಉಳಿದಿರುವುದು ವಿಪರ್ಯಾಸ. ಇದಕ್ಕೆ ಕಾರಣಗಳು ಹಲವಾರಿವೆ.

ಮೊತ್ತಮೊದಲನೆಯದಾಗಿ, ದೈಹಿಕ ಕ್ಷಮತೆಯನ್ನು ಉಳಿಸಿಕೊಳ್ಳುವುದು ಪ್ರಮುಖ ಸವಾಲು. ಸುಮಾರು ಒಂದೂವರೆ, ಎರಡು ವರ್ಷ ಕ್ರೀಡಾಂಗಣದಿಂದ ದೂರ ಉಳಿದೂ ದೇಹ ಮತ್ತು ಮಾನಸಿಕ ದೃಢತೆಯನ್ನು ಉಳಿಸಿಕೊಳ್ಳಬೇಕು. ಈ ಅವಧಿಯಲ್ಲಿ ಅವರ ಕ್ಷೇತ್ರದಲ್ಲಿ ಆದ ಸ್ಪರ್ಧಾತ್ಮಕ ಬದಲಾವಣೆಗಳಿಗೂ ಸ್ಪಂದಿಸುತ್ತ ಮರಳಿ ಕಣಕ್ಕಿಳಿಯುವ ಸವಾಲು ಇನ್ನೊಂದೆಡೆ ಇರುತ್ತದೆ. ಮುಖ್ಯವಾಗಿ ಪ್ರಾಯೋಜಕರು ಹಾಗೂ ಕೋಚ್‌ಗಳನ್ನು ಕಾಯ್ದುಕೊಳ್ಳುವುದು ಕಷ್ಟ. 'ಗೆಲ್ಲುವ ಕುದುರೆ' ಮೇಲಷ್ಟೇ ಅಲ್ಲವೇ ಪ್ರಾಯೋಜಕರು ದುಡ್ಡು ಹೂಡಲು ಮನಸ್ಸು ಮಾಡುವುದು?

ಕೆಲವು ವರ್ಷಗಳ ಹಿಂದೆ ನಡೆದಿದ್ದ ಪ್ರಕರಣ ಇದಕ್ಕೆ ಸಾಕ್ಷಿ. ಖ್ಯಾತನಾಮ ಮಹಿಳಾ ಅಥ್ಲೀಟ್‌ಗಳು ಗರ್ಭಿಣಿಯರಾದ ಕಾರಣಕ್ಕೆ, ಅವರಿಗೆ ನೀಡುತ್ತಿದ್ದ ಪ್ರಾಯೋಜಕತ್ವವನ್ನು ಪ್ರತಿಷ್ಠಿತ ಕಂಪನಿಯೊಂದು ನಿಲ್ಲಿಸಿತ್ತು. ಆ ಸಂದರ್ಭದಲ್ಲಿ ಇದಕ್ಕೆ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತ ಅಥ್ಲೀಟ್ ಅಲೈಸಿಯಾ ಮಾಂಟೆನೊ, ಒಲಿಂಪಿಯನ್ ಕ್ಯಾರಾ ಗೌಶರ್ ಮತ್ತು ಅಲಿಸನ್ ಫೆಲಿಕ್ಸ್ ತಿರುಗೇಟು ನೀಡಿದ್ದರು. ಮಾಧ್ಯಮಗಳಲ್ಲಿಯೂ ಇದು ದೊಡ್ಡ ಸುದ್ದಿಯಾಗಿತ್ತು. ಇದರಿಂದಾಗಿ ಕಂಪನಿಯು ತನ್ನ ನೀತಿಯನ್ನು ಬದಲಾಯಿಸಿಕೊಳ್ಳಬೇಕಾಯಿತು. ಈ ಕುರಿತು 2019ರಲ್ಲಿ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಫೆಲಿಕ್ಸ್ ದೀರ್ಘ ಲೇಖನ ಬರೆದಿದ್ದರು.

ಇನ್ನು ತಾಯ್ತನದ ನಂತರ ಕ್ರೀಡೆಗೆ ಮರಳಿದ ಸಂದರ್ಭದಲ್ಲಿ ಅಲ್ಲಿಯ ವ್ಯವಸ್ಥೆಯೊಂದಿಗೆ ಮತ್ತೊಂದು ಸಂಘರ್ಷಕ್ಕೆ ಇಳಿಯುವ ಅನಿವಾರ್ಯ ಎದುರಾಗುತ್ತದೆ. ಈ ಹಿಂದೆ ಕಲಿಸಿದ್ದ ಕೋಚ್‌ಗಳು, ಸಹಪಾಠಿಗಳು ಮತ್ತು ಫೆಡರೇಷನ್ ಅಧಿಕಾರಿಗಳ ವಿಶ್ವಾಸ ಗಳಿಸಿಕೊಳ್ಳಲು ಹೆಣಗಾಡಬೇಕಾಗುತ್ತದೆ. ಇದೆಲ್ಲವನ್ನೂ ಮೀರಿ ಅಭ್ಯಾಸ ಆರಂಭಿಸಿದಾಗ ದೇಹ ಮತ್ತು ಮನಸ್ಸು ಮಾತು ಕೇಳುವುದಿಲ್ಲ.

'ಅಭ್ಯಾಸ ಮಾಡುವಾಗ ಕಷ್ಟವಾಗುತ್ತಿತ್ತು. ತಾಯಿಯಾದ ನಂತರ ಇಷ್ಟು ಬೇಗ ಕ್ರೀಡೆಗೆ ಮರಳಿದ್ದರಿಂದ ಪಶ್ಚಾತ್ತಾಪವಾಗುತ್ತಿದೆಯೇ ಎಂದು ನನ್ನ ಸುತ್ತಮುತ್ತಲಿನವರು ಹಲವು ಬಾರಿ ಕೇಳಿದ್ದರು. ಆಗೆಲ್ಲ ಅವರಿಗೆ 'ಖಂಡಿತಾ ಇಲ್ಲ, ನನ್ನ ವೃತ್ತಿಯನ್ನು ಪ್ರೀತಿಸುತ್ತೇನೆ' ಎಂದು ಹೇಳಿದ್ದೆ ಎಂದು ವಾಲಿಬಾಲ್ ತಾರೆ ವಾಲ್ಶ್ ಜೆನಿಂಗ್ಸ್ ಸಂದರ್ಶನವೊಂದರಲ್ಲಿ ಹೇಳಿದ್ದರು. ಇಂತಹ ಕೆಲವು ತಾರಾ ಅಥ್ಲೀಟ್‌ಗಳು ತೋರಿದ ಧೈರ್ಯ ಮತ್ತು ತ್ಯಾಗದಿಂದಾಗಿ ಪರಿಸ್ಥಿತಿ ಬದಲಾಗುತ್ತಿದೆ. 'ಸೂಪರ್ ಮಾಮ್' ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತಿದ್ದಾರೆ.

ಇತ್ತೀಚೆಗಷ್ಟೇ ನ್ಯೂಜಿಲೆಂಡ್‌ನಲ್ಲಿ ಮುಕ್ತಾಯವಾದ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಬೇರೆ ಬೇರೆ ತಂಡಗಳಲ್ಲಿ ಒಟ್ಟು ಎಂಟು ಮಂದಿ ಅಮ್ಮಂದಿರು ಆಡಿದ್ದರು. ಡ್ರೆಸಿಂಗ್ ರೂಮ್‌ನಲ್ಲಿ ಸಹ ಆಟಗಾರ್ತಿಗೆ ಮಗುವಿನ ಹೊಣೆ ವಹಿಸಿ ಕಣಕ್ಕಿಳಿದು ತಂಡವನ್ನು ಮುನ್ನಡೆಸಿದ ಪಾಕಿಸ್ತಾನ ತಂಡದ ನಾಯಕಿ ಬಿಸ್ಮಾ ಅವರು ಮನಗೆದ್ದರು. ಅವರು ಬಲಿಷ್ಠ ಆಸ್ಟ್ರೇಲಿಯಾದ ಎದುರು ಹೊಡೆದ ಅರ್ಧಶತಕ ಬಹುಕಾಲ ಕ್ರಿಕೆಟ್‌ಪ್ರೇಮಿಗಳ ನೆನಪಿನಲ್ಲಿ ಉಳಿಯುವಂತಹದ್ದು. ಅವರಷ್ಟೇ ಅಲ್ಲ, ನ್ಯೂಜಿಲೆಂಡ್‌ನ ಅಮಿ ಸೆಟರ್ಥ್‌ವೇಟ್, ಲೀ ತಹುವು, ಪ್ರಶಸ್ತಿ ಜಯಿಸಿದ ಆಸ್ಟ್ರೇಲಿಯಾದ ಮೆಗನ್ ಶೂಟ್, ರಚೆಲ್ ಹೇಯ್ನ್ಸ್, ದಕ್ಷಿಣ ಆಫ್ರಿಕಾದ ಲಿಜೆಲ್ ಲೀ, ಮಸಾಬತ್ ಕ್ಲಾಸ್ ಹಾಗೂ ವೆಸ್ಟ್ ಇಂಡೀಸ್‌ನ ಅಫೈ ಫ್ಲೆಚರ್ ಆಡಿದ್ದರು.

ಇದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಆಡಳಿತದಲ್ಲಿಯೂ ಸಂಚಲನ ಮೂಡಿಸಿದೆ. ಅಂತರರಾಷ್ಟ್ರೀಯ ಟೂರ್ನಿಗಳು ಮತ್ತು ವಿಶ್ವದರ್ಜೆಯ ಟೂರ್ನಿಗಳಲ್ಲಿ ಆಡಲು ಬರುವ ಅಮ್ಮಂದಿರಿಗಾಗಿ ಅದು ವಿಶೇಷ ವಸತಿ ಮತ್ತು ಪ್ರಯಾಣದ ವ್ಯವಸ್ಥೆಗಳನ್ನು ಮಾಡಲು ಮುಂದಾಗಿದೆ.

'ಮಹಿಳೆಯರು ತಮ್ಮ ಕೌಟುಂಬಿಕ ಜೀವನದೊಂದಿಗೆ ಕ್ರಿಕೆಟ್‌ನಲ್ಲಿಯೂ ಮಿಂಚುತ್ತಿರುವುದು ಪ್ರೇರಣಾದಾಯಿಯಾಗಿದೆ. ಅವರಿಗಾಗಿ ವಿಶೇಷ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಗಮನ ಹರಿಸುತ್ತೇವೆ. ತಾಯಂದಿರು ಮಗು ಮತ್ತು ಕುಟುಂಬದ ಸದಸ್ಯರೊಂದಿಗೆ ಪ್ರಯಾಣಿಸುತ್ತಿರುವುದನ್ನು ನೋಡಿದ್ದೇವೆ. ಟೂರ್ನಿಗಳಲ್ಲಿ ಅವರು ಆಡುವಾಗ ವಿಶೇಷವಾದ ವಸತಿ ವ್ಯವಸ್ಥೆಯನ್ನು ಕಲ್ಪಿಸುತ್ತೇವೆ. ಅವರಿಗೆ ಸಂಪೂರ್ಣ ಸುರಕ್ಷತೆಯನ್ನೂ ನೀಡಲು ಬದ್ಧರಾಗಿದ್ದೇವೆ. ಇದರಿಂದ ಆಟಗಾರ್ತಿಯರು ನಿಶ್ಚಿಂತೆಯಿಂದ ಆಡಬಹುದಾಗಿದೆ' ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೆಫ್ ಅಲಾರ್ಡಿಸ್ ಇತ್ತೀಚೆಗೆ ಹೇಳಿದ್ದಾರೆ.

ಅಷ್ಟೇ ಅಲ್ಲ, ಬಹುದಿನಗಳ ಬೇಡಿಕೆಯಾಗಿರುವ ನಗದು ಪ್ರಶಸ್ತಿ ತಾರತಮ್ಯವನ್ನು ನಿವಾರಿಸಲೂ ಐಸಿಸಿ ಮುಂದಾಗಿದೆ. 2024ರಿಂದ 2031ರ ಅವಧಿಗೆ ಸಿದ್ಧಪಡಿಸಲಾಗುತ್ತಿರುವ ಐಸಿಸಿಯ ಬಜೆಟ್ ಮಂಡನೆಯಲ್ಲಿ ಇದು ಪ್ರಮುಖ ವಿಷಯವಾಗಲಿದೆ.

ಆದರೆ ಮಹಿಳಾ ಕ್ರಿಕೆಟ್ ಮೊದಲ ಟೆಸ್ಟ್ ಪಂದ್ಯ ನಡೆದು ಸುಮಾರು ಒಂಬತ್ತು ದಶಕಗಳು ಕಳೆದರೂ ತಾರತಮ್ಯ ನಿವಾರಿಸುವತ್ತ ಈಗಷ್ಟೇ ಮನಸ್ಸು ಮಾಡುತ್ತಿರುವುದು ಸೋಜಿಗ. ಪುರುಷರಿಗೆ ಸಮನಾಗಿ ಟೆಸ್ಟ್, ಏಕದಿನ ಮತ್ತು ಟಿ20 ಮಾದರಿಗಳಲ್ಲಿ ಮಹಿಳಾ ತಂಡಗಳು ಗಮನ ಸೆಳೆಯುತ್ತಿವೆ. ಅದರಲ್ಲೂ ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ತಂಡಗಳ ಸಾಧನೆ ಉನ್ನತ ಮಟ್ಟದಲ್ಲಿದೆ. ಕಳೆದೆರಡು ದಶಕಗಳಲ್ಲಿ ಭಾರತದ ವನಿತೆಯರ ಸಾಧನೆಯೂ ಗಮನಾರ್ಹ. 'ತೊಟ್ಟಿಲು ತೂಗುವ ಕೈಗಳು ಜಗತ್ತನ್ನೂ ಮುನ್ನಡೆಸಬಲ್ಲವು' ಎಂಬುದನ್ನು ಕ್ರೀಡಾ ಆಡಳಿತಗಳು ಮನಗಾಣಲು ಇದು ಸೂಕ್ತ ಸಮಯ.

ಚುರುಮುರಿ

ಮೇರಾ ಹಿಂದಿಸ್ತಾನ್

• ಮಣ್ಣೆರಾಜು

'ಇಂಗ್ಲಿಷನ್ನು ದೇಶದಿಂದ ಓಡಿಸುವ ಕ್ವಿಟ್ ಇಂಡಿಯಾ ಚಳವಳಿ ಶುರುವಾದಂತಿದೆ ಕಣ್ರೀ...' ನ್ಯೂಸ್‌ಪೇಪರ್ ಓದುತ್ತಾ ಸುಮಿ ಹೇಳಿದಳು.

'ಪರಭಾಷೆ, ಪರ ಸಂಸ್ಕೃತಿ ನಮಗೆ ಬೇಡ ಅಂತ ಈ ಹೋರಾಟ ನಡೆದಿದೆಯಂತೆ' ಎಂದ ಶಂಕ್ರಿ.

'ಇಂಗ್ಲಿಷ್ ತೊಲಗಿದರೆ ಕನ್ನಡ ಮೀಡಿಯಂಗೆ ಮಾನ್ಯತೆ ಸಿಗುತ್ತದೆ ಬಿಡಿ'.

'ಆಸೆ ಪಡಬೇಡ, ದೇಸಿ ಮೀಡಿಯಂಗಳನ್ನು ಮೂಲೆಗೆ ತಳ್ಳಿ ಹಿಂದಿ ಮೀಡಿಯಂ ಮೆರೆದಾಡುತ್ತದೆ... ದೇಶದ ಇತಿಹಾಸ ಕೆದಕಿ ನೋಡು. ಬಲಾಢ್ಯ ಸಾಮ್ರಾಟರು ಪ್ರಾಂತೀಯ ರಾಜರನ್ನು ಸದೆಬಡಿದು ರಾಜ್ಯ ವಿಸ್ತರಿಸಿಕೊಂಡಿಲ್ಲವೇ, ಹಾಗೇ ಪ್ರಾದೇಶಿಕ ಭಾಷೆಗಳ ಧ್ವನಿ ಅಡಗಿಸಿ ಹಿಂದಿಗೆ ಪಟ್ಟ ಕಟ್ಟಿ ಹಿಂದಿಸ್ತಾನ ಸ್ಥಾಪನೆ ಮಾಡುವ ಪ್ರಯತ್ನ ನಡೆದಿದೆಯಂತೆ'.

'ಹೌದೇನ್ರೀ?!...ಹೀಗಾದ್ರೆ ನಮ್ಮ ಕನ್ನಡವನ್ನು ಕಲಿಸೋದು, ಉಳಿಸೋದು ಹೇಗೆ?'

'ಹಿಂದಿ ಬಳಸಿ, ಕನ್ನಡವನ್ನು ಬಳಸದೆ ಉಳಿಸಿ, ಸೇವ್ ಕನ್ನಡ ಎನ್ನುವಂತಾಗುತ್ತದೆ. ಗೋಗರೆದು ಕೇಳಿಕೊಂಡರೆ ಹಿಂದಿ ಮೀಡಿಯಂ ಶಿಕ್ಷಣದಲ್ಲಿ 20- 30 ಮಾರ್ಕ್ಸ್‌ನ ಕನ್ನಡ ಕಲಿಯಲು ಅವಕಾಶ ಸಿಕ್ಕರೆ ನಮ್ಮ ಪುಣ್ಯ!'

'ಹಿಂದಿ ಭಾಷೆ ಜಾರಿಯಿಂದ ಏನೇನು ಅನುಕೂಲವಂತೆ?'

'ಅನುಕೂಲವಿದೆಯಂತೆ. ಪ್ರಾದೇಶಿಕ ಭಾಷೆಗಳು ಹಿಂದಿಯಲ್ಲಿ ಐಕ್ಯವಾಗಿ ಏಕ ಭಾಷೆಯ ಏಕ ದೇಶ ಸಾಧ್ಯವಂತೆ. ಭಾಷಾ ಭೇದ, ರಾಜ್ಯಗಳ ಗಡಿ ವಿವಾದ, ನದಿ ವಿವಾದ ಬಗೆಹರಿಯಬಹುದು. ಗಂಗಾ- ಕಾವೇರಿ ಸಂಗಮವಾಗಬಹುದು, ಇಲ್ಲಿನ ತುಂಗೆ, ಕೃಷ್ಣೆ ದೆಹಲಿ ಕಡೆ ಹರಿಯಬಹುದು...'

'ಹೀಗಾದ್ರೆ ನಮ್ಮ ಭಾಷೆ, ಸಂಸ್ಕೃತಿ, ಆಚಾರ- ವಿಚಾರಗಳನ್ನು ಹಿಂದಿಗೆ ಅನುವಾದ ಮಾಡಿಕೊಂಡು ಬಾಳಬೇಕಾಗುತ್ತದೆ ಅಲ್ವೇನ್ರೀ?'

'ಹೌದು, ಹಿಂದಿ ಮೀಡಿಯಂ ಶಿಕ್ಷಣದಿಂದ ಪ್ರತಿಭಾ ಪಲಾಯನ ತಡೆಯಬಹುದಂತೆ'.

'ಇನ್ನೆಲ್ಲಿಗೆ ಪಲಾಯನ, ಇಂಗ್ಲಿಷ್ ಜ್ಞಾನ ಪಡೆಯಲಾಗದ ಪ್ರತಿಭೆಗಳು ವಿದೇಶಕ್ಕಂತೂ ಹಾರಲಾಗುವುದಿಲ್ಲವಲ್ಲ...' ಕೊಂಕು ನುಡಿದಳು ಸುಮಿ.

ಸಂಗತ

ಮಕ್ಕಳೆದುರು ಲಘುವಾಗುವ ಈ ಪರಿ...

ಮಕ್ಕಳು ಎಲ್ಲ ಕೆಲಸಕ್ಕೂ ಅತಿಯಾಗಿ ಪೋಷಕರನ್ನು ಅವಲಂಬಿಸುವಂತೆ ಮಾಡುವುದು ಅವರನ್ನು ಸೋಮಾರಿಗಳನ್ನಾಗಿಸುವ ನಡೆಯಲ್ಲವೇ?

• ಆರತಿ ಪಟ್ರಮೆ

ಶಾಲೆಯೊಂದರಲ್ಲಿ ಇತ್ತೀಚೆಗೆ ಪೋಷಕರ ಸಭೆ ನಡೆಯುತ್ತಿತ್ತು. ಎದುರು ಸಾಲಿನಲ್ಲಿ ತನ್ನ ಹೆತ್ತವರ ಜತೆಗೆ ವಿದ್ಯಾರ್ಥಿಯೊಬ್ಬ ಕುಳಿತಿದ್ದ. ಅತಿಥಿಗಳು ಪೋಷಕರನ್ನುದ್ದೇಶಿಸಿ ಮಾತನಾಡುತ್ತಿರುವಾಗಲೇ ಅವನು ಬಾಯಾರಿ ನೀರು ಕುಡಿಯುವುದಕ್ಕೆ ಅನುವಾದ. ನೀರಿನ ಬಾಟಲಿಯ ಮುಚ್ಚಳ ಅವನ ಕೈಜಾರಿ ಕೆಳಗೆ ಬಿತ್ತು. ಅವನು ಎದ್ದು ಅದನ್ನು ಹೆಕ್ಕಿಕೊಳ್ಳುವುದಕ್ಕೆ ಮೊದಲೇ ಅವನ ತಂದೆ ದಡಬಡಿಸಿ ಎದ್ದು ಅದನ್ನು ಹೆಕ್ಕಿಕೊಟ್ಟರು. ಅವನು ಸಾವಕಾಶವಾಗಿ ತೆಗೆದುಕೊಂಡ. ದೂರದಿಂದ ಇದನ್ನು ಗಮನಿಸಿದ ನನಗ್ಯಾಕೋ ಕೊಂಚ ಕಸಿವಿಸಿಯೆನಿಸಿತು. ಅಲ್ಲಿ ಮಾತಾಡುವುದೋ ಪ್ರತಿಕ್ರಿಯೆ ಕೊಡುವುದೋ ನನ್ನ ವ್ಯಾಪ್ತಿಯಲ್ಲಿರಲಿಲ್ಲ.

ಈಗ ಪರೀಕ್ಷೆಗಳ ಸಮಯ. ಒಮ್ಮೆ ಪರೀಕ್ಷಾ ಕೊಠಡಿ ಯೊಳಗೆ ಇದ್ದಾಗ ಅತ್ತಿಂದಿತ್ತ ಬಾಲಸುಟ್ಟ ಬೆಕ್ಕುಗಳಂತೆ ಸುತ್ತುವುದು ಉಪನ್ಯಾಸಕರಿಗೆ ಬದ್ಧತೆ. ಹಾಗೆಯೇ ನಡೆದಾಡುತ್ತಿರುವಾಗ ವಿದ್ಯಾರ್ಥಿಯೊಬ್ಬನ ಇರೇಸರ್ ಕೆಳಗೆ ಬಿತ್ತು. ಅವನು ನನಗೆ ಸನ್ನೆ ಮಾಡಿ ಅದನ್ನು ಹೆಕ್ಕಿ ಕೊಡುವಂತೆ ತಿಳಿಸಿದ. ನನಗೆ ನಖಶಿಖಾಂತ ಉರಿಯಿತು. ಎದ್ದು ಹೆಕ್ಕಿಕೋ ಎಂದು ಅವನಿಗೆ ಸನ್ನೆ ಮಾಡಿ ಮುಂದೆ ನಡೆದೆ.

ಈ ಎರಡೂ ಘಟನೆಗಳನ್ನು ಸಮಾಧಾನದಿಂದ ಗಮನಿಸಿದರೆ ಅರ್ಥವಾಗುವುದಿಷ್ಟೆ. ಪೋಷಕರು ಮತ್ತು ಶಿಕ್ಷಕರನ್ನು ಮಕ್ಕಳು ತಮ್ಮ ಇಚ್ಛೆಗಳನ್ನು ಪೂರೈಸುವುದಕ್ಕೆ ಇರುವವರು ಅಂದುಕೊಂಡಿದ್ದಾರೆ ವಿನಾ ಬದುಕಿನಲ್ಲಿ ಅವರ ಸ್ಥಾನವೇನೆಂಬುದನ್ನು ಅರ್ಥ ಮಾಡಿಕೊಂಡಿಲ್ಲ. ತೀರಾ ಚಿಕ್ಕ ಮಕ್ಕಳಲ್ಲದೇ ಪ್ರೌಢ ಶಾಲಾ ಹಂತದಲ್ಲಿರುವ ಮಕ್ಕಳನ್ನು ಸಹ ಬಸ್ಸಿನಿಂದ ಇಳಿಸಿಕೊಳ್ಳುವ ತಾಯಂದಿರು (ಅಪ್ಪ, ಅಜ್ಜ, ಅಜ್ಜಿ ಯಾರೇ ಆದರೂ), ಮಕ್ಕಳ ಕೈಯಿಂದ ಅವರ ಭಾರದ ಪುಸ್ತಕಗಳ ಚೀಲವನ್ನೂ ಊಟದ ಚೀಲವನ್ನೂ ತಾವೇ ತೆಗೆದುಕೊಂಡು ಮಕ್ಕಳು ಹಗುರವಾಗಿ ಹಾರಿ ನಡೆಯುವುದಕ್ಕೆ ಅನುಕೂಲ ಮಾಡಿಕೊಡುತ್ತಾರೆ. ಇಂದಿನ ಮಕ್ಕಳ ಬ್ಯಾಗುಗಳೇನೋ ಭರ್ಜರಿ ಭಾರವೇ ಎನ್ನೋಣ. ಆದರೆ, ಮಕ್ಕಳು ತಾವು ಹೊರಬೇಕಾದ ಕರ್ತವ್ಯವನ್ನು ಪೋಷಕರು ತಾವು ಹೊತ್ತು ಮಕ್ಕಳಿಗೆ ಕಲಿಸುವುದೇನನ್ನು? ಕಷ್ಟವನ್ನು ಹೊರಬೇಕಾದವರು ತಂದೆ– ತಾಯಿಯೇ ವಿನಾ ತಾವಲ್ಲ ಎಂಬುದನ್ನಲ್ಲವೇ?

ನಮ್ಮ ತಲೆಮಾರಿನವರ ಬಾಲ್ಯದ ಕಾಲವನ್ನೊಮ್ಮೆ ನೆನಪು ಮಾಡಿಕೊಳ್ಳೋಣ. ಶಾಲೆಗೆ ಹೋಗಬೇಕೆಂದರೆ ಹತ್ತು ಹದಿನೈದು ಕಿಲೊಮೀಟರು ನಡಿಗೆ. ಬೆನ್ನಿಗೆ ಭಾರದ ಚೀಲ. ಕೈಯಲ್ಲಿ ಬುತ್ತಿ, ಛತ್ರಿ. ನನ್ನೊಂದಿಗೆ ಜತೆಯಲ್ಲಿ ಅಪ್ಪ ನಡೆದುಬರುತ್ತಿದ್ದರು. ನಾನೆಂದೂ ನನ್ನ ಕೈಯ ಹೊರೆಯನ್ನು ಅಪ್ಪನಿಗೆ ದಾಟಿಸಿದ್ದಿಲ್ಲ. ಅಪ್ಪನ ಕೈಯಲ್ಲಿ ಇನ್ನೇನೋ ಇದ್ದೀತು ಅಂದುಕೊಳ್ಳೋಣ. ನನಗೆ ಎತ್ತಿಕೊಳ್ಳುವುದಕ್ಕೆ ಬಿಡದೇ ಅಪ್ಪ ಎತ್ತಿಕೊಳ್ಳುತ್ತಿದ್ದುದು ನನಗೆ ಮದುವೆಯಾಗಿ ಮಕ್ಕಳು ಹುಟ್ಟಿದ ಮೇಲೆ, ಅವರನ್ನು! ಎಳವೆಯಲ್ಲಿ ನಮ್ಮ ಬ್ಯಾಗುಗಳನ್ನು ಅಪ್ಪ ತೆಗೆದುಕೊಂಡು ನಡೆಯಬೇಕೆಂಬ ಕಲ್ಪನೆಯೂ ನಮಗಿರುವುದಕ್ಕೆ ಸಾಧ್ಯವಿರಲಿಲ್ಲ.

ಬದುಕು ಇಷ್ಟರಮಟ್ಟಿಗೆ ಯಾಕೆ ಬದಲಾಯಿತು? ಮಕ್ಕಳು ಹಗುರವಾದರೆ ಅವರ ವಿದ್ಯಾಭ್ಯಾಸ ಹಗುರವಾಗುತ್ತದೆ ಎಂಬ ಭ್ರಮೆಯೇ? ಒಬ್ಬನೇ ಮಗ, ಒಬ್ಬಳೇ ಮಗಳೆಂಬ ಅತಿಯಾದ ಮುದ್ದು, ಊಟ ತಿಂಡಿಗೆ ಕುಳಿತಾಗಲೂ ಮಕ್ಕಳಿಗೆ ಕನಿಷ್ಠ ಇಂತಿಷ್ಟು ಜವಾಬ್ದಾರಿ ಎಂದು ಕಲಿಸದೇ ಇರುವುದು, ಸರಿಯಾಗಿ ತಿನ್ನದೆ ಹಾಗೇ ಹೊರಟುಬಿಟ್ಟರೆ ಎಂಬ ಆತಂಕದಲ್ಲಿ ಮಕ್ಕಳು ಪ್ರಾಯಕ್ಕೆ ಬಂದರೂ ಅಮ್ಮನೇ ತಿನ್ನಿಸುವುದು, ಇವೆಲ್ಲವೂ ಮಕ್ಕಳನ್ನು ಸೋಮಾರಿಗಳನ್ನಾಗಿಸುವ ನಡೆಗಳಲ್ಲವೇ?

ನನ್ನ ಸ್ನೇಹಿತೆಯೊಬ್ಬರು ಸಿಕ್ಕಾಗಲೆಲ್ಲ ಅಲವತ್ತುಕೊಳ್ಳುವ ಒಂದು ಮಹತ್ವದ ಸಂಗತಿಯೆಂದರೆ, ಪದವಿ ಓದುತ್ತಿರುವ ಅವರ ಮಗನಿಗೆ ಬೆಳಗ್ಗೆ ಅಮ್ಮನೇ ತಿಂಡಿ ತಿನ್ನಿಸಬೇಕಂತೆ, ಇಲ್ಲವಾದರೆ ಹಾಗೇ ಹೊರಟು ಬಿಡುತ್ತಾನಂತೆ. ಇದು ಅತಿರೇಕವಲ್ಲವೇ? ನಮ್ಮ ಅಗತ್ಯಕ್ಕೆ ನಮ್ಮ ಕೈಕಾಲುಗಳೇ ಒದಗಬೇಕು, ಅವನ್ನೇ ಬಳಸಿಕೊಳ್ಳಬೇಕು ಎಂಬುದು ಕನಿಷ್ಠ ಜೀವನಪಾಠವಲ್ಲವೇ? ದೇವರಂತಿರಬೇಕಾದ ಅಪ್ಪ– ಅಮ್ಮನನ್ನು ಮಕ್ಕಳು ಚಾಕರಿಯವರಂತೆ ನಡೆಸಿಕೊಳ್ಳುವುದು ಯಾರು ಸೃಷ್ಟಿಸಿದ ತಪ್ಪು?

ಶಾಲಾ– ಕಾಲೇಜುಗಳಲ್ಲಾದರೂ ಅಷ್ಟೇ. ವಿದ್ಯಾರ್ಥಿಗಳು ಅರ್ಜಿ ನಮೂನೆಯಲ್ಲಿ ಯಾವುದೇ ತಪ್ಪು ಮಾಡಬಾರದೆಂದು ಒಂದೋ ಪೋಷಕರು ಇಲ್ಲವೇ ಶಾಲಾ– ಕಾಲೇಜುಗಳಲ್ಲಿ ಅದಕ್ಕಾಗಿ ನಿಯೋಜಿಸಲಾದ ಶಿಕ್ಷಕವೃಂದದವರು ಬರೆದುಕೊಡಬೇಕು. ಎಳೆಯ ಮಕ್ಕಳಿಗಾದರೆ ಸರಿ. ಕಾಲೇಜಿಗೆ ಬರುವ ಮಕ್ಕಳೂ ಇದನ್ನೇ ನಿರೀಕ್ಷಿಸಿದರೆ ಏಳುವ ಪ್ರಶ್ನೆ, ಹತ್ತನೆಯ ತರಗತಿ ದಾಟಿಯೂ ಒಂದು ಅರ್ಜಿ ತುಂಬದವರು ಪ್ರಥಮ ಪಿಯು ಓದಲು ಅರ್ಹರೇ? ಯಾವುದೇ ಹಂತದ ಕಲಿಕೆಗಾದರೂ ಒಂದು ಕನಿಷ್ಠ ಅರ್ಹತೆಯೆಂಬುದು ಇರುತ್ತದಲ್ಲ? ಅದನ್ನೆಲ್ಲ ಮೀರಿ ಅರ್ಥವಿಲ್ಲದ ಸ್ಪರ್ಧೆಯಲ್ಲಿ ಓಡುತ್ತಿರುವ ಯಾರಿಗೂ ಇದು ಅರ್ಥವಾಗದು. ಈ ವ್ಯವಸ್ಥೆಯನ್ನು ನೆಚ್ಚಿಕೊಂಡ ವಿದ್ಯಾರ್ಥಿಯು ಶಿಕ್ಷಕರನ್ನು ತನ್ನ ಸೇವಕರೆಂದೇ ತಿಳಿಯುತ್ತಾನಲ್ಲದೆ 'ಗುರು ದೇವೋಭವ' ಎನಿಸಲು ಸಾಧ್ಯವೇ?

ವ್ಯವಸ್ಥೆ ಹದಗೆಟ್ಟಿದೆ, ಕೆಡುತ್ತಿದೆಯೆಂದು ಪದೇ ಪದೇ ಆಡಿಕೊಳ್ಳುತ್ತೇವೆ. ಬದಲಾವಣೆ ಎಂಬುದು ಘಟಿಸಬೇಕಾದುದು ಎಲ್ಲಿ? ಒಬ್ಬರಿಂದ ಒಬ್ಬರಿಗೆ ಇದರ ಹೊಣೆಯನ್ನು ಜಾರಿಸಿಕೊಳ್ಳುತ್ತಾ ಎಲ್ಲರೂ ಕೈತೊಳೆದುಕೊಂಡರೆ ಮಕ್ಕಳ ವರ್ತನೆಯನ್ನು ತಿದ್ದುವ ಪರಿ ಹೇಗೆ? ಎಲ್ಲಕ್ಕಿಂತ ಮೊದಲು ಅಗತ್ಯವಿರುವುದು ಅವರವರ ತಲೆಗೆ ಅವರವರದೇ ಕೈ ಎಂಬ ಸಣ್ಣ ಸಂಗತಿಯನ್ನು ಅವರಿಗೆ ಅರ್ಥ ಮಾಡಿಸಬೇಕಾದ್ದು.

ವಾಚಕರ ವಾಣಿ

ಹಣದುಬ್ಬರದ ನಿಯಂತ್ರಣ ಆದ್ಯತೆಯಾಗಲಿ

ಬೆಲೆಗಳಲ್ಲಿ ನಿರಂತರವಾಗಿ ಏರಿಕೆ ಆಗುವುದನ್ನು ಹಣದುಬ್ಬರ ಎಂದು ಕರೆಯಲಾಗುತ್ತದೆ. ಇಂದು ನಮ್ಮಲ್ಲಿ ನಿರುದ್ಯೋಗ, ವರಮಾನದಲ್ಲಿನ ಕುಸಿತ, ಆರೋಗ್ಯ ಸೇವಾ ವೆಚ್ಚದಲ್ಲಿನ ಏರಿಕೆಯಿಂದಾಗಿ ದುಡಿಮೆಗಾರರ ಬದುಕು ಮೂರಾಬಟ್ಟೆಯಾಗಿದೆ. ಬೆಲೆ ಏರಿಕೆಯಿಂದ ಹಣದ ಮೌಲ್ಯ ಇಳಿಯುತ್ತದೆ ಮತ್ತು ಜನರ ನಿಜ ವರಮಾನದಲ್ಲಿ ಕುಸಿತ ಉಂಟಾಗುತ್ತದೆ (ಪ್ರ.ವಾ., ಏ. 12). ಹಣದುಬ್ಬರದ ಯಮಾಘಾತದಿಂದ ದುಡಿಮೆಗಾರರ ಬದುಕು ದುಃಸ್ಥಿತಿಗೊಳಗಾಗುತ್ತದೆ. ಗ್ರಾಮೀಣ ರೈತಾಪಿ- ಭೂರಹಿತ ದುಡಿಮೆಗಾರರ ಬದುಕಿನ ಮಟ್ಟ ಸಹಜವಾಗಿ ಕುಸಿತಕ್ಕೆ ಒಳಗಾಗುತ್ತದೆ.

ಈಗಾಗಲೇ ಎಲ್ಲ ಬಗೆಯ ಅಸಮಾನತೆಗಳನ್ನು ಅನುಭವಿಸುತ್ತಿರುವ ಆರ್ಥಿಕತೆಯಲ್ಲಿ ಹಣ ದುಬ್ಬರ ಇದನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ಬಜೆಟ್ಟಿನ ಬಹುಮುಖ್ಯ ಉದ್ದೇಶ ಆರ್ಥಿಕ ಸ್ಥಿರತೆಯನ್ನು- ಬೆಲೆ ಸ್ಥಿರತೆಯನ್ನು ಕಾಯ್ದುಕೊಳ್ಳುವುದು. ಈಗ ಎರಡಂಕಿಗಳತ್ತ ಸಾಗುತ್ತಿರುವ ಹಣದುಬ್ಬರವನ್ನು ನಿಯಂತ್ರಿಸುವುದು ನಮಗೆ ನಿರ್ಣಾಯಕ ಗುರಿಯಾಗಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಬಸ್‌ಗಳಲ್ಲೂ ಬರಲಿ ಆನ್‌ಲೈನ್ ಪಾವತಿ ವ್ಯವಸ್ಥೆ

ನಾನು ದಿನಂಪ್ರತಿ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಪ್ರಯಾಣಿಸುತ್ತೇನೆ. ಮಾಸಿಕ ಬಸ್‌ಪಾಸ್ ಪಡೆದುಕೊಳ್ಳುವುದರಿಂದ ನನಗೆ ಚಿಲ್ಲರೆ ನೀಡಿಕೆಯ ಸಮಸ್ಯೆ ಇಲ್ಲ. ಆದರೆ ನಿರ್ವಾಹಕರು ಮತ್ತು ಇತರ ಪ್ರಯಾಣಿಕರ ನಡುವೆ ಚಿಲ್ಲರೆಗಾಗಿ ನಡೆಯುವ ಜಗಳಗಳನ್ನು ನೋಡಿ ಬೇಸರವಾಗಿದೆ.

ಈಗಿನ ಕಾಲದಲ್ಲಿ ಸಣ್ಣಪುಟ್ಟ ಅಂಗಡಿಗಳಲ್ಲಿ ಕೂಡ ಆನ್‌ಲೈನ್ ಪೇಮೆಂಟ್ ವ್ಯವಸ್ಥೆ ಇರುತ್ತದೆ. ಜನಸ್ನೇಹಿಯಾದ ಈ ವ್ಯವಸ್ಥೆಯನ್ನು ಸಾರಿಗೆ ನಿಗಮದ ಬಸ್‌ಗಳಲ್ಲೂ ಜಾರಿಗೆ ತರುವುದು ಒಳಿತು.

ಮೋಹನಕುಮಾರ್, ಸಿ.ಹಿಂದಲಹಳ್ಳಿ, ಹೊಳೆನರಸೀಪುರ

ಪ್ರಾದೇಶಿಕ ಭಾಷೆಗಳಿಗೆ ವಿರುದ್ಧವಾದ ನಡೆ

ಭಾಷೆಯು ಜನರ ಸಂಸ್ಕೃತಿ ಮತ್ತು ಸಂಪ್ರದಾಯಗಳೊಂದಿಗೆ ನಿಕಟ ಸಂಬಂಧ ಹೊಂದಿರುತ್ತದೆ. ಆದರೆ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಹಿಂದಿಯನ್ನು ಇಂಗ್ಲಿಷ್‌ಗೆ ಪರ್ಯಾಯವಾಗಿ ಬಳಸಬೇಕು ಎಂದು ಹೇಳಿದ್ದಾರೆ. 'ಒಂದು ದೇಶ ಒಂದು ಚುನಾವಣೆ' ಎಂಬಂತೆ, ಇದು 'ಒಂದು ದೇಶ ಒಂದು ಭಾಷೆ' ಎಂಬ ಹಾದಿಯಲ್ಲಿ ಸಾಗುತ್ತಿದೆ. ಪ್ರಾದೇಶಿಕ ಭಾಷೆಗಳಿಗೆ ವಿರುದ್ಧವಾದ ಈ ನಡೆ ಹಿಂದಿಯೇತರ ರಾಜ್ಯಗಳ ಮೇಲೆ ಮಾಡುವ ಸಾಂಸ್ಕೃತಿಕ ದಬ್ಬಾಳಿಕೆ. ಭಾರತವು ಒಂದು ವೈವಿಧ್ಯಮಯ ರಾಷ್ಟ್ರ. ಅದನ್ನು ಭಾಷೆಯಲ್ಲೂ ಕಾಣಬಹುದು. ಲಡಾಖಿ, ಕಾಶ್ಮೀರಿ, ಪಂಜಾಬಿ ಸೇರಿದಂತೆ ಹಲವು ಪ್ರಾದೇಶಿಕ ಭಾಷೆಗಳು ಉತ್ತರ ಭಾರತದಲ್ಲಿ ಇದ್ದರೆ, ಕನ್ನಡ, ಮರಾಠಿ, ತಮಿಳು, ತೆಲುಗು, ಮಲಯಾಳಂನಂತಹ ಭಾಷೆಗಳು ದಕ್ಷಿಣ ಭಾರತದಲ್ಲಿವೆ. ಹೀಗಿರುವಾಗ ಹಿಂದಿ ಭಾಷೆಯನ್ನು ಹೇರುವುದು ಎಷ್ಟರಮಟ್ಟಿಗೆ ಸರಿ ಎಂಬುದು ಯೋಚಿಸಬೇಕಾದ ಸಂಗತಿ. ಹಿಂದಿ ಹೇರಿಕೆ ನಿಲ್ಲಲಿ, ಎಲ್ಲ ಭಾಷೆಗಳೂ ಬಲಗೊಳ್ಳಲಿ.

ಆದರ್ಶ ಖೋತ, ಅನಂತಪುರ, ಅಥಣಿ

ಎಚ್ಚರಿಕೆಯ ಸಂದೇಶ ಸ್ವಾಗತಾರ್ಹ

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದಿಸೆಯಲ್ಲಿ ಕೋಮು ಸೌಹಾರ್ದ, ಭಾವೈಕ್ಯಕ್ಕೆ ಭಂಗ ಉಂಟು ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಚ್ಚರಿಕೆ ನೀಡಿರುವುದು ಸ್ವಾಗತಾರ್ಹ. ಕೆಲವು ತಿಂಗಳುಗಳಿಂದ ರಾಜ್ಯದಲ್ಲಿ ಧರ್ಮ ಸಂಘರ್ಷದ ಕಾರಣದಿಂದ ಅಹಿತಕರ ಘಟನೆಗಳು ಎಲ್ಲೆ ಮೀರಿ ನಡೆದಿವೆ. ಇಂತಹ ಸಂದರ್ಭದಲ್ಲಿ ಸಂವಿಧಾನಬದ್ಧ ಸರ್ಕಾರದ ಮುಖ್ಯಸ್ಥರು ಖಡಕ್ಕಾಗಿ ಎಚ್ಚರಿಕೆಯ ಸಂದೇಶ ನೀಡಿರುವುದು ಸಮಾಧಾನ ತಂದಿದೆ.

ರಾಜ್ಯದಲ್ಲಿ ಅಶಾಂತಿಗೆ ಕಾರಣವಾಗುವ ಎಷ್ಟೆಲ್ಲಾ ವಿದ್ಯಮಾನಗಳು ನಡೆಯುತ್ತಿದ್ದರೂ ಮುಖ್ಯಮಂತ್ರಿ ಏಕೆ ಮೌನ ವಹಿಸಿದ್ದಾರೆ ಎಂಬುದು ರಾಜಕೀಯ ನಾಯಕರಲ್ಲದೆ, ನಾಡಿನ ಸಮಸ್ತ ಜನರ ಪ್ರಶ್ನೆಯೂ ಆಗಿತ್ತು. ಅವರ ಮೌನವು ಚರ್ಚೆಗೆ ಗ್ರಾಸವಾಗಿತ್ತು. 'ನಾವು ಮಾತನಾಡಬಾರದು, ನಮ್ಮ ಕೆಲಸಗಳು ಮಾತನಾಡಬೇಕು. ಯಾವ ಸಂದರ್ಭದಲ್ಲಿ ಯಾವ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದು ನಮಗೆ ತಿಳಿದಿದೆ. ಬೇರೆಯವರಿಂದ ನಾವು ಪಾಠ ಕಲಿಯಬೇಕಾಗಿಲ್ಲ' ಎಂದು ಪ್ರತಿಪಕ್ಷದ ನಾಯಕರಿಗೆ ಮುಖ್ಯಮಂತ್ರಿ ಅವರು ತಿವಿದಿರುವುದು ಸರಿ ಎನಿಸಿದರೂ, ಅಭಿವೃದ್ಧಿ ವಿಚಾರದಲ್ಲಿ ಟೀಕೆ- ಟಿಪ್ಪಣಿಗಳಿಗೆ ಉತ್ತರಿಸಬೇಕಾದ ಸಂದರ್ಭದಲ್ಲಿ ಇಂತಹ ಮಾತುಗಳು ಹೆಚ್ಚು ಸಮಂಜಸವಾಗಿ ಕಾಣುತ್ತವೆ. ಆದರೆ ರಾಜ್ಯದಲ್ಲಿ ನಡೆದ ಅನಗತ್ಯ ವಿವಾದಗಳು ಹಾಗೂ ಜನರ ಮಧ್ಯೆ ವಿಷಭಾವನೆ ಬಿತ್ತುವ ಘಟನಾವಳಿಗಳನ್ನು ಮುಖ್ಯಮಂತ್ರಿ ಅವರು ಆರಂಭದಲ್ಲಿಯೇ ಹದ್ದುಬಸ್ತಿನಲ್ಲಿಡಲು ಪ್ರಯತ್ನಿಸಿದ್ದರೆ, ಶಾಂತಿಗೆ ಹೆಸರಾದ ಕರ್ನಾಟಕ ಇಂದು ದೇಶ, ಅಂತರರಾಷ್ಟ್ರೀಯ ಮಟ್ಟದಲ್ಲಿ ಅಹಿತಕರ ವಿದ್ಯಮಾನಗಳ ಕಾರಣಕ್ಕೆ ಗಮನಸೆಳೆಯುವುದನ್ನು ತಪ್ಪಿಸಬಹುದಿತ್ತು. ಈ ಎಲ್ಲ ಪ್ರಕರಣಗಳನ್ನು ಸಮಗ್ರವಾಗಿ ತನಿಖೆಗೆ ಒಳಪಡಿಸಿ, ತಪ್ಪಿತಸ್ಥರಿಗೆ ಕಾನೂನಿನ ಪಾಠ ಕಲಿಸಲು ಸರ್ಕಾರ ಮುಂದಾಗಬೇಕಿದೆ.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಯಾರೊಬ್ಬರೂ ಆಯ್ಕೆ ಮಾಡಲೇ ಇಲ್ಲ!

ಸಾಮಾನ್ಯ ಜನ ವ್ಯವಹಾರಕ್ಕಾಗಿ ಯಾವ ಭಾಷೆಯನ್ನು ಸಹಜವಾಗಿ ಆಶ್ರಯಿಸುತ್ತಾರೆ ಎನ್ನುವುದಕ್ಕೆ ಇಲ್ಲೊಂದು ತಾಜಾ ಉದಾಹರಣೆ: ಬ್ಯಾಂಕುಗಳಲ್ಲಿ ಇರುವ ಸ್ವಸಹಾಯ ಪಾಸ್‌ಬುಕ್ ಯಂತ್ರಗಳಲ್ಲಿ (ಕಿಯೋಸ್ಕ್) ಗ್ರಾಹಕರು ಪಾಸ್‌ಬುಕ್ ವಿವರ ಮುದ್ರಿಸಿಕೊಳ್ಳಬಹುದು. ಇತ್ತೀಚೆಗೆ ಬ್ಯಾಂಕಿನಲ್ಲಿ ವಿಪರೀತ ಜಂಗುಳಿ. ಈ ಯಂತ್ರದ ಮುಂದೆಯೂ ಉದ್ದನೆ ಸರದಿ. ನನ್ನ ಮುಂದೆ ಹತ್ತು ಜನರಿದ್ದರು. ಪರದೆ ಮೇಲೆ ಮೂರು ಭಾಷೆಗಳ ಆಯ್ಕೆ ಸೌಲಭ್ಯ ಇರುತ್ತದೆ. ಕನ್ನಡ, ಹಿಂದಿ, ಇಂಗ್ಲಿಷ್. ನಾವು ಸ್ಪರ್ಶಿಸಿದ ಭಾಷೆಯಲ್ಲಿ ವಿವರಣೆ, ನಿರೂಪಣೆ ಕೇಳಿಬರುತ್ತದೆ. ಎಷ್ಟು ಜನ ಯಾವ ಭಾಷೆಯ ಮೇಲೆ ಬೆರಳು ಒತ್ತುತ್ತಾರೆ ಎಂದು ನಾನು ಸೂಕ್ಷ್ಮವಾಗಿ ಗಮನಿಸಿದೆ. 10ರಲ್ಲಿ 6 ಜನ ಕನ್ನಡದ ಮೇಲೆ ಬೆರಳೊತ್ತಿದರೆ, ಇಂಗ್ಲಿಷಿನ ಮೇಲೆ ನಾಲ್ವರು ಒತ್ತಿದರು. ಹಿಂದಿಯನ್ನು ಯಾರೊಬ್ಬರೂ ಆಯ್ಕೆ ಮಾಡಲೇ ಇಲ್ಲ! 'ಇಂಗ್ಲಿಷ್ ಜಾಗಕ್ಕೆ ಹಿಂದಿ ಬರಲಿ' ಎನ್ನುವವರಿಗೆ ಇದೊಂದು 'ಕಹಿ ಸಮೀಕ್ಷೆ'!

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಧಿಕೃತ ಭಾಷೆಗಳ ಕಾಯ್ದೆ 1963

ಇಂಗ್ಲಿಷ್‌ಗೆ ಹಿಂದಿ ಪರ್ಯಾಯವಲ್ಲ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

‘ದೇಶದ ಎಲ್ಲಾ ರಾಜ್ಯಗಳ ಜನರು ಇಂಗ್ಲಿಷ್‌ಗೆ ಪರ್ಯಾಯವಾಗಿ ಹಿಂದಿಯನ್ನು ಬಳಸಿ. ಅಧಿಕೃತ ಭಾಷೆಯನ್ನು ಸರ್ಕಾರ ನಡೆಸುವ ಮಾಧ್ಯಮವನ್ನಾಗಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನಿರ್ಧರಿಸಿದ್ದಾರೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈಚೆಗೆ ಹೇಳಿದ್ದರು. ಇದು ಹಿಂದಿಯೇತರ ಭಾಷಾ ರಾಜ್ಯಗಳ ಮೇಲೆ, ಹಿಂದಿಯನ್ನು ಹೇರಲು ಕೇಂದ್ರ ಸರ್ಕಾರವು ಮಾಡುತ್ತಿರುವ ಯತ್ನ ಎಂದು ಹಲವು ರಾಜ್ಯಗಳ ನಾಯಕರು ಮತ್ತು ಜನರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

ಹಿಂದಿ ದೇಶದ ಅಧಿಕೃತ ಭಾಷೆ. ಕೇಂದ್ರ ಸರ್ಕಾರದ ಕಾರ್ಯನಿರ್ವಹಣೆಯು ಹಿಂದಿಯಲ್ಲಿ ನಡೆಯಬೇಕು ಎನ್ನುತ್ತದೆ ‘ಅಧಿಕೃತ ಭಾಷೆಗಳ ಕಾಯ್ದೆ–1963’. ಆದರೆ, ಹಿಂದಿಯ ಜತೆಯಲ್ಲಿ ಇಂಗ್ಲಿಷ್ ಅನ್ನೂ ಬಳಸಬೇಕು ಎಂದು ಇದೇ ಕಾಯ್ದೆ ಹೇಳುತ್ತದೆ. ಹಾಗಾಗಿ, ಇಂಗ್ಲಿಷ್‌ಗೆ ಹಿಂದಿ ಪರ್ಯಾಯವಾಗುವುದು ಸಾಧ್ಯವಿಲ್ಲ.

ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳ ಜತೆಗೆ ಸಂಪರ್ಕಕ್ಕೆ ಯಾವ ಭಾಷೆ ಬಳಸಬೇಕು ಎಂಬುದನ್ನು ‘ಅಧಿಕೃತ ಭಾಷಾ ನಿಯಮಗಳು–1976’ ಸ್ಪಷ್ಟಪಡಿಸಿದೆ. ದೇಶದ ಎಲ್ಲಾ ರಾಜ್ಯಗಳನ್ನು ಮೂರು ಗುಂಪುಗಳಾಗಿ ಈ ನಿಯಮಗಳು ವಿಂಗಡಿಸುತ್ತವೆ. ಮೊದಲನೆಯದ್ದು ‘ಎ’ ವರ್ಗ. ಇದರಲ್ಲಿ ಹಿಂದಿ ಭಾಷಿಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೇರಿವೆ. ಎರಡನೆಯದ್ದು ‘ಬಿ’ ವರ್ಗ. ಇದರಲ್ಲಿ ಹಿಂದಿಯಿಂದ ಸ್ವಲ್ಪವೇ ಭಿನ್ನವಾದ, ಆದರೆ ಸ್ವತಂತ್ರ ಅಸ್ಮಿತೆ ಹೊಂದಿರುವ ಭಾಷಿಕ ರಾಜ್ಯಗಳನ್ನು ಸೇರಿಸಲಾಗಿದೆ. ಮೂರನೆಯದ್ದು ‘ಸಿ’ ವರ್ಗ. ಹಿಂದಿಯೇತರ ಭಾಷಿಕ ರಾಜ್ಯಗಳು ಈ ಗುಂಪಿನಲ್ಲಿವೆ.

1. ಕೇಂದ್ರ ಸರ್ಕಾರವು ‘ಎ’ ವರ್ಗದ ರಾಜ್ಯಗಳ ಜತೆಗೆ ಯಾವುದೇ ರೀತಿಯ ಸಂಪರ್ಕ/ಪತ್ರ ವ್ಯವಹಾರ ನಡೆಸುವಾಗ, ಆ ಪತ್ರವು ಹಿಂದಿಯಲ್ಲಿ ಇರಬೇಕು. ಒಂದು ವೇಳೆ ಇಂಗ್ಲಿಷ್ ಭಾಷೆಯಲ್ಲಿ ಪತ್ರ ನೀಡಿದರೆ ಅದರ ಜತೆಯಲ್ಲಿ ಹಿಂದಿ ಭಾಷಾಂತರವನ್ನೂ ನೀಡಬೇಕು.

2. ಕೇಂದ್ರ ಸರ್ಕಾರವು ‘ಬಿ’ ವರ್ಗದ ರಾಜ್ಯಗಳ ಜತೆಗೆ ಸಂಪರ್ಕ/ಪತ್ರ ವ್ಯವಹಾರ ನಡೆಸುವಾಗ, ಆ ಪತ್ರವು ಹಿಂದಿಯಲ್ಲಿ ಇರಬೇಕು. ಒಂದು ವೇಳೆ ಇಂಗ್ಲಿಷ್ ಭಾಷೆಯಲ್ಲಿ ಪತ್ರ ನೀಡಿದರೆ, ಅದರ ಜತೆಯಲ್ಲಿ ಹಿಂದಿ ಭಾಷಾಂತರವನ್ನೂ ನೀಡಬೇಕು.

ಯಾವುದೇ ಒಂದು ಕಚೇರಿಯಿಂದ ತಮಗೆ ಬರುವ ಪತ್ರ/ದಾಖಲೆ/ಸುತ್ತೋಲೆ/ಮತ್ತಿತರ ಪತ್ರ ವ್ಯವಹಾರಗಳು ತಾವು ಸೂಚಿಸಿದ ಭಾಷೆಯಲ್ಲೂ ಬರಬೇಕು ಎಂದು ಮನವಿ ಮಾಡಿಕೊಳ್ಳಲು ಈ ನಿಯಮಗಳಲ್ಲಿ ಅವಕಾಶವಿದೆ. ಹೀಗೆ ಮನವಿ ಮಾಡಿಕೊಂಡ ನಂತರ ಇಂಗ್ಲಿಷ್ ಮತ್ತು ಹಿಂದಿಯ ಜತೆಗೆ ಆ ರಾಜ್ಯವು ಕೇಳಿಕೊಂಡ ಭಾಷೆಯಲ್ಲೂ ಪತ್ರ ವ್ಯವಹಾರ ನಡೆಸಬೇಕಾಗುತ್ತದೆ.

3. ಕೇಂದ್ರ ಸರ್ಕಾರವು ‘ಸಿ ವರ್ಗದ ರಾಜ್ಯಗಳ ಜತೆಗೆ ಸಂಪರ್ಕ/ಪತ್ರ ವ್ಯವಹಾರ ನಡೆಸುವಾಗ, ಆ ಪತ್ರವು ಇಂಗ್ಲಿಷ್ ಭಾಷೆಯಲ್ಲಿ ಇರಬೇಕು ಎಂಬುದನ್ನು ಈ ನಿಯಮಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಹಿಂದಿಯೇತರ ಭಾಷಿಕ ರಾಜ್ಯಗಳೆಲ್ಲವೂ ಸಿ ವರ್ಗದಲ್ಲಿವೆ. ಈ ವರ್ಗದಲ್ಲಿ 17 ರಾಜ್ಯಗಳು ಮತ್ತು ಹಲವು ಕೇಂದ್ರಾಡಳಿತ ಪ್ರದೇಶಗಳಿವೆ. ಈ ರಾಜ್ಯಗಳ ಜತೆ ಕೇಂದ್ರ ಸರ್ಕಾರವು ಇಂಗ್ಲಿಷ್ ಮೂಲಕ ಮಾತ್ರವೇ ಪತ್ರ ವ್ಯವಹಾರ ನಡೆಸಬೇಕು ಎಂದು ಅಧಿಕೃತ ಭಾಷಾ ನಿಯಮಗಳು–1976ರ 3 (3)ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಅಧಿಕೃತ ಭಾಷೆಯಾದ ಹಿಂದಿಯನ್ನೇ ಸರ್ಕಾರ ನಡೆಸುವ ಮಾಧ್ಯಮವನ್ನಾಗಿಸಬೇಕು ಎಂದು ಪ್ರಧಾನಿ ಮೋದಿ ನಿರ್ಧರಿಸಿದ್ದಾರೆ ಎಂದು ಅಮಿತ್ ಶಾ ಹೇಳಿದ್ದಾರೆ. ಸರ್ಕಾರವು ಇದನ್ನು ಜಾರಿಗೆ ತಂದರೆ, ಈ ನಿಯಮಗಳನ್ನು ಉಲ್ಲಂಘಿಸಿದಂತಾಗುತ್ತದೆ.

ಮೂಲ ಹಿಂದಿ ಭಾಷಿಕರು 32 ಕೋಟಿ ಮಾತ್ರ

ಎ ಗುಂಪಿನ ರಾಜ್ಯಗಳು ಕೇಂದ್ರಾಡಳಿತ ಪ್ರದೇಶಗಳು

- ಬಿಹಾರ
- ಹರಿಯಾಣ
- ಹಿಮಾಚಲ ಪ್ರದೇಶ
- ಮಧ್ಯಪ್ರದೇಶ
- ಛತ್ತೀಸಗಡ
- ಜಾರ್ಖಂಡ್
- ಉತ್ತರಾಖಂಡ
- ರಾಜಸ್ಥಾನ
- ಉತ್ತರ ಪ್ರದೇಶ
- ದೆಹಲಿ
- ಅಂಡಮಾನ್ ಮತ್ತು ನಿಕೋಬಾರ್

ಬಿ ಗುಂಪಿನ ರಾಜ್ಯಗಳು ಕೇಂದ್ರಾಡಳಿತ ಪ್ರದೇಶಗಳು

- ಗುಜರಾತ್
- ಮಹಾರಾಷ್ಟ್ರ
- ಪಂಜಾಬ್
- ಚಂಡೀಗಡ
- ದಮನ್ ಮತ್ತು ದಿಯು
- ದಾದ್ರ ಮತ್ತು ನಗರ ಹವೇಲಿ

ಸಿ ಗುಂಪಿನ ರಾಜ್ಯಗಳು ಕೇಂದ್ರಾಡಳಿತ ಪ್ರದೇಶಗಳು

- ಕರ್ನಾಟಕ
- ತಮಿಳುನಾಡು
- ಕೇರಳ
- ಆಂಧ್ರಪ್ರದೇಶ
- ತೆಲಂಗಾಣ
- ಗೋವಾ
- ಒಡಿಶಾ
- ಪಶ್ಚಿಮ ಬಂಗಾಳ
- ಸಿಕ್ಕಿಂ
- ಅಸ್ಸಾಂ
- ಅರುಣಾಚಲ ಪ್ರದೇಶ
- ಮೇಘಾಲಯ
- ಮಣಿಪುರ
- ಮಿಜೋರಾಂ
- ನಾಗಾಲ್ಯಾಂಡ್
- ತ್ರಿಪುರಾ
- ಲಕ್ಷದ್ವೀಪ
- ಪುದುಚೇರಿ



ದೇಶದಲ್ಲಿ ಹಿಂದಿ ಮಾತನಾಡುವವರ ಸಂಖ್ಯೆ 52.8 ಕೋಟಿಯಷ್ಟು ಎಂದು 2011ರ ಜನಗಣತಿಯ ಭಾಷಿಕ ವರದಿ ಹೇಳುತ್ತದೆ. ಇದು ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 43ರಷ್ಟು ಮಾತ್ರ. ಹಿಂದಿಯೇತರ ಭಾಷೆಗಳನ್ನಾಡುವ ಜನರ ಪ್ರಮಾಣ ಶೇ 57ರಷ್ಟಿದೆ. ಇವುಗಳಲ್ಲಿ ಬಹುತೇಕ ಭಾಷಿಕರು ಹಿಂದಿ ಹೇರಿಕೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಹಿಂದಿ ಮಾತನಾಡುವ 52 ಕೋಟಿಯಲ್ಲಿ ಮೂಲ ಹಿಂದಿ ಮಾತನಾಡುವವರ ಸಂಖ್ಯೆ 32 ಕೋಟಿ ಮಾತ್ರ. ಇನ್ನು 20.8 ಕೋಟಿ ಜನರು ಹಿಂದಿಯ ಉಪಭಾಷೆಗಳು ಅಥವಾ ಸಂಪೂರ್ಣ ಸ್ವತಂತ್ರ ಭಾಷೆಗಳನ್ನಾಡುತ್ತಾರೆ. ಹಿಂದಿ ಭಾಷಿಕ ಗುಂಪಿನಲ್ಲಿ ಬೋಜಪುರಿ, ಗವಾರಿ, ಅವಧಿ, ಬಂಜಾರಿ, ಮಾರ್ವಾಡಿ, ಛತ್ತೀಸಗಡೀ, ವ್ರಜಭಾಷಾ, ಛಂಬ್ಯಾಲಿ, ಮಾಲ್ವಿ, ಲೋದಿ, ರಾಜಸ್ಥಾನಿ, ಮೆವಾರಿ ಸೇರಿದಂತೆ 57 ಪ್ರಮುಖ ಭಾಷೆಗಳಿವೆ. ಈ ಭಾಷೆಗಳಲ್ಲಿ ಎಲ್ಲವೂ ದೇವನಾಗರಿ ಲಿಪಿಯನ್ನು ಬಳಸುತ್ತವೆ. ಈ ಭಾಷೆಗಳನ್ನೂ ಹಿಂದಿ ಗುಂಪಿನಿಂದ ಹೊರಗಿಟ್ಟರೆ, ದೇಶದಲ್ಲಿ ಹಿಂದಿಯೇತರ ಭಾಷೆಗಳನ್ನಾಡುವ ಜನರ ಸಂಖ್ಯೆ 100 ಕೋಟಿ ದಾಟುತ್ತದೆ.

‘ಹಿಂದಿಯಲ್ಲಿ ಜ್ಞಾನ–ವಿಜ್ಞಾನ ಪರಿಭಾಷೆಯ ಕೊರತೆ’

ಆಡಳಿತದಲ್ಲಿ ಹಿಂದಿಯನ್ನು ಉತ್ತೇಜಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಪ್ರಶಸ್ತಿ ನೀಡುವ ಹೊಸ ಯೋಜನೆಯೊಂದನ್ನು 2015ರ ಮಾರ್ಚ್‌ನಲ್ಲಿ ಶುರು ಮಾಡಿತ್ತು. ‘ರಾಜಭಾಷಾ ಗೌರವ ಪುರಸ್ಕಾರ ಯೋಜನೆ’ಯನ್ನು ಆರಂಭಿಸುವ ಬಗ್ಗೆ ಕೇಂದ್ರ ಗೃಹಸಚಿವಾಲಯದ ಅಡಿಯಲ್ಲಿ ಬರುವ ಅಧಿಕೃತ ಭಾಷಾ ಇಲಾಖೆಯು ಮಾರ್ಚ್ 25ರಂದು ಅಧಿಸೂಚನೆ (ನಂ.11034/48/2014–ಒಎಲ್) ಹೊರಡಿಸಿತ್ತು. ಹಿಂದಿ ಭಾಷೆಯಲ್ಲಿ ರಚಿಸಲಾದ ‘ಆಧುನಿಕ ಜ್ಞಾನ ಮತ್ತು ವಿಜ್ಞಾನ’ದ ವಿಷಯ ಆಧರಿಸಿದ ಪುಸ್ತಕಗಳನ್ನು ಈ ಪ್ರಶಸ್ತಿಗೆ ಪರಿಗಣಿಸುವ ಉದ್ದೇಶವನ್ನು ಸುತ್ತೋಲೆಯಲ್ಲಿ ವಿವರಿಸಲಾಗಿತ್ತು. ಭಾರತದ ನಾಗರಿಕರು ಬರೆದ ಹಾಗೂ ಹಿಂದಿಯಲ್ಲೇ ರಚನೆಯಾಗಿರುವ ಪುಸ್ತಕಗಳನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗುತ್ತದೆ.

ಈ ಸುತ್ತೋಲೆಯಲ್ಲಿ ಪ್ರಶಸ್ತಿ ಸ್ಥಾಪನೆಯ ಉದ್ದೇಶವನ್ನು ಸರ್ಕಾರ ಸ್ಪಷ್ಟಪಡಿಸಿದೆ. ‘ಕೇಂದ್ರ ಸರ್ಕಾರದ ವಿವಿಧ ಕಚೇರಿಗಳು, ಬ್ಯಾಂಕ್‌ಗಳು ದೈನಂದಿನ ವ್ಯವಹಾರದಲ್ಲಿ ಪಾರಿಭಾಷಿಕ ಪದಗಳನ್ನು ಬಳಸಬೇಕಿದೆ. ಆದರೆ, ಹಿಂದಿ ಭಾಷೆಯಲ್ಲಿ ತಾಂತ್ರಿಕ ಪದಕೋಶದ ಕೊರತೆಯಿರುವುದರಿಂದ ಇದು ಸಾಧ್ಯವಾಗುತ್ತಿಲ್ಲ. ಹೀಗಾಗಿ, ದೈನಂದಿನ ವ್ಯವಹಾರದಲ್ಲಿ ಹಿಂದಿಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ತೊಡಕು ಎದುರಾಗಿದೆ. ಜ್ಞಾನ, ವಿಜ್ಞಾನವನ್ನು ಕುರಿತ ಹಿಂದಿ ಭಾಷೆಯ ಪುಸ್ತಕಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಿಲ್ಲ. ಹೀಗಾಗಿ ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಹಿಂದಿ ಭಾಷೆಯ ಬಳಕೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ. ಕೇಂದ್ರದ ಉದ್ಯೋಗಿಗಳು ಸಹ ಹಿಂದಿ ಭಾಷೆಯ ತಾಂತ್ರಿಕ ಪರಿಭಾಷೆಯ ಕೊರತೆಯಿಂದ ಸಮಸ್ಯೆ ಎದುರಿಸುತ್ತಿದ್ದಾರೆ. ಹಿಂದಿ ಭಾಷೆಯಲ್ಲಿ ಜ್ಞಾನ ಅಥವಾ ವಿಜ್ಞಾನದ ಕುರಿತು ಪುಸಕ್ತಗಳು ಲಭ್ಯವಿಲ್ಲದೇ ಇರುವುದು ಈ ಸಮಸ್ಯೆಯ ಹಿಂದಿರುವ ಮೂಲ ಕಾರಣ. ಈ ವಿಷಯಗಳಲ್ಲಿ ಹಿಂದಿ ಭಾಷೆಯ ಪುಸ್ತಕಗಳ ಪ್ರಕಟಣೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರಶಸ್ತಿ ಸ್ಥಾಪಿಸಲಾಗಿದೆ’ ಎಂದು ವಿವರಿಸಲಾಗಿದೆ.

ಇದರ ಅರ್ಥ, ಹಿಂದಿ ಭಾಷೆಯಲ್ಲಿ ಜ್ಞಾನ, ವಿಜ್ಞಾನ ಹಾಗೂ ತಾಂತ್ರಿಕ ಪರಿಭಾಷೆಯ ಕೊರತೆಯಿದ್ದು, ಇದನ್ನು ಸರಿದೂಗಿಸಲು ಪುಸ್ತಕಗಳಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲು ಕೇಂದ್ರ ಯತ್ನಿಸುತ್ತಿದೆ. ಹಿಂದಿ ಭಾಷೆಯಲ್ಲಿ ತಾಂತ್ರಿಕ ಪದಭಂಡಾರದ ಕೊರತೆ ಇದೆ ಎಂದು ಸರ್ಕಾರ ಒಪ್ಪಿಕೊಂಡಿದ್ದರೂ, ಅದರ ಬಳಕೆಯನ್ನು ಉತ್ತೇಜಿಸುತ್ತಿದೆ. ಕಚೇರಿಯ ದೈನಂದಿನ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ಹಿಂದಿಯನ್ನು ಬಳಸಲು ಸಾಧ್ಯವಾಗುತ್ತಿಲ್ಲ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಿದ್ದರೂ, ಅದನ್ನು ದೇಶದ ಎಲ್ಲ ರಾಜ್ಯಗಳು ಬಳಸಬೇಕು ಎಂದು ಬಯಸುತ್ತಿದೆ ಎಂಬುದಾಗಿ ಆರೋಪಿಸಲಾಗಿದೆ.

ಒಂಬತ್ತು ಸಂಪುಟಗಳಿಗೆ ರಾಷ್ಟ್ರಪತಿ ಅಂಕಿತ

ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಹಿಂದಿ ಭಾಷೆಯ ಬಳಕೆಯನ್ನು ಪರಿಶೀಲನೆ ನಡೆಸುವ ಮುಖ್ಯ ಉದ್ದೇಶಕ್ಕಾಗಿ ಸಮಿತಿಯೊಂದನ್ನು ರಚನೆ ಮಾಡಲಾಗಿದೆ. ಕೇಂದ್ರ ಗೃಹ ಸಚಿವರ ಅಧ್ಯಕ್ಷತೆಯ ಸಂಸದೀಯ ರಾಜಭಾಷಾ ಸಮಿತಿಯು 20 ಲೋಕಸಭಾ ಸದಸ್ಯರು ಹಾಗೂ 10 ರಾಜ್ಯಸಭಾ ಸದಸ್ಯರನ್ನು ಒಳಗೊಂಡಿದೆ. ರಾಜಭಾಷೆಯ ಪ್ರಗತಿಯನ್ನು ಪರಿಶೀಲನೆ ಮಾಡಲು ಹಾಗೂ ಶಿಫಾರಸು ಮಾಡಲು ಮೂರು ಉಪ ಸಮಿತಿಗಳನ್ನೂ ರಚಿಸಲಾಗಿದೆ.

ರಾಜಭಾಷೆ ಉತ್ತೇಜನಕ್ಕೆ ಸಂಬಂಧಿಸಿದಂತೆ 882 ಗಣ್ಯರ ಜೊತೆ ಮೌಖಿಕ ಸಮಾಲೋಚನೆ ನಡೆಸಲಾಗಿದೆ. ಸಮಿತಿಯ ಶಿಫಾರಸುಗಳನ್ನು ಒಳಗೊಂಡ 10 ಸಂಪುಟಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸಲಾಗಿದೆ. ಈ ಪೈಕಿ 9 ಸಂಪುಟಗಳಿಗೆ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ ಎಂದು ಸಮಿತಿ ತನ್ನ ಪ್ರಕಟಣೆಯಲ್ಲಿ ಉಲ್ಲೇಖಿಸಿದೆ. ಗೃಹ ಸಚಿವ ಅಮಿತ್ ಶಾ ಅವರು ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಬರ್ತ್ರುಹರಿ ಮಹತಾಬ್ ಅವರು ಉಪಾಧ್ಯಕ್ಷರಾಗಿದ್ದಾರೆ. ರಾಮಚಂದರ್ ಜಾಂಗ್ರಾ, ರೀಟಾ ಬಹುಗುಣ ಜೋಷಿ ಹಾಗೂ ಚಿರಾಗ್ ಪಾಸ್ವಾನ್ ಅವರು ಮೂರು ಉಪಸಮಿತಿಗಳ ಮುಖ್ಯಸ್ಥರಾಗಿದ್ದಾರೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಬಿಜೆಪಿಯ ಈರಣ್ಣ ಕಡಾಡಿ ಅವರು ಮೊದಲ ಉಪ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿದ್ದಾರೆ.

ಆಧಾರ: ಸಂವಿಧಾನದ 343ನೇ ವಿಧಿ, ಅಧಿಕೃತ ಭಾಷೆಗಳ ಕಾಯ್ದೆ–1963, ಅಧಿಕೃತ ಭಾಷಾ ನಿಯಮಗಳು–1976, ಮಾತೃಭಾಷಾ ದತ್ತಾಂಶ–2011, ಅಧಿಕೃತ ಭಾಷಾ ಸಂಸದೀಯ ಸಮಿತಿ, ಪಿಟಿಐ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 93

ಲಿಂಗ ಎಂದರೆ ಎಲ್ಲವೂ ಲೀನ

ಸದಾಶಿವನ ಮುಖದಿಂದ ಹೊರಟ ಉಚ್ಛ್ವಾಸವಿರುವವರೆಗೆ ಪುರುಷ ರೂಪದಿಂದ ಹರನು ಇರುವನು. ಆತನ ನಿಃಶ್ವಾಸ ಇರುವವರೆಗೂ ಆ ಹರನು ಶಕ್ತಿಯಲ್ಲಿ ಅಡಕವಾಗುವನು ಎಂದು ಪರಮಶಿವ ತಿಳಿಸಿದ್ದಲ್ಲದೆ, ಬ್ರಹ್ಮ-ವಿಷ್ಣು-ಮಹೇಶ್ವರರ ಉಸಿರಾಟದ ವಿವರವನ್ನೂ ಹೇಳುತ್ತಾನೆ. ‘ಲಿಂಗ’ ಎಂದರೆ ಲೋಕದ ಚರಾಚರವಸ್ತುಗಳೆಲ್ಲವೂ ಲೀನವಾಗುವುದು ಎಂದರ್ಥ ಎಂಬುದನ್ನೂ ತಿಳಿಸುತ್ತಾನೆ.

‘ಓ ಸುರಶ್ರೇಷ್ಠರಿರಾ, ನಿಶ್ವ್ಯಾಸೋಚ್ಛ್ವಾಸಗಳು ಇಪ್ಪತ್ತೊಂದು ಸಾವಿರದ ಆರುನೂರು ನಡೆದರೆ, ಗಂಧರ್ವರು-ನಾಗರು-ರಾಕ್ಷಸರಿಗೆ ಅದು ಒಂದು ಅಹೋರಾತ್ರಿ. ಆರು ಸಲ ಉಚ್ಛ್ವಾಸ-ನಿಃಶ್ವಾಸಗಳು ನಡೆಯುವಷ್ಟು ಕಾಲವು ಒಂದು ಫಲವೆನಿಸುವುದು. ಫಲಗಳು ಅರವತ್ತಾಗಲು ಒಂದು ಗಳಿಗೆ. ಆ ಗಳಿಗೆಗಳು ಇಪ್ಪತ್ನಾಲ್ಕು ಆದರೆ, ಹಗಲು ರಾತ್ರಿಯಾಗಿ ಒಂದು ದಿವಸವೆನಿಸುವುದು.

‘ಸದಾಶಿವನ ಮುಖದಿಂದ ಹೊರಡುವ ನಿಶ್ವ್ಯಾಸೋಚ್ಛ್ವಾಸಗಳಿಗೆ ತುದಿಮೊದಲೇ ಇಲ್ಲ. ಅದನ್ನು ಎಣಿಸಲು ಅಸಾಧ್ಯ. ಆದುದರಿಂದಲೇ ಆತನು ಅಕ್ಷಯನೆನಿಸಿರುವ. ನನ್ನ ಅಪ್ಪಣೆಯಂತೆ ನಿನ್ನ ಸ್ವರೂಪವನ್ನು ಸಂರಕ್ಷಿಸಿಕೊಳ್ಳುತ್ತಾ, ನಾನಾವಿಧವಾದ ಗುಣಗಳ ಸಹಕಾರದಿಂದ ಸೃಷ್ಟಿ ಕಾರ್ಯವನ್ನು ನೆರವೇರಿಸಬೇಕು’ ಎಂದು ಶಿವನು ಬ್ರಹ್ಮ-ವಿಷ್ಣು ಇಬ್ಬರಿಗೂ ತಿಳಿಸಿದ.

ಈ ಕಥೆಯನ್ನು ಬ್ರಹ್ಮನು ನಾರದನಿಗೆ ಹೇಳುತ್ತಿರುವಾಗ, ಮತ್ತೆ ವಿಷ್ಣು ಶಿವನಲ್ಲಿ ಭಿನ್ನವಿಸಿದ್ದ ವಿಷಯವನ್ನು ಹೀಗೆ ವಿವರಿಸುತ್ತಾನೆ.

‘ನನ್ನೊಡನೆ ಮಹಾತ್ಮನಾದ ವಿಷ್ಣುವು ಶಿವನ ನುಡಿಯನ್ನಾಲಿಸಿದ ನಂತರ, ವಿಶ್ವೇಶ್ವರನಿಗೆ ನಮಸ್ಕರಿಸಿ, ಹೇಳಿದ: ಓ ಕರುಣಾನಿಧಿ, ನಿನ್ನ ಅಪ್ಪಣೆಯನ್ನು ಎಳ್ಳಷ್ಟೂ ಮೀರುವುದಿಲ್ಲ. ನನ್ನ ಭಿನ್ನಹವೊಂದನ್ನು ಈಡೇರಿಸು. ನಾನು ಯಾವಾಗಲೂ ನಿನ್ನನ್ನು ಧ್ಯಾನಿಸುತ್ತಿರಬೇಕು, ಮತ್ತೆ ಬೇರೆ ಏನೂ ಬೇಡ. ನಿನ್ನ ಅನುಗ್ರಹದಿಂದ ನಿನ್ನ ಸಾಮರ್ಥ್ಯವೆಲ್ಲವನ್ನೂ ನಾನೀಗಾಗಲೆ ಪಡೆದಿರುವೆ. ನಿನ್ನ ಧ್ಯಾನವು ಕ್ಷಣಮಾತ್ರವೂ ದೂರವಾಗದಿರಲಿ.

‘ಓ ಪ್ರಭು, ನನ್ನ ಭಕ್ತನಾದವನು ನಿನ್ನ ನಿಂದನೆಯನ್ನು ಮಾಡಿದರೆ, ಅವನಿಗೆ ನರಕವಾಸವನ್ನು ವಿಧಾಯಕವನ್ನಾಗಿ ಮಾಡು. ಯಾವ ನಿನ್ನ ಭಕ್ತನೋ, ಆತನು ನನಗೆ ಅತ್ಯಂತ ಪ್ರೀತಿಪಾತ್ರನು. ಹೀಗೆ ಯಾರು ತಿಳಿಯುವರೋ ಅವರಿಗೆ ಮುಕ್ತಿ ದುರ್ಲಭವಾಗದಿರಲಿ. ನಿನ್ನ ಕೃಪೆಯಿಂದ ನನ್ನ ಮಹಿಮೆಯು ಹೆಚ್ಚಿಸಲ್ಪಟ್ಟಿತು. ನನ್ನಿಂದ ಅಚಾತುರ್ಯವೇನಾದರೂ ನಡೆದರೆ ಕ್ಷಮಿಸಬೇಕು’ ಎಂದು ವಿಷ್ಣು ಪ್ರಾರ್ಥಿಸಿದ.

ವಿಷ್ಣುವಿನ ಮಾತನ್ನು ಕೇಳಿ ಸುಪ್ರೀತನಾದ ಶಿವನು ‘ನಿನ್ನ ಅವಗುಣಗಳೇನಾದರೂ ಇರುವಲ್ಲಿ ನಾನವನ್ನು ಕ್ಷಮಿಸುವೆನು’ ಎಂದು ವಿಷ್ಣುವಿಗೆ ಅಭಯ ನೀಡುತ್ತಾನೆ. ನಂತರ ಪರಮಶಿವ ತಮ್ಮನ್ನು ಆದರಿಸಿ, ಹರಸಿದ ಪ್ರಸಂಗವನ್ನು ಬ್ರಹ್ಮ ನಾರದನಿಗೆ ತಿಳಿಸುತ್ತಾನೆ.

‘ಪರಮೇಶ್ವರನು ವಿಷ್ಣುವಿನ ಕೋರಿಕೆಯನ್ನು ಈಡೇರಿಸುವುದಾಗಿ ಹೇಳಿ, ನಮ್ಮೀರ್ವರ ಶರೀರವನ್ನು ಕೃಪೆಯಿಂದ ತನ್ನ ಎರಡು ಕೈಗಳಿಂದಲೂ ತಡವಿದ. ನಾನಾ ವಿಧವಾದ ಧರ್ಮಗಳನ್ನು ಉಪದೇಶಿಸಿದ್ದಲ್ಲದೆ, ನಮ್ಮೀರ್ವರಿಗೂ ಅನೇಕ ವರಗಳನ್ನಿತ್ತ. ನಾವಿಬ್ಬರೂ ನೋಡುತ್ತಿರುವಂತೆಯೇ ತಕ್ಷಣವೇ ಅಲ್ಲಿಂದ ಕಣ್ಮರೆಯಾದ.

‘ಅಂದಿನಿಂದ ಈ ಲೋಕದಲ್ಲಿ ಲಿಂಗಪೂಜಾ ವಿಧಾನವು ಆಚರಣೆಗೆ ಬಂತು. ಭೋಗಭಾಗ್ಯಗಳನ್ನೂ, ಮೋಕ್ಷಫಲವನ್ನೂ ನೀಡುವ ಆ ಶಂಭುವು, ಲಿಂಗದಲ್ಲಿ ಸದಾ ಸನ್ನಿಹಿತವಾಗಿರುವನು. ಲಿಂಗದ ವೇದಿಕೆಯು ಮಹಾದೇವಿಯಾದ ಪಾರ್ವತಿಯೆಂದು ತಿಳಿ. ಲಿಂಗವು ಸಾಕ್ಷಾತ್ ಮಹೇಶ್ವರನೇ ಆಗಿದೆ. ಎಲ್ಲವೂ ಇದರಲ್ಲಿ ಲೀನವಾಗಿ ಹೋಗುವುದರಿಂದಲೇ ಇದಕ್ಕೆ ಲಿಂಗವೆಂಬ ಹೆಸರುಂಟಾಯಿತು. ಸಮಸ್ತ ಪ್ರಪಂಚವೂ ಆ ಲಿಂಗದಲ್ಲೇ ಅಡಕವಾಗಿಬಿಟ್ಟಿದೆ’ ಎಂದು ನಾರದನಿಗೆ ಬ್ರಹ್ಮ ತಿಳಿಸಿದ.

‘ಯಾರು ಲಿಂಗದ ಸನ್ನಿಧಿಯಲ್ಲಿ ಪ್ರತಿನಿತ್ಯವೂ ಲಿಂಗದ ಮಹಿಮಾಮಯವಾದ ಅಖ್ಯಾನವನ್ನು ಓದುವನೋ, ಆತನು ಆರು ತಿಂಗಳೊಳಗಾಗಿ ಶಿವನಂತೆಯೇ ಆಗುವನು. ಯಾವ ಪುರುಷನು ಶಿವಲಿಂಗದ ಬಳಿ ಯಾವುದೇ ಉತ್ತಮ ಕೆಲಸ ಮಾಡಿದರೂ ಫಲ ಸಿಗುತ್ತದೆ. ಅದರಲ್ಲೂ ನಿಃಸ್ವಾರ್ಥವಾಗಿ ಲೋಕಕಲ್ಯಾಣ ಮಾಡಿದರಂತೂ ಆತನಿಗೆ ಸಿಗುವ ಅಸಂಖ್ಯ ಪುಣ್ಯಫಲವನ್ನು ಹೇಳಲು ನನಗೆ ಸಾಧ್ಯವಿಲ್ಲ’ ಎಂದು ನಾರದನಿಗೆ ಬ್ರಹ್ಮ ತಿಳಿಸುತ್ತಾನೆ. ಇಲ್ಲಿಗೆ ಶ್ರೀ ಶಿವಮಹಾಪುರಾಣದ ರುದ್ರಸಂಹಿತೆಯ ಸೃಷ್ಟಿಖಂಡದಲ್ಲಿ ಪರಮಶಿವ ತತ್ತ್ವವರ್ಣನ ಎಂಬ ಹತ್ತನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

‘ತಮಿಳುನಾಡಿನ ರಾಜಧಾನಿ ಚೆನ್ನೈನಲ್ಲಿರುವ ರಸ್ತೆಬದಿಯ ಬಿರಿಯಾನಿ ಅಂಗಡಿಗಳಲ್ಲಿ ದೊರೆಯುವ ಬಿರಿಯಾನಿಗಳಲ್ಲಿ ಸಂತಾನ ಶಕ್ತಿ ಹರಣ ಔಷಧವನ್ನು ಬೆರೆಸಲಾಗುತ್ತದೆ’ ಎಂಬುದಾಗಿ ಟ್ವಿಟರ್‌ನಲ್ಲಿ ಚರ್ಚೆಯಾಗುತ್ತಿದೆ. ‘ಹಿಂದೂಗಳು ಅದರಲ್ಲೂ ಮದುವೆಯಾಗದ ಯುವಕರನ್ನು ಗುರಿಯಾಗಿಸಿ ಈ ಕೃತ್ಯ ಎಸಗಲಾಗುತ್ತಿದೆ. ಬಲಪಂಥೀಯ ಸಂಘಟನೆ ಕಾರ್ಯಕರ್ತ ಹಾಗೂ ಇಂದೂ ಮಕ್ಕಳ್ ಕಚ್ಚಿ ಸಂಸ್ಥಾಪಕ ಅರ್ಜುನ್ ಸಂಪತ್ ಅವರು ಈ ಷಡ್ಯಂತ್ರಕ್ಕೆ ಬಲಿಯಾಗಿದ್ದಾರೆ’ ಎಂಬುದಾಗಿ ಚರ್ಚೆಯಾಗುತ್ತಿದೆ. 40 ಸಾವಿರಕ್ಕೂ ಹೆಚ್ಚು ಬಿರಿಯಾನಿ ಅಂಗಡಿಗಳು ಸ್ಥಳೀಯ ಆಹಾರ ಪದ್ಧತಿಯ ಮೇಲೆ ಸಾಂಸ್ಕೃತಿಕ ಭಯೋತ್ಪಾದನೆ ನಡೆಸುತ್ತಿವೆ ಎಂದು ಟ್ವಿಟರ್ ಬಳಕೆದಾರರು ಹೇಳಿದ್ದಾರೆ.

ಸಾಂದರ್ಭಿಕ ಚಿತ್ರ

ಟ್ವಿಟರ್‌ನಲ್ಲಿ ಚರ್ಚೆಯಾಗುತ್ತಿರುವ ಹಾಗೆ ಬಿರಿಯಾನಿಯಲ್ಲಿ ಸಂತಾನ ಶಕ್ತಿ ಹರಣ ಮಾತ್ರೆಗಳನ್ನು ಬೆರೆಸಲಾಗುತ್ತಿದೆ ಎಂಬ ಮಾಹಿತಿ ಸುಳ್ಳು ಎಂದು ಚೆನ್ನೈನ ಹಿರಿಯ ಆಹಾರ ಸುರಕ್ಷತಾ ಅಧಿಕಾರಿ ಸ್ಪಷ್ಟಪಡಿಸಿದ್ದಾರೆ ಎಂದು ಪಿಟಿಐ ವರದಿ ಮಾಡಿದೆ. ‘ಆರೋಪ ಕೇಳಿಬಂದ ಬಿರಿಯಾನಿ ಅಂಗಡಿಗಳಲ್ಲಿ ಪರಿಶೀಲನೆ ನಡೆಸಿದ್ದೇವೆ. ನಗರದ ಯಾವುದೇ ರೆಸ್ಟೋರೆಂಟ್, ಹೋಟೆಲ್ ಅಥವಾ ಉಪಹಾರ ಮಂದಿರಗಳ ವಿರುದ್ಧ ಯಾರೂ ದೂರು ನೀಡಿಲ್ಲ. ಈ ವದಂತಿಯನ್ನು ನಂಬಬೇಡಿ’ ಎಂದು ಅವರು ಮನವಿ ಮಾಡಿದ್ದಾರೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಜೀವಶಿಲೆ ಮೃದುವಾಗುವ ಪರಿ

ಉದರಶಿಖಿಯೊಂದು ಕಡೆ, ಹೃದಯಶಿಖಿಯೊಂದು ಕಡೆ |
ಕುದಿಸದಿರೆ ಜೀವಶಿಲೆ ಮೃದುವಪ್ಪುದೆಂತು? ||
ಬದುಕಿನುರಿಯಲಿ ಕರಗಿ ತಿಳಿಯಾಗದಿಹ ಜೀವ|
ಪುದಿಯದಾತ್ಮಾರ್ಣವದಿ - ಮಂಕುತಿಮ್ಮ ||605||

ಪದ-ಅರ್ಥ: ಉದರಶಿಖಿಯೊಂದು = ಉದರ (ಹೊಟ್ಟೆ) + ಶಿಖಿ(ಬೆಂಕಿ) + ಒಂದು, ಹೃದಯಶಿಖಿ = ಹೃದಯ + ಶಿಖಿ + ಒಂದು, ಮೃದುವಪ್ಪುದೆಂತು = ಮೃದು + ಅಪ್ಪುದು(ಆಗುವುದು) + ಎಂತು(ಹೇಗೆ), ಬದುಕಿನುರಿಯಲಿ = ಬದುಕಿನ + ಉರಿಯಲಿ, ಪುದಿಯದಾತ್ಮಾರ್ಣವದಿ = ಪುದಿಯದು(ತುಂಬದು) + ಆತ್ಮಾರ್ಣವದಿ (ಆತ್ಮವೆಂಬ ಸಮುದ್ರದಲ್ಲಿ).

ವಾಚ್ಯಾರ್ಥ: ಒಂದೆಡೆಗೆ ಹೊಟ್ಟೆಯ ಬೆಂಕಿ, ಇನ್ನೊಂದೆಡೆಗೆ ಹೃದಯದ ಬೆಂಕಿ, ಇವೆರಡೂ ಜೀವವೆಂಬ ಕಲ್ಲನ್ನು ಕುದಿಸದಿದ್ದರೆ ಅದು ಹೇಗೆ ಮೃದುವಾದೀತು? ಬದುಕಿನ ಉರಿಯಲ್ಲಿ ಕರಗಿ, ತಿಳಿಯಾಗದಿದ್ದರೆ ಜೀವ ಆತ್ಮವೆಂಬ ಸಮುದ್ರದಲ್ಲಿ ಸೇರಲಾರದು.

ವಿವರಣೆ: ಬಿರುಸಾದ ವಸ್ತುವನ್ನು ಮೃದು ಮಾಡಲು ಅದನ್ನು ಚೆನ್ನಾಗಿ ಕಾಯಿಸಿ ಕರಗಿಸಬೇಕು. ಅದಕ್ಕಾಗಿ ಬೆಂಕಿ ಬೇಕು. ಆದರೆ ಮನುಷ್ಯನೆಂಬ ಕಠಿಣ ವಸ್ತುವನ್ನು ಎರಡು ಬೆಂಕಿಗಳು ಕುದಿಸುತ್ತವಂತೆ. ಒಂದು ಉದರಶಿಖಿ. ಅದು ಹೊಟ್ಟೆಯಲ್ಲಿಯ ಬೆಂಕಿ. ಹೊಟ್ಟೆಪಾಡಿಗೆ ಮನುಷ್ಯ ಏನೇನು ಕೆಲಸ ಮಾಡುತ್ತಾನೆ ಅಲ್ಲವೆ? ತನಗೆ ಇಷ್ಟವಿದ್ದ, ಇಷ್ಟವಿಲ್ಲದ ಕೆಲಸಗಳನ್ನು ಮಾಡುತ್ತಾನೆ. ಇದಕ್ಕಾಗಿ ಆತ ಬದುಕಿನಲ್ಲಿ ಅನೇಕ ಸಂಬಂಧಗಳನ್ನು ಕುದುರಿಸಿಕೊಳ್ಳುತ್ತಾನೆ. ಈ ಸಂಬಂಧಗಳಿಗಾಗಿ ಆತನಿಗೆ ಸುಖ-ದುಃಖ, ಆಸೆ-ನಿರಾಸೆ, ಲಾಭ-ನಷ್ಟ ಎಲ್ಲವೂ ಆಗುತ್ತವೆ. ಅವು ಅವನನ್ನು ಚೆನ್ನಾಗಿ ಕುದಿಸುತ್ತವೆ. ಇದು ಸಾಕಾಗಲಿಲ್ಲವೆಂದು ಮತ್ತೊಂದು ಬೆಂಕಿ ಮನುಷ್ಯನನ್ನು ಕುದಿಸುತ್ತದೆ. ಅದು ಹೃದಯಶಿಖಿ. ಹೃದಯದ ಬೆಂಕಿ. ಇದಕ್ಕೂ ಸಂಬಂಧಗಳೇ ಕಾರಣ. ನಮ್ಮ ಪರಿವಾರದವರ ಜೊತೆಗಿನ ಪ್ರೀತಿ, ಕರುಣೆ, ಅಂತ:ಕರಣಗಳು ನಮ್ಮ ಅಂತರಂಗವನ್ನು ಕಲಕಿಬಿಡುತ್ತವೆ. ಮಕ್ಕಳ ಭವಿಷ್ಯದ ಚಿಂತೆ, ಅವರ ನಡೆ-ನುಡಿಗಳ ಚಿಂತೆ, ಪರಿವಾರದವರು ನಿಮ್ಮಿಂದ ಬಯಸುವ ಅಪೇಕ್ಷೆಗಳು ಮತ್ತು ನೀವು ಅವರಿಂದ ಅಪೇಕ್ಷಿಸುವ ಸಂಗತಿಗಳು, ಅವು ವಿಫಲವಾದಾಗ ಬರುವ ಸಂಕಟ. ತನ್ನವರ ಬೆಳವಣಿಗೆಗೆ ಅಡ್ಡವಾದವರ ಬಗ್ಗೆ ದ್ವೇಷ, ಮುಂದೆ ಸಾಗಲು ಸ್ಪರ್ಧೆ, ಇವುಗಳ ಕುದಿ ಏನು ಕಡಿಮೆಯೆ?

ಮೊದಲನೆಯ ಬೆಂಕಿ, ಹೊಟ್ಟೆಯ ಬೆಂಕಿ, ದೇಹಕ್ಕೆ ಸಂಬಂಧಿಸಿದ್ದು. ಅದು ದೇಹವನ್ನು ಹಣ್ಣು ಮಾಡುತ್ತದೆ. ಎರಡನೆಯದು ಮನಸ್ಸಿಗೆ, ಅಂತರಂಗಕ್ಕೆ ಸಂಬಂಧಿಸಿದ್ದು. ಮನುಷ್ಯನ ಬದುಕು ಇವೆರಡರಲ್ಲಿ ಇದೆ. ಕಗ್ಗ ಅದನ್ನ ಜೀವಶಿಲೆ ಎನ್ನುತ್ತದೆ. ಅನುಭವ ಕಡಿಮೆ ಇರುವಾಗ, ಬಾಲ್ಯದಲ್ಲಿ ತಾರುಣ್ಯದಲ್ಲಿ ಅದು ಶಿಲೆಯಂತೆ ಕಠಿಣವಾಗಿರುತ್ತದೆ. ಎಲ್ಲವನ್ನು ಸಾಧಿಸಬಲ್ಲೆ ಎಂಬ ಅಹಂನಲ್ಲಿ ನಿಂತಿರುತ್ತದೆ. ಮುಂದೆ ಇವೆರಡೂ ಬೆಂಕಿಯಲ್ಲಿ ಕುದಿದು ಬೆಂದ ಜೀವ ತಿಳಿಯಾಗುತ್ತದೆ. ಹಾಗೆ ಕುದಿದು ಹೊರಬಂದ ಜೀವದ ಕೊಳೆಯ ಪೊರೆಗಳು ಒಂದೊಂದಾಗಿ ಕಳಚಿ ಬೀಳುತ್ತ ಕೊನೆಗೆ ಅವನು ಶುದ್ಧಾತ್ಮನಾಗುತ್ತಾನೆ. ಈ ಭಾವ ಮೈಗೂಡಿದರೆ ಮನದಲ್ಲಿ ಆನಂದವೇ ಆನಂದ. ಅದು ಸುಖ--ದುಃಖವನ್ನು ಮೀರಿದ್ದು. ಅಂತಹ ವ್ಯಕ್ತಿಯನ್ನು ‘ಯೋಗಿ’ ಎಂದು ಜನ ಗುರುತಿಸುತ್ತಾರೆ. ಅಂತಹ ವ್ಯಕ್ತಿ ಆತ್ಮ ಎಂಬ ಮಹಾ ಸಮುದ್ರದಲ್ಲಿ ಒಂದಾಗಿ ಹೋಗುತ್ತಾನೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಏಪ್ರಿಲ್ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 30 ನೇ ದಿನ ತಿಥಿ: (ಚೈತ್ರ ಶುದ್ಧ) ದ್ವಾದಶಿ ಗಂ. 28-50 ನಕ್ಷತ್ರ: ಮಘಾ ಗಂ. 09-37 ಯೋಗ: ಗಂಡ ಗಂ. 11-14, ಕರಣ: ಬವ ಗಂ. 17-02. ರಾಹುಕಾಲ: ಮಧ್ಯಾಹ್ನ 12:00 – 01:30 ಸೂರ್ಯೋದಯ: 06-22 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 11 ರಂಜಾನ್ ಅದೃಷ್ಟ ಸಂಖ್ಯೆ: 6,

ಮೇಷ: ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ. ರಿಯಲ್ ಎಸ್ಟೇಟುದಾರರಿಗೆ ವ್ಯವಹಾರಗಳು ವೃದ್ಧಿಗೊಳ್ಳಲಿವೆ. ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು.

ವೃಷಭ: ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಪರಿಶ್ರಮ ಮತ್ತು ದೇವರ ಕೃಪಾಕಟಾಕ್ಷ ಪಡಬೇಕಾಗುವುದು. ಖಾದಿ ಉದ್ಯಮದವರಿಗೆ ಸರ್ಕಾರದ ಸಹಾಯ ದೊರೆಯಲಿದೆ.

ಮಿಥುನ: ಸ್ವಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವ ಹಾದಿಯನ್ನು ನೋಡಿರಿ. ಗೆಳೆಯರೊಂದಿಗೆ ಪ್ರವಾಸ ಹೋಗಲು ದಿನ ನಿಶ್ಚಿತವಾಗುವುದು. ಕೃಷಿಕರಿಗೆ ತೋಟದ, ಹೊಲದ ಕೆಲಸಗಳು ಸರಾಗವಾಗಿ ನಡೆಯುವಂತಾಗಲಿದೆ.

ಕರ್ಕಾಟಕ: ಇಂದಿನ ನಿಮ್ಮ ನಡವಳಿಕೆ ಸಮಾಜದಲ್ಲಿ ಎಲ್ಲರ ಕೇಂದ್ರ ಬಿಂದುವಾಗಲಿದೆ. ಶ್ರೇಯಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಹೆಚ್ಚಿನ ಸಂತಸ ಸಿಗುವುದು. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನಕ್ಕೇರಲು ಸಕಾಲ.

ಸಿಂಹ: ಈ ದಿನ ನಿಮ್ಮ ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆಹಾಕುವುದರಿಂದ ಮಾರ್ಗಮಧ್ಯದ ಅಡೆತಡೆಗಳು ನಿವಾರಣೆಯಾಗಲಿವೆ. ಕೆಲಸದತ್ತ ಹೆಚ್ಚಿನ ಗಮನ ಹರಿಸುವಿರಿ. ದಾಂಪತ್ಯದಲ್ಲಿ ಬಿರುಕು ಬರದಂತೆ ನೋಡಿಕೊಳ್ಳಿ.

ಕನ್ಯಾ: ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಮುಂದಿನ ಹೆಜ್ಜೆ ಇಡುವುದು ಸೂಕ್ತ. ಕಠಿಣ ಪರಿಶ್ರಮದ ಮೂಲಕ ಮೇಲಧಿಕಾರಿಗಳ ಮನವನ್ನು ಗೆಲ್ಲಲು ಪ್ರಯತ್ನಿಸಿ. ನಾಯಕತ್ವದ ಗುಣಗಳನ್ನು ಪ್ರದರ್ಶಿಸುವುದರಿಂದ ಲಾಭ.

ತುಲಾ: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿಯ ವ್ಯವಹಾರಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಇತರರ ಭಾವನೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವುದು ಅನಿವಾರ್ಯವಾಗುತ್ತದೆ.

ವೃಶ್ಚಿಕ: ಭಾಷಾ ಅಧ್ಯಾಪಕರಿಗೆ ಮತ್ತು ನಾಟಕ ಕಲಾವಿದವರಿಗೆ ಹೆಚ್ಚಿನ ಮನ್ನಣೆ ಸಿಗುವುದು. ಮಕ್ಕಳ ಜೊತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ನಿಮ್ಮ ನಡೆಯಲಿದೆ.

ಧನು: ಈ ದಿನ ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದು ಬಹಳ ಸಮಂಜಸವಾಗಿ ಕಾಣುವುದಿಲ್ಲ. ವಸ್ತ್ರಾಭರಣ ಖರೀದಿ ಯೋಗ. ಎಲೆಕ್ಟ್ರಿಕಲ್ ಕಂಟ್ರಾಕ್ಟರುಗಳಿಗೆ ಉತ್ತಮ ಅವಕಾಶ.

ಮಕರ: ಶತ್ರುಗಳು ವಂಚನೆ ಮಾಡುವ ಸಲುವಾಗಿ ಮಿತ್ರರಾಗುವಂತೆ ನಟನೆಮಾಡಿಯಾರು, ಸ್ವಪ್ನದಲ್ಲಿ ಕೂಡಾ ಅಂತವರ ಬಗ್ಗೆ ಜಾಗೃತರಾಗಿರಿ. ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಸರಾಗ ಪರಿಹಾರ ಸಿಗುವುದು.

ಕುಂಭ: ಮನಸ್ಸು ಮೋಜು-ಮಸ್ತಿನ ಜೀವನದತ್ತ ಸೆಳೆಯುವುದು. ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಎಲ್ಲದರಲ್ಲೂ ಹೆಚ್ಚಿನ ಜಾಗ್ರತೆ ವಹಿಸಿರಿ. ಶಿಕ್ಷಕ ವರ್ಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ.

ಮೀನ: ಹಣಕಾಸು ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವಿರಿ. ಯುವ ಕಲಾವಿದರುಗಳಿಗೆ ಹೆಚ್ಚು ಪ್ರೋತ್ಸಾಹ ಲಭಿಸುವುದು. ವೃತ್ತಿ ತರಬೇತಿ ಹೊಂದಿದ ಕುಶಲಕರ್ಮಿಗಳಿಗೆ ಆದಾಯ ಹೆಚ್ಚಲಿದೆ.

ಪದಬಂಧ 4926

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಿಗ್ರಹಗಳನ್ನು ಮುರಿಯುವವನು (6)
4.ಮೊದಲು ಹಣ್ಣಿದ್ದರೆ ಇದು ಸಾರವತ್ತಾದುದು! (4)
5.ವಿಷಯಾಸಕ್ತನಿವನು (3)
7.ಅವಲಂಬನವನ್ನು ಹೀಗೆನ್ನಿ (3)
9.ಆ ದಿವಸ ತಂದ ಕಾಳುಕಡಿ! (3)
12.ತಿರುಗಿಸಿದರೂ ಇದು ದುರಸ್ತಿ! (3)
13.ಪುರದೊಳಗೆ ಮಾಡಿದ ಸನ್ಮಾನ (4)
15.ಹೊಟ್ಟೆಯನ್ನು ಹೊರೆಯುವುದು (6)

ಮೇಲಿಂದ ಕೆಳಕ್ಕೆ

1.ಈ ಡಿಸ್ಟ್ರಿಬ್ಯೂಟರ್ ಕನ್ನಡಿಗ! (4)
2.ಮೂರು ಧಾತುಗಳಲ್ಲಿ ಇದೊಂದು (2)
3.ಕಸ್ತೂರಿಯನ್ನು ಹೀಗೂ ಹೇಳುವರು (3)
6.ಲಲಿತಕಲೆಯನ್ನು ಆರಾಧಿಸುವವನು (4)
7.ಆಯಾಳಿಗಾದ ಸುಸ್ತು (3)
8.ಯುದ್ಧಾರಂಭದಲ್ಲಿ ಊದುವ ಕಹಳೆ (4)
10.ಪಣದಲ್ಲಿರುವ ಅಳತೆ (4)
11.ಪುಟ ಕೊನೆಗಿದ್ದಾಗ ಮಂತ್ರಿಮಂಡಲ ಕಾಣುತ್ತಿದೆಯಲ್ಲಾ! (3)
14.ಉರಗದ ಎದೆಯಲ್ಲಿ ಉಲ್ಟಾ ಕಾಣುತ್ತಿದೆ (2)



4925ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನೆವಾಳ್ತನ 4.ಓಜಸ್ಸು
5.ಮಾತುಲ 6.ಗಹನ
8.ವರ 9.ಮಿತ
11.ತುಕಡಿ 14.ಕಾದಲ
15.ಹಗೇವು 16.ಗರಡಿಮನೆ

ಮೇಲಿಂದ ಕೆಳಕ್ಕೆ:
1.ಮಧುಮೇಹ 2.ವಾರಸುದಾರ
3.ನಮಾಜು 4.ಓಲಗ
7.ಹರಿತ 8.ವರ್ತಕ
9.ಮಿಟಕಲಾಡಿ 10.ನೆರೆಮನೆ
12.ಡಿಕಾವು 13.ಸಲಗ

ಸುಡೊಕು 5312

	4		1		3	5		7
7			4				3	1
	3			5	7	4		
6	1				4			
			8	1	2	6		4
8	2						1	
		3		2		9		8
9			3		6		7	
4		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5311 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

‘ವೃದ್ಧಾಶ್ರಮ ವಾಸಿಗಳಿಗೆ ಉಚಿತ ತೀರ್ಥಯಾತ್ರೆ’

ನವದೆಹಲಿ (ಪಿಟಿಐ): ಇಲ್ಲಿನ ವೃದ್ಧಾಶ್ರಮಗಳಲ್ಲಿರುವ ಹಿರಿಯರು ಉಚಿತವಾಗಿ ತೀರ್ಥಯಾತ್ರೆ ಕೈಗೊಳ್ಳಲು ‘ಮುಖ್ಯಮಂತ್ರಿ ತೀರ್ಥ ಯಾತ್ರೆ ಯೋಜನೆ’ ರೂಪಿಸಲಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಪೂರ್ವ ದೆಹಲಿಯ ಕಂಠಿನಗರದಲ್ಲಿ ‘ಡಾ.ಭೀಮ್ ರಾವ್ ಅಂಬೇಡ್ಕರ್ ಹಿರಿಯ ನಾಗರಿಕರ ನಿಲಯ’ವನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಈ ಹಿಂದೆಯೇ ಹಿರಿಯ ನಾಗರಿಕರನ್ನು ತೀರ್ಥ ಯಾತ್ರೆಗೆ ಕಳುಹಿಸಲು ಯೋಜನೆ ರೂಪಿಸಲಾಗಿತ್ತು. ಆದರೆ ಕೋವಿಡ್‌ನಿಂದ ಸಾಧ್ಯವಾಗಿರಲಿಲ್ಲ’ ಎಂದರು.

‘ಡಾರ್ನಿಯರ್ ವಿಮಾನ’ ಸಂಚಾರ ಶುರು

ದಿಬ್ರೂಗಡ, ಅಸ್ಸಾಂ (ಪಿಟಿಐ): ದೇಶೀಯವಾಗಿಯೇ ತಯಾರಿಸಲಾದ ಅಲಯನ್ಸ್ ಏರ್‌ಲೈನ್ಸ್‌ನ ಡಾರ್ನಿಯರ್ 228 ವಿಮಾನ ಇಲ್ಲಿನ ವಿಮಾನನಿಲ್ದಾಣದಿಂದ ಮೊದಲ ಹಾರಾಟ ಆರಂಭಿಸಿತು.

ಇಲ್ಲಿನ ಮೋಹನ್‌ಬಾಡಿ ವಿಮಾನ ನಿಲ್ದಾಣದಿಂದ ಅರುಣಾಚಲಪ್ರದೇಶದ ಪಾಸೀಘಾಟ್‌ನತ್ತ ಹಾರಾಟ ಆರಂಭಿಸಿದ ಈ ವಿಮಾನದಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಕಾನೂನು ಸಚಿವ ಕಿರಣ್ ರಿಜಿಜು ಹಾಗೂ ಹಿರಿಯ ಅಧಿಕಾರಿಗಳು ಪ್ರಯಾಣಿಸಿದರು.

ಡಾರ್ನಿಯರ್ 228 ವಿಮಾನ ಹಾರಾಟಕ್ಕೆ ಚಾಲನೆ ಕಾರ್ಯಕ್ರಮದಲ್ಲಿ ಕೇಂದ್ರ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಕಾನೂನು ಸಚಿವ ಕಿರಣ್ ರಿಜಿಜು ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಈವರೆಗೆ ಡಾರ್ನಿಯರ್–228 ವಿಮಾನಗಳನ್ನು ಸಶಸ್ತ್ರ ಪಡೆಗಳಲ್ಲಿ ಮಾತ್ರ ಬಳಸಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರ ಒಡೆತನದ ಅಲಯನ್ಸ್ ಏರ್‌ಲೈನ್ಸ್ ಈ ವಿಮಾನವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಂಡಿದೆ.

ಡಾರ್ನಿಯರ್ ವಿಮಾನಗಳನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನಿರ್ಮಿಸಿದೆ. 17 ಆಸನಗಳ ಸಾಮರ್ಥ್ಯದ ಇಂಥ ಎರಡು ವಿಮಾನಗಳ ಪೂರೈಕೆಗಾಗಿ ಎಚ್‌ಎಎಲ್‌ನೊಂದಿಗೆ ಅಲಯನ್ಸ್ ಏರ್‌ಲೈನ್ಸ್ ಒಪ್ಪಂದ ಮಾಡಿಕೊಂಡಿತ್ತು. ದಿಬ್ರೂಗಡ–ಪಾಸೀಘಾಟ್ ಹಾಗೂ ಲೀಲಾಬಾಡಿ–ಡಿಬ್ರೂಗಡ ಮಾರ್ಗಗಳಲ್ಲಿ ಏಪ್ರಿಲ್ 18ರಿಂದ ಈ ವಿಮಾನಗಳು ಸಂಚರಿಸಲಿವೆ.

ಜಾರ್ಖಂಡ್‌ನಲ್ಲಿ ನಡೆದ ದುರಂತದಲ್ಲಿ ಸಾವಿನ ಸಂಖ್ಯೆ 3ಕ್ಕೆ ಏರಿಕೆ

ರೋಪ್‌ವೇ ಅವಘಡ: ಪ್ರವಾಸಿಗರ ರಕ್ಷಣೆ

ದೇವಘರ್(ಪಿಟಿಐ): ಜಾರ್ಖಂಡ್‌ನ ದೇವಘರ್‌ನಲ್ಲಿ ತಾಂತ್ರಿಕ ದೋಷದಿಂದಾಗಿ 2 ರೋಪ್ ವೇ ಕೇಬಲ್ ಕಾರುಗಳ ಮಧ್ಯೆ ಡಿಕ್ಕಿ ಸಂಭವಿಸಿ 40ಕ್ಕೂ ಹೆಚ್ಚು ಗಂಟೆಗಳ ಸುದೀರ್ಘ ಕಾಲ ರೋಪ್‌ವೇನಲ್ಲಿ ಸಿಲುಕಿಕೊಂಡಿದ್ದ 60 ಮಂದಿಯನ್ನು ರಕ್ಷಣೆ ಮಾಡಲಾಗಿದೆ. ಇದರೊಂದಿಗೆ ಎಲ್ಲಾ ಪ್ರವಾಸಿಗರನ್ನು ರಕ್ಷಣೆ ಮಾಡಿದಂತಾಗಿದೆ.

ಆದರೆ ಮಂಗಳವಾರದ ರಕ್ಷಣಾ ಕಾರ್ಯಾಚರಣೆ ವೇಳೆ ಮತ್ತೊಬ್ಬ ಮಹಿಳೆ ಮೃತಪಟ್ಟಿದ್ದಾರೆ. ಹೀಗಾಗಿ ಈ ದುರಂತದಲ್ಲಿ ಸಾವಿಗೀಡಾದವರ ಸಂಖ್ಯೆ ಮೂರಕ್ಕೇರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ಮಂಗಳವಾರ ಮಾತನಾಡಿದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಆರ್.ಕೆ ಮಲ್ಲಿಕ್ ಅವರು, ‘ಐಎಎಫ್, ಐಟಿಬಿಪಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್‌ಡಿಆರ್‌ಎಫ್) ಹಾಗೂ ಜಿಲ್ಲಾಡಳಿತದ ಜಂಟಿ ಕಾರ್ಯಾಚರಣೆ ಮೂಲಕ ರೋಪ್ ವೇ ಕಾರಿನಲ್ಲಿ ಸಿಲುಕಿಕೊಂಡಿದ್ದ 15 ಮಂದಿ ಪೈಕಿ 14 ಮಂದಿಯನ್ನು ರಕ್ಷಿಸಲಾಗಿದೆ. ಈ

ರೋಪ್‌ವೇ ಅವಘಡದಲ್ಲಿ ಸಿಲುಕಿದ್ದವರನ್ನು ರಕ್ಷಿಸಿದ ಭಾರತೀಯ ವಾಯುಪಡೆ ಯೋಧರು –ಪಿಟಿಐ ಚಿತ್ರ

ಎಲ್ಲರನ್ನೂ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ತಪಾಸಣೆ ನಡೆಸಲಾಗಿದೆ. ಆದರೆ ರಕ್ಷಣಾ ಕಾರ್ಯಾಚರಣೆ ವೇಳೆ 60 ವರ್ಷದ ಶೋಭಾ ದೇವಿ ಎಂಬುವರು ಸಾವಿಗೀಡಾಗಿದ್ದಾರೆ. ಇದರೊಂದಿಗೆ ಈ ಘಟನೆಯಲ್ಲಿ ಸಾವಿಗೀಡಾದವರ ಸಂಖ್ಯೆ 3ಕ್ಕೇರಿದ್ದು, 12 ಮಂದಿ ಗಾಯಗೊಂಡಿದ್ದಾರೆ’ ಎಂದು ಹೇಳಿದರು.

ಈ ಘಟನೆ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲಾಗುತ್ತದೆ ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಘೋಷಣೆ ಮಾಡಿದ್ದಾರೆ.

ಭಾನುವಾರ ಸಂಜೆ ಸಂಭವಿಸಿದ್ದ ತಾಂತ್ರಿಕ ದೋಷದಿಂದಾಗಿ ಎರಡು ಕೇಬಲ್ ಕಾರುಗಳ ಮಧ್ಯೆ ಡಿಕ್ಕಿ ಸಂಭವಿಸಿತ್ತು. ಇದರಿಂದಾಗಿ 40ಕ್ಕೂ ಹೆಚ್ಚು ಮಂದಿ ರೋಪ್ ವೇ ಕೇಬಲ್ ಕಾರಿನಲ್ಲಿ ಸಿಲುಕಿಕೊಂಡಿದ್ದರು. ಸೋಮವಾರ 25ಕ್ಕೂ ಹೆಚ್ಚು ಮಂದಿಯನ್ನು ರಕ್ಷಣೆ ಮಾಡಲಾಗಿತ್ತು. ಉಳಿದವರನ್ನು ಮಂಗಳವಾರ ರಕ್ಷಿಸಲಾಗಿದೆ.

ಜಾರ್ಖಂಡ್ ಪ್ರವಾಸೋದ್ಯಮ ಇಲಾಖೆ ಪ್ರಕಾರ, ತ್ರಿಕೂಟ ರೋಪ್ ವೇ ಕೇಬಲ್ ಕಾರು ಮಾರ್ಗವು ದೇಶದ ಅತಿ ಲಂಬವಾದ ರೋಪ್ ಆಗಿದ್ದು, 766 ಮೀಟರ್‌ನಷ್ಟು ಉದ್ದವಿದೆ.

ಸುರಕ್ಷತಾ ಪರಿಶೋಧನೆಗೆ ಸೂಚನೆ

ನವದೆಹಲಿ (ಪಿಟಿಐ): ಜಾರ್ಖಂಡ್‌ನ ದೇವಘರ್ ರೋಪ್‌ವೇ ಅವಘಡದ ಬೆನ್ನಲ್ಲೇ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪ್ರತಿ ರೋಪ್‌ವೇ ಯೋಜನೆಯ ಸುರಕ್ಷತಾ ಪರಿಶೋಧನೆ ಕೈಗೊಂಡು, ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಈ ಬಗ್ಗೆ ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾಳ್ ಸೂಚನೆ ನೀಡಿದ್ದಾರೆ.

ಜೆಎನ್‌ಯು ಘರ್ಷಣೆ: ವರದಿ ಕೇಳಿದ ಸರ್ಕಾರ

ನವದೆಹಲಿ (ಪಿಟಿಐ): ರಾಮ ನವಮಿ ವೇಳೆ ವಿದ್ಯಾರ್ಥಿಗಳ ಗುಂಪುಗಳ ನಡುವೆ ನಡೆದ ಘರ್ಷಣೆ ವಿಚಾರವಾಗಿ ದೆಹಲಿ ಸರ್ಕಾರದ ಶಿಕ್ಷಣ ಸಚಿವಾಲಯವು ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದಿಂದ (ಜೆಎನ್‌ಯು) ಮಂಗಳವಾರ ವರದಿ ಕೇಳಿದೆ.

‘ವಿದ್ಯಾರ್ಥಿಗಳ ಗುಂಪುಗಳ ನಡುವೆ ನಡೆದ ಘರ್ಷಣೆ ಮತ್ತು ವಿಶ್ವವಿದ್ಯಾಲಯದ ಆವರಣದಲ್ಲಿ ಅಶಾಂತಿ ಸೃಷ್ಟಿಸಿದ ಬಗ್ಗೆ ವರದಿ ಕೇಳಲಾಗಿದೆ’ ಎಂದು ಸಚಿವಾಲಯದ ಹಿರಿಯ ಅಧಿಕಾರಿ ತಿಳಿಸಿದರು.

ರಾಮ ನವಮಿ ದಿನ ಭಾನುವಾರ ವಿಶ್ವವಿದ್ಯಾಲಯದ ಮೆಸ್‌ನಲ್ಲಿ ಮಾಂಸಾಹಾರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಗುಂಪುಗಳ ನಡುವೆ ಘರ್ಷಣೆ ನಡೆದಿತ್ತು. ಹಿಂಸಾಚಾರದಲ್ಲಿ 20 ವಿದ್ಯಾರ್ಥಿಗಳು ಗಾಯಗೊಂಡಿದ್ದರು.

ದೋಣಿ ಪಯಣ... ಜಮ್ಮು–ಕಾಶ್ಮೀರದ ಶ್ರೀನಗರದ ದಾಲ್ ಸರೋವರದಲ್ಲಿ ಪ್ರವಾಸಿಗರು ದೋಣಿಗಳಲ್ಲಿ ಪಯಣಿಸಿದರು –ಪಿಟಿಐ ಚಿತ್ರ

ಹಾರ್ದಿಕ್ ಪಟೇಲ್ ಅಪರಾಧಿ: ತೀರ್ಪಿಗೆ ‘ಸುಪ್ರೀಂ’ ತಡೆ

ನವದೆಹಲಿ(ಪಿಟಿಐ): ಗಲಭೆ ಪ್ರಕರಣದಲ್ಲಿ ಗುಜರಾತ್‌ನ ಕಾಂಗ್ರೆಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಹಾರ್ದಿಕ್ ಪಟೇಲ್ ಅವರಿಗೆ ಅಲ್ಲಿನ ಹೈಕೋರ್ಟ್ ಅಪರಾಧಿ ಎಂದು ಘೋಷಿಸಿದ ತೀರ್ಪಿಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ಮುಖ್ಯ ನ್ಯಾಯಮೂರ್ತಿಗಳಾದ ಎಸ್.ಎ. ನಜೀರ್ ಮತ್ತು ವಿಕ್ರಮ್ ನಾಥ್ ಅವರನ್ನೊಳಗೊಂಡ ನ್ಯಾಯಪೀಠವು, ‘ಗುಜರಾತ್ ಹೈಕೋರ್ಟ್ ನೀಡಿದ್ದ ತೀರ್ಪಿಗೆ ತಡೆ ನೀಡುವುದು ಸೂಕ್ತ. ಮೇಲ್ಮನವಿಯನ್ನು ಇತ್ಯರ್ಥಪಡಿಸುವವರಿಗೆ ಈ ತಡೆಯಾಜ್ಞೆಯ ಆದೇಶವು ಜಾರಿಯಲ್ಲಿರುತ್ತದೆ’ ಎಂದು ಹೇಳಿದೆ.

ಆರಂಭದಲ್ಲಿ, ಹಿರಿಯ ವಕೀಲ ಮಣಿಂದರ್ ಸಿಂಗ್ ಅವರು ವಾದ ಮಂಡಿಸಿ, ‘ಹಾರ್ದಿಕ್ ಪಟೇಲ್ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅನುಮತಿ ನೀಡದಿರುವುದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ’ ಎಂದು ಹೇಳಿದರು.

‘ನಾನು ಈಗಾಗಲೇ 2019ರ ಚುನಾವಣೆಯಲ್ಲಿ ಸ್ಪರ್ಧಿಸುವ ಒಂದು ಅವಕಾಶವನ್ನು ಕಳೆದುಕೊಂಡಿದ್ದೇನೆ. ಈ ಪ್ರಕರಣದಲ್ಲಿ ಪೊಲೀಸರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ನ್ಯಾಯಾಲಯವು ಶೀಘ್ರವೇ ಈ ಪ್ರಕರಣವನ್ನು ಇತ್ಯರ್ಥಗೊಳಿಸಬೇಕು’ ಎಂದು ಹಾರ್ದಿಕ್ ಪಟೇಲ್ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಮೂಲ ಅಂಶಗಳನ್ನು ಪರಿಗಣಿಸಿ ಹಾರ್ದಿಕ್ ಅವರನ್ನು ತಪ್ಪಿತಸ್ಥ ಎಂದು ಘೋಷಿಸಲಾಗಿದೆ’ ಎಂದರು. ಬಳಿಕ ನ್ಯಾಯಪೀಠವು ಇದಕ್ಕೆ ತಡೆಯಾಜ್ಞೆ ನೀಡಿತು.

ಪಾಟಿದಾರ್ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಆಗ್ರಹಿಸಿ 2015ರಲ್ಲಿ ಹಾರ್ದಿಕ್ ಪಟೇಲ್ ಚಳವಳಿಯ ನೇತೃತ್ವ ವಹಿಸಿದ್ದರು. ಈ ವೇಳೆ ಹಿಂಸಾಚಾರ ಭುಗಿಲೆದ್ದು ಬಿಜೆಪಿ ಶಾಸಕರ ಕಚೇರಿ ಧ್ವಂಸಗೊಂಡಿತ್ತು. ಈ ಸಂಬಂಧದ ಪ್ರಕರಣದಲ್ಲಿ ಹಾರ್ದಿಕ್ ದೋಷಿ ಎಂದು 2018ರ ಜುಲೈ 15ರಂದು ಸೆಷನ್ಸ್ ನ್ಯಾಯಾಲಯ ತೀರ್ಪು ನೀಡಿತ್ತು. ಈ ತೀರ್ಪಿಗೆ ತಡೆಯಾಜ್ಞೆ ನೀಡುವಂತೆ ಕೋರಿ ಪಟೇಲ್ 2019ರ ವಿಧಾನಸಭಾ ಚುನಾವಣೆ ವೇಳೆ ಗುಜರಾತ್ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ, ಹೈಕೋರ್ಟ್ ಈ ಅರ್ಜಿಯನ್ನು ತಿರಸ್ಕರಿಸಿತ್ತು.

ಇದೇ ಡಿಸೆಂಬರ್‌ನಲ್ಲಿ ಗುಜರಾತ್‌ನಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಹಾರ್ದಿಕ್ ಪಟೇಲ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಚುನಾವಣೆಗೆ ಸ್ಪರ್ಧೆ: ಹಾರ್ದಿಕ್ ಪಟೇಲ್

ನವದೆಹಲಿ: ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿದ ಬೆನ್ನಲ್ಲೇ, ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದು ಮಾತ್ರವಲ್ಲದೆ ಜನರ ಸೇವೆಯೂ ನನ್ನ ಗುರಿಯಾಗಿದೆ’ ಎಂದು ಗುಜರಾತ್ ಕಾಂಗ್ರೆಸ್ ನಾಯಕ ಹಾರ್ದಿಕ್ ಪಟೇಲ್ ಮಂಗಳವಾರ ಹೇಳಿದ್ದಾರೆ.

‘ನಾನು ನ್ಯಾಯಾಂಗಕ್ಕೆ ಹೃದಯಪೂರ್ವಕವಾಗಿ ಧನ್ಯವಾದ ಹೇಳುತ್ತೇನೆ’ ಎಂದೂ ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಆಕಾರ್ ಪಟೇಲ್ ವಿರುದ್ಧ ಕಾನೂನು ಕ್ರಮ: ಸಿಬಿಐಗೆ ಕೇಂದ್ರ ಸರ್ಕಾರ ಅನುಮತಿ

ನವದೆಹಲಿ (ಪಿಟಿಐ): ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ ಹಾಗೂ ಸಂಸ್ಥೆಯ ಮಾಜಿ ಅಧ್ಯಕ್ಷ ಆಕಾರ್ ಪಟೇಲ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಿಬಿಐಗೆ ಕೇಂದ್ರ ಸರ್ಕಾರ ಮಂಗಳವಾರ ಒಪ್ಪಿಗೆ ನೀಡಿದೆ.

ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ ಹಾಗೂ ಆಕಾರ್ ಪಟೇಲ್ ವಿರುದ್ಧ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘಿಸಿದ ಆರೋಪಗಳಿದ್ದು, ಈ ಸಂಬಂಧ ಸಿಬಿಐ 2021ರ ಡಿಸೆಂಬರ್ 31ರಂದು ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ.

ಆದರೆ, ಸಂಸ್ಥೆ ವಿರುದ್ಧ ಕಾನೂನು ಕ್ರಮ ಜರುಗಿಸಲು ಎಫ್‌ಸಿಆರ್‌ಎ ಸೆಕ್ಷನ್ 40ರ ಪ್ರಕಾರ ಕೇಂದ್ರದ ಅನುಮತಿ ಪಡೆಯುವುದು ಕಡ್ಡಾಯ. ಹಾಗಾಗಿ, ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಸಿಬಿಐ ಮನವಿ ಸಲ್ಲಿಸಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿರುವ ಆರೋಪಗಳ ಬಗ್ಗೆ ನ್ಯಾಯಾಲಯ ಏಪ್ರಿಲ್ 18ರಂದು ವಿಚಾರಣೆ ನಡೆಸಲಿದೆ ಎಂದು ತಿಳಿಸಿದ್ದಾರೆ.

ಆದೇಶ ಕಾಯ್ದಿರಿಸಿದ ದೆಹಲಿ ಕೋರ್ಟ್

ನವದೆಹಲಿ (ಪಿಟಿಐ): ಅಮ್ನೆಸ್ಟಿ ಇಂಟರ್‌ನ್ಯಾಶನಲ್ ಇಂಡಿಯಾ ಅಧ್ಯಕ್ಷ ಆಕಾರ್ ಪಟೇಲ್ ಅವರ ವಿರುದ್ಧ ಹೊರಡಿಸಲಾದ ಲುಕ್‌ಔಟ್ ನೋಟಿಸು (ಎಲ್‌ಒಸಿ) ಹಿಂಪಡೆಯುವಂತೆ ನೀಡಿರುವ ಆದೇಶವನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮಂಗಳವಾರ ನಡೆಸಿದ ದೆಹಲಿ ನ್ಯಾಯಾಲಯ ಆದೇಶವನ್ನು ಕಾಯ್ದಿರಿಸಿದೆ.

ಆಕಾರ್ ಪಟೇಲ್ ಅವರ ವಿರುದ್ಧ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿ ಕ್ಷಮಾಪಣೆ ಕೋರಬೇಕೆಂಬ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶವನ್ನು ಸಹ ಸಿಬಿಐ ಪ್ರಶ್ನಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಸಂತೋಷ್ ಸ್ನೇಹಿ ಮಾನ್ ಅವರು ಆದೇಶವನ್ನು ಕಾಯ್ದಿರಿಸಿದ್ದಾರೆ.

ಪರಿಷ್ಕರಣೆ ಅರ್ಜಿಯ ಅಂತಿಮ ಆದೇಶದವರೆಗೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶಕ್ಕೆ ನೀಡಿರುವ ತಡೆಯಾಜ್ಞೆಯನ್ನೂ ನ್ಯಾಯಾಧೀಶರು ವಿಸ್ತರಿಸಿದರು.

ವಂಚನೆ ಆರೋಪಿ ನೀರವ್ ಮೋದಿ ಆಪ್ತ ಸಿಬಿಐ ಕಸ್ಟಡಿಗೆ

ಮುಂಬೈ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ (ಪಿಎನ್‌ಬಿ) ₹13,000 ಕೋಟಿ ವಂಚನೆ ಪ್ರಕರಣದ ಆರೋಪಿ, ವಜ್ರದ ವ್ಯಾಪಾರಿ ನೀರವ್ ಮೋದಿಯ ಸಹಾಯಕ ಸುಭಾಷ್ ಶಂಕರ್ ಪರಬ್ ಅವರನ್ನು ಇಲ್ಲಿನ ವಿಶೇಷ ನ್ಯಾಯಾಲಯವು ಏಪ್ರಿಲ್ 26 ರವರೆಗೆ ಸಿಬಿಐ ಕಸ್ಟಡಿಗೆ ಒಪ್ಪಿಸಿದೆ.

ಈಜಿಪ್ಟ್‌ನ ಕೈರೋದಿಂದ ಪರಬ್ ಅವರನ್ನು ಭಾರತಕ್ಕೆ ಗಡೀಪಾರು ಮಾಡಲಾಗಿದೆ. ಮಂಗಳವಾರ ಬೆಳಿಗ್ಗೆ ಅವರನ್ನು ಭಾರತಕ್ಕೆ ಕರೆತರಲಾಗಿದ್ದು ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿ.ಸಿ.ಬಾರ್ಡೆ ಅವರ ಮುಂದೆ ಹಾಜರುಪಡಿಸಿ ನಂತರ ಅವರನ್ನು ಸಿಬಿಐ ಕಸ್ಟಡಿಗೆ ಒಪ್ಪಿಸಲಾಯಿತು. ಪರಬ್ ಅವರು ನೀರವ್ ಮೋದಿಗೆ ಸಂಬಂಧಿಸಿರುವ ಫೈರ್‌ಸ್ಟಾರ್ ಡೈಮಂಡ್ ಸಂಸ್ಥೆಯಲ್ಲಿ ಹಣಕಾಸು ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕರಾಗಿದ್ದರು.

ಸಂಕ್ಷಿಪ್ತ ಸುದ್ದಿ

ಭಾರಿ ಪ್ರಮಾಣದ ಶಸ್ತ್ರಾಸ್ತ್ರ ವಶ

ಶ್ರೀನಗರ:ಕಾಶ್ಮೀರದ ಅನಂತನಾಗ್ ಜಿಲ್ಲೆಯ ದೂರು ಎಂಬ ಪ್ರದೇಶದ ಬಳಿ ವಾಹನದಲ್ಲಿ ಬಿಟ್ಟು ಹೋಗಿದ್ದ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ಮಂಗಳವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸರು ವಶಪಡಿಸಿಕೊಂಡಿದ್ದಾರೆ.

‘ದೂರು ಪ್ರದೇಶದ ಮೆಹಮೂದ್ ಅಬಾದ್ ಸೇತುವೆಯ ಬಳಿ ಗಸ್ತಿನಲ್ಲಿದ್ದ ಪೊಲೀಸರನ್ನು ಕಂಡ ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾದ. ಚಾಲಕನ ಸೆರೆಗಾಗಿ ಗಾಳಿಯಲ್ಲಿ ಗುಂಡು ಹಾರಿಸಲಾಯಿತಾದರೂ ಕತ್ತಲು ಕವಿದಿದ್ದರಿಂದ ಆತ ತಪ್ಪಿಸಿಕೊಂಡ. ನಂತರ ವಾಹನ ತಪಾಸಣೆ ನಡೆಸಿದಾಗ ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳನ್ನು ಸಾಗಿಸುತ್ತಿರುವುದು ಪತ್ತೆಯಾಯಿತು’ ಎಂದು ಪೊಲೀಸರುತಿಳಿಸಿದರು.

‘ವಾಹನದಲ್ಲಿದ್ದ ಒಂದು ಎಕೆ 56 ಬಂದೂಕು, ಎರಡು ಪಿಸ್ತೂಲ್, ಎರಡು ಎಕೆ ಮ್ಯಾಗಜೀನ್, ಮೂರು ಪಿಸ್ತೂಲ್ ಮ್ಯಾಗಜೀನ್, ಆರು ಹ್ಯಾಂಡ್ ಗ್ರೆನೆಡ್, ಎಕೆ–47 ಬಂದೂಕಿನ 44 ಗುಂಡುಗಳು ಹಾಗೂ 7.9 ಮಿ.ಮಿ ಗಾತ್ರದ 58 ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸಂಚುಕೋರ ಭಯೋತ್ಪಾದಕ’

ನವದೆಹಲಿ: 2016ರಲ್ಲಿ ಪಠಾಣ್‌ಕೋಟ್ ವಾಯುನೆಲೆಯ ಮೇಲೆ ನಡೆದ ಭಯೋತ್ಪಾದಕ ದಾಳಿಯ ಸಂಚುಕೋರ ಅಲಿ ಕಾಶಿಫ್ ಜಾನ್‌ನನ್ನು ಭಯೋತ್ಪಾದಕನೆಂದು ಕೇಂದ್ರ ಸರ್ಕಾರ ಘೋಷಿಸಿದೆ.

ಸರ್ಕಾರವು ಕಳೆದ ಐದು ದಿವಸಗಳಲ್ಲಿ ಅಲಿ ಕಾಶಿಫ್ ಸೇರಿದಂತೆ ಮೂವರನ್ನು ಭಯೋತ್ಪಾದಕರೆಂದು ಘೋಷಿಸಿದೆ.

ರಾಷ್ಟ್ರೀಯ ತನಿಖಾ ದಳವು ತನಿಖೆ ನಡೆಸುತ್ತಿರುವ ಹಲವು ಪ್ರಕರಣಗಳಲ್ಲಿ ಈತ ಆರೋಪಿಯಾಗಿದ್ದು, ಪಾಕಿಸ್ತಾನದ ಜೈಷ್ ಎ ಮೊಹಮ್ಮದ್ ಸಂಘಟನೆಯ ಮೂಲಕ ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸುತ್ತಿದ್ದಾನೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

‘ಭವಿಷ್ಯದ ಯುದ್ಧ ‘ಹೈಬ್ರಿಡ್’ ವಿಧಾನದಲ್ಲಿರಲಿದೆ’

ನವದೆಹಲಿ (ಪಿಟಿಐ): ಭವಿಷ್ಯದಲ್ಲಿ ನಡೆಯುವ ಯುದ್ಧಗಳು ‘ಹೈಬ್ರಿಡ್’ ವಿಧಾನಗಳ ಮೂಲಕ ನಡೆಯಲಿವೆ. ಸೈಬರ್ ಹಾಗೂ ಮಾಹಿತಿಯೇ ಇಂಥ ಯುದ್ಧಗಳ ಆಧುನಿಕ ತಂತ್ರಗಳಾಗಿವೆ ಎಂದು ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಮಂಗಳವಾರ ಹೇಳಿದರು.

ಆಲ್ ಇಂಡಿಯಾ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ (ಎಐಎಂಎ) ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

‘ದೇಶವೊಂದು ಆರ್ಥಿಕವಾಗಿ ದಿವಾಳಿಯಾಗುವಂತೆ ಮಾಡುವುದು, ಮಾಹಿತಿ ಹರಿವನ್ನು ತಡೆಯುವುದು, ಕಂಪ್ಯೂಟರ್ ವೈರಸ್ ಹಾಗೂ ಹೈಪರ್ ಸಾನಿಕ್ ಕ್ಷಿಪಣಿಗಳಿಂದ ದಾಳಿಯೇ ‘ಹೈಬ್ರಿಡ್ ವಿಧಾನ’ದ ಯುದ್ಧದ ತಂತ್ರಗಳಾಗಿವೆ ಎಂದು ಹೇಳಿದರು.

‘ಈಗ ಮಾಹಿತಿ ತಂತ್ರಜ್ಞಾನವೇ ಎಲ್ಲರನ್ನು ಬೆಸೆದಿದೆ. ನಾವು ಬಳಸುವ ನೆಟ್‌ವರ್ಕ್ ಮೇಲೆ ನಡೆಯುವ ದಾಳಿಯು ನಮ್ಮ ವ್ಯವಸ್ಥೆಯನ್ನೇ ನಿಷ್ಕ್ರಿಯಗೊಳಿಸುತ್ತದೆ. ಹೀಗಾಗಿ ಮುಂದಿನ ದಿನಗಳಲ್ಲಿ ನಡೆಯುವ ಯುದ್ಧಗಳಲ್ಲಿ ಒಂದು ದೇಶ ಅಥವಾ ಒಂದು ಸಂಸ್ಥೆಯೇ ಶತ್ರುವಾಗಿರಬೇಕಿಲ್ಲ’ ಎಂದು ಅವರು ಪ್ರತಿಪಾದಿಸಿದರು.

ವೈಷ್ಣೋದೇವಿ ದರ್ಶನಕ್ಕೆ ಸ್ಕೈವಾಕ್ ನಿರ್ಮಾಣ

ಜಮ್ಮು: ಇಲ್ಲಿನ ಪ್ರಸಿದ್ಧ ಮಾತಾ ವೈಷ್ಣೋದೇವಿ ದರ್ಶನ ಪಡೆಯಲು ಭಕ್ತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸ್ಕೈವಾಕ್ ಹಾಗೂ ನೂತನ ದುರ್ಗಾ ಭವನ್ ನಿರ್ಮಾಣಕ್ಕೆ ಮಂಗಳವಾರ ದೇಗುಲದ ಆಡಳಿತ ಮಂಡಳಿಯು ಅನುಮೋದಿಸಿದೆ.

‘ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಧ್ಯಾತ್ಮ ಥೀಮ್ ಪಾರ್ಕ್, ದೈವಿಕ ಅನುಭೂತಿ ಪಡೆಯಲು ಭಕ್ತರಿಗೆ ರೇಡಿಯೊ ಫ್ರಿಕ್ವೆನ್ಸಿ ಐಡೆಂಟಿಫಿಕೇಷನ್ ಟ್ಯಾಗ್ ಸೌಲಭ್ಯ ಕಲ್ಪಿಸುವ ವಿವಿಧ ಪ್ರಸ್ತಾವಗಳನ್ನು ಚರ್ಚಿಸಿ ಅನುಮೋದನೆ ನೀಡಲಾಯಿತು’ ಎಂದು ಅಧಿಕಾರಿಗಳು ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ನೀಲವೇಣಿ.ಪಿ.ವಿ.
W/o ಲೇಟ್ ಎಲ್.ರಘುರಾಮ ರೆಡ್ಡಿ
ದಿನಾಂಕ 03.04.2022 ನೇ ಭಾನುವಾರ ರಾತ್ರಿ 11.20ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ತತ್ಸಂಬಂದವಾಗಿ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ದಿನಾಂಕ 14.04.2022 ನೇ ಗುರುವಾರ ಬೆಳಿಗ್ಗೆ 9.00 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲು ವಿನಂತಿಸುತ್ತೇವೆ.
ಇಂತಿ ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು, ಹರಳೂರು – ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

General

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC,PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ಕಿಚನ್ ಸೂಪರ್ವೈಸರ್ ಮತ್ತು ಸೌತ್ ಇಂಡಿಯನ್ ವೆಜ್ / ನಾನ್ ವೆಜ್ ಕುಕ್‌ಗಳು ತಕ್ಷಣ ಬೇಕಾಗಿದ್ದಾರೆ.ಆಕರ್ಷಕ ಸಂಬಳ.ಸಂಪರ್ಕಿಸಿ: 9845618105, 9900098105. E- mail: thomas.george575@gmail.com

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WANTED DELIVERY BOY for Bangalore Salary 13000 +Food + Bike + Stay + Allowance Given, 8884888677

HRD & Admin

COURIER BOYS with 4 yrs exp and bike Bangalore 10,000+ petrol Call 7498999950/52

Part-Time Jobs

ಮನೆಯಿಂದಲೇ ಕೆಲಸ (ಟಾರ್ಗೆಟ್ ಇರುವುದಿಲ್ಲ) WORK FROM HOME ಡೇಟಾ ಎಂಟ್ರಿ ಕನ್ನಡ,ಇಂಗ್ಲಿಷ್,ತೆಲುಗು ಬರವಣಿಗೆ ಕೆಲಸ ಗೃಹಿಣಿಯರು,ನಿವೃತ್ತರು ವಿದ್ಯಾರ್ಥಿಗಳು ಎಲ್ಲರಿಗೂ ಅವಕಾಶ, ಗಳಿಸಿ ತಿಂಗಳಿಗೆ 15000-30000/- .9353497350, 8904253498.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT 17800/- 68000/- 9538811223, 9538811104

ಬೇಕಾಗಿದ್ದಾರೆ: ಒಂದು ಪ್ರತಿಷ್ಠಿತ ಕಂಪನಿಯ ಕಾರ್ಖಾನೆಗೆ ಸಮರ್ಥ ಹಾಗೂ ಸೃಜನಶೀಲ ಸಿಬ್ಬಂದಿ ಬೇಕಾಗಿದ್ದಾರೆ (ಐಟಿಐ ಫಿಟ್ಟರ್ ಅಭ್ಯರ್ಥಿಗಳಿಗೆ ಆದ್ಯತೆ). ಊಟ, ವಸತಿ ಮತ್ತು ಇತರೆ ಸೌಲಭ್ಯ ನೀಡಲಾಗುತ್ತದೆ. ಸಂಪರ್ಕಿಸಿ: 8971105774

Cook

ಹೋಟೆಲಿಗೆ ಸಸ್ಯಾಹಾರ, ಮಾಂಸಾಹಾರ ಅಡುಗೆ ಮಾಡುವರು ಬೇಕಾಗಿದ್ದಾರೆ ಸಂಬಳ 20000/ to 25000K Contact: 9606701007/ 8892501007

ಭವಿಷ್ಯ

Astrology

ನಂ. 1 ವಶೀಕರಣ ಮಾಂತ್ರಿಕ ನೂರ್ ಖಾನ್. ಯಾವುದೇ ಸಮಸ್ಯೆ ಇರಲಿ ಮೂರು ಗಂಟೆಗಳಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ: 7892651684

★||ಶ್ರೀಕೇದರನಾಥ||★ ಆರಾಧನೆಯಿಂದ ಆರಾಧನೆಯಿಂದ ಪ್ರೀತಿಪ್ರೇಮ,ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತಪರಿಹಾರ. 9148773459

ಕೇರಳ ಹಾಗೂ ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು, ಚಿತ್ರದುರ್ಗ.ಸಂಪರ್ಕಿಸಿ: 9008867041

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ಪ್ರವಾಸ

Travel

ಅಂಡಮಾನ್ ಹವಳದ್ವೀಪ 5ದಿನಗಳು ವಿಮಾನದಲ್ಲಿ ಏಪ್ರಿಲ್, ಮೇ, ಜೂನ್ನಲ್ಲಿ Royal Package. 10/07/2022 13/17 ದಿನಗಳು ದೆಹಲಿ, ಅಮೃತಸರ, ವೈಷ್ಣವದೇವಿ, ಅಮರನಾಥ್ ಕಾಶ್ಮೀರ, ಇತ್ಯಾದಿ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

7 ದಿನಗಳ ಪ್ರವಾಸಗಳು 11.05.2022 ಕಾಶಿ,ಗಯಾ,ಅಯೋಧ್ಯ 27.04.2022, 18.05.2022 26.05.2022 ಶಿಮ್ಲಾ,ಮನಾಲಿ 19.05.2022 15.06.2022 ಗ್ಯಾಂಗ್‌ಟಾಕ್ ಡಾರ್ಜಲಿಂಗ್ 19.05.2022 31.05.2022 ನೇಪಾಳ ಪ್ರವಾಸಗಳು. 21.04.2022 05.05.2022 19.05.2022 ಧರ್ಮಸ್ಥಳ ಹೊರನಾಡು 4 ದಿನಗಳು. 19.05.2022 ರಾಮೇಶ್ವರ ಕುಂಭಕೋಣಂ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು 9448402248 7022547922

15 ದಿನಗಳ ಕಾಶಿ,ದೆಹಲಿ ಪ್ರವಾಸ. 17ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜೂನ್ ಜುಲೈನಲ್ಲಿ ಅಮರನಾಥ್ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು 9916473906 8861111568

26.06.2022 ಸಪ್ಟಂಬರ್ ಅಕ್ಟೋಬರ್‌ನಲ್ಲಿ 14/20/26 ದಿನಗಳ ಪೂರಿಜಗನ್ನಾಥ್, ಕಾಶಿ,ಗಯಾ,ಅಯೋದ್ಯ, ನೈಮಿಶಾರಣ್ಯ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ಅಮೃತ್‌ಸರ್ ವೈಷ್ಣೋದೇವಿ, ದೆಹಲಿ. ಜುಲೈ ಅಗಸ್ಟ್ ತಿಂಗಳಲ್ಲಿ ಅಮರನಾಥ್ ಮುಕ್ತಿನಾಥ್ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

02.05.2022 18.05.2022, 15 ದಿನಗಳ ಬದರಿನಾಥ್ ಕೇದಾರನಾಥ್,ಗಂಗೋತ್ರಿ, ಯುಮುನೋತ್ರಿ 05.05.2022 ಕಾಶಿ,ಗಯಾ,ಅಯೋಧ್ಯ, ಅಲಹಾಬಾದ್ ಇತ್ಯಾದಿ 27.06.2022 14 ದಿನಗಳ ವೈಷ್ಣವಿದೇವಿ ಕಾಶ್ಮಿರ,ಗುಲ್ಮಾರ್ಗ್ ಅಮರನಾಥ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ತ್ಯಾಗರಾಜನಗರ ಬೆಂಗಳೂರು 9342287551 8050629305

28.06.2022 14 ದಿನಗಳು ವಿಮಾನ A/C ಬಸ್ಸಿನಲ್ಲಿ ಅಮರನಾಥ್,ದೆಹಲಿ ವೈಷ್ಣೊದೇವಿ,ಕಾಶ್ಮೀರ್ ಕಾಂಗ್ಡಾದೇವಿ ಅಮೃತ್‌ಸರ್ ಇತ್ಯಾದಿ. 02.10.2022 15 ದಿನಗಳು ಚಾರ್‌ಧಾಮ್ ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289

ದೆಹಲಿ, ಯಮುನೋತ್ರಿ, ಗಂಗೋತ್ರಿ,ಕೇದಾರ್‌ನಾಥ್, ಬದರಿನಾಥ್ 04.05.2022, 22.05.2022, 04.06.2022 ರಿಂದ 18/14 ದಿನಗಳು. ದೆಹಲಿ,ಆಗ್ರಾ.ಮಥುರಾ ಕಾಶಿ, ಗಯಾ, ಬದರಿನಾಥ,ಕೇದಾರ್‌ನಾಥ್ 01.05.2022 ರಿಂದ 18/13ದಿನಗಳು ಸ್ವಯಂಭೂ,ಹಿಮಲಿಂಗ, ಅಮರನಾಥ್, ವೈಷ್ಣೋದೇವಿ ಕಾಶ್ಮೀರ್22.06.2022, 30.06.2022 ರಿಂದ13/17 ದಿನಗಳು ಸಂಪರ್ಕಿಸಿ: 080-26508925, 9980993631. ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು-18

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR REAL ESTATE

Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಉತ್ತಪ್ಪ–ಶಿವಂ ಜೊತೆಯಾಟದ ರಂಗು; ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸೋಲು

ಚೆನ್ನೈ ಸೂಪರ್ ಕಿಂಗ್ಸ್‌ಗೆ ಮೊದಲ ಜಯ

ನವಿ ಮುಂಬೈ (ಪಿಟಿಐ): ಸಿಕ್ಸರ್-ಬೌಂಡರಿಗಳೊಂದಿಗೆ ರಂಜಿಸಿದ ರಾಬಿನ್ ಉತ್ತಪ್ಪ ಮತ್ತು ಶಿವಂ ದುಬೆ ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ಅಬ್ಬರಿಸಿದರು. ಅವರಿಬ್ಬರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 15ನೇ ಆವೃತ್ತಿಯಲ್ಲಿ ಮೊದಲ ಜಯ ದಾಖಲಿಸಿತು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರಿನ ಪಂದ್ಯದಲ್ಲಿ ರಾಬಿನ್-ಶಿವಂ ಬ್ಯಾಟಿನಿಂದ ಒಟ್ಟು 17 ಸಿಕ್ಸರ್ ಮತ್ತು 9 ಬೌಂಡರಿಗಳು ಸಿಡಿದವು. ಇದರ ಫಲವಾಗಿ ತಂಡ 4ಕ್ಕೆ 216 ರನ್ ಕಲೆ ಹಾಕಿತು. ಇದು, ಐಪಿಎಲ್‌ನ 15ನೇ ಆವೃತ್ತಿಯಲ್ಲಿ ತಂಡವೊಂದರ ಗರಿಷ್ಠ ಮೊತ್ತ. ಮೂರನೇ ವಿಕೆಟ್‌ಗೆ 165 ರನ್ ಸೇರಿಸಿದ ರಾಬಿನ್-ಶಿವಂ ಜೋಡಿ ಶತಕದಿಂದ ವಂಚಿತರಾದರು. ಆದರೆ ಇಬ್ಬರೂ ವೈಯಕ್ತಿಕ ಗರಿಷ್ಠ ರನ್ ದಾಖಲಿಸುವಲ್ಲಿ ಯಶಸ್ವಿಯಾದರು.

ಗುರಿ ಬೆನ್ನತ್ತಿದ ಬೆಂಗಳೂರು ತಂಡದ ಶಹಬಾಜ್ ಅಹಮ್ಮದ್, ದಿನೇಶ್ ಕಾರ್ತಿಕ್ ಮತ್ತು ಪದಾರ್ಪಣೆ ಪಂದ್ಯ ಆಡಿದ ಸುಯಶ್ ಪ್ರಭುದೇಸಾಯಿ ಅವರನ್ನು ಹೊರತುಪಡಿಸಿದರೆ ಬೇರೆ ಯಾರಿಗೂ ಮಿಂಚಲು ಆಗಲಿಲ್ಲ. ತಂಡ 9 ವಿಕೆಟ್‌ಗೆ 193 ರನ್ ಗಳಿಸಿ 23 ರನ್‌ಗಳ ಸೋಲೊಪ್ಪಿಕೊಂಡಿತು.

ಟಾಸ್ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಚೆನ್ನೈ ಸೂಪರ್ ಕಿಂಗ್ಸ್ ಕೇವಲ 19 ರನ್ ಗಳಿಸುವಷ್ಟರಲ್ಲಿ ಮೊದಲ ವಿಕೆಟ್ ಕಳೆದುಕೊಂಡಿತ್ತು. ಮೂರು ಬೌಂಡರಿ ಸಿಡಿಸಿ ಭರವಸೆ ಮೂಡಿಸಿದ್ದ ಋತುರಾಜ್ ಗಾಯಕವಾಡ್ ಈ ಆವೃತ್ತಿಯಲ್ಲಿ ಮೊದಲ ಪಂದ್ಯ ಆಡಿದ ಜೋಶ್ ಹ್ಯಾಜಲ್‌ವುಡ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಅರ್ಧಶತಕ ಗಳಿಸಿದ ರಾಬಿನ್ ಉತ್ತಪ್ಪ ಸಂಭ್ರಮ –ಪಿಟಿಐ ಚಿತ್ರ

ಸುಯಶ್ ಪ್ರಭುದೇಸಾಯಿ ಮತ್ತು ವಿಕೆಟ್ ಕೀಪರ್ ದಿನೇಶ್ ಕಾರ್ತಿಕ್ ಅವರ ಮಿಂಚಿನ ಆಟಕ್ಕೆ ಮೋಯಿನ್ ಅಲಿ ವಿಕೆಟ್ ಕಳೆದುಕೊಂಡರು. ಗ್ಲೆನ್ ಮ್ಯಾಕ್ಸ್‌ವೆಲ್ ಹಾಕಿದ ಏಳನೇ ಓವರ್‌ನ ನಾಲ್ಕನೇ ಎಸೆತವನ್ನು ಅಲಿ ಕಟ್ ಮಾಡಿದ್ದರು. ಚೆಂಡು ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಸುಯಶ್ ಕಡೆಗೆ ಸಾಗಿತು. ಚುರುಕಿನ ಫೀಲ್ಡಿಂಗ್ ಮಾಡಿದ ಅವರು ನಿಖರ ಥ್ರೋ ಮಾಡಿದರು. ದಿನೇಶ್ ಕಾರ್ತಿಕ್ ಸೊಗಸಾಗಿ ಬೇಲ್ಸ್ ಎಗರಿಸಿದರು.

ರಂಗೇರಿದ ರಾಬಿನ್-ಶಿವಂ ಆಟ: ನಂತರ ರಾಬಿನ್ ಮತ್ತು ಶಿವಂ ಅಟ ರಂಗೇರಿತು. ಎಂಟನೇ ಓವರ್‌ನಲ್ಲಿ ಇಬ್ಬರೂ ತಲಾ ಒಂದೊಂದು ಬೌಂಡರಿ ಗಳಿಸುವ ಮೂಲಕ ಆಕ್ರಮಣಕಾರಿ ಆಟದ ಮುನ್ಸೂಚನೆ ನೀಡಿದರು. ನಂತರ ರನ್ ಮಳೆ ಸುರಿಯಿತು. 13ನೇ ಓವರ್‌ನಲ್ಲಿ ಮ್ಯಾಕ್ಸ್‌ವೆಲ್ ಅವರನ್ನು ಮೂರು ಬಾರಿ ಸಿಕ್ಸರ್‌ಗೆ ಎತ್ತಿದ ರಾಬಿನ್ ತಂಡದ ಮೊತ್ತವನ್ನು ಮೂರಂಕಿ ದಾಟಿಸಿದರು.

16ನೇ ಓವರ್‌ನಲ್ಲಿ ಹ್ಯಾಜಲ್‌ವುಡ್ ಎಸೆತವನ್ನು ಸಿಕ್ಸರ್‌ಗೆ ಅಟ್ಟಿದ ರಾಬಿನ್ 100 ರನ್‌ಗಳ ಜೊತೆಯಾಟ ಪೂರೈಸಿದರು. ಸಿರಾಜ್ ಹಾಕಿದ 17ನೇ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಸಿಡಿಸಿದರು. 18ನೇ ಓವರ್‌ನಲ್ಲಿ ಶಿವಂ ಎರಡು ಸಿಕ್ಸರ್ ಗಳಿಸಿದರು. ಆದರೆ ರಾಬಿನ್ ವಿಕೆಟ್ ಕಳೆದುಕೊಂಡರು. ಕೊನೆಯ ಓವರ್‌ನಲ್ಲಿ ಎರಡು ಸಿಕ್ಸರ್‌ಗಳ ಮೂಲಕ ಶಿವಂ ಶತಕದತ್ತ ದಾಲುಗಾಲು ಹಾಕಿದರು. ಆದರೆ ಕೊನೆಯ ಎಸೆತದಲ್ಲಿ ಎಡವಿದರು. ಸಿಕ್ಸರ್‌ಗೆಂದು ಎತ್ತಿದ ಚೆಂಡು ಲಾಂಗ್‌ಆನ್‌ನಲ್ಲಿ ಫಫ್ ಡುಪ್ಲೆಸಿ ಬಳಿ ಸಾಗಿತು. ಅವರು ಕ್ಯಾಚ್ ಕೈಚೆಲ್ಲಿದರು. ಆದರೆ ದುಬೆ ಶತಕದ ಕನಸು ನನಸಾಗಲಿಲ್ಲ.

ಶಿವಂ ದುಬೆ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 216 (20 ಓವರ್)
ಋತುರಾಜ್ ಎಲ್‌ಬಿಡಬ್ಲ್ಯು ಬಿ ಹ್ಯಾಜಲ್‌ವುಡ್ 17 (16 ಎ, 4x3), ರಾಬಿನ್ ಸಿ ವಿರಾಟ್ ಬಿ ಹಸರಂಗ 88 (50 ಎ, 4x4, 6x9), ಮೋಯಿನ್ ರನ್ ಔಟ್ (ಸುಯಶ್/ದಿನೇಶ್) 3 (8 ಎ), ಶಿವಂ ಔಟಾಗದೆ 95 (46 ಎ, 4x5, 6x8), ರವೀಂದ್ರ ಸಿ ಅನುಜ್ ಬಿ ಹಸರಂಗ 0 (1 ಎ), ಮಹೇಂದ್ರ ಸಿಂಗ್ ಔಟಾಗದೆ 0 (0 ಎ)
ಇತರೆ (ಬೈ 4, ಲೆಗ್‌ಬೈ 2, ನೋಬಾಲ್ 1, ವೈಡ್ 6) 13
ವಿಕೆಟ್ ಪತನ: 1-19 (ಋತುರಾಜ್ ಗಾಯಕವಾಡ್, 3.4), 2-36 (ಮೋಯಿನ್ ಅಲಿ, 6.4), 3-201 (ರಾಬಿನ್ ಉತ್ತಪ್ಪ, 18.5), 4-201 (ರವೀಂದ್ರ ಜಡೇಜ, 18.6)
ಬೌಲಿಂಗ್: ಮೊಹಮ್ಮದ್ ಸಿರಾಜ್ 4-0-37-0, ಜೋಶ್ ಹ್ಯಾಜಲ್‌ವುಡ್ 4-0-33-1, ಆಕಾಶ್ ದೀಪ್ 4-0-58-0, ಗ್ಲೆನ್ ಮ್ಯಾಕ್ಸ್‌ವೆಲ್ 3-0-29-0, ಶಹಬಾಜ್ ಅಹಮ್ಮದ್ 2-0-18-0, ವನಿಂದು ಹಸರಂಗ 3-0-35-2

ರಾಯಲ್ ಚಾಲೆಂಜರ್ಸ್ ಬೆಂಗಳೂರು 9ಕ್ಕೆ 193 (20 ಓವರ್)
ಡುಪ್ಲೆಸಿ ಸಿ ಜೋರ್ಡಾನ್ ಬಿ ತೀಕ್ಷಣ 8 (9ಎ), ಅನುಜ್ ಎಲ್‌ಬಿಡಬ್ಲ್ಯು ಬಿ ತೀಕ್ಷಣ 12 (16ಎ, 4X1), ವಿರಾಟ್ ಸಿ ಶಿವಂ ಬಿ ಮುಕೇಶ್ 1 (3ಎ), ಮ್ಯಾಕ್ಸ್‌ವೆಲ್ ಬಿ ರವೀಂದ್ರ 26 (11ಎ, 4X2, 6X2), ಶಹಬಾಜ್ ಬಿ ತೀಕ್ಷಣ 41 (27ಎ, 4X4), ಸುಯಶ್ ಬಿ ತೀಕ್ಷಣ 34 (18ಎ, 4X5, 6X1), ದಿನೇಶ್ ಸಿ ರವೀಂದ್ರ ಬಿ ಬ್ರಾವೊ 34 (14ಎ, 4X2, 6X3), ಹಸರಂಗ ಸಿ ಜೋರ್ಡಾನ್ ಬಿ ರವೀಂದ್ರ 7 (3ಎ, 6X1), ಆಕಾಶ್ ಸಿ ರಾಯುಡು ಬಿ ರವೀಂದ್ರ 0 (2ಎ), ಸಿರಾಜ್ ಔಟಾಗದೆ 14 (11ಎ, 4X3), ಜೋಶ್ ಔಟಾಗದೆ 7 (7ಎ)
ಇತರೆ (ನೋಬಾಲ್ 1, ವೈಡ್ 8) 9
ವಿಕೆಟ್ ಪತನ: 1-14 (ಫಫ್ ಡುಪ್ಲೆಸಿ, 2.5), 2-20 (ವಿರಾಟ್ ಕೊಹ್ಲಿ, 4.1), 3-42 (ಅನುಜ್ ರಾವತ್, 5.6), 4-50 (ಗ್ಲೆನ್ ಮ್ಯಾಕ್ಸ್‌ವೆಲ್, 6.5), 5-110 (ಸುಯಶ್ ಪ್ರಭುದೇಸಾಯಿ, 12.2), 6-133 (ಶಹಬಾಜ್ ಅಹಮ್ಮದ್, 14.3), 7-146 (ವನಿಂದು ಹಸರಂಗ, 15.2), 8-146 (ಆಕಾಶ್ ದೀಪ್, 15.4), 9-171 (ದಿನೇಶ್ ಕಾರ್ತಿಕ್, 17.2)
ಬೌಲಿಂಗ್: ಮೋಯಿನ್ ಅಲಿ 3-0-19-0, ಮುಕೇಶ್ ಚೌಧರಿ 3-0-40-1, ಮಹೀಶ್ ತೀಕ್ಷಣ 4-0-33-4, ರವೀಂದ್ರ ಜಡೇಜ 4-0-39-3, ಕ್ರಿಸ್ ಜೋರ್ಡಾನ್ 2-0-20-0, ಡ್ವೇನ್ ಬ್ರಾವೊ 4-0-42-1

ಫಲಿತಾಂಶ: ಚೆನ್ನೈಸೂಪರ್ ಕಿಂಗ್ಸ್‌ಗೆ 23 ರನ್‌ಗಳ ಜಯ

ಐಪಿಎಲ್‌ನಿಂದ ದೀಪಕ್ ‘ಔಟ್’

ಚೆನ್ನೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಸತತ ಸೋಲಿನಿಂದ ನಿರಾಸೆಗೆ ಒಳಗಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಈಗ ಮತ್ತೊಂದು ಆಘಾತ ಎದುರಾಗಿದೆ. ಆಲ್‌ರೌಂಡರ್ ದೀಪಕ್ ಚಾಹರ್ ಬೆನ್ನು ನೋವಿನ ಕಾರಣ ಮುಂದಿನ ಪಂದ್ಯಗಳಿಗೂ ಅಲಭ್ಯರಾಗಲಿದ್ದಾರೆ. ಹಿಂದಿನ ನಾಲ್ಕು ಪಂದ್ಯಗಳಲ್ಲಿ ಚಾಹರ್ ಇಲ್ಲದೇ ತಂಡ ಕಣಕ್ಕೆ ಇಳಿದಿತ್ತು. ಎಲ್ಲ ಪಂದ್ಯಗಳನ್ನು ಸೋತಿತ್ತು.

ಹರಾಜು ಪ್ರಕ್ರಿಯೆಯಲ್ಲಿ ₹14 ಕೋಟಿ ಮೊತ್ತಕ್ಕೆ ದೀಪಕ್ ಅವರನ್ನು ಸಿಎಸ್‌ಕೆ ಖರೀದಿಸಿತ್ತು. ಬೆನ್ನು ನೋವಿನಿಂದ ಬಳಲುತ್ತಿರುವ ಅವರು ಏಪ್ರಿಲ್ ಎರಡನೇ ವಾರ ಗುಣಮುಖರಾಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಇಡೀ ಟೂರ್ನಿಗೆ ಲಭ್ಯರಾಗುವುದಿಲ್ಲ ಎಂದು ತಂಡದ ಮೂಲಗಳು ಮಂಗಳವಾರ ತಿಳಿಸಿವೆ.ಫೆಬ್ರುವರಿಯಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಟ್ವೆಂಟಿ20 ಸರಣಿಯ ಪಂದ್ಯದಲ್ಲಿ ಸ್ನಾಯುರಜ್ಜು ಸೆಳೆತಕ್ಕೆ ಒಳಗಾಗಿದ್ದ ದೀಪಕ್ ಚಾಹರ್ ಒಂದು ತಿಂಗಳಿಗೂ ಹೆಚ್ಚು ಸಮಯದಿಂದ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಪುನಶ್ಚೇತನ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ..

ಸುಂದರ್‌ಗೆ ಗಾಯ: ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಗಾಯಗೊಂಡಿದ್ದು ಸನ್‌ರೈಸರ್ಸ್ ಹೈದರಾಬಾದ್ ತಂಡದ ಮುಂದಿನ ಒಂದೆರಡು ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ.

ಮುಂಬೈಗೆ ಮೊದಲ ಜಯದ ತವಕ

ಪಂಜಾಬ್ ಎದುರಾಳಿ: ರೋಹಿತ್–ಮಯಂಕ್ ಸೆಣಸು

ಪುಣೆ (ಪಿಟಿಐ): ಆಡಿದ ನಾಲ್ಕೂ ಪಂದ್ಯಗಳಲ್ಲಿ ಸೋತಿರುವ ಮುಂಬೈ ಇಂಡಿಯನ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಸೆಣಸಲಿದೆ.

ಐದು ಬಾರಿಯ ಚಾಂಪಿಯನ್ ಮುಂಬೈ ಹಿಂದಿನ ಆವೃತ್ತಿಗಳಲ್ಲೆಲ್ಲ ಆಲ್‌ರೌಂಡ್ ಆಟದ ಮೂಲಕ ಗಮನ ಸೆಳೆದಿತ್ತು. ಆದರೆ ಈ ಬಾರಿ ಪ್ರತಿ ಪಂದ್ಯದಲ್ಲೂ ನೀರಸ ಆಟವಾಡಿದೆ. ಜಯದ ಲಯಕ್ಕೆ ಮರಳಬೇಕಾದರೆ ತಂಡವು ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಬ್ಯಾಟರ್‌ಗಳಿಗೆ ನಿರೀಕ್ಷೆಗೆ ತಕ್ಕಂತೆ ಆಡಲು ಆಗುತ್ತಿಲ್ಲ. ಬೌಲಿಂಗ್‌ನಲ್ಲೂ ಮೊನಚು ಕಾಣುತ್ತಿಲ್ಲ. ಹೀಗಾಗಿ ತಂಡದ ಒಟ್ಟಾರೆ ಸಾಮರ್ಥ್ಯ ಕುಂದಿದೆ. ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನಕ್ಕೆ ಕುಸಿದಿದೆ.

ಹೊಸ ನಾಯಕನ ನೇತೃತ್ವದಲ್ಲಿ ಈ ಬಾರಿ ಕಣಕ್ಕೆ ಇಳಿದಿರುವ ಪಂಜಾಬ್ ಕಿಂಗ್ಸ್ ಈ ವರೆಗೆ ಮಿಶ್ರ ಫಲ ಕಂಡಿದೆ. ಎರಡು ಪಂದ್ಯಗಳಲ್ಲಿ ಗೆದ್ದಿರುವ ತಂಡ ಮತ್ತೆರಡು ಪಂದ್ಯಗಳಲ್ಲಿ ಸೋತಿದೆ. ತಂಡಕ್ಕೆ ಈ ವರೆಗೆ ಸತತ ಎರಡು ಜಯ ಗಳಿಸಲು ಆಗಿಲಿಲ್ಲ. ಹಿಂದಿನ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಸೋತಿರುವುದರಿಂದ ಗೆಲುವಿನ ಲಯಕ್ಕೆ ಮರಳಲು ಪ್ರಯತ್ನಿಸಲಿದೆ.

ಮುಂಬೈ ಇಂಡಿಯನ್ಸ್ ಪರ ಬ್ಯಾಟಿಂಗ್‌ನಲ್ಲಿ ಇಶಾನ್ ಕಿಶನ್ ಕೆಲವು ಪಂದ್ಯಗಳಲ್ಲಿ ಮಿಂಚಿದ್ದಾರೆ. ಆದರೂ ಸತತವಾಗಿ ಲಯವನ್ನು ಉಳಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ ಮುಂತಾದವರು ಸಾಮರ್ಥ್ಯಕ್ಕೆ ತಕ್ಕಂತೆ ಬ್ಯಾಟಿಂಗ್ ಮಾಡಬೇಕಾಗಿದೆ. ಅನುಭವಿ ಬ್ಯಾಟರ್ ಕೀರನ್ ಪೊಲಾರ್ಡ್ ಅವರು ಇನ್ನೂ ಲಯ ಕಂಡುಕೊಳ್ಳದೇ ಇರುವುದು ತಂಡದ ಚಿಂತೆಗೆ ಕಾರಣವಾಗಿದೆ.

ರೋಹಿತ್ ಶರ್ಮಾ –ಪಿಟಿಐ ಚಿತ್ರ

ಬೌಲಿಂಗ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ಮುರುಗನ್ ಅಶ್ವಿನ್, ಬಾಸಿಲ್ ಥಂಪಿ ಮತ್ತು ಜಯದೇವ್ ಉನದ್ಕತ್ ಅವರಿಂದ ಸಹಕಾರ ಸಿಕ್ಕಿದರೆ ಪಂಜಾಬ್ ಕಿಂಗ್ಸ್‌ನ ಬ್ಯಾಟಿಂಗ್ ಬಳಗವನ್ನು ನಿಯಂತ್ರಿಸಬಹುದಾಗಿದೆ.

ಮಯಂಕ್ ಅಗರವಾಲ್

ಈ ಬಾರಿ ಉಭಯ ತಂಡಗಳ ನಾಯಕರ ಬಲಾಬಲ

ಆಟಗಾರ	ತಂಡ	ಪಂದ್ಯ	ರನ್	ಗರಿಷ್ಠ	ಬೌಂಡರಿ	ಸಿಕ್ಸರ್
ರೋಹಿತ್ ಶರ್ಮಾ	ಮುಂಬೈ	4	80	41	8	4
ಮಯಂಕ್ ಅಗರವಾಲ್	ಪಂಜಾಬ್	4	42	32	4	2

ಉಭಯ ತಂಡಗಳಲ್ಲಿ ಗರಿಷ್ಠ ರನ್ ಗಳಿಸಿದವರು

ಆಟಗಾರ	ತಂಡ	ಪಂದ್ಯ	ರನ್	ಗರಿಷ್ಠ	ಅರ್ಧಶತಕ
ಇಶಾನ್ ಕಿಶನ್	ಮುಂಬೈ	4	175	81*	2
ಲಿವಿಂಗ್‌ಸ್ಟೋನ್	ಪಂಜಾಬ್	4	162	64	2
ಶಿಖರ್ ಧವನ್	ಪಂಜಾಬ್	4	127	43	-
ತಿಲಕ್ ವರ್ಮಾ	ಮುಂಬೈ	4	121	61	1
ಸೂರ್ಯಕುಮಾರ್	ಮುಂಬೈ	2	120	68*	2

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	11
ಉಮೇಶ್	ಕೋಲ್ಕತ್ತ	10
ಕುಲದೀಪ್	ಡೆಲ್ಲಿ	10

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	218
ಶಿವಂ ದುಬೆ	ಚೆನ್ನೈ	207
ಉತ್ತಪ್ಪ	ಚೆನ್ನೈ	194

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ರಾಜಸ್ಥಾನ	4	3	1	0	0	6	0.951
ಕೋಲ್ಕತ್ತ	5	3	2	0	0	6	0.446
ಲಖನೌ	5	3	2	0	0	6	0.174
ಗುಜರಾತ್	4	3	1	0	0	6	0.097
ಬೆಂಗಳೂರು	5	3	2	0	0	6	0.006
ಡೆಲ್ಲಿ	4	2	2	0	0	4	0.476
ಪಂಜಾಬ್	4	2	2	0	0	4	0.152
ಹೈದರಾಬಾದ್	4	2	2	0	0	4	-0.501
ಚೆನ್ನೈ	5	1	4	0	0	2	-0.745
ಮುಂಬೈ	4	0	4	0	0	0	-1.181

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಷೇರುಪೇಟೆ ವಹಿವಾಟು ▼ 388



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,674
ಇಂದಿನ ಅಂತ್ಯ	17,530
▼	144
ದಿನದ ಗರಿಷ್ಠ	17,595

ವಿನಿಮಯ ದರ

$ ಡಾಲರ್	76.15
£ ಪೌಂಡ್	99.04
€ ಯುರೊ	82.77
¥ ಯೆನ್ (100ಕ್ಕೆ)	60.76

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹457

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1525 (1515)
ಸೂರ್ಯಕಾಂತಿ (ರಿಫೈನ್ಡ್)	₹1750 (1725)
ಪಾಮೋಲಿನ್	₹1477 (1470)

ಕೊಬ್ಬರಿ ಧಾರಣೆ

ಮಂಗಳೂರು	₹9000-9000
ತುರುವೇಕೆರೆ	₹1700-1700

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹900-1100
ಮಧ್ಯಮ	₹600-900
ಸಣ್ಣ	₹300-600

17 ತಿಂಗಳ ಗರಿಷ್ಠ ಮಟ್ಟಕ್ಕೆ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ದುಬಾರಿ ಆದ ಪರಿಣಾಮವಾಗಿ ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಮಾರ್ಚ್ ತಿಂಗಳಲ್ಲಿ ಶೇಕಡ 6.95ಕ್ಕೆ ತಲುಪಿದೆ. ಇದು 17 ತಿಂಗಳ ಗರಿಷ್ಠ ಪ್ರಮಾಣ. ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿರುವ ಮಿತಿಗಿಂತ ಹೆಚ್ಚು.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ ದರವು ಸತತ ಮೂರು ತಿಂಗಳುಗಳಿಂದ ಶೇಕಡ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದಿದೆ. 2020ರ ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 7.61ರಷ್ಟು ಇತ್ತು. ಅದಾದ ನಂತರದ ಗರಿಷ್ಠ ಪ್ರಮಾಣದ ಹಣದುಬ್ಬರ ದರವು ಮಾರ್ಚ್‌ನಲ್ಲಿ ದಾಖಲಾಗಿದೆ.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಮಾರ್ಚ್‌ನಲ್ಲಿ ಶೇ 7.68ಕ್ಕೆ ಜಿಗಿದಿದೆ. ಇದು ಫೆಬ್ರುವರಿಯಲ್ಲಿ ಶೇ 5.85ರಷ್ಟು ಇತ್ತು. ಹಿಂದಿನ ವರ್ಷದ ಮಾರ್ಚ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 5.52ರಷ್ಟಾಗಿತ್ತು. ಆಗ ಆಹಾರ ವಸ್ತುಗಳ ಹಣದುಬ್ಬರವು ಶೇ 4.87ರಷ್ಟು ಇತ್ತು.

ಮುಖ್ಯಾಂಶಗಳು
- ಎಣ್ಣೆಗಳ ಬೆಲೆ ಏರಿಕೆ ಶೇ 18.79ಕ್ಕೆ ಏರಿಕೆ
- ತರಕಾರಿ ಹಣದುಬ್ಬರ ಪ್ರಮಾಣ ಶೇ 11.64ಕ್ಕೆ ಹೆಚ್ಚಳ
- ಮಾಂಸ ಮತ್ತು ಮೀನಿನ ಹಣದುಬ್ಬರ ಶೇ 9.63ಕ್ಕೆ

ಚಿಲ್ಲರೆ ಹಣದುಬ್ಬರ ದರ ಶೇ 6ರ ಗಡಿ ದಾಟದಂತೆ ನೋಡಿಕೊಳ್ಳುವ ಗುರಿಯನ್ನು ಆರ್‌ಬಿಐ ನಿಗದಿ ಮಾಡಿಕೊಂಡಿದೆ. ಜನವರಿ–ಮಾರ್ಚ್ ತ್ರೈಮಾಸಿಕವನ್ನು ಒಟ್ಟಾರೆಯಾಗಿ ಪರಿಗಣಿಸಿದರೆ ಚಿಲ್ಲರೆ ಹಣದುಬ್ಬರ ದರವು ಶೇ 6.34ರಷ್ಟು ಆಗುತ್ತದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಎಣ್ಣೆ ಮತ್ತು ಕೊಬ್ಬು ವಿಭಾಗದಲ್ಲಿ ಹಣದುಬ್ಬರ ಪ್ರಮಾಣವು ಮಾರ್ಚ್‌ನಲ್ಲಿ ಶೇ 18.79ಕ್ಕೆ ಏರಿಕೆ ಆಗಿದೆ. ರಷ್ಯಾ ಮತ್ತು ಉಕ್ರೇನ್ ನಡುವಣ ಯುದ್ಧದಿಂದಾಗಿ ಅಡುಗೆ ಎಣ್ಣೆ ಬೆಲೆ ಹೆಚ್ಚಳವಾಗಿದ್ದು ಇದಕ್ಕೆ ಮುಖ್ಯ ಕಾರಣ.

ತರಕಾರಿಗಳ ಹಣದುಬ್ಬರ ಪ್ರಮಾಣವು ಶೇ 11.64ಕ್ಕೆ ಏರಿದೆ. ಮಾಂಸ ಮತ್ತು ಮೀನಿನ ಹಣದುಬ್ಬರವು ಶೇ 9.63ಕ್ಕೆ ಏರಿಕೆ ಆಗಿದೆ.

‘ಚಿಲ್ಲರೆ ಹಣದುಬ್ಬರ ದರವು ನಮ್ಮ ನಿರೀಕ್ಷೆಗೂ ಮೀರಿ ಏರಿಕೆ ಆಗಿದೆ. ಮಾಂಸ ಮತ್ತು ಮೀನಿನಂತಹ ಆಹಾರ ವಸ್ತುಗಳ ಬೆಲೆಯಲ್ಲಿ ಅಂದಾಜು ಮಾಡಿದ್ದಕ್ಕಿಂತ ಹೆಚ್ಚಿನ ಏರಿಕೆ ಆಗಿರುವುದು ಹಣದುಬ್ಬರದ ಒಟ್ಟಾರೆ ಹೆಚ್ಚಳಕ್ಕೆ ಒಂದು ಮುಖ್ಯ ಕಾರಣ’ ಎಂದು ರೇಟಿಂಗ್ಸ್ ಸಂಸ್ಥೆ ‘ಐಸಿಆರ್‌ಎ’ನ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

‘ಆರ್‌ಬಿಐನ ಹಣಕಾಸು ನೀತಿ ಸಮಿತಿಯು ತನ್ನ ಹೊಂದಾಣಿಕೆಯ ಹಣಕಾಸು ನೀತಿಯಲ್ಲಿ ಬದಲಾವಣೆ ತರುವ ಸೂಚನೆಯನ್ನು ನೀಡಿದೆ. ಹೀಗಾಗಿ, ಏಪ್ರಿಲ್‌ನಲ್ಲಿಯೂ ಹಣದುಬ್ಬರ ಪ್ರಮಾಣ ಕಡಿಮೆ ಆಗದೆ ಇದ್ದರೆ ರೆಪೊ ದರ ಹೆಚ್ಚಿಸುವಿಕೆಯನ್ನು ಆರ್‌ಬಿಐ ಈ ವರ್ಷದ ಜೂನ್‌ನಲ್ಲಿ ಆರಂಭಿಸಬಹುದು’ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಾರ್ಚ್ ತಿಂಗಳ ಬಹುತೇಕ ಅವಧಿಯಲ್ಲಿ ದೇಶಿ ಮಾರುಕಟ್ಟೆಯಲ್ಲಿ ಇಂಧನ ಬೆಲೆ ಹೆಚ್ಚಳ ಮಾಡಿರಲಿಲ್ಲ. ಹೀಗಾಗಿ, ಬೆಲೆ ಹೆಚ್ಚಳದ ಸಂಪೂರ್ಣ ಪರಿಣಾಮವು ಏಪ್ರಿಲ್ ತಿಂಗಳ ಹಣದುಬ್ಬರ ದರದಲ್ಲಿ ಗೊತ್ತಾಗಲಿದೆ’ ಎಂದು ನೈಟ್ ಫ್ರಾಂಕ್ ಇಂಡಿಯಾ ಸಂಸ್ಥೆಯ ಸಂಶೋಧನಾ ನಿರ್ದೇಶಕ ವಿವೇಕ್ ರಾಠಿ ಅವರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು	505
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಭದ್ರಾವತಿ	
ರಾಶಿ	44799-48599
ಚನ್ನಗಿರಿ	
ರಾಶಿ	46500-48499
ಚಿತ್ರದುರ್ಗ	
ಆಪಿ	48219-48629
ಬೆಟ್ಟೆ	37349-37779
ಕೆಂಪುಗೋಟು	31810-32199
ರಾಶಿ	47739-48169
ಕಾರ್ಕಳ	
ಹೊಸತು	38000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	27029-29499
ಚಾಲಿ	36599-38989
ಕೆಂಪುಗೋಟು	30199-34899
ರಾಶಿ	42399-47499
ಸಿಪ್ಪೆಗೋಟು	21600-22899
ಶಿವಮೊಗ್ಗ	
ಬೆಟ್ಟೆ	48100-50810
ಗೊರಬಲು	17289-34966
ರಾಶಿ	44000-48869
ಸರಕು	54100-76896
ಸಿದ್ದಾಪುರ	
ಬಿಳಿಗೋಟು	22369-32799
ಕೋಕ	21899-33969
ಹೊಸಚಾಲಿ	35299-40799
ಕೆಂಪುಗೋಟು	26089-31009
ರಾಶಿ	44099-48300
ತಟ್ಟಿಬೆಟ್ಟೆ	34689-42689
ಶಿರಸಿ	
ಬೆಟ್ಟೆ	34101-46999
ಬಿಳಿಗೋಟು	10796-38691
ಚಾಲಿ	28459-41109
ರಾಶಿ	40119-49119
ರೇಷ್ಮೆಗೂಡು ಮಾರುಕಟ್ಟೆ	
ರಾಮನಗರ	
ಮಿಶ್ರ ತಳಿ:	400-665
ದ್ವಿತಳಿ;	315-810
ನರಸಿಂಹರಾಜಪುರ ಮಾರುಕಟ್ಟೆ (ರಬ್ಬರ್)	
ಆರ್‌ಎಸ್‌ಎಸ್ 4	169
ಆರ್‌ಎಸ್‌ಎಸ್ 5	163.50
ಗುಡ್ ಲಾಟ್	159.50

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16,000	16,150	236.60
ಎಸಿ	8400	8,000	8,625	
ಆರ್‌ಪಿ	9300	9,000	9,250	ಲಂಡನ್
ಆರ್‌ಸಿ	4200	4,050	4,200	2108 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
12-04-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10200-10250
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	1485 (1475)
ಪಾಮ್ ವಾರದ ಡೆಲಿವರಿ	1475 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	52,500 (52,350)
ಬೆಳ್ಳಿ ಕೆ.ಜಿ	67,900 (66,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಜಾಗತಿಕ ಷೇರು ಪೇಟೆಗಳಲ್ಲಿ ಕಂಡುಬಂದ ಇಳಿಕೆ, ವಿಪ್ರೊ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಭಾರ್ತಿ ಏರ್‌ಟೆಲ್ ಷೇರುಗಳ ಮೌಲ್ಯದಲ್ಲಿ ಇಳಿಕೆಯ ಕಾರಣದಿಂದಾಗಿ ದೇಶದ ಷೇರು ಮಾರುಕಟ್ಟೆ ಸೂಚ್ಯಂಕಗಳು ಮಂಗಳವಾರ ಕುಸಿತ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 388 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 144 ಅಂಶ ಇಳಿಕೆ ಕಂಡವು.

‘ಸದ್ಯದ ಪರಿಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ಅಸ್ಥಿರತೆ ಇರಲಿದೆ. ಒಳ್ಳೆಯ ಸುದ್ದಿಗಳು ಇದ್ದಾಗ ಏರಿಕೆ ಕಾಣುವುದು, ಕೆಟ್ಟ ವಿದ್ಯಮಾನಗಳು ಸಂಭವಿಸಿದಾಗ ಇಳಿಕೆ ಕಾಣುವುದು ಮುಂದುವರಿಯಲಿದೆ. ತಂತ್ರಜ್ಞಾನ ಕಂಪನಿಗಳು ಹೆಚ್ಚಿರುವ ನಾಸ್ಡಾಕ್‌ನಲ್ಲಿ ತೇಜಿ ವಹಿವಾಟು ಇಲ್ಲ. ಇದರಿಂದಾಗಿ ದೇಶದ ಐ.ಟಿ. ಕಂಪನಿಗಳ ಷೇರುಗಳನ್ನು ಲಾಭ ಗಳಿಕೆ ಉದ್ದೇಶದಿಂದ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ. ಆದರೆ, ಟಿಸಿಎಸ್‌ನ ತ್ರೈಮಾಸಿಕ ಫಲಿತಾಂಶವು ಹೇಳುತ್ತಿರುವಂತೆ ಉತ್ತಮ ವಹಿವಾಟುಗಳು ನಡೆಯುತ್ತಿವೆ. ಹೀಗಾಗಿ ದೇಶದ ಐ.ಟಿ. ಕಂಪನಿಗಳ ಸಾಧನೆ ಚೆನ್ನಾಗಿರುವ ಸಾಧ್ಯತೆ ಇದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಪೇಟೆಂಟ್ ಅರ್ಜಿ ಸಲ್ಲಿಕೆ ಹೆಚ್ಚಳ

ನವದೆಹಲಿ (ಪಿಟಿಐ): ಬೌದ್ಧಿಕ ಆಸ್ತಿ ಹಕ್ಕುಗಳನ್ನು ಬಲಪಡಿಸಲು ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳ ಕಾರಣದಿಂದಾಗಿ 2021–22ರಲ್ಲಿ ಒಟ್ಟು 66,440 ಪೇಟೆಂಟ್ ಅರ್ಜಿಗಳು ದೇಶದಲ್ಲಿ ಸಲ್ಲಿಕೆಯಾಗಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಂಗಳವಾರ ತಿಳಿಸಿದೆ.

ಈ ಸಂಖ್ಯೆಯು 2014–15ರಲ್ಲಿ 42,763 ಆಗಿತ್ತು. 2021–22ರಲ್ಲಿ ದೇಶದಲ್ಲಿ 30,074 ಪೇಟೆಂಟ್‌ಗಳನ್ನು ನೀಡಲಾಗಿದೆ. 2014–15ರಲ್ಲಿ 5,978 ಪೇಟೆಂಟ್‌ಗಳನ್ನು ಮಾತ್ರ ನೀಡಲಾಗಿತ್ತು ಎಂದೂ ಸಚಿವಾಲಯ ಹೇಳಿದೆ.

ಪೇಟೆಂಟ್ ಅರ್ಜಿಯ ಪರಿಶೀಲನೆಗೆ 2016ರಲ್ಲಿ ಒಟ್ಟು 72 ತಿಂಗಳು ತೆಗೆದುಕೊಳ್ಳಲಾಗುತ್ತಿತ್ತು. ಈ ಅವಧಿ ಈಗ ಕಡಿಮೆ ಆಗಿದ್ದು, ಐದರಿಂದ 23 ತಿಂಗಳಿಗೆ ಇಳಿಕೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಬಿ.ಎಸ್. ಗೋಪಾಲ್, ಮೈಸೂರು

- **ಪ್ರಶ್ನೆ: ನಾನು ಕೆಪಿಟಿಸಿಎಲ್ ನೌಕರನಾಗಿದ್ದೆ. ಈ ವರ್ಷದ ಜನವರಿಯಲ್ಲಿ ನಿವೃತ್ತಿ ಹೊಂದಿರುತ್ತೇನೆ. ಈ ಅವಧಿಯಲ್ಲಿ ನಾನು ಗಳಿಕೆ ರಜಾವನ್ನು ನಗದೀಕರಿಸಿ ಅದರ ಮೊತ್ತ ಪಡೆದಿದ್ದೇನೆ. ಈ ಮೊತ್ತದಲ್ಲಿ ₹ 3 ಲಕ್ಷ ಹೊರತುಪಡಿಸಿ ಉಳಿದ ಮೊತ್ತಕ್ಕೆ ಶೇಕಡ 30ರಷ್ಟು ತೆರಿಗೆ ಹಾಗೂ ಶೇ 4ರಷ್ಟು ಸೆಸ್ ಸೇರಿಸಿ ತೆರಿಗೆ ಮುರಿದಿರುತ್ತಾರೆ. ರಾಜ್ಯ ಸರ್ಕಾರಿ ಹಾಗೂ ಕೇಂದ್ರ ಸರ್ಕಾರಿ ನೌಕರರಿಗೆ ಗಳಿಕೆ ರಜಾ ನಗದೀಕರಿಸಿದಾಗ ತೆರಿಗೆ ಅನ್ವಯವಾಗುವುದಿಲ್ಲ ಎಂದು ತಿಳಿದಿದ್ದೇನೆ. ನನ್ನದು ವಯೋ ನಿವೃತ್ತಿಯಾಗಿರುವ ಕಾರಣ ಗಳಿಕೆ ರಜಾ ನಗದೀಕರಣಕ್ಕೆ ತೆರಿಗೆ ಕಡಿತ ಮಾಡಿದ್ದು ಸರಿಯೇ? ಇದರಿಂದ ನನಗೆ ಸಾಕಷ್ಟು ತೆರಿಗೆ ಹೊರೆಯಾಗಿದೆ. ಇದರ ಬಗೆಗಿನ ಗೊಂದಲ ನಿವಾರಿಸಿ.**

ಉತ್ತರ: ಆದಾಯ ತೆರಿಗೆಯ ನಿಯಮ 10 (10ಎಎ) ಇದರಡಿ ಉಲ್ಲೇಖಿಸಿರುವಂತೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನೌಕರರು ನಿವೃತ್ತಿಯಾದ ಸಂದರ್ಭದಲ್ಲಿ ಗಳಿಕೆ ರಜಾ ಮೊತ್ತವನ್ನು ನಗದೀಕರಿಸಿದಾಗ ಯಾವುದೇ ತೆರಿಗೆ ಇರುವುದಿಲ್ಲ. ಆದರೆ ತಾವು ನೀಡಿರುವ ಮಾಹಿತಿಯಂತೆ, ರಾಜ್ಯ ಸರ್ಕಾರದ ಸ್ವಾಮ್ಯತ್ವವಿರುವ ಸಂಸ್ಥೆಯಲ್ಲಿ ಉದ್ಯೋಗ ಮಾಡಿ ನಿವೃತ್ತಿ ಹೊಂದಿದ್ದೀರಿ. ನೀವು ಕೆಲಸ ಮಾಡಿದ ಸಂಸ್ಥೆಯು ಸರ್ಕಾರದ ಮಾಲೀಕತ್ವದ್ದು. ಅದು ಸರ್ಕಾರಿ ಆದೇಶಗಳ ಅನುಸಾರವಾಗಿಯೇ ಕಾರ್ಯ ನಿರ್ವಹಿಸಿದರೂ ಅದು ನೇರವಾಗಿ ರಾಜ್ಯ ಸರ್ಕಾರದ ಅಡಿ ಬರುವ ಇಲಾಖೆ ಆಗಲಾರದು. ಕಾರಣ, ಇಂತಹ ಸರ್ಕಾರಿ ಸಂಸ್ಥೆಗಳು ಪ್ರತ್ಯೇಕ ಕಂಪನಿಯಾಗಿದ್ದು ಅವುಗಳದ್ದೇ ಆದ ಆಡಳಿತ ಮಂಡಳಿ ಹೊಂದಿ ಕಾರ್ಯನಿರ್ವಹಿಸುತ್ತವೆ. ಅಲ್ಲಿನ ಬಹುತೇಕ ಸವಲತ್ತುಗಳು ಸರ್ಕಾರಿ ದರ್ಜೆಯದ್ದೇ ಇರುತ್ತವೆಯಾದರೂ ಅದು ತೆರಿಗೆ ವಿಚಾರಕ್ಕೆ ಅನ್ವಯಿಸದು ಹಾಗೂ ಗಳಿಕೆ ರಜಾ ನಗದೀಕರಣಕ್ಕೂ ನೀವು ಉಲ್ಲೇಖಿಸಿರುವಂತೆ ತೆರಿಗೆ ಅನ್ವಯ ಆಗುತ್ತದೆ.

ವಿಜಯ್, ಊರುಬೇಡ

- **ಪ್ರಶ್ನೆ: ನಾನು ಪಿಎಫ್ ಖಾತೆಯಲ್ಲೂ ಪಿಪಿಎಫ್ ಖಾತೆಯಲ್ಲೂ ಉಳಿತಾಯ ಮಾಡುತ್ತಿದ್ದೇನೆ. ಪಿಎಫ್‌ನಲ್ಲಿ ಸುಮಾರು ₹ 8 ಲಕ್ಷ ಇದೆ. ಪಿಪಿಎಫ್‌ನಲ್ಲಿ ಅಂದಾಜು ₹ 4 ಲಕ್ಷ ಇದೆ. ಪಿಎಫ್ ಇರುವಾಗ ಪಿಪಿಎಫ್ ಏಕೆ ಮಾಡಿದೆ ಎಂದು ಬಲ್ಲವರು ಕೆಲವರು ಕೇಳುತ್ತಿದ್ದಾರೆ. ಪಿಪಿಎಫ್ ಯೋಜನೆಯಲ್ಲಿ ಬಡ್ಡಿ ಕಡಿಮೆ. ನನಗೆ ಕೂಡ, ನಾನು ತಪ್ಪು ಮಾಡಿದೆ ಎಂದು ಈಗ ಅನ್ನಿಸುತ್ತದೆ. ಪಿಪಿಎಫ್ ಹಣವನ್ನು ಪಿಎಫ್ ಖಾತೆಗೆ ವರ್ಗಾವಣೆ ಮಾಡಲು ದಾರಿ ಇದೆಯೇ? ಮುಂದೆ ಏನು ಮಾಡಬೇಕು? ಪಿಪಿಎಫ್ ನಿಲ್ಲಿಸಲೇ?**

ಉತ್ತರ: ಪಿಪಿಎಫ್ ಹಾಗೂ ಪಿಎಫ್ ಎರಡು ಪ್ರತ್ಯೇಕ ಹೂಡಿಕೆಗಳಾಗಿದ್ದು ಇವು ಅವುಗಳದ್ದೇ ಆದ ಭಿನ್ನತೆ ಹೊಂದಿದೆ. ಪಿಪಿಎಫ್ ಖಾತೆಯನ್ನು ಅಂಚೆ ಕಚೇರಿ, ಬ್ಯಾಂಕ್ ಮೂಲಕ ತೆರೆಯಲಾಗುತ್ತದೆ ಹಾಗೂ ಎಲ್ಲ ನಾಗರಿಕರಿಗೆ ತಮ್ಮ ಉಳಿತಾಯದ ಹಣವನ್ನು ವಾರ್ಷಿಕವಾಗಿ ₹ 1.50 ಲಕ್ಷದ ತನಕ ಇದರಲ್ಲಿ ಜಮಾ ಮಾಡುವ ಅವಕಾಶವಿದೆ.

ಆದರೆ, ಎಲ್ಲರಿಗೂ ತಿಳಿದಂತೆ ಪಿಎಫ್ ಖಾತೆಯನ್ನು ಉದ್ಯೋಗದಾತರು ತಮ್ಮ ನೌಕರರ ಹೆಸರನ್ನು ಪಿ.ಎಫ್ ಇಲಾಖೆಯಲ್ಲಿ ನೋಂದಣಿ ಮಾಡಿ ವೇತನದಲ್ಲಿ ನಿರ್ದಿಷ್ಟ ಪ್ರಮಾಣದ ಮೊತ್ತವನ್ನು ಕಡಿತಗೊಳಿಸಿ ಜಮಾ ಮಾಡುವ ಸಲುವಾಗಿ ತೆರೆದಿರುತ್ತಾರೆ. ಅದಕ್ಕೆ ಸಮನಾದ ಮೊತ್ತವನ್ನು ತಮ್ಮ (ನೌಕರಿ ನೀಡಿದ ಕಂಪನಿ) ಕಡೆಯಿಂದಲೂ ಭರಿಸಿ ಪಿಎಫ್ ಖಾತೆಗೆ ಜಮಾ ಮಾಡುವ ಶಾಸನ ಬದ್ಧವಾಗಿ ಹೂಡಿಕೆ ಇದು. ಇದಲ್ಲದೆ, ಈ ಖಾತೆಯಲ್ಲಿ ಹೆಚ್ಚಿನ ಉಳಿತಾಯಕ್ಕಾಗಿ ಹೆಚ್ಚುವರಿ ಹಣ ಜಮಾ ಮಾಡುವ ಅವಕಾಶವನ್ನು ನೌಕರರಿಗೆ ನೀಡಲಾಗಿದೆ. ಆದರೆ ಇಂತಹ ಐಚ್ಛಿಕ ಹೂಡಿಕೆಯನ್ನು ಪ್ರತಿ ತಿಂಗಳು ಮನಬಂದಂತೆ ಬದಲಾಯಿಸುವಂತಿಲ್ಲ ಹಾಗೂ ಅದು ಉದ್ಯೋಗ ಮಾಡುವ ಕಂಪನಿಯ ಮೂಲಕವೇ ತಮ್ಮ ವೇತನದಿಂದ ಕಡಿತಗೊಳಿಸಿ ಪಾವತಿಯಾಗಬೇಕು.

ಮಾತ್ರವಲ್ಲ, ಪಿಪಿಎಫ್ ಖಾತೆಯಲ್ಲಿ ಜಮಾ ಮಾಡಲಾದ ಮೊತ್ತವನ್ನು ಬ್ಯಾಂಕ್ ಖಾತೆಯ ಮೊತ್ತದಂತೆ ಬೇಕಾದಾಗ ಹಿಂಪಡೆಯಲಾಗುವುದಿಲ್ಲ. ಇದು 15 ವರ್ಷ ಅವಧಿಯ ಖಾತೆ. ಕೆಲವು ನಿರ್ದಿಷ್ಟ ಸಂದರ್ಭಗಳನ್ನು ಹೊರತುಪಡಿಸಿ ಮೊದಲ ಐದು ವರ್ಷಗಳ ತರುವಾಯವಷ್ಟೇ ಹಣ ಹಿಂಪಡೆಯುವ ಅವಕಾಶವಿದೆ. ಇದರಂತೆ ನಿಮ್ಮ ಯೋಜನೆ ರೂಪಿಸಬಹುದು. ಆದರೆ ಈ ಮೊತ್ತವನ್ನು ಪಿ.ಎಫ್. ಖಾತೆಗೆ ಜಮಾ ಮಾಡುವುದು ಅಸಾಧ್ಯ. ಹೀಗಾಗಿ ನೀವು ಮೇಲಿನ ಅವಕಾಶವನ್ನು ಉಪಯೋಗಿಸಿ ಪಿಎಫ್‌ನಲ್ಲಿ ಹೂಡಿಕೆಯನ್ನು ಕ್ರಮೇಣ ಹೆಚ್ಚಿಸಬಹುದು.

ಮಾತ್ರವಲ್ಲ, ಪಿಪಿಎಫ್ ಖಾತೆಯಿಂದ ಹಣ ವಾಪಸಾತಿ ಬಗ್ಗೆ ಹೆಚ್ಚಿನ ಮಾಹಿತಿಗೆ ಸ್ಥಳೀಯ ಅಂಚೆ ಇಲಾಖೆಯನ್ನು ಸಂಪರ್ಕಿಸಿ ಹಾಗೂ ಐಚ್ಛಿಕ ಹೂಡಿಕೆಯ ಬಗ್ಗೆ ನಿಮ್ಮ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳಲ್ಲೂ ಚರ್ಚಿಸಿ. ಕೇವಲ ಒಂದೆರಡು ಶೇಕಡ ಬಡ್ಡಿಗಾಗಿ ಆತುರದ ನಿರ್ಧಾರ ಕೈಗೊಳ್ಳದೆ, ನಿಮಗೆ ದೀರ್ಘಾವಧಿಯಲ್ಲಿ ಉತ್ತಮ ಲಾಭ ನೀಡುವ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಯೋಜನೆಯನ್ನೂ ರೂಪಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಕಾಮನ್ವೆಲ್ತ್, ಏಷ್ಯನ್ ಕ್ರೀಡಾಕೂಟಗಳಿಗೆ ಸ್ಪರ್ಧೆ ಇಲ್ಲ

ಆಯ್ಕೆ ಟ್ರಯಲ್ಸ್‌ಗೆ ಸೈನಾ ಅಲಭ್ಯ

ಸೈನಾ ನೆಹ್ವಾಲ್– ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಕಾಮನ್ವೆಲ್ತ್ ಗೇಮ್ಸ್‌ಗಾಗಿ ನಡೆಯುವ ಆಯ್ಕೆ ಟ್ರಯಲ್ಸ್‌ನಿಂದ ದೂರ ಉಳಿಯಲು ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ನಿರ್ಧರಿಸಿದ್ದಾರೆ. ಇದರಿಂದಾಗಿ ಅವರು ಈ ಕ್ರೀಡಾಕೂಟದ ಪ್ರಶಸ್ತಿ ಉಳಿಸಿಕೊಳ್ಳುವ ಅವಕಾಶ ಕಳೆದುಕೊಂಡಿದ್ದಾರೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ ನಿಗದಿಯಾಗಿರುವ ಕಾಮನ್ವೆಲ್ತ್ ಗೇಮ್ಸ್ (ಜುಲೈ 28ರಿಂದ ಆಗಸ್ಟ್ 8ರವರೆಗೆ) ಮತ್ತು ಹ್ಯಾಂಗ್‌ಜೌನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ (ಸೆಪ್ಟೆಂಬರ್ 10ರಿಂದ 25ರವರೆಗೆ), ಥಾಮಸ್ ಮತ್ತು ಊಬರ್ ಕಪ್ ಟೂರ್ನಿಗಳ ಆಯ್ಕೆ ಟ್ರಯಲ್ಸ್‌ಗಳಿಗೆ ತಾವು ಲಭ್ಯರಿಲ್ಲ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆಗೆ (ಬಿಎಐ) ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಬಿಎಐ ಮೂಲಗಳು ಈ ವಿಷಯ ತಿಳಿಸಿವೆ.

ಆಯ್ಕೆ ಟ್ರಯಲ್ಸ್‌ಗಳು ಏಪ್ರಿಲ್ 15ರಿಂದ 20ರವರೆಗೆ ನಿಗದಿಯಾಗಿವೆ.

32 ವರ್ಷದ ಸೈನಾ, 2010 ಮತ್ತು 2018ರ ಕಾಮನ್ವೆಲ್ತ್ ಗೇಮ್ಸ್‌ಗಳಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಅವರಿಗೆ ಒಲಿದಿದೆ.

ಗಾಯದ ಸಮಸ್ಯೆ, ಕಳಪೆ ಫಾರ್ಮ್: ವಿಶ್ವ ಕ್ರಮಾಂಕದಲ್ಲಿ ಈ ಹಿಂದೆ ಅಗ್ರಸ್ಥಾನದಲ್ಲಿದ್ದ ಸೈನಾ, ಕಳೆದ ಕೆಲವು ವರ್ಷಗಳಿಂದ ಗಾಯದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಫಾರ್ಮ್ ಕೂಡ ಕೈಕೊಟ್ಟಿದೆ. 2016ರ ರಿಯೊ ಒಲಿಂಪಿಕ್ಸ್‌ಗೂ ಮೊದಲು ಅವರನ್ನು ಮೊಣಕಾಲು ಗಾಯ ಕಾಡಿತ್ತು.

ಪವರ್ ಲಿಫ್ಟಿಂಗ್: ವೆಂಕಟೇಶಗೆ ಮೂರು ಪದಕ

ಕುಮಟಾ: ಕೇರಳದ ಆಲಪ್ಪುಳದಲ್ಲಿ ಸೋಮವಾರ ನಡೆದ ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯ 93 ಕೆ.ಜಿ. ವಿಭಾಗದಲ್ಲಿ ವೆಂಕಟೇಶ ಪ್ರಭು ಒಂದು ಬಂಗಾರ ಮತ್ತು ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಅವರು ಕುಮಟಾ ಮುನ್ಸಿಪಲ್ ವ್ಯಾಯಾಮ ಶಾಲೆಯ ವಿದ್ಯಾರ್ಥಿಯಾಗಿದ್ದಾರೆ. ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಉತ್ತರ ಕನ್ನಡದ ಮೊದಲ ಕ್ರೀಡಾಪಟು ಆಗಿದ್ದಾರೆ ವೆಂಕಟೇಶ.

ವೆಂಕಟೇಶ ಪ್ರಭು

ಪುನರಾಗಮನದಲ್ಲಿ ಗಮನ ಸೆಳೆದ ಟೈಗರ್

ಅಪಘಾತದ ಆಘಾತದಿಂದ ಚೇತರಿಸಿಕೊಂಡಿರುವ ಅಮೆರಿಕದ ಗಾಲ್ಫ್ ತಾರೆ

ಟೈಗರ್ ವುಡ್ಸ್– ಎಎಫ್‌ಪಿ ಚಿತ್ರ

ಅಗಸ್ಟಾ (ಎಪಿ): 14 ತಿಂಗಳ ಹಿಂದೆ ಭೀಕರ ಅಪಘಾತಕ್ಕೀಡಾಗಿದ್ದ ಅಮೆರಿಕದ ಗಾಲ್ಫ್ ತಾರೆ ಟೈಗರ್ ವುಡ್ಸ್, ಅಗಸ್ಟಾ ನ್ಯಾಷನಲ್ ಮಾಸ್ಟರ್ಸ್ ಟೂರ್ನಿಯ ಮೂಲಕ ಆಟದ ಅಂಗಣಕ್ಕೆ ಇಳಿದಿದ್ದರು.

ಟೂರ್ನಿಯ ಹಲವು ಆವೃತ್ತಿಗಳಲ್ಲಿ ಆಡಿದ್ದ ಅವರಿಗೆ ಅದು ಚಿರಪರಿಚಿತ ಅಂಗಣವಾಗಿದ್ದರೂ ಈ ಬಾರಿ ವಿಶೇಷವಾಗಿತ್ತು. ಇಲ್ಲಿ ಅವರು 47ನೇ ಸ್ಥಾನ ಪಡೆದರು. ಆದರೆ ಹಲವರಿಗೆ ಸ್ಫೂರ್ತಿಯ ಸೆಲೆಯಾಗಿ ಚಿಮ್ಮಿದರು.

ಅಗಸ್ಟಾ ನ್ಯಾಷನಲ್ ಮೂಲಕ ಅವರ ಪುನರಾಗಮನ ಎಲ್ಲರ ಕಣ್ಮನ ಸೆಳೆದಿದೆ. ಆರನೇ ಬಾರಿ ಪ್ರಶಸ್ತಿ ಗೆಲ್ಲುವ ಕನಸು ನನಸಾಗದಿದ್ದರೂ ವೃತ್ತಿಜೀವನದ ತೃಪ್ತಿಕರ ಅನುಭವಗಳಲ್ಲಿ ಇದೂ ಒಂದೆಂದು ಅವರು ಹೇಳಿದ್ದಾರೆ.

‘ಶ್ರೇಷ್ಠ ಚಾಂಪಿಯನ್ನರು ಆಡಿದ ಅಂಗಣವಿದು. ಈ ಟೂರ್ನಿಯು ನಾನು ಮತ್ತು ನನ್ನ ಕುಟುಂಬಕ್ಕೆ ತುಂಬ ಅರ್ಥಪೂರ್ಣ ಎನಿಸಿದೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

2021ರ ಫೆಬ್ರುವರಿಯಲ್ಲಿ ಸಂಭವಿಸಿದ ಅಪಘಾತದ ಬಳಿಕ ವೈದ್ಯರು ವುಡ್ಸ್ ಅವರ ಬಲಗಾಲು ಕತ್ತರಿಸಬೇಕಾಗಬಹುದು ಎಂದು ಹೇಳಿದ್ದರು. ಆದರೆ ಅದನ್ನು ಉಳಿಸುವಲ್ಲಿ ಯಶಸ್ವಿಯಾಗಿದ್ದರು. ವುಡ್ಸ್ ಮೂರು ತಿಂಗಳು ಆಸ್ಪತ್ರೆಯಲ್ಲಿದ್ದರು. ಮೂಳೆಗಳನ್ನು ಬಿಗಿಯಾಗಿ ಹಿಡಿದಿಡುವ ಸ್ಕ್ರೂ ಮತ್ತು ರಾಡ್‌ಗಳು ಇನ್ನೂ ಅವರ ಕಾಲಿನಲ್ಲಿ ಇವೆ.

ಅಗಸ್ಟಾ ನ್ಯಾಷನಲ್ ಟೂರ್ನಿಯಲ್ಲಿ ಅವರು ಕುಂಟುತ್ತಲೇ ಆಡಿದರು. ಕೆಲವೊಮ್ಮೆ ಸಹಾಯಕ್ಕೆ ವಾಕಿಂಗ್ ಸ್ಟಿಕ್ ಬಳಸಿದರು.

ರ‍್ಯಾಂಕಿಂಗ್‌ನಲ್ಲಿ ಗಣನೀಯ ಪ್ರಗತಿ: 15 ಬಾರಿ ಮೇಜರ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿರುವ ವುಡ್ಸ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 228 ಸ್ಥಾನಗಳ ಏರಿಕೆ ದಾಖಲಿಸಿದ್ದಾರೆ. ಸದ್ಯ ಅವರು 745ನೇ ಸ್ಥಾನದಲ್ಲಿದ್ದಾರೆ. 46 ವಯಸ್ಸಿನ ಆಟಗಾರ ಕಳೆದ ವಾರ 973ನೇ ಸ್ಥಾನದಲ್ಲಿದ್ದರು.

ಒಂದು ಸಂದರ್ಭದಲ್ಲಿ 679 ವಾರಗಳ ಕಾಲ ಅವರು ಅಗ್ರಸ್ಥಾನದಲ್ಲಿದ್ದರು. ಈಗ ಅಗ್ರಸ್ಥಾನದಲ್ಲಿ ಅಮೆರಿಕದ ಸ್ಕಾಟಿ ಶೆಫ್ಲರ್ ಇದ್ದಾರೆ.

ವಿಕ್ಟೋರಿಯಾದಲ್ಲಿ 2026ರ ಕಾಮನ್ವೆಲ್ತ್ ಕ್ರೀಡಾಕೂಟ

ಸಿಡ್ನಿ (ಎಎಫ್‌ಪಿ): ಕಾಮನ್ವೆಲ್ತ್ ಗೇಮ್ಸ್‌ನ 2026ರ ಆವೃತ್ತಿ ಆಸ್ಟ್ರೇಲಿಯಾದ ವಿಕ್ಟೋರಿಯಾ ರಾಜ್ಯದಲ್ಲಿ ನಡೆಯಲಿದೆ ಎಂದು ರಾಜ್ಯದ ಮುಖ್ಯಸ್ಥ ಡ್ಯಾನಿಯಲ್ ಆ್ಯಂಡ್ರ್ಯೂಸ್ ತಿಳಿಸಿದ್ದಾರೆ.

ಮೆಲ್ಬರ್ನ್‌ನಿಂದ ಹೊರಗೆ ಎಲ್ಲ ಕ್ರೀಡೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದ್ದು ಏಳು ಪಟ್ಟಣಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಈ ಪಟ್ಟಣಗಳು ನಾಲ್ಕು ಪ್ರಾದೇಶಿಕ ವಿಭಾಗಗಳಲ್ಲಿ ಇವೆ ಎಂದು ಅವರು ತಿಳಿಸಿದ್ದಾರೆ. ಗೀಲಾಂಗ್, ಬಲಾರತ್, ಬೆಂಡಿಗೊ ಮತ್ತು ಗಿಪ್ಸ್‌ಲ್ಯಾಂಡ್‌ನಲ್ಲಿ ಪ್ರಮುಖ ಸ್ಪರ್ಧೆಗಳು ನಡೆಯಲಿದ್ದು ಅಲ್ಲಿ ಈಗಾಗಲೇ ಕ್ರೀಡಾ ಗ್ರಾಮಗಳು ಇವೆ. ವಿಕ್ಟೋರಿಯಾದ ಕ್ರೀಡಾಂಗಣವು ಹೊಸತನದಿಂದ ಕೂಡಿದ್ದು ಹೊಸ ಆವಿಷ್ಕಾರದ ಮೂಲಕ ಗಮನ ಸೆಳೆದಿದೆ ಎಂದು ಕಾಮನ್ವೆಲ್ತ್ ಗೇಮ್ಸ್ ಫೆಡರೇಷನ್‌ನ ಅಧ್ಯಕ್ಷ ಲೂಯಿಸ್ ಮಾರ್ಟಿನ್ ಹೇಳಿದ್ದಾರೆ.

ಹಾಕಿ: ಭಾರತದ ಮಹಿಳೆಯರಿಗೆ ಸೋಲು

ಪೊಚೆಫ್‌ಸ್ಟ್ರೂಮ್ (ಪಿಟಿಐ): ಮುಮ್ತಾಜ್ ಖಾನ್ ಗಳಿಸಿದ ಎರಡು ಗೋಲುಗಳು ವ್ಯರ್ಥವಾದವು. ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯ ಕಂಚಿನ ಪದಕದ ಪಂದ್ಯದಲ್ಲಿ ಭಾರತ ಮಂಗಳವಾರ 0–3ರಿಂದ ಇಂಗ್ಲೆಂಡ್ ತಂಡಕ್ಕೆ ಸೋತಿತು.

ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 2–2ರಿಂದ ಸಮಬಲ ಸಾಧಿಸಿದ್ದವು. ಹೀಗಾಗಿ ಶೂಟೌಟ್ ಮೊರೆಹೋಗಲಾಗಿತ್ತು. ನಿಗದಿತ ವೇಳೆ ಮುಮ್ತಾಜ್ 21 ಮತ್ತು 47ನೇ ನಿಮಿಷ, ಇಂಗ್ಲೆಂಡ್ ಪರ ಮಿಲಿ (18ನೇ ನಿ.) ಮತ್ತು ಕ್ಲಾಡಿಯಾ ಸ್ವೇನ್ (58ನೇ ನಿ.) ಗೋಲು ದಾಖಲಿಸಿದ್ದರು.

ಚೆಸ್: ಅಗ್ರಸ್ಥಾನಕ್ಕೆ ಶುಭಿ ಗುಪ್ತಾ

ಪ್ರಜಾವಾಣಿ ವಾರ್ತೆ

ಮಂಡ್ಯ: ಉತ್ತರ ಪ್ರದೇಶದ ಶುಭಿ ಗುಪ್ತಾ ಇಲ್ಲಿ ನಡೆಯುತ್ತಿರುವ 34ನೇ ರಾಷ್ಟ್ರೀಯ 12 ವರ್ಷದೊಳಗಿನವರ ಚೆಸ್ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಒಟ್ಟು 8 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

ಮಂಗಳವಾರ ನಡೆದ 8ನೇ ಸುತ್ತಿನ ಪಂದ್ಯದಲ್ಲಿ ಅವರು, ಕರ್ನಾಟಕದ ಶ್ರಿಯಾನಾ ಮಲ್ಯ ವಿರುದ್ಧ ಜಯ ಗಳಿಸಿದರು. ಮಹಾರಾಷ್ಟ್ರದ ಶ್ರೇಯಾ ಹಿಪ್ಪರಗಿ, ಉತ್ತರಾಖಂಡದ ಶೆರಾಲಿ ಪಟ್ನಾಯಕ್ ವಿರುದ್ಧ ಡ್ರಾ ಸಾಧಿಸಿದರು. ಇಬ್ಬರೂ ಆರೂವರೆ ಅಂಕಗಳೊಂದಿಗೆ 2ನೇ ಸ್ಥಾನದಲ್ಲಿದ್ದಾರೆ. ನವದೆಹಲಿಯ ಪ್ರಶಿತಾ ಗುಪ್ತಾ ತಮ್ಮದೇ ರಾಜ್ಯದ ಆದ್ಯಾ ಜೈನ್ ವಿರುದ್ಧ ಜಯ ಗಳಿಸಿ 3ನೇ ಸ್ಥಾನದಲ್ಲಿದ್ದಾರೆ.

ಬಾಲಕರ ವಿಭಾಗದಲ್ಲಿ ಗೋವಾದ ವಾಜ್ ಇಥಾನ್ ವಿಜಯಯಾತ್ರೆ ಮುಂದುವರಿಸಿದ್ದು, ಒಟ್ಟು 8 ಅಂಕಗಳೊಂದಿಗೆ ಮುನ್ನಡೆ ಕಾಯ್ದುಕೊಂಡಿದ್ದಾರೆ. 8ನೇ ಸುತ್ತಿನ ಪಂದ್ಯದಲ್ಲಿ ಮಹಾರಾಷ್ಟ್ರದ ಆನ್ಶ್ ನಂದನ್ ಅವರನ್ನು ಸೋಲಿಸಿದರು. ಕೇರಳದ ಗೌತಮ್ ಕೃಷ್ಣ, ಮಹಾರಾಷ್ಟ್ರದ ಶೇರಳ ಪ್ರಥಮೇಶ್ ಅವರನ್ನು ಸೋಲಿಸಿ ಒಟ್ಟು 7 ಅಂಕಗಳೊಂದಿಗೆ 2ನೇ ಸ್ಥಾನದಲ್ಲಿದ್ದಾರೆ. ಕರ್ನಾಟಕದ ಸಾತ್ವಿಕ್ ಅಡಿಗ, ತಮ್ಮ ರಾಜ್ಯದವರೇ ಆದ ರೆಹಾನ್ ಝಾಹಿದ್ ಅವರನ್ನು ಸೋಲಿಸಿ 6.5 ಅಂಕಗಳೊಂದಿಗೆ 3ನೇ ಸ್ಥಾನ ಹೊಂದಿದ್ದಾರೆ.

ಚಾಂಪಿಯನ್ಸ್ ಲೀಗ್: ಮುಂಬೈ ದಾಖಲೆ

ರಿಯಾದ್ (ಪಿಟಿಐ): ಇರಾಕ್‌ನ ಬಲಿಷ್ಠ ತಂಡ ಏರ್‌ಫೋರ್ಸ್ ಕ್ಲಬ್ ವಿರುದ್ಧ ರೋಚಕ ಜಯ ಸಾಧಿಸಿದ ಮುಂಬೈ ಸಿಟಿ ಎಫ್‌ಸಿ ತಂಡ ಎಎಫ್‌ಸಿ ಏಷ್ಯನ್ ಚಾಂಪಿಯನ್ಸ್ ಲೀಗ್ ಟೂರ್ನಿಯ ಪಂದ್ಯವೊಂದರಲ್ಲಿ ಜಯ ಗಳಿಸಿದ ಭಾರತದ ಮೊದಲ ಕ್ಲಬ್ ಎನಿಸಿಕೊಂಡಿದೆ.

ಕಿಂಗ್ ಫಹದ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಏರ್ ಫೋರ್ಸ್ ಕ್ಲಬ್ ವಿರುದ್ಧ ಮುಂಬೈ 2–1ರಲ್ಲಿ ಜಯ ಗಳಿಸಿತು. 59ನೇ ನಿಮಿಷದಲ್ಲಿ ಗೋಲು ಬಿಟ್ಟುಕೊಟ್ಟಿದ್ದ ತಂಡ ಸೋಲಿನತ್ತ ಸಾಗಿತ್ತು. 70ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಡೀಗೊ ಮೌರಿಸಿಯೊ ಗೋಲು ಗಳಿಸಿ ಸಮಬಲ ಸಾಧಿಸಿದರು. 75ನೇ ನಿಮಿಷದಲ್ಲಿ ಡಿಫೆಂಡರ್ ರಾಹುಲ್ ಭೆಕೆ ಅವರು ಜಾದೂ ಮಾಡಿದರು. ಕಾರ್ನರ್ ಕಿಕ್‌ನಲ್ಲಿ ಅವರು ಗಳಿಸಿದ ಗೋಲು ತಂಡಕ್ಕೆ ಗೆಲುವು ತಂದುಕೊಟ್ಟಿತು. ಮೊದಲ ಪಂದ್ಯದಲ್ಲಿ ಮುಂಬೈ 0–3ರಲ್ಲಿ ಅಲ್ ಶಾಬಾದ್‌ಗೆ ಮಣಿದಿತ್ತು. ಗುರುವಾರ ನಡೆಯಲಿರುವ ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ಯುಎಇಯ ಅಲ್ ಜಜೀರಾ ಕ್ಲಬ್ ಎದುರು ಸೆಣಸಲಿದೆ.

ಸಂಕ್ಷಿಪ್ತ ಸುದ್ದಿ

ಪ್ರಜ್ಞಾನಂದಗೆ ಪ್ರಶಸ್ತಿ

ಪ್ರಜ್ಞಾನಂದ

ರೇಯ್ಕ್‌ಜಾವ್ಜಿಕ್, ಐಸ್‌ಲ್ಯಾಂಡ್ (ಪಿಟಿಐ): ಭಾರತದ ಆರ್. ಪ್ರಜ್ಞಾನಂದ ಅವರು ಪ್ರತಿಷ್ಠಿತ ರೇಯ್ಕ್‌ಜಾವ್ಜಿಕ್ ಓಪನ್ ಚೆಸ್ ಟೂರ್ನಿಯಲ್ಲಿ ಮಂಗಳವಾರ ಪ್ರಶಸ್ತಿ ಜಯಿಸಿದ್ದಾರೆ.

16 ವರ್ಷದ ಪ್ರಜ್ಞಾನಂದ ಟೂರ್ನಿಯ ಒಂಬತ್ತು ಸುತ್ತುಗಳಿಂದ 7.5 ಪಾಯಿಂಟ್ಸ್ ಕಲೆಹಾಕಿದರು. ಕೊನೆಯ ಸುತ್ತಿನಲ್ಲಿ ಅವರು ಭಾರತದವರೇ ಆದ ಡಿ. ಗುಕೇಶ್ ಅವರನ್ನು ಸೋಲಿಸಿದರು.

ಈ ಟೂರ್ನಿಯ ಜಯದ ಮೂಲಕ ಪ್ರಜ್ಞಾನಂದ (ಇಎಲ್‌ಒ 2624) 13.2 ಇಎಲ್‌ಒ ಪಾಯಿಂಟ್ಸ್ ಗಳಿಸಿದರು.

ನೊವಾಕ್ ಜೊಕೊವಿಚ್‌ಗೆ ಸೋಲು

ಮಾಂಟೆ ಕಾರ್ಲೊ (ಎಎಫ್‌ಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಇಲ್ಲಿ ನಡೆಯುತ್ತಿರುವ ಮಾಂಟೆ ಕಾರ್ಲೊ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಕೋವಿಡ್–19ರ ಲಸಿಕೆ ಪಡೆದುಕೊಳ್ಳಲು ನಿರಾಕರಿಸಿ ವಿವಾದಕ್ಕೆ ಸಿಲುಕಿದ್ದ ನೊವಾಕ್ ಅವರಿಗೆ ಇದು ಈ ವರ್ಷದ ಎರಡನೇ ಟೂರ್ನಿ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನದಲ್ಲಿರುವ ನೊವಾಕ್ 46ನೇ ಸ್ಥಾನದಲ್ಲಿರುವ ಸ್ಪೇನ್ ಆಟಗಾರ ಅಲೆಜಾಂಡ್ರೊ ಡವಿಡೊವಿಚ್ ಫೊಕಿನಾ ಎದುರು 3–6, 7–6, 1–6ರಲ್ಲಿ ಸೋತರು. ಫೆಬ್ರುವರಿಯಲ್ಲಿ ನೊವಾಕ್ ದುಬೈ ಓಪನ್‌ನಲ್ಲಿ ಆಡಿದ್ದರು. ಅಲ್ಲಿ 3ನೇ ಸುತ್ತಿನಲ್ಲಿ ಸೋತಿದ್ದರು.

ಬ್ಯಾಡ್ಮಿಂಟನ್: ಸಾಯಿ ಸತ್ಯ ಸರ್ವೇಶ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಯಿ ಸತ್ಯ ಸರ್ವೇಶ್ ಯಾಕಾಲ ಅವರು ಅಖಿಲ ಭಾರತ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಇಲ್ಲಿಯ ಪಡುಕೋಣೆ– ದ್ರಾವಿಡ್ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯುತ್ತಿರುವ ಟೂರ್ನಿಯ 19 ವರ್ಷದೊಳಗಿನವರ ವಿಭಾಗದ ಮೊದಲ ಸುತ್ತಿನ ಸಿಂಗಲ್ಸ್ ಪಂದ್ಯದಲ್ಲಿ ಸರ್ವೇಶ್ 21–15, 21–16ರಿಂದ ಜಯಸಮೀರ್ ರೆಡ್ಡಿ ಕಂದ್ರಾಪು ಅವರನ್ನು ಸೋಲಿಸಿದರು.

ನಿಖಿಲ್ ಚೆಟ್ರಿ 21–12, 21–12ರಿಂದ ಪ್ರಣೀತ್ ಸೋಮಾನಿ ವಿರುದ್ಧ, ಸಾತ್ವಿಕ್ ಶಂಕರ್ 21–12, 21–14ರಿಂದ ಜೋಮಿ ಸಿಂಗಮ್ ಎದುರು, ಜ್ಞಾನ ಹರ್ಷ ಜೆಟ್ಟಿ 21–13, 12–21, 21–13ರಿಂದ ಜೀತ್ ಪಟೇಲ್ ವಿರುದ್ಧ ಜಯ ಸಾಧಿಸಿದರು.

19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯಗಳಲ್ಲಿ ವಿಜೇತಾ ಹರೀಶ್ 21–8, 22–20ರಿಂದ ಪ್ರವೀಣಾ ಮೇರಿ ಜೋಸೆಫ್ ವಿರುದ್ಧ, ಗ್ಲೋರಿಯಾ ಅಟಾವಳೆ 21–16, 21–12ರಿಂದ ಉನ್ನತಿ ಜರಲ್ ಎದುರು, ಉನ್ನತಿ ಹೂಡಾ 19–21, 23–21, 21–18ರಿಂದ ಆಯೇಶಾ ಗಾಂಧಿ ಎದುರು, ಜಿಯಾ ರಾವತ್ 21–10, 19–21, 21–12ರಿಂದ ಪ್ರವೀಣಾ ಎಸ್. ವಿರುದ್ಧ ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು.

ಇದೇ 9ರಿಂದ ಅರ್ಹತಾ ಸುತ್ತಿನ ಪಂದ್ಯಗಳು ನಡೆದಿದ್ದವು. ಮಂಗಳವಾರ ಮುಖ್ಯ ಸುತ್ತಿನ ಪಂದ್ಯಗಳು ಆರಂಭವಾಗಿವೆ.

ಕರ್ನಾಟಕ ಸವಾಲಿನ ಮೊತ್ತ

ಶುಭಾಂಗ್

ಬೆಂಗಳೂರು: ಶುಭಾಂಗ್ ಹೆಗಡೆ (ಔಟಾಗದೆ 45) ಮತ್ತು ಬಿ.ಆರ್. ಶರತ್ (45) ಅವರ ಬ್ಯಾಟಿಂಗ್ ನೆರವಿನಿಂದ ಕರ್ನಾಟಕ ತಂಡವು ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ಎದುರು ಮಂಗಳವಾರ ಸವಾಲಿನ ಮೊತ್ತ ಕಲೆಹಾಕಿತು.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನ ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕ 204 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ವೈಶಾಖ್ ವಿಜಯಕುಮಾರ್ (44) ತಂಡಕ್ಕೆ ಕಾಣಿಕೆ ನೀಡಿದರು. ಮುಂಬೈನ ಶಮ್ಸ್ ಮುಲಾನಿ (52ಕ್ಕೆ 5) ಬೌಲಿಂಗ್‌ನಲ್ಲಿ ಪರಿಣಾಮಕಾರಿ ಎನಿಸಿದರು. ಕರ್ನಾಟಕದ ಇನಿಂಗ್ಸ್‌ಗೆ ಉತ್ತರವಾಗಿ ಮುಂಬೈ 31 ಓವರ್‌ಗಳಲ್ಲಿ 2 ವಿಕೆಟ್‌ಗೆ 88 ರನ್ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ 58.2 ಓವರ್‌ಗಳಲ್ಲಿ 204 (ಬಿ.ಆರ್. ಶರತ್ 45, ಬಿ.ಯು. ಶಿವಕುಮಾರ್ 24, ಶುಭಾಂಗ್ ಹೆಗಡೆ ಔಟಾಗದೆ 45, ವೈಶಾಖ್ ವಿ. 44; ಸಕ್ಷಮ್ 42ಕ್ಕೆ 2, ಶಮ್ಸ್ ಮುಲಾನಿ 52ಕ್ಕೆ 2, ಖಿಜರ್ ದಫೆದಾರ್ 26ಕ್ಕೆ 2). ಮುಂಬೈ: 31 ಓವರ್‌ಗಳಲ್ಲಿ 2 ವಿಕೆಟ್‌ಗೆ 88 (ದಿವ್ಯಾಂಶ್ ಬ್ಯಾಟಿಂಗ್ 45, ಅರ್ಮಾನ್ ಜಾಫರ್ ಬ್ಯಾಟಿಂಗ್ 26).

ಹ್ಯಾಮಿಷ್ ನಿವೃತ್ತಿ ಘೋಷಣೆ

ವೆಲಿಂಗ್ಟನ್ (ರಾಯಿಟರ್ಸ್): ನ್ಯೂಜಿಲೆಂಡ್‌ನ ವೇಗದ ಬೌಲರ್ ಹ್ಯಾಮಿಷ್ ಬೆನೆಟ್ ಈ ಋತುವಿನ ಕೊನೆಯಲ್ಲಿ ಕ್ರಿಕೆಟ್‌ಗೆ ನಿವೃತ್ತರಾಗಲು ನಿರ್ಧರಿಸಿದ್ದಾರೆ. 2005ರಲ್ಲಿ ಕ್ಯಾಂಟರ್‌ಬರಿ ತಂಡದ ಪರ ಕಣಕ್ಕೆ ಇಳಿಯುವ ಮೂಲಕ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಹ್ಯಾಮಿಷ್‌ಗೆ ಈಗ 35 ವರ್ಷ.

19 ಏಕದಿನ ಮತ್ತು 11 ಟ್ವೆಂಟಿ20 ಪಂದ್ಯಗಳನ್ನು ಆಡಿರುವ ಅವರು ಒಟ್ಟು 43 ವಿಕೆಟ್ ಉರುಳಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ಬಾಂಗ್ಲಾದೇಶ ಎದುರು ಕೊನೆಯ ಟ್ವೆಂಟಿ20 ಪಂದ್ಯ ಆಡಿದ್ದರು.